ಶನಿವಾರ, ಜನವರಿ 11, 2025 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕೈಮಗ್ಗ ಫ್ಯಾಷನ್...
ಬೆಂಗಳೂರಿನ ಚಿತ್ರಕಲಾಪರಿಷತ್ ಆವರಣದಲ್ಲಿ 'ಚರಕ ಮಹಿಳಾ ವಿವಿದೋದ್ದೇಶ ಕೈಗಾರಿಕಾ ಸಹಕಾರ ಸಂಘ' ಆಯೋಜಿಸಿದ್ದ 'ಕೈಮಗ್ಗ ವಸ್ತ್ರಗಳ ಫ್ಯಾಷನ್ ಷೋ'ದಲ್ಲಿ ಕಣ್ಮನ ಸೆಳೆದ ರೂಪದರ್ಶಿಗಳು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

PROPERTY CORNER
ಕ್ಲಾಸಿಫೈಡ್ಸ್

SITES FOR SALE
@ Mysore Road
ಕೈಗೆಟುಕುವ ಬೆಲೆಯಲ್ಲಿ ಬೆಂಗಳೂರು-ಮೈಸೂರು ರಸ್ತೆಯಲ್ಲಿ ಸೈಟ್‌ಗಳು ಲಭ್ಯ

BMRDA APPROVED
INDIVIDUAL 'A' KHATA
READY FOR REGISTRATION & CONSTRUCTION

- Gated Community
- Concrete Roads
- Avenue Tree Lines
- Water Supply
- Electricity
- Designer Street Lights
- Underground Sewage
- Security Gate
- Park
- CA Space

BMRDA APPROVED 'A' KHATA
Bank Loan Available upto 80%

FREE Site Visit 96111 66681, 97425 15612, 96063 42643

ತಾರಕನ್ಸ್ ಕಾರ್ಮೆಲ್ ಮಂತ್ರ
ಅಭಿವೃದ್ಧಿ ಮಾಡಿದ ಪ್ರೀಮಿಯಂ ಪ್ಲಾಟ್
16.8 ಲಕ್ಷಗಳಿಂದ ಪ್ರಾರಂಭ
1200 ಚದರ ಅಡಿಗಳು
ಎಂಪಿಎ ಅನುಮೋದಿಸಿದ
ಬ್ಯಾಂಕಿನಿಂದ ಸಾಲಗಳು ದೊರೆಯುತ್ತವೆ.
ಮಾಲೂರು, ಮಾಸ್ತಿ ಮುಖ್ಯರಸ್ತೆ, ಸರ್ಜಾಪುರ ಮತ್ತು ವೈಟ್‌ಫೀಲ್ಡ್ ಹತ್ತಿರ
ಎಸ್.ಟಿ.ಆರ್.ಆರ್. ಸಮೀಪ, ಬೆಂಗಳೂರು ಮತ್ತು ಚೆನ್ನೈ ರಾಷ್ಟ್ರೀಯ ಹೆದ್ದಾರಿ ಹತ್ತಿರ
ಕರೆಮಾಡಿ 91489 82036

NORTH BANGALORE
YOUR GATEWAY TO GROWTH
@Doddaballapura
KRISHI VISHWA HOUSING CO-OPERATIVE SOCIETY LTD. (BY GKVK EMPLOYEES)
Enjoy the benefits of a strategic location
STRR Ring Road 2 Min
Devanahalli Business Park 10 Min
Kiadb Industrial Area 5 Min
Bren Raceway 5 Min
Railway Station 10 Min
Health Care Center 10 Min
Educational Institute 5 Min
7676234598
BOOKING OPEN FOR PUBLIC
www.krishihousing.in
Vanavihar
PRICE ₹1999 sqft
GATED COMMUNITY PLOTS FOR SALE
6 EASY INSTALLMENT

REAL ESTATE SELLING

Sites

Airport Road
"30X40 CORNER Site BIAPPA approved near International airport towards Hennur opp.KIADB Hardware-park 65`Lakhs. 9845286505/ 8884125555"

Banashankari
BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

BANASHANKARI 6TH Stage 10th Block, 30x40 W/F, Site SALE, Near 100 feet Road, 1.35Cr. 9799099699, 9993959099.

MANTRALAYA ENTERPRISES: BUYING And SELLING BDA/A Khatha SITES/ BANASHANKARI 6th Stage, Anjanapura, Vishweswaraiah Layout. 9945724472.

Hebbal
HEBBAL 30X35 House Sale Ground 1 BHK Two Carparking 1st 2 BHK 2nd 2 BHK 9845623970/ 9739400838

HSR Layout
"HSR-LAYOUT 20X30 Building 1 Lakh Rent, 30x40, 40x60, Commercial, Residential Buildings Rental income. 'Krishna'- 9886294610"

Kengeri
PREMIUM VILLA PLOT The Green Valley Address Gated community 80.1 X 60 West BDA approved eKhatha contact 9243113714

Kumaraswamy Layout
SALE 25X40 S/F Site Kumaraswamy Layout 1st Stage, Prime Location, Brokers Excuse. 16200 /sqft. 9886402462

Kempegowda Layout
***NADAPRABHU* KEMPEGOWDA** LAYOUT 5th Block 30X40 E/F,7th Block 30x40 E/F,50x80 W/F,and 8th Block 40x60 W/F.Contact: 9686469799

KEMPEGOWDA LAYOUT, Commercial BDA Site for Sale 20x30, 30x40, 40x60, 50x80, Contact: Kumar 9945119449

Magadi Road
SALE SITE, west, Tavarekere Commercial Property 30x40 BMRDA 'E' Katha, Rs. 5200 psqft. 9972733746/ 9986977913

Peenya
PLOT SALE 160ftx100ft For Outright Sale @ Hegganahalli Cross. East Facing Bangalore-91 9900287834/ 9448377834

Rajarajeshwari Nagar
40X77 (3080.SQFT.) East`Facing, A & E Khata, BBMP`Site Sale`at SrinivasaNagar Near Krishnappa Layout,RR.Nagar Price: 3.10.Cr. Call: 9167979901.

Vijayanagar
FOR SALE: 50X90 (4500 Sft) South facing site with old building at 1-A Main Road, Govindarajanagar (M.C.Layout) Near Hotel Swathi Green Land (Jaimunirao Circle) Bengaluru. Broker's excuse. Contact: 9343432456

Vishweshwariah Layout
"VISHVESWARAIAH 6TH-BLOCK 50x80 East facing Allotte Site sale 60`feet Road,Near KLE Law College Genuine`buyers only`Contact: 9945662333"

***VISHVESHWARIAH* LAYOUT** 3rd Block 40x60 East Facing, 6th Block 40x60 South Facing. Contact: 9686469799

Tumkur
11.75 GUNTA DC Converted East Facing Plot Sale at Gubbi Town Near Police Station, Clear Titles: 9880419865

Thyagaraja Nagar
THYAGARAJANAGAR SALE Site 25'x40' with two floor 2 BHK House NF. Call: 9886019240/ 080- 26623994.

RMV
RMV NEW BEL Road Commercial Site's Sale 40x65, 50x80, 60x90 Call: 9845623970/ 9739400838/ Broker's Excuse

Commercial Land

Mysore
COMMERCIAL LAND FOR SALE
50,000 sqft, Rs.1350/- per sqft
Suitable for Hotels, Lodge, Apartment, School, Petrol Bunk, Villa Houses, Choultry, Farm House. 10km from Palace Surrounded by Layouts General Property HD Kote Main Road Mysore.
Contact: GANISHKA PROPERTIES 97397 03467 Buy and sell

Commerical

Vishweshwariah Layout
FOR SALE 50x80 BDA Commercial Site On 100 feet Road, East facing, at 6th BLOCK, Sir M.V. Layout Contact: 9880956229

Flat

Hennur
3 BHK Luxury Flats BBMP & RERA Approved Ready To Move/Stay promaxdreamvillehome 8073977742/ 9731374392

SALARPURIA GOLD Summit 3 BHK 2350 sqft semi furnished flat with servant quarters 2 car parking. Rs. 2.50 crores negotiable. Citilines: 9741417120

Uttarahalli
2/3/4 BHK New FLATS SALE, A Khatha, Ready-move. 40L/ 75L/ 1Cr. Carparking, Cauvery, Vaasthu. 9945224058, 6360501159.

RENT/SALE
PRIME PROPERTY
200 Meters FROM GLOBAL TECH PARK, RR NAGAR
COMMERCIAL BUILDING 13000+ Sq.ft
RENTAL: 4.8 LAKHS / Per Month
SALE PRICE: 7.8 Crores
Call: 7760038250 | 9900596322

House

BTM Layout
SALE BDA BTM STAG2 Mico Layout INDEPENDENT HOUSE 30×50 BEST FUTURE INVESTMNT. NO BROKERS 3.80CR; 8660563308.

Koramangala
HOUSE: 40×60 (2400 Sqft) Price 32000/- Persft Kormangala 5th block BDA Property, Commission 2%. Contact 9060125551.

Residential/ Commercial

Mysore
FOR BUYING & Selling any Mysore Properties Contact: Mysore Estates, Vishwanath Gowda 9590911111. *Refer genuine Buyers & Sellers, get attractive gifts. 0% Brokerage

MYSORE PROPERTIES 0% Brokerage10 Guntas each developed farm plots for Sale at HD Kote Road, Mysore.Contact: Mysore Estates Vishwanath Gowda 9590911111

MORE Classifieds Ads on Subsequent Pages

ಅಗ್ರವಾಲ್ ಸಮಾಜ್ ಕರ್ನಾಟಕ (ರಿ)
अग्रवाल समाज कर्नाटक (रजि)
AGRAWAL SAMAJ KARNATAKA (Regd.)

AGRAWAL TRADE FAIR
WHERE BUSINESS MEETS OPPORTUNITIES
11th & 12th JANUARY 2025
9 am to 6 pm
THE GRAND CASTLE, GATE NO.6, PALACE GROUNDS, BENGALURU
Free Entry for all

Chief Guest : PRAMODKUMAR AGRAWAL (IRS)
Principal Chief Commissioner : Central GST & Excise, Bengaluru.
Guest of Honour: PADMASHRI DR. H.R. NAGENDRA GURUJI
Founder & Vice Chancelior, SVYASA University, Bengaluru

EXCLUSIVE BENEFITS FOR STALL OWNERS
MEET BUSINESS LEADERS
UNLOCK NEW OPPORTUNITIES
NETWORKING
MEMENTO FROM ATF
PARTICIPATION CERTIFICATE

ALL MAJOR BUSINESS AND COMMUNITY ASSOCIATION OFFICE BEARERS ARE INVITED

UNLIMITED FUN FOR OUR GUESTS
LIVE CONCERT
EXHIBITION
GAMES
FUN ACTIVITIES FOR KIDS
OPENING & CLOSING CEREMONY

BOOK YOUR STALL TODAY

300+ STALLS OF B2B, B2C, FOOD AND ENTERTAINMENT
EVENT ADVERTISED IN LEADING RADIO, NEWSPAPERS, HOARDINGS & SOCIAL MEDIA

TITLE SPONSOR: Guru Punvaanii — Fair Policy | Fair Property
PLATINUM SPONSOR: Shyam Lawns, KEYAHOMES
CO SPONSOR: VRKP TMT BARS, PRIDE
Diamond Sponsors : Koreweld, Baba Steels Suppliers
Gold Sponsors : INDIA GOLD TMT BARS, ABR Logistics Pvt Ltd, PRINCE, MANGALAM HDPE PIPES, PRIMEGOLD PURE STEEL (TMT)

PRESIDENT : SUBHASH BANSAL SECRETARY : SATISH GOYAL (94480 78357) TREASURER : ANKIT MODI (98861 06325)

FOR MORE INFORMATION
ROHIT KEDIA 99729 25515
NARESH GUPTA 98440 22268
SANJAY TAYAL 98440 55331
GANESH MITTAL 72062 76511
PRASHANT GOYAL 98807 36459

AISHWARYA'S
100% NATURAL
ಚಹಾದ ಪ್ರತಿ ಗುಟುಕಿನಲ್ಲಿ,
ನಿಮ್ಮ ಶಾಂತಿಯ ಕ್ಷಣವನ್ನು ಅನುಭವಿಸಿ.
"ಕರ್ನಾಟಕದ ಅತ್ಯಂತ"
ರುಚಿಕರವಾದ ಚಹಾ
ಅದ್ಭುತ ರುಚಿ • ಮಿತವಾದ ಬೆಲೆ • ಉತ್ಕೃಷ್ಟ ಗುಣಮಟ್ಟ

TRADE ENQUIRIES
Bangalore Prasanna Kumar ASM +91 9980 157884
Rest of Karnataka Satish RSM +91 97313 03541
www.aishwaryateaindustries.com
aishwaryatea@gmail.com

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ ಕ್ಲಾಸಿಫೈಡ್ಸ್

DS-MAX PROPERTIES

EXPERIENCE THE JOY OF LIVING

www.dsmaxproperties.com

DR. K V SATISH, CHAIRMAN

DS MAX®
ISO 9001:2015 COMPANY

DS-MAX SAMYAK

PRM/KA/RERA/1251/310/PR/150223/005721

BDA APPROVED

Mysore Road

NEAR CHALLAGHATTA METRO STATION

Super Luxurious

2 & 3-BHK APARTMENTS | G+14 FLOORS

2-BHK STARTS @ ₹ 49.63 L*

3-BHK STARTS @ ₹ 66.98 L*

8088 445 445

2, 3 & 4-BHK APARTMENTS FOR SALE IN VARIOUS LOCATIONS

PRM/KA/RERA/1250/304/PR/150224/006622
WHITEFIELD, SOUKYA RD
15 MINS. HOPEFARM METRO
₹ 60.84 L - 1.14 Cr*
8088 773 773

PRM/KA/RERA/1251/308/PR/160824/006973
BANNERGHATTA RD
NEAR KOPPA GATE
₹ 47.20 L - 1.13 Cr*
8880 461 461

PRM/KA/RERA/1251/310/PR/210324/006724
SILKBOARD
NEAR SINGASANDRA METRO
₹ 73.02 L - 1.20 Cr*
8880 472 472

PRM/KA/RERA/1250/301/PR/251024/007178
YELAHANKA
5 MINS. RAJANUKUNTE
₹ 43.88 - 76.38 Lakhs*
8880 758 758

PRM/KA/RERA/1251/310/PR/151223/006489
BANASHANKARI
OPP. NPS SCHOOL (3 & 4-BHK)
₹ 98.00 L - 1.74 Cr*
8050 161 222

PRM/KA/RERA/1251/308/PR/160824/006972
ELECTRONIC CITY
10 MINS. HOSA ROAD METRO
₹ 54.60 L - 1.15 Cr*
9164 045 000

PRM/KA/RERA/1251/308/PR/290122/004660
SARJAPURA
SARJAPUR - ATTIBELE RD
₹ 38.72 - 45.12 Lakhs*
9164 122 000

PRM/KA/RERA/1251/309/PR/060923/006244
TUMKUR ROAD
10 MINS. MADAVARA METRO
₹ 45.81 - 72.67 Lakhs*
8880 465 465

PRM/KA/RERA/1251/308/PR/280222/004739
CHANDAPURA
10 MINS. BOMMASANDRA METRO
₹ 38.76 - 49.60 Lakhs*
8880 013 310

PRM/KA/RERA/1251/309/PR/030524/006841
HENNUR ROAD
5 MINS. HENNUR DECATHLON
₹ 58.74 - 95.81 Lakhs*
8880 003 003

PRM/KA/RERA/1251/446/PR/210312/004002
K R PURAM
NEAR GARDEN CITY UNIV.
₹ 74.27 - 93.43 Lakhs*
8880 438 000

PRM/KA/RERA/1251/309/PR/220223/005748
THANISANDRA
10 MINS. MANYATA TECH PARK
₹ 62.09 - 78.37 Lakhs*
8880 003 003

*T & C Apply

FACILITY MANAGEMENT SERVICES

For Apartment & Commercial Complexes
MEP | Security Services | Gardening | Landscaping
STP | WTP | RO Maintenance | Housekeeping
Swimming Pool Maintenance

CALL : 9164 022 000

ELEGANT INTERIORS



Directly From Our Factory
Modular Kitchens | TV Units | Wardrobes
Painting & Wallpapers | Storage Units
False Ceilings | Furniture

CALL : 9164 056 000

REFER & EARN

Refer Us To Your Friends & Relatives
And Get Handsomely Rewarded
2, 3 & 4-BHK Homes | Full / Partial Interiors
Facility Management Services
(For Apartment & Commercial Complexes) *T & C Apply

CALL : 9164 043 000

REFER & EARN

Refer Us To A Landowner For
JV / Outright Purchase In Any Part Of
Bengaluru And Get A 2-BHK
ABSOLUTELY FREE*
Residential Land | Commercial Land
*T & C Apply

CALL : 8880 463 463

ಡಿಎಸ್ ಮ್ಯಾಕ್ಸ್

Disclaimer: Information provided in this advertisement is for reference only, and all data is sourced internally. The images, illustrations, and artist's impressions used in this advertisement are for representational purposes only. The prices mentioned are indicative and base prices. Any offers, discounts, or incentives mentioned in this advertisement are subject to specific terms and conditions. All taxes, registration charges, stamp duty, and any other statutory payments are applicable as per government regulations. All directions, locations, and landmarks are approximate. Please use reliable resources for accurate travel times. Mentioning a specific product, process, or service does not imply endorsement. Please contact our Sales Team for detailed information about specific projects, pricing, availability, and other inquiries. DS-MAX Properties ensures that all its projects comply with the Real Estate (Regulation and Development) Act, 2016 (RERA) and its regulations. Visit : www.rera.karnataka.gov.in

CREDAI BENGALURU



ಶೃಂಗೇರಿ ಶಾರದಾ ಪೀಠದ ವಿಹಂಗಮ ನೋಟ

‘ಸುವರ್ಣ ಭಾರತೀ’ ಮಹೋತ್ಸವ

ಸ್ತೋತ್ರ ತ್ರಿವೇಣಿ ಸಮರ್ಪಣೆ

‘ಸುವರ್ಣ ಭಾರತೀ’ ಮಹೋತ್ಸವದ ಪ್ರಯುಕ್ತ ಜ.11ರಂದು ಸ್ತೋತ್ರ ತ್ರಿವೇಣಿ ಮಹಾ ಸಮರ್ಪಣೆ ಕಾರ್ಯಕ್ರಮ ನಡೆಯಲಿದೆ...

ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮೀಜಿ ಮತ್ತು ವಿಧುಶೇಖರಭಾರತೀ ಸ್ವಾಮೀಜಿ

ದಕ್ಷಿಣಾಮ್ನಾಯ ಶೃಂಗೇರಿ ಶ್ರೀ ಶಾರದಾ ಪೀಠದ 36ನೇ ಗುರುಗಳಾದ ಭಾರತೀತೀರ್ಥ ಮಹಾ ಸ್ವಾಮೀಜಿ ಅವರ ಸನ್ಯಾಸ ಸ್ವೀಕಾರದ 50ನೇ ವರ್ಷಾಚರಣೆ ‘ಸುವರ್ಣ ಭಾರತೀ’ ಮಹೋತ್ಸವ ಪ್ರಯುಕ್ತ ಸ್ತೋತ್ರ ತ್ರಿವೇಣಿ ಮಹಾ ಸಮರ್ಪಣೆ ಕಾರ್ಯಕ್ರಮ ಜ.11ರಂದು ನಡೆಯಲಿದೆ...

ಪರಶಿವ ಅವತಾರಿಗಳಾದ ಶ್ರೀ ಶಂಕರ ಭಗವತ್ಪಾದರು ಸುಮಾರು 12 ಶತಮಾನಗಳ ಹಿಂದೆ ಈ ಭಾರತ ಭೂಮಿಯಲ್ಲಿ ಅವತರಿಸಿ ಸನಾತನ ವೈದಿಕ ಧರ್ಮವನ್ನು ಪುನರುತ್ಥಾನ-ಗೊಳಿಸಿ, ಉಪನಿಷತ್ ಪ್ರತಿಪಾದ್ಯವಾದ ಅದ್ವೈತ ಸಿದ್ಧಾಂತವನ್ನು ಎತ್ತಿಹಿಡಿದರು. ಪ್ರಸ್ಥಾನತ್ರಯಗಳಿಗೆ ಭಾಷ್ಯವನ್ನು ಬರೆದ ಅವರು ಹಲವಾರು ಪ್ರಕರಣ ಗ್ರಂಥ ಮತ್ತು ಸ್ತೋತ್ರಗಳನ್ನೂ ರಚಿಸಿದರು.

ಕಾಲ್ನಡಿಗೆಯಲ್ಲೇ ಭಾರತದಾದ್ಯಂತ ಸಂಚರಿಸಿ ಅನ್ಯಮತದ ಪ್ರತಿಷ್ಠಿತ ಪಂಡಿತರಲ್ಲಿ ತಮ್ಮ ಪ್ರಖರವಾದ ವಾದವನ್ನು ಮಂಡಿಸಿ ಅವರ ಮೇಲೆ ವಿಜಯ ಸಾಧಿಸಿದರು. ಸನಾತನ ಧರ್ಮ ಮತ್ತು ಅದ್ವೈತ ಸಿದ್ಧಾಂತವನ್ನು ಪ್ರತಿಪಾದಿ-ಸಿಕೊಂಡು ನಿರಂತರವಾಗಿ ಮುನ್ನಡೆಯಲು ನಾಲ್ಕು ಅಮ್ನಾಯ ಪೀಠಗಳನ್ನು ಸ್ಥಾಪಿಸಿದರು. ಇದರಲ್ಲಿ ಅವಿಚ್ಛಿನ್ನ ಗುರು ಪರಂಪರೆಯಿಂದ ತಪಸ್ಸು, ಅಧ್ಯಯನ ಮತ್ತು ಶ್ರೀ ಸುರೇಶ್ವ-ರಾಚಾರ್ಯರು, ಶ್ರೀ ವಿದ್ಯಾತೀರ್ಥರು ಮತ್ತು ಶ್ರೀ ವಿದ್ಯಾರಣ್ಯರಂಥ ಮಹಾ ಜ್ಞಾನಿಗಳು ಅಲಂಕರಿಸಿದಂಥ ದಕ್ಷಿಣಾಮ್ನಾಯ ಶೃಂಗೇರಿ ಶ್ರೀ ಶಾರದಾ ಪೀಠವೂ ಒಂದಾಗಿದೆ.

ಪ್ರಸ್ತುತ ಈ ಪೀಠವನ್ನು ಅಲಂಕರಿಸಿರುವ 36ನೇ ಪೀಠಾಧಿಪತಿ, ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ಭಾರತೀ ತೀರ್ಥ ಮಹಾಸ್ವಾಮೀಜಿ ಅನೇಕ ಉದಾತ್ತ ಗುಣಗಳ ಗಣಿಯಾಗಿದ್ದಾರೆ. ಅನೇಕ ಶಾಸ್ತ್ರಗಳಲ್ಲಿ ವಿದ್ವತ್ ಪ್ರೌಢಿಮೆ ಹೊಂದಿರುವ ಅವರು, ತಮ್ಮ ಅಪಾರವಾದ ಕಾರುಣ್ಯ ಮತ್ತು ವಾತ್ಸಲ್ಯದಿಂದ ಶಿಷ್ಯ ಜನರನ್ನು ಅನುಗ್ರಹಿಸುತ್ತಿದ್ದಾರೆ. 1974ರ ನವೆಂಬರ್ 11ರ ಆನಂದನಾಮ ಸಂವತ್ಸರದ ಆಶ್ವಯುಜ ಕೃಷ್ಣ ದ್ವಾದಶಿಯಂದು ಅವರು ಸನ್ಯಾಸಾಶ್ರಮ ಸ್ವೀಕರಿಸಿದರು.

ಅವರು ಸನ್ಯಾಸ ಸ್ವೀಕರಿಸಿದ 50ನೇ ವರ್ಷದ ಸ್ವರ್ಣ ಮಹೋತ್ಸವವನ್ನು ‘ಸುವರ್ಣಭಾರತೀ’ ಎಂಬ ಹೆಸರಿನಲ್ಲಿ ವರ್ಷಪೂರ್ತಿ ಆಚರಿಸಬೇಕೆಂದು ಅವರ ಕರಕಮಲ ಸಂಜಾತರಾದ ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀ ಮಹಾಸ್ವಾಮಿಜಿ ಕಳೆದ ವರ್ಷ ಸಂಕಲ್ಪಿಸಿದ್ದರು.

ಈ ಶುಭ ಸಂದರ್ಭವನ್ನು ಲೋಕ ಕ್ಷೇಮಾರ್ಥವಾಗಿ ಹಲವು ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಕಾರ್ಯಗಳು ಹಾಗೂ ವಿಶೇಷವಾದ ಶಂಕರ ಸ್ತೋತ್ರ ಪಠಣ ಮೊದಲಾದ ಕಾರ್ಯ-ಕ್ರಮಗಳನ್ನು ವೈಭವೋಪೇತವಾಗಿ ಮಾಡುವ ಮೂಲಕ ವರ್ಷಪೂರ್ತಿ ಆಚರಿಸಲಾಗಿದೆ. ಉಭಯ ಜಗದ್ಗುರುಗಳ ಆಶೀರ್ವಾದದೊಂದಿಗೆ ಮಠದ ಶ್ರೀ ಶಾಂಕರ ತತ್ವಪ್ರಸಾರ ಅಭಿಯಾನ ಶ್ರೀ ಶಂಕರಾಚಾರ್ಯರು ರಚಿಸಿದ ಕಲ್ಯಾಣ ವೃಷ್ಟಿಸ್ತವ, ಶಿವಪಂಚಾಕ್ಷರ ನಕ್ಷತ್ರಮಾಲಾ ಸ್ತೋತ್ರ ಮತ್ತು ಶ್ರೀ ಲಕ್ಷ್ಮೀನೃಸಿಂಹ ಕರಾವಲಂಬ ಸ್ತೋತ್ರಗಳ ವಿಶೇಷ ಅಭಿಯಾನವನ್ನು ಕೈಗೊಂಡಿವೆ. ಇದರ ಮಹಾ ಸಮರ್ಪಣೆ ಇದೇ ಜ.11ರಂದು ಶೃಂಗೇರಿ ಕ್ಷೇತ್ರದ ಶಾರದಾ ಮಠದ ನರಸಿಂಹವನದ ಗುರುಭವನದಲ್ಲಿ ನಡೆಯಲಿದೆ.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್



‘ಸುವರ್ಣ ಭಾರತೀ’ ಮಹೋತ್ಸವ

ದಕ್ಷಿಣಾಮ್ನಾಯ ಶ್ರೀ ಶಾರದಾ ಪೀಠವು ಅನಾದಿ ಕಾಲದಿಂದಲೂ ಭಾರತದ ಜ್ಞಾನಕೇಂದ್ರವೂ, ಮಹನೀಯರ ನೆಲೆವೀಡೂ ಆಗಿ, ಹಲವು ಮಹಾತ್ಮರ ಕೃಪೆಯನ್ನು ಭಕ್ತಸಮೂಹಕ್ಕೆ ನೀಡಿರುವ ಪುಣ್ಯ ಸ್ಥಳವಾಗಿದೆ. ಇದೇ ವಿಷಯವನ್ನು ಸುವರ್ಣಭಾರತೀ ಮಹೋತ್ಸವ ಸಾರುತ್ತಿದೆ. ಸುವರ್ಣ ಭಾರತೀ ಮಹೋತ್ಸವದ ಅಂಗವಾಗಿ ಭಾರತದಾದ್ಯಂತ ವಿವಿಧ ಕಾರ್ಯಕ್ರಮಗಳೂ ನಡೆದಿವೆ. ಲೌಕಿಕವಾಗಿಯೂ, ಆಧ್ಯಾತ್ಮಿಕವಾಗಿಯೂ ಭಕ್ತ ಸಮೂಹಕ್ಕೆ ಅನುಕೂಲವಾಗುವಂತೆ ರೂಪಿಸಿದ್ದ ಕಾರ್ಯಕ್ರಮಗಳು ಹಲವು ಇವೆ.

ಧಾರ್ಮಿಕ-ಆಧ್ಯಾತ್ಮಿಕ ಕಾರ್ಯಕ್ರಮಗಳು: ಮಹಾಸ್ವಾಮೀಜಿ ಅವರಿಂದ ವಿಶೇಷ ಪೂಜೆ. ಲೋಕ ಕಲ್ಯಾಣಕ್ಕಾಗಿ ಮಹಾರುದ್ರ, ಚಂಡಿಯಾಗ. ವಿವಿಧ ಭಾಷೆಗಳಲ್ಲಿ ಭಾಗವತಸಪ್ತಾಹ, ಜಗದ್ಗುರುನಮನ ಎಂಬ ಶೀರ್ಷಿಕೆಯ ವಿಶೇಷ ಉಪನ್ಯಾಸ ಮಾಲಿಕೆ,

ಲೋಕೋದ್ಧಾರಕ್ಕಾಗಿ ಶ್ರೀ ವಿಷ್ಣು ಸಹಸ್ರನಾಮ ಪಾರಾಯಣ, ಸಾಮೂಹಿಕ ಸೌಂದರ್ಯಲಹರಿ ಪಾರಾಯಣ.

ಶಂಕರ ಸ್ತೋತ್ರ ಪಠಣ: ವಿಶೇಷವಾಗಿ ಶ್ರೀ ಶಂಕರ ಸ್ತೋತ್ರ ವೈಭವ ಕಾರ್ಯಕ್ರಮದಲ್ಲಿ ಸುಮಾರು 3,500 ವಿದ್ಯಾರ್ಥಿಗಳಿಂದ ತೋಟಕಾಷ್ಟಕ ಹಾಗೂ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮೀಜಿ ರಚಿತ ಶ್ರೀ ಶಂಕರ ಭಗವತ್ಪಾದಾಚಾರ್ಯಸ್ತವಗಳ ಪಠಣ, ಸಂಸ್ಕೃತಾಂಧ್ರ (ಸಂಸ್ಕೃತ, ತೆಲುಗು ಸೇರಿಕೊಂಡಂತೆ) ಶತಾವಧಾನ, ವಿದ್ವತ್ ಗೋಷ್ಠಿಗಳು, ಭಾಷ್ಯಭಾನುಪ್ರಭಾ ಮೊದಲಾದ ಮಹೋನ್ನತ ಗ್ರಂಥಗಳ ಕುರಿತ ಚರ್ಚೆ, ಕೃಷ್ಣಯಜುರ್ವೇದೀಯ ಹವನಗಳು, ಚೆನ್ನೈನಲ್ಲಿ ಶಂಕರ ವಿಜಯ ಶೀರ್ಷಿಕೆಯಡಿ ಜಗದ್ಗುರು ಆದಿ ಶಂಕರರ ಜೀವನ-ಬೋಧನೆಗಳ ಪ್ರಚಾರ, ತೆಲುಗಿನಲ್ಲಿ ಶಂಕರರ ಜೀವನಾಧಾರಿತ ರೂಪಕ ಪ್ರದರ್ಶನ, ದಕ್ಷಿಣ ಭಾರತದ ಹೆಸರಾಂತ ಸುಮಾರು 60 ಪ್ರತಿಭಾನ್ವಿತ ಸಂಗೀತ ವಿದ್ವಾಂಸರಿಂದ ಸಂಗೀತ ಸೇವೆ, ಅರ್ಧ ಶತಮಾನಕ್ಕೂ ಹೆಚ್ಚು ಕಾಲ ಜಗದ್ಗುರುಗಳಿಗೆ ಸೇವೆ ಸಲ್ಲಿಸಿರುವ ಹಿರಿಯ ಗುರುಸೇವಕರಿಗೆ ಗೌರವ ಸನ್ಮಾನ ನೀಡಲಾಗಿದೆ.

ಸಾವಿರಾರು ವಿದ್ಯಾರ್ಥಿಗಳಿಗೆ ಶಾರದಾ ಪ್ರಸಾದ

1994- 95ರಲ್ಲಿ ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಜಗದ್ಗುರು ಶ್ರೀ ಭಾರತೀತೀರ್ಥ ಮಹಾಸ್ವಾಮೀಜಿ ಕೈಗೊಂಡಿದ್ದ ಅಖಿಲ ಭಾರತ ಪ್ರವಾಸ ಪೂರ್ಣಗೊಂಡ ಬಳಿಕ ಶೃಂಗೇರಿಯ ಸುತ್ತಮುತ್ತ ಇರುವ ಶಾಲೆಗಳಿಗೂ ಮಧ್ಯಾಹ್ನದ ಬಿಸಿ ಊಟದ ಯೋಜನೆಯನ್ನು ವಿಸ್ತರಿಸಲು ನಿರ್ಧರಿಸಲಾಯಿತು. ಹಲವು ಶಾಲೆಗಳ ಮನವಿಯಿಂದಾಗಿ, ಕೊಪ್ಪ, ಎನ್.ಆರ್. ಪುರ, ತೀರ್ಥಹಳ್ಳಿ, ಬಾಳೆಹೊನ್ನೂರು, ಕಾರ್ಕಳ ಸೇರಿದಂತೆ ವಿವಿಧ ತಾಲ್ಲೂಕುಗಳ ಹಲವು ಶಾಲೆಗಳಿಗೆ ಈ ಯೋಜನೆಯನ್ನು ವಿಸ್ತರಿಸಲಾಯಿತು. ಪ್ರತಿ ದಿನ ಸಾವಿರಾರು ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಶಾಲೆಗೆ ಸಂಬಂಧ ಪಟ್ಟ ಅನೇಕರು ಈ ಯೋಜನೆಯ ಪ್ರಯೋಜನವನ್ನು ಪಡೆಯುತ್ತಿದ್ದಾರೆ. ಶ್ರೀಮಠದ ಶ್ರೀಶಾರದಾ ಪ್ರಸಾದದಿಂದ ವಿದ್ಯಾರ್ಥಿಗಳು ತಪ್ಪದೇ ಶಾಲೆಗೆ ಬರುತ್ತಿದ್ದಾರೆ ಎಂಬ ಸಮಾಧಾನವೂ ಎಲ್ಲಾ ಶಾಲೆಯ ಅಧ್ಯಾಪಕರಲ್ಲಿದೆ.

ಸಾಮುದಾಯಿಕ ನೆರವು ಕಾರ್ಯಕ್ರಮಗಳು

ನಿತ್ಯಾನಂದಕರೀ, ವರಾಭಯಕರೀ ಎಂದ ಶ್ರೀ ಶಂಕರರು ತಾಯಿ ಅನ್ನಪೂರ್ಣೆಯನ್ನು ಸ್ತುತಿಸಿದ್ದಾರೆ. ಅದೇ ನಿಟ್ಟಿನಲ್ಲಿ ಶೃಂಗೇರಿಯ ಸುತ್ತ ಮುತ್ತಲಿನ ಶಾಲೆಗಳ ಸಾವಿರಾರು ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಬಿಸಿಯೂಟದ ವ್ಯವಸ್ಥೆ ಬೆಂಗಳೂರು, ತಿರುಮಲ, ಚೆನ್ನೈ, ಮುಂಬೈ, ನವದೆಹಲಿಯ ಶ್ರೀ ಶಾರದಾ ಪೀಠದ ಶಾಖೆಗಳಲ್ಲಿ ನಿತ್ಯ ಅನ್ನದಾನದ ವ್ಯವಸ್ಥೆ, ಬಡವರಿಗೆ ಮಳೆ-ಗಾಳಿ-ಚಳಿಗಳಿಂದ ರಕ್ಷಣೆಗೆ ಕಂಬಳಿ, ಛತ್ರಿ, ಜಾಕೆಟ್‌ಗಳ ವಿತರಣೆ, ವಿದ್ಯಾರ್ಥಿಗಳು ಸೇರಿದಂತೆ ಸಾರ್ವಜನಿಕರಿಂದ ಶೃಂಗೇರಿಯಲ್ಲಿ ಗಿಡ ನೆಡುವ ಕಾರ್ಯಕ್ರಮ, 50 ಸಾವಿರ ಸಸಿಗಳ ವಿತರಣೆ ಮಾಡಲಾಗಿದೆ. ಸುಮಾರು ಮುನ್ನೂರು ಗೋವುಗಳನ್ನು ರಕ್ಷಿಸಿ ಸಾಕಿ-ಸಲಹುತ್ತಿರುವ ಗೋಶಾಲೆಯೂ ಮಠದಲ್ಲಿದೆ.

ಆರೋಗ್ಯ ಮತ್ತು ಶಿಕ್ಷಣ

ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ, ಬಡ ವಿದ್ಯಾರ್ಥಿಗಳ ಶಾಲಾಶುಲ್ಕ ಪಾವತಿ, ಲೇಖನ ಸಾಮಗ್ರಿಗಳ ದಾನ, ಯೋಗ್ಯ ವಿದ್ಯಾರ್ಥಿಗಳಿಗೆ ಡಿಜಿಟಲ್ ಪ್ಯಾಡ್ ಕೊಡುಗೆ, ಪುಸ್ತಕಗಳಿಗೆ ಸಹಾಯಧನ, ಶ್ರೀಅಭಿನವ ವಿದ್ಯಾತೀರ್ಥ ಆಸ್ಪತ್ರೆಯ ಮೂಲಕ ಉಚಿತ ನೇತ್ರ ತಪಾಸಣೆ ಹಾಗೂ ಕಣ್ಣಿನ ಪೊರೆಯ ಶಸ್ತ್ರಚಿಕಿತ್ಸೆ, ಗ್ರಾಮೀಣ ಪ್ರದೇಶಗಳಲ್ಲಿ ಆಯುರ್ವೇದ-ಅಲೋಪತಿ ಸೇರಿ ವೈದ್ಯಕೀಯ ಉಚಿತ ತಪಾಸಣಾ ಶಿಬಿರಗಳು, 50ಕ್ಕೂ ಹೆಚ್ಚು ಸ್ತ್ರೀ-ಪುರುಷರಿಗೆ ಉಚಿತ ಕೃತಕ ಅಂಗಾಂಗ ವಿತರಣೆ, ಅನುದಾನಿತ ಡಯಾಲಿಸಿಸ್ ಸೇವೆ, ವಿದ್ವಜ್ಜನರಿಗೆ ಸಹಾಯಹಸ್ತ, ಶೃಂಗೇರಿ, ಚೆನ್ನೈ, ಮೈಸೂರು, ತೆಲಂಗಾಣ, ಆಂಧ್ರಪ್ರದೇಶ ಮತ್ತು ಇತರ ಸ್ಥಳಗಳಲ್ಲಿ ಜಗದ್ಗುರುಗಳ ವಿಜಯ ಯಾತ್ರೆಯ ಸಮಯದಲ್ಲಿ ನಡೆದ ವೇದ ಮತ್ತು ಶಾಸ್ತ್ರ ಸಭೆಗಳಲ್ಲಿ ನೂರಾರು ವಿದ್ವಾಂಸರನ್ನು ಗುರುತಿಸಿ ಅವರಿಗೆ ಗೌರವ ಧನ ಹಾಗೂ ಇತರ ಪ್ರಯೋಜನ ವಿತರಣೆ ಮಾಡಲಾಗಿದೆ. ಈ ಮೂಲಕ ಸನಾತನ ಧರ್ಮದ ಉದ್ಧಾರ, ರಕ್ಷಣೆ, ಶಿಕ್ಷಣಕ್ಕಾಗಿ ವೇದ-ಶಾಸ್ತ್ರ ಪಂಡಿತರಿಗೆ ಶ್ರೀ ಶಾರದಾ ಪೀಠದಿಂದ ಶಾಶ್ವತ ಬೆಂಬಲ ನೀಡಲಾಗಿದೆ.

ದಕ್ಷಿಣ ಭಾರತದ ಶೃಂಗಗಿರಿಯಲ್ಲಿ ನೆಲೆಸಿರುವ ಶ್ರೀ ಶಾರದಾಂಬೆಯೂ, ಅವಳ ರೂಪಗಳೇ ಆಗಿರುವ ಉಭಯ ಜಗದ್ಗುರುಗಳ ಆಶೀರ್ವಾದದಿಂದ ಬೆಂಗಳೂರು, ಹೈದರಾಬಾದ್, ಚೆನ್ನೈ, ನವದೆಹಲಿ, ತ್ರಿಪುರಾ, ತಿರುಮಲಗಳಂಥ ನಗರಗಳಲ್ಲಿನ ಶ್ರೀ ಶಾರದಾ ಪೀಠದ ಶಾಖೆಗಳು ‘ಸುವರ್ಣ ಭಾರತೀ’ ಮಹೋತ್ಸವದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿವೆ. ಈ ಕಾರ್ಯಕ್ರಮಕ್ಕೆ ಅವುಗಳ ಕೊಡುಗೆಯೂ ಅಪಾರ. ‘ಭಾರತೀ ತೀರ್ಥಮಾಶ್ರಯೇ’ ಎಂದು ನಾವು ನಿತ್ಯವೂ ಮಂತ್ರ ಪಠಿಸುತ್ತಾ ದಕ್ಷಿಣಾಮ್ನಾಯ ಶೃಂಗೇರಿ ಶ್ರೀ ಶಾರದಾ ಪೀಠದ ಜಗದ್ಗುರುಗಳಾದ, ಶ್ರೀ ಭಾರತೀ ತೀರ್ಥ ಮಹಾಸ್ವಾಮೀಜಿಯನ್ನು ನೆನೆಯುತ್ತೇವೆ. ಅಂತೆಯೇ ಅವರ ಕೃಪೆಯೂ, ಆಶೀರ್ವಾದವೂ ಸಮಸ್ತ ಭಕ್ತ ವೃಂದದ ಮೇಲಿದೆ. ಹೀಗಿರುವಾಗ, ಅಂಥ ಮಹಾನುಭಾವರ ಹೆಸರಿನಲ್ಲೇ ವಿಜೃಂಭಣೆಯಿಂದ ನಡೆಯುತ್ತಿರುವ ಸುವರ್ಣ ಭಾರತೀ ಮಹೋತ್ಸವವು ಒಂದು ಆಚರಣೆಯಾಗಿ ಅಲ್ಲದೆ, ಸನಾತನ ಧರ್ಮದ ಉಳಿವು-ಅರಿವು-ಬೆಳವಣಿಗೆಯ ದೆಸೆಯಲ್ಲಿ ಶಾರದಾ ಪೀಠದ ಬದ್ಧತೆಗೆ ಹಿಡಿದ ಕನ್ನಡಿ.

ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ, ಬಡ ವಿದ್ಯಾರ್ಥಿಗಳ ಶಾಲಾಶುಲ್ಕ ಪಾವತಿ, ಲೇಖನ ಸಾಮಗ್ರಿಗಳ ದಾನ, ಯೋಗ್ಯ ವಿದ್ಯಾರ್ಥಿಗಳಿಗೆ ಡಿಜಿಟಲ್ ಪ್ಯಾಡ್ ಕೊಡುಗೆ, ಪುಸ್ತಕಗಳಿಗೆ ಸಹಾಯಧನ, ಶ್ರೀ ಮಠದ ಆಸ್ಪತ್ರೆಗಳ ಮೂಲಕ ಅತ್ಯಂತ ಕಡಿಮೆ ದರದಲ್ಲಿ ತಪಾಸಣೆ ಮುಂತಾದ ಹಲವು ಕಾರ್ಯಗಳು ನಿರಂತರವಾಗಿ ನಡೆದಿವೆ.

ಜಗದ್ಗುರು ನಮನ

ಕಳೆದ ವರ್ಷ ಏಳು ದಿನ ಶ್ರೀ ಶಾರದಾ ಮಠದಲ್ಲಿ ‘ಸುವರ್ಣಭಾರತೀ’ ಮಹೋತ್ಸದ ಅಂಗವಾಗಿ ಜಗದ್ಗುರುಗಳ ಕುರಿತು ‘ಜಗದ್ಗುರುನಮನ’ ಎಂಬ ಪ್ರವಚನ ಸಪ್ತಾಹ ನೆರವೇರಿತ್ತು. ಸುಪ್ರೀಂಕೋರ್ಟ್‌ನ ಹೆಚ್ಚುವರಿ ನ್ಯಾಯಮೂರ್ತಿ ಗುರುಭಕ್ತಮಣಿ ಎನ್.ವೆಂಕಟರಾಮನ್ ಅವರು ಶ್ರೀ ಮಠದ ಪ್ರವಚನ ಮಂದಿರದಲ್ಲಿ ಪ್ರತಿದಿನ ಸಂಜೆ ಈ ಪ್ರವಚನ ನಡೆಸಿಕೊಟ್ಟರು. ಈ ಸಂದರ್ಭದಲ್ಲಿ ಜಗದ್ಗುರು ಶ್ರೀ ಆದಿಶಂಕರಾಚಾರ್ಯರ ಚಿತ್ರಾತ್ಮಕಜೀವನ ಚರಿತ್ರೆಯ ಪುಸ್ತಕವನ್ನು ಜಗದ್ಗುರುಗಳು ಬಿಡುಗಡೆ ಮಾಡಿದರು. ಬಾಲವೇದ ಸಹಯೋಗದಲ್ಲಿ ಮಕ್ಕಳಿಗೆ ಸಂಸ್ಕಾರವನ್ನು ಕೊಡುವಂಥ ‘ಬಾಲಭಾರತೀ’ ಎಂಬ ಯೋಜನೆಯನ್ನು ಜಗದ್ಗುರುಗಳು ಬಿಡುಗಡೆ ಮಾಡಿದ್ದರು. ‘ಸುವರ್ಣಭಾರತೀ’ ಮಹೋತ್ಸವದ ಅಂಗವಾಗಿ ಶೃಂಗೇರಿ ತಾಲ್ಲೂಕಿನ ಸುಮಾರು 800 ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಸಾಮಗ್ರಿಗಳನ್ನು ವಿತರಿಸಲಾಯಿತು. ಶಾರದಾ ಮಠದ ಆಡಳಿತಾಧಿಕಾರಿ ಪಿ.ಎ.ಮುರಳಿ ಹಾಗೂ ಮಠದ ಇತರ ಸಿಬ್ಬಂದಿ ಅಗತ್ಯ ವಸ್ತುಗಳನ್ನು ವಿತರಿಸಿದರು.

ಶೃಂಗೇರಿಯಲ್ಲಿ ಶ್ರೀ ಶಂಕರ ಸ್ತೋತ್ರ ವೈಭವ

ಜಗದ್ಗುರು ಶ್ರೀ ವಿಧುಶೇಖರಭಾರತೀ ಸ್ವಾಮೀಜಿ ದಿವ್ಯ ಸಾನ್ನಿಧ್ಯದಲ್ಲಿ ಶೃಂಗೇರಿ, ಕೊಪ್ಪ, ಎನ್.ಆರ್.ಪುರ ಮತ್ತು ತೀರ್ಥಹಳ್ಳಿ ತಾಲ್ಲೂಕಿನ ಆಯ್ದ ಪ್ರೌಢಶಾಲೆಗಳಿಂದ ಸುಮಾರು 3500 ವಿದ್ಯಾರ್ಥಿಗಳು ‘ಶ್ರೀ ಶಂಕರ ಸ್ತೋತ್ರ ವೈಭವ’ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಜಗದ್ಗುರು ಶ್ರೀ ಆದಿಶಂಕರಾಚಾರ್ಯರ ನಾಲ್ಕು ಪ್ರಧಾನ ಶಿಷ್ಯರಲ್ಲಿ ಒಬ್ಬರಾದ ಜಗದ್ಗುರು ಶ್ರೀ ತೋಟಕಾಚಾರ್ಯರು ರಚಿಸಿದ ‘ತೋಟಕಾಷ್ಟಕ’ ಹಾಗೂ ದಕ್ಷಿಣಾಮ್ನಾಯ ಶೃಂಗೇರಿ ಶಾರದಾ ಪೀಠಾಧಿಪತಿ ಜಗದ್ಗುರು ಶ್ರೀ ಭಾರತೀತೀರ್ಥ ಮಹಾಸ್ವಾಮೀಜಿ ರಚಿಸಿದ ‘ಶ್ರೀ ಶಂಕರ ಭಗವತ್ಪಾದಾಚಾರ್ಯಸ್ತವ’ ಸ್ತೋತ್ರಗಳನ್ನು ಶಾಲಾ ವಿದ್ಯಾರ್ಥಿಗಳು ಒಂದೇ ರಾಗದಲ್ಲಿ ಪಠಿಸಿ ಸಮರ್ಪಿಸಿದ್ದರು.

ನೆಲಸಮವಾಗಲಿದೆ ‘ಎಚ್‌.ಎನ್‌. ಕಲಾಕ್ಷೇತ್ರ’ ಕಟ್ಟಡ

ಜಯನಗರದ ನ್ಯಾಷನಲ್ ಕಾಲೇಜು ಆವರಣದಲ್ಲಿರುವ ಎಚ್‌.ಎನ್‌. ಕಲಾಕ್ಷೇತ್ರದ ನೋಟ ಪ್ರಜಾವಾಣಿ ಚಿತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ರಂಗ ಚಟುವಟಿಕೆಗಳ ಪ್ರಮುಖ ತಾಣವಾಗಿದ್ದ ಜಯನಗರದ ಎಚ್‌.ಎನ್‌. ಕಲಾಕ್ಷೇತ್ರ ಶೀಘ್ರದಲ್ಲಿಯೇ ಇತಿಹಾಸದ ಭಾಗವಾಗಲಿದೆ.

ಈ ಕಟ್ಟಡವನ್ನು ನೆಲಸಮ ಮಾಡಿ, ಅದೇ ಜಾಗದಲ್ಲಿ ಅತ್ಯಾಧುನಿಕ ಸೌಲಭ್ಯ ಒಳಗೊಂಡ ಕಟ್ಟಡ ನಿರ್ಮಿಸಲು ದಿ ನ್ಯಾಷನಲ್ ಎಜುಕೇಷನ್ ಸೊಸೈಟಿ ಆಫ್ ಕರ್ನಾಟಕ ಮುಂದಾಗಿದೆ.

ಜಯನಗರದ ನ್ಯಾಷನಲ್ ಕಾಲೇಜು ಆವರಣದಲ್ಲಿ ಇರುವ ಈ ಸುಸಜ್ಜಿತ ರಂಗಮಂದಿರವು ಅನೇಕ ರಂಗ ಕಲಾವಿದರಿಗೆ ವೇದಿಕೆ ಕಲ್ಪಿಸಿದೆ. ಹಲವು ರಂಗತಂಡಗಳು ಪ್ರದರ್ಶನ ನೀಡಿವೆ.

ಶಿಕ್ಷಣ ತಜ್ಞ ಎಚ್‌.ನರಸಿಂಹಯ್ಯ ಅವರ ಹೆಸರಿನ ಈ ರಂಗಮಂದಿರದಲ್ಲಿ ಸಾವಿರಾರು ರಂಗಪ್ರಯೋಗಗಳು ನಡೆದಿವೆ. ವಿದ್ಯಾರ್ಥಿಗಳಲ್ಲಿ ರಂಗಾಸಕ್ತಿಯನ್ನು ಬೆಳೆಸಲು ಪ್ರಾರಂಭಿಸಿದ ರಂಗಮಂದಿರ, ಹವ್ಯಾಸಿ ರಂಗಭೂಮಿಯ ಪ್ರಮುಖ ತಾಣವಾಗಿತ್ತು.

ಈ ರಂಗಮಂದಿರದಲ್ಲಿ 750ಕ್ಕೂ ಹೆಚ್ಚು ಪ್ರೇಕ್ಷಕರಿಗೆ ಸ್ಥಳಾವಕಾಶವಿದೆ. ಕಟ್ಟಡ ಹಳೆಯದಾದ್ದರಿಂದ ಕೆಡವಿ, ಹೊಸ ಕಟ್ಟಡ ನಿರ್ಮಿಸಲು ಆಡಳಿತ ಮಂಡಳಿ ನಿರ್ಧರಿಸಿದೆ.

‘ಹಲವು ವರ್ಷಗಳಿಂದ ಎಚ್‌.ಎನ್‌. ಕಲಾಕ್ಷೇತ್ರದಲ್ಲಿ ರಂಗ ತಾಲೀಮು ನಡೆಸುತ್ತಾ ಬಂದಿದ್ದೇವೆ. ಕೆಲ ಸಂದರ್ಭದಲ್ಲಿ ತಾಲೀಮಿಗೆ ಉಚಿತವಾಗಿಯೂ ರಂಗಮಂದಿರವನ್ನು ನೀಡಿದ್ದರು. ಈ ರಂಗಮಂದಿರದ ಜತೆಗೆ ಹಲವು ನೆನಪುಗಳು ಬೆಸೆದುಕೊಂಡಿವೆ. ಕಾಲಕ್ಕೆ ತಕ್ಕಂತೆ ಹೊಸತನಕ್ಕೆ ತೆರೆದುಕೊಳ್ಳ ಬೇಕಾಗುತ್ತದೆ. ಹೊಸ ರಂಗಮಂದಿರ ನಿರ್ಮಾಣವಾದ ಬಳಿಕವೂ ಕೈಗೆಟಕುವ ದರಕ್ಕೆ ರಂಗ ಮಂದಿರ ನೀಡಿದಲ್ಲಿ ಕಲಾ ಚಟುವಟಿಕೆಗಳಿಗೆ ಸಹಕಾರಿಯಾಗಲಿದೆ’ ಎಂದು ರಂಗಸೌರಭ ತಂಡದ ನವೀನ್ ಎಂ.ಜಿ. ಹೇಳಿದರು.

‘ಹಳೆಯ ರಂಗಮಂದಿರವನ್ನು ನೆಲಸಮಗೊಳಿಸಿ, ಅದೇ ಜಾಗದಲ್ಲಿ ಹೊಸ ಕಟ್ಟಡ ನಿರ್ಮಿಸುವ ಪ್ರಕ್ರಿಯೆ ಸಂಕ್ರಾಂತಿ ಬಳಿಕ ಈ ಆರಂಭವಾಗಲಿದೆ’ ಎಂದು ನ್ಯಾಷನಲ್ ಕಾಲೇಜಿನ ಪ್ರಾಧ್ಯಾಪಕರೊಬ್ಬರು ತಿಳಿಸಿದರು.

ಚರ್ಚಾ ಕೂಟ ಇಂದು

ರಂಗಮಂದಿರದಲ್ಲಿ ಇದೇ 11ರಂದು ಸಂಜೆ 6 ಗಂಟೆಗೆ ರಂಗಸೌರಭ ತಂಡವು ಹಮ್ಮಿಕೊಂಡಿದೆ. ಎಚ್‌.ಎನ್‌.ಕಲಾಕ್ಷೇತ್ರದ ಜತೆಗಿನ ಒಡನಾಟವನ್ನು ರಂಗ ಕಲಾವಿದರು, ನಿರ್ದೇಶಕರು ಹಂಚಿಕೊಳ್ಳುತ್ತಾರೆ. ಟಿ.ಎನ್‌. ಸೀತಾರಾಮ್, ಶ್ರೀನಿವಾಸ ಜಿ. ಕಪ್ಪಣ್ಣ ಸೇರಿದಂತೆ ರಂಗಭೂಮಿಯ ಪ್ರಮುಖರು ಪಾಲ್ಗೊಳ್ಳುತ್ತಾರೆ. ಈ ಹಿಂದೆ ನಡೆಸಿದ ರಂಗ ತಾಲೀಮು ಸೇರಿ ವಿವಿಧ ಸಂಗತಿಗಳ ಬಗ್ಗೆಯೂ ಸಮಾಲೋಚಿಸುತ್ತಾರೆ.

ಹೆಬ್ಬಗೋಡಿ ಕೆರೆ ಒತ್ತುವರಿ: ಮೂವರಿಗೆ ಒಂದು ವರ್ಷ ಸಜೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆನೇಕಲ್ ತಾಲ್ಲೂಕಿನ ಹೆಬ್ಬಗೋಡಿಯಲ್ಲಿ ಕೆರೆ ಒತ್ತುವರಿ ಮಾಡಿದ್ದ ಮೂವರಿಗೆ ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯ ಒಂದು ವರ್ಷ ಶಿಕ್ಷೆ ಹಾಗೂ ತಲಾ ₹5 ಸಾವಿರ ದಂಡ ವಿಧಿಸಿದೆ.

ಹೆಬ್ಬಗೋಡಿ ಸರ್ವೆ ನಂಬರ್ 159ರಲ್ಲಿರುವ ಸರ್ಕಾರಿ ಕೆರೆಯ 32 ಎಕರೆ 13 ಗುಂಟೆ ಜಮೀಜು ಒತ್ತುವರಿ ಮಾಡಿಕೊಂಡಿದ್ದ ಎಂ.ವೆಂಕಟೇಶ್, ಎಚ್‌.ಎಂ.ಸುಬ್ಬಣ್ಣ ಮತ್ತು ಲಕ್ಷ್ಮೀದೇವಿ ಶಿಕ್ಷೆಗೆ ಗುರಿಯಾದವರು.

‘ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯವು 2024ರ ಡಿ.13ರಂದು ಶಿಕ್ಷೆ ವಿಧಿಸಿ ಆದೇಶಿಸಿದೆ’ ಎಂದು ಬಿಎಂಟಿಎಫ್ ಇನ್‌ಸ್ಪೆಕ್ಟರ್ ಉಮಾ ಮಹೇಶ್ ತಿಳಿಸಿದ್ದಾರೆ.

ಕೆರೆ ಒತ್ತುವರಿ ಸಂಬಂಧ 2012ರ ಫೆಬ್ರುವರಿ 22ರಂದು ಬಿಎಂಟಿಎಫ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ತನಿಖಾಧಿಕಾರಿ ಬಿಎಂಟಿಎಫ್ ಪೊಲೀಸ್ ಇನ್‌ಸ್ಪೆಕ್ಟರ್ ಟಿ.ಡಿ ರಾಜು ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಉದ್ಯೋಗ ಸೃಷ್ಟಿ ಜತೆಗೆ ಕೌಶಲಾಭಿವೃದ್ಧಿ

ಕೈಗಾರಿಕಾ ಶೈಕ್ಷಣಿಕ ಸಮಾವೇಶದಲ್ಲಿ ಕೌಶಲಾಭಿವೃದ್ಧಿ ಸಚಿವ ಡಾ.ಶರಣಪ್ರಕಾಶ ಪಾಟೀಲ ಭರವಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ ಉದ್ಯೋಗ ಸೃಷ್ಟಿ ಜತೆಗೆ ಯುವಜನರ ಕೌಶಲಾಭಿವೃದ್ಧಿಗೆ ವ್ಯವಸ್ಥಿತ ಯೋಜನೆ ರೂಪಿಸಲಾಗುತ್ತಿದೆ. ರಾಜ್ಯವನ್ನು ‘ಕೌಶಲಾಭಿವೃದ್ಧಿ ಹಬ್’ ಮಾಡುವುದೇ ಸರ್ಕಾರದ ಗುರಿ’ ಎಂದು ಕೌಶಲಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವ ಡಾ.ಶರಣಪ್ರಕಾಶ ಪಾಟೀಲ ತಿಳಿಸಿದರು.

ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ (ಜಿಟಿಟಿಸಿ) ನಗರದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ‘ಕೈಗಾರಿಕಾ-ಶೈಕ್ಷಣಿಕ ಸಮಾವೇಶ’ ಉದ್ಘಾಟಿಸಿ ಅವರು ಮಾತನಾಡಿದರು.

‘ಕೌಶಲಾಭಿವೃದ್ಧಿಗೆ ಸಂಬಂಧಿಸಿ ಶಿಕ್ಷಣ ಸೇರಿ ವಿವಿಧ ಕ್ಷೇತ್ರಗಳಲ್ಲಿ ಕ್ರಮಕೈಗೊಳ್ಳಲಾಗುತ್ತಿದೆ. ಕೌಶಲ ಶಿಕ್ಷಣದ ಅವಶ್ಯಕತೆ ಹೆಚ್ಚಾಗುತ್ತಿದೆ. ಎಂಜಿನಿಯರಿಂಗ್ ಕಾಲೇಜುಗಳ ಪಠ್ಯಕ್ರಮ ಪರಿಷ್ಕರಿಸಿ, ಕೌಶಲಾಭಿವೃದ್ಧಿಗೆ ಪೂರಕವಾದ ಪಠ್ಯಕ್ರಮ ರೂಪಿಸಲು ಅಖಿಲ ಭಾರತೀಯ ತಾಂತ್ರಿಕ ಶಿಕ್ಷಣ ಪರಿಷತ್ತಿಗೆ (ಎಐಸಿಟಿಇ) ಪತ್ರ ಬರೆಯಲಾಗಿದೆ. ಹೊಸ ಪಠ್ಯಕ್ರಮದಲ್ಲಿ ಶೇ 60ರಷ್ಟು ಪ್ರಾಯೋಗಿಕ ಶಿಕ್ಷಣಕ್ಕೆ ಆದ್ಯತೆ ನೀಡಬೇಕು. ಆಗ ಮಾತ್ರ ನಿರುದ್ಯೋಗ ಪ್ರಮಾಣ ಕಡಿಮೆ ಮಾಡಲು ಸಾಧ್ಯ’ ಎಂದು ಅಭಿಪ್ರಾಯಪಟ್ಟರು.

ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಅವರು, ‘ನಿರುದ್ಯೋಗ ಸಮಸ್ಯೆ ನಿವಾರಣೆಗೆ ಶಿಕ್ಷಣ ಸಂಸ್ಥೆಗಳು ಕೈಗಾರಿಕೆಗಳ ಜತೆಗೆ ಒಪ್ಪಂದ ಮಾಡಿಕೊಂಡು, ಅವರ ನಿರೀಕ್ಷೆ, ಅಗತ್ಯಾನುಸಾರ ಕೋರ್ಸ್‌ಗಳ ಸ್ವರೂಪ ಬದಲಿಸಬೇಕು ಎಂದು ಸಲಹೆ ಮಾಡಿದರು.

ಈ ನಿಟ್ಟಿನಲ್ಲಿ ಇಲಾಖೆಯು ಕಳೆದ ಒಂದೂವರೆ ವರ್ಷದಲ್ಲಿ 20 ಕಂಪನಿಗಳ ಜತೆಗೆ ಒಪ್ಪಂದ ಮಾಡಿಕೊಂಡಿದೆ’ ಎಂದು ಹೇಳಿದರು.

ಮಾಹಿತಿ ತಂತ್ರಜ್ಞಾನ ಹಾಗೂ ಜೈವಿಕ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಮಾತನಾಡಿ, ‘ದೇಶದಲ್ಲಿ ಪ್ರತಿ ವರ್ಷ 15 ಲಕ್ಷ ಎಂಜಿನಿಯರಿಂಗ್ ಪದವೀಧರರು ಹೊರ ಬಂದರೆ, ಇವರಲ್ಲಿ ಉದ್ಯೋಗ ಪಡೆದುಕೊಳ್ಳುತ್ತಿರುವ ವಿದ್ಯಾರ್ಥಿಗಳ ಪ್ರಮಾಣ ಶೇ 26 ರಷ್ಟಿದೆ. ಕೈಗಾರಿಕೆಗಳಲ್ಲಿ ಶೇ 44 ರಷ್ಟು ಕೌಶಲ ಭರಿತ ಉದ್ಯೋಗಿಗಳ ಕೊರತೆ ಇದೆ’ ಎಂದು ಹೇಳಿದರು.

‘ಈ ಸ್ಥಿತಿಗೆ ಕೌಶಲ ಮತ್ತು ಶಿಕ್ಷಣದ ನಡುವಿನ ಕಂದಕವೇ ಕಾರಣ. ಸರ್ಕಾರವು ‘ನಿಪುಣ ಕರ್ನಾಟಕ’ ಎಂಬ ಹೊಸ ಯೋಜನೆ ಮೂಲಕ ಕಂಪನಿಗಳ ನಿರೀಕ್ಷೆಗೆ ತಕ್ಕಂತೆ ಶಿಕ್ಷಣ ನೀಡುತ್ತಿದೆ’ ಎಂದರು.

ಪ್ರಮುಖ ಕಂಪನಿಗಳ ಉದ್ಯಮಿಗಳು ಭಾಗವಹಿಸಿದ್ದರು. ತರಬೇತಿ ಸಂಬಂಧ ಹಲವು ಕಂಪನಿಗಳ ಜತೆಗೆ ಒಪ್ಪಂದ ಮಾಡಿಕೊಳ್ಳಲಾಯಿತು. ಕರ್ನಾಟಕ ಕೌಶಲ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಕಾಂತಾ ನಾಯಕ್ ಉಪಸ್ಥಿತರಿದ್ದರು.

ಸಮಾವೇಶದಲ್ಲಿ ಕೌಶಲ ತರಬೇತಿ ಸಂಬಂಧ ಕಾಂತಾ ನಾಯಕ್ ಅವರು ವಿದ್ಯಾರ್ಥಿಯೊಬ್ಬರಿಗೆ ಪ್ರಮಾಣಪತ್ರ ವಿತರಿಸಿದರು. ಡಾ.ಎಂ.ಸಿ.ಸುಧಾಕರ್, ಡಾ. ಶರಣಪ್ರಕಾಶ ಪಾಟೀಲ ಹಾಗೂ ಪ್ರಿಯಾಂಕ್ ಖರ್ಗೆ ಉಪಸ್ಥಿತರಿದ್ದರು

ಮುಖ್ಯಾಂಶಗಳು

- ಕೌಶಲಾಭಿವೃದ್ಧಿಗೆ ಪೂರಕ ಪಠ್ಯಕ್ರಮ ರೂಪಿಸಲು ಎಐಸಿಟಿಇಗೆ ಪತ್ರ
- ಪಠ್ಯಕ್ರಮದಲ್ಲಿ ಶೇ 60ರಷ್ಟು ಪ್ರಾಯೋಗಿಕ ಶಿಕ್ಷಣಕ್ಕೆ ಪ್ರಾತಿನಿಧ್ಯ ಅಗತ್ಯ
- ಕೌಶಲಾಭಿವೃದ್ಧಿ ಸಂಬಂಧ ವಿವಿಧ 20 ಕಂಪನಿಗಳ ಜೊತೆಗೆ ಒಪ್ಪಂದ

830 ಕಟ್ಟಡಗಳಿಗೆ ಬೀಗಮುದ್ರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಸ್ತಿ ತೆರಿಗೆಯನ್ನು ಅತಿಹೆಚ್ಚು ಬಾಕಿ ಉಳಿಸಿಕೊಂಡಿರುವ 830 ವಾಣಿಜ್ಯ ಕಟ್ಟಡಗಳಿಗೆ ಬಿಬಿಎಂಪಿ ಸಿಬ್ಬಂದಿ ಬೀಗಮುದ್ರೆ ಹಾಕಿದ್ದಾರೆ.

ಜ. 1ರಿಂದ 9ರವರೆಗೆ ಕಾರ್ಯಾಚರಣೆ ನಡೆಸಿದ ಕಂದಾಯ ವಿಭಾಗದ ಅಧಿಕಾರಿಗಳು ಮಳಿಗೆ, ಕಟ್ಟಡಗಳಿಗೆ ಬೀಗಮುದ್ರೆ ಹಾಕಿ, ಆಸ್ತಿ ತೆರಿಗೆ ಪಾವತಿಸಲು ತಾಕೀತುಮಾಡಿದ್ದಾರೆ.

‘ಆಸ್ತಿ ತೆರಿಗೆ ಪಾವತಿಗೆ ಸಾಕಷ್ಟು ಸಮಯ ನೀಡಲಾಗಿದೆ. ವಾಣಿಜ್ಯ ಕಟ್ಟಡಗಳ ಮಾಲೀಕರಲ್ಲಿ ಹಲವರು ತೆರಿಗೆ ಬಾಕಿ ಉಳಿಸಿಕೊಂಡಿದ್ದಾರೆ. ಕಾನೂನು ಕ್ರಮ ಜರುಗಿಸಲಾಗುತ್ತಿದೆ. ಇದೀಗ ಬೀಗಮುದ್ರೆ ಹಾಕಿದ್ದು, ಗಡುವು ನೀಡಲಾಗಿದೆ. ಅದನ್ನೂ ಮೀರಿ ತೆರಿಗೆ ಪಾವತಿಸದಿದ್ದರೆ ಹರಾಜು ಪ್ರಕ್ರಿಯೆ ನಡೆಯಲಿದೆ’ ಎಂದು ಬಿಬಿಎಂಪಿ ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ತಿಳಿಸಿದರು.

ಎಲ್ಲೆಲ್ಲಿ ಎಷ್ಟು ಕಟ್ಟಡಗಳಿಗೆ ಬೀಗಮುದ್ರೆ?

ಬೊಮ್ಮನಹಳ್ಳಿ	45
ದಾಸರಹಳ್ಳಿ	35
ಪೂರ್ವ	231
ಮಹದೇವಪುರ	69
ಆರ್‌.ಆರ್‌. ನಗರ	69
ದಕ್ಷಿಣ	115
ಪಶ್ಚಿಮ	226
ಯಲಹಂಕ	40
ಒಟ್ಟು	830

ಒಟಿಎಸ್‌ಗೆ ರಾಜ್ಯಪಾಲರ ಸಮ್ಮತಿ

ಒಂದು ಬಾರಿ ಪರಿಹಾರ ಯೋಜನೆಯಡಿ (ಒಟಿಎಸ್) ಆಸ್ತಿ ತೆರಿಗೆಯ ಬಡ್ಡಿ ಮನ್ನಾ ಮಾಡಿರುವ ಕಾಯ್ದೆಗೆ ರಾಜ್ಯಪಾಲರು ಜನವರಿ 10ರಂದು ಸಮ್ಮತಿಸೂಚಿಸಿ ಅಧಿಸೂಚನೆ ಹೊರಡಿಸಿದ್ದಾರೆ. ನವೆಂಬರ್ 30ರವರೆಗೆ ಒಟಿಎಸ್ ಯೋಜನೆ ಜಾರಿಯಲ್ಲಿದ್ದು, ಬಡ್ಡಿ ಹಾಗೂ ದಂಡದಿಂದ ರಿಯಾಯಿತಿ ನೀಡಲಾಗಿತ್ತು. ವರ್ಷವೊಂದಕ್ಕೆ ₹100 ಮಾತ್ರ ವಿಧಿಸಲಾಗಿತ್ತು.

ಪುರಸ್ಕಾರ...

ಕನ್ನಡ ಸಾಹಿತ್ಯ ಸಂವರ್ಧಕ ಟ್ರಸ್ಟ್ ಶುಕ್ರವಾರ ಬೆಂಗಳೂರಿನಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಲೇಖಕಿ ಲಲಿತಾ ಕೆ. ಹೊಸಪ್ಯಾಟೆ ಅವರಿಗೆ ‘ಕಾವ್ಯಾನಂದ ಪುರಸ್ಕಾರ’ವನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಪ್ರದಾನ ಮಾಡಿದರು. ಭಾರತಿ ಮೃತ್ಯುಂಜಯ, ವಿಜಯಾ ನಂದೀಶ್ವರ, ವಿಮರ್ಶಕ ಬಸವರಾಜ ಕಲ್ಗುಡಿ, ಟ್ರಸ್ಟಿ ಪ್ರಸನ್ನ ಕುಮಾರ ಪುರಾಣಿಕ ಹಾಗೂ ಲೇಖಕ ಸಂಗಮೇಶ ಎಸ್‌. ಗಣಿ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

‘ಇ-ಖಾತಾ ಪರಿಹಾರಕ್ಕೆ ಕ್ರಮ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಇ-ಖಾತಾ ಇಲ್ಲದೆ ಆಸ್ತಿ ನೋಂದಣಿಗೆ ಸಮಸ್ಯೆ ಎದುರಾಗುತ್ತಿರುವ ಬಗ್ಗೆ ಸಾರ್ವಜನಿಕರಿಂದ ದೂರುಗಳು ಬರುತ್ತಿವೆ. ಇದನ್ನು ಸರ್ಕಾರದ ಗಮನಕ್ಕೆ ತಂದು ಪರಿಹಾರ ಕ್ರಮ ಕೈಗೊಳ್ಳಲಾಗುವುದು’ ಎಂದು ನಗರ ಜಿಲ್ಲಾಧಿಕಾರಿ ಜಿ. ಜಗದೀಶ್ ಭರವಸೆ ನೀಡಿದರು.

ಜಿ. ಜಗದೀಶ್

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಕಂದಾಯ ಇಲಾಖೆ ಹಾಗೂ ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ಸಂಯುಕ್ತಾಶ್ರಯದಲ್ಲಿ ಬಿಲ್ಡರ್‌ಗಳು, ಡೆವಲಪರ್‌ಗಳು, ಸಾರ್ವಜನಿಕರೊಂದಿಗೆ ನಡೆದ ಸಭೆಯಲ್ಲಿ ಅವರು ಮಾತನಾಡಿದರು.

ನಗರ ಜಿಲ್ಲಾ ವ್ಯಾಪ್ತಿಯ ಬಡಾವಣೆ, ಹೊಸ ಬಡಾವಣೆಗಳಲ್ಲಿರುವ ಆಸ್ತಿಗಳ ನೋಂದಣಿಗೆ ರೂಪುರೇಷೆ ಹಾಗೂ ಅಧಿಕೃತ ಬಡಾವಣೆಗಳಲ್ಲಿನ ಸ್ವತ್ತುಗಳಿಗೆ ಇ-ಖಾತಾ ಪಡೆಯುವ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಯಿತು.

‘ಇ-ಖಾತಾ ಇಲ್ಲದೇ ನೋಂದಣಿ ಪ್ರಕ್ರಿಯೆ ಸಾಧ್ಯವಿಲ್ಲದ ಕಾರಣ ನಾಗರಿಕರಿಗೆ ಸಮಸ್ಯೆ ಆಗುತ್ತಿದೆ. ಜನರು ಆಸ್ತಿಗಳ ನೋಂದಣಿ ಪ್ರಕ್ರಿಯೆಯಲ್ಲಿ ಎದುರಿಸುತ್ತಿರುವ ತೊಂದರೆಗಳಿಗೆ ಪರಿಹಾರ ಹುಡುಕಲು, ಅಗತ್ಯ ಸಲಹೆ ನೀಡಬಹುದು’ ಎಂದು ಜಿಲ್ಲಾಧಿಕಾರಿ ಹೇಳಿದರು.

ಸಮಸ್ಯೆಗಳನ್ನೂ ಆಲಿಸಿದ ಜಿಲ್ಲಾಧಿಕಾರಿ, ಈ ಎಲ್ಲವನ್ನೂ ಸರ್ಕಾರದ ಗಮನಕ್ಕೆ ತಂದು ಆದಷ್ಟು ಬೇಗ ಪರಿಹಾರ ಕಲ್ಪಿಸಲು ಕ್ರಮವಹಿಸಲಾಗುವುದು ಎಂದು ಭರವಸೆ ನೀಡಿದರು.

ನಗರ ಜಿಲ್ಲಾ ಪಂಚಾಯಿತಿ ಸಿಇಒ ಕೆ.ಎಸ್‌.ಲತಾಕುಮಾರಿ ಉಪಸ್ಥಿತರಿದ್ದರು.

ತಿಂಗಳ ಪೊಲೀಸ್ ಕವಾಯತಿನಲ್ಲಿ ಪೊಲೀಸ್ ಕಮಿಷನರ್ ಬಿ.ದಯಾನಂದ ಹೇಳಿಕೆ

ಹೆಚ್ಚುವರಿ ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಕೆಗೆ ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಗರದಲ್ಲಿ ಸ್ವಲ್ಪಮಟ್ಟಿಗೆ ಡ್ರಗ್ಸ್ ದಂಧೆ ನಿಯಂತ್ರಣಕ್ಕೆ ಬಂದಿದೆ. ಈ ದಂಧೆಗೆ ಪೂರ್ಣ ಪ್ರಮಾಣದಲ್ಲಿ ಕಡಿವಾಣ ಹಾಕಲು ಇನ್ನಷ್ಟು ಬಿಗಿಯಾದ ಕ್ರಮವನ್ನು ಕೈಗೊಳ್ಳಲಾಗುತ್ತಿದೆ’ ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಹೇಳಿದರು.

ನಗರದ ಸಿಎಆರ್ ಮೈದಾನದಲ್ಲಿ ಶುಕ್ರವಾರ ನಡೆದ ತಿಂಗಳ ಕವಾಯತಿನಲ್ಲಿ ಅವರು ಮಾತನಾಡಿದರು.

‘ಕಳೆದ ವರ್ಷ ಕೋಟ್ಯಂತರ ರೂಪಾಯಿ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಲಾಗಿತ್ತು. ವಿದೇಶಿ ಪ್ರಜೆಗಳು ಹಾಗೂ ಸ್ಥಳೀಯ ಡ್ರಗ್ಸ್ ಪೆಡ್ಲರ್‌ಗಳನ್ನು ಬಂಧಿಸಲಾಗಿತ್ತು’ ಎಂದು ತಿಳಿಸಿದರು.

‘ಕಳೆದ ವರ್ಷ ಬೆಂಗಳೂರು ನಗರದಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆದಿಲ್ಲ. ಸಾರ್ವಜನಿಕರ ಆಸ್ತಿ ನಷ್ಟವಾಗಿಲ್ಲ. ಕಳ್ಳತನ ಪ್ರಕರಣಗಳಲ್ಲಿ ಸ್ವತ್ತುಗಳನ್ನು ಪತ್ತೆಹಚ್ಚಿ ಮಾಲೀಕರಿಗೆ ವಾಪಸ್ ಮಾಡಲಾಗಿದೆ’ ಎಂದರು.

‘ಸೂಕ್ಷ್ಮ ಪ್ರದೇಶಗಳಲ್ಲಿ ಸಿಸಿಟಿವಿ ಕ್ಯಾಮೆರಾ ಅಳವಡಿಸಲಾಗಿದೆ. ಮಹಿಳೆಯರು, ಮಕ್ಕಳ ಸುರಕ್ಷತೆಗೆ ಇನ್ನಷ್ಟು ಸಿಸಿಟಿವಿ ಕ್ಯಾಮೆರಾ ಅಳವಡಿಕೆಗೆ ಬಿಬಿಎಂಪಿಗೆ ಪ್ರಸ್ತಾವ ಸಲ್ಲಿಸಲಾಗಿದೆ. ಜಾಗವನ್ನೂ ಗುರುತಿಸಲಾಗಿದೆ. ಹೆಚ್ಚುವರಿ ಸಿಸಿಟಿವಿ ಅಳವಡಿಕೆಯಿಂದ ಕಾನೂನು ಹಾಗೂ ನಗರದ ಸುರಕ್ಷತೆ ಕಾಪಾಡಲು ಸಾಧ್ಯವಾಗಲಿದೆ’ ಎಂದರು.

ಉತ್ತಮವಾಗಿ ಕಾರ್ಯ ನಿರ್ವಹಣೆ ಮಾಡಿದ ಸಿಬ್ಬಂದಿ ಹಾಗೂ ಅಧಿಕಾರಿಗಳಿಗೆ ಇದೇ ವೇಳೆ ಪ್ರಶಂಸನಾ ಪತ್ರವನ್ನು ವಿತರಣೆ ಮಾಡಲಾಯಿತು.

> **ಪೊಲೀಸ್ ಠಾಣೆಗಳಲ್ಲಿ ಸಿಬ್ಬಂದಿಗೆ ರಜೆ ನೀಡುವುದು, ಕುಂದುಕೊರತೆಗಳಿಗೆ ಪರಿಹಾರವನ್ನು ಆಯಾ ಡಿಸಿಪಿಗಳೇ ನೀಡಬೇಕು**
> **ಬಿ.ದಯಾನಂದ**
> ಪೊಲೀಸ್ ಕಮಿಷನರ್

ಪಾರ್ಶ್ವನಾಥ್‌ಗೆ ರತ್ನಾಕರವರ್ಣಿ ಪ್ರಶಸ್ತಿ



ಬೆಂಗಳೂರು: ದಕ್ಷಿಣ ಕನ್ನಡ ಜೈನ ಮೈತ್ರಿ ಕೂಟ ನೀಡುವ ಮಹಾಕವಿ ರತ್ನಾಕರವರ್ಣಿ ಪ್ರಶಸ್ತಿಗೆ ಉಡುಪಿ ಜಿಲ್ಲೆ ಮುದ್ರಾಡಿಯ ಛಾಯಾಗ್ರಾಹಕ ನೇರೆಂಕಿ ಪಾರ್ಶ್ವನಾಥ್‌ರನ್ನು ಆಯ್ಕೆ ಮಾಡಲಾಗಿದೆ ಎಂದು ಮೈತ್ರಿ ಕೂಟದ ಅಧ್ಯಕ್ಷ ಸುರೇಂದ್ರ ಕುಮಾರ್ ತಿಳಿಸಿದ್ದಾರೆ.

ಬಸವನಗುಡಿಯ ಧರ್ಮಸ್ಥಳ ಮಂಜುನಾಥ ಸ್ವಾಮಿ ಕಲ್ಯಾಣ ಮಂಟಪದಲ್ಲಿ ಜ. 26ರಂದು ನಡೆಯುವ ಮೈತ್ರಿಕೂಟದ ವಾರ್ಷಿಕೋತ್ಸವದಲ್ಲಿ ಸಾಹಿತಿ ಪ್ರೊ.ಹಂಪ ನಾಗರಾಜಯ್ಯ ಪ್ರಶಸ್ತಿ ಪ್ರದಾನ ಮಾಡುವರು. ಪ್ರಶಸ್ತಿಯು ₹ 25 ಸಾವಿರ ನಗದು, ಸ್ಮರಣಿಕೆ ಒಳಗೊಂಡಿದೆ.

ಖಾತೆ ರದ್ದುಪಡಿಸಲು ತಹಶೀಲ್ದಾರ್‌ಗೆ ನೆನಪೋಲೆ

ಪ್ರಜಾವಾಣಿ ವಾರ್ತೆ

ವರದಿ ಪರಿಣಾಮ

ಬೆಂಗಳೂರು: ಕಂದಾಯ ಸಚಿವರು ಸೂಚನೆ ನೀಡಿ ಒಂದು ವರ್ಷವಾದರೂ ಅಕ್ರಮ ಖಾತಾ ರದ್ದುಪಡಿಸದ ಪೂರ್ವ ತಾಲ್ಲೂಕಿನ ತಹಶೀಲ್ದಾರ್ ಅವರಿಗೆ ನಗರ ಜಿಲ್ಲೆಯ ಹೆಚ್ಚುವರಿ ಜಿಲ್ಲಾಧಿಕಾರಿಯವರು ಮತ್ತೊಮ್ಮೆ ನೆನಪೋಲೆ ಕಳುಹಿಸಿದ್ದಾರೆ.

‘ಬಿಜೆಪಿ ಮುಖಂಡ ಎಂ.ಲಕ್ಷ್ಮೀನಾರಾಯಣ ಅವರ ಒತ್ತಡದಿಂದ ಸರ್ಕಾರಿ ಜಮೀನಿಗೆ ಅಕ್ರಮವಾಗಿ ಮಾಡಿಕೊಟ್ಟಿರುವ ನೋಂದಣಿ ಮತ್ತು ಖಾತೆಯನ್ನು ರದ್ದುಪಡಿಸಲು ಕೈಗೊಂಡಿರುವ ಕ್ರಮಗಳನ್ನು ಕೂಡಲೇ ತಿಳಿಸಬೇಕು’ ಎಂದು ನಗರ ಜಿಲ್ಲೆಯ ಹೆಚ್ಚುವರಿ ಜಿಲ್ಲಾಧಿಕಾರಿಯವರು ಪೂರ್ವ ತಾಲ್ಲೂಕಿನ ತಹಶೀಲ್ದಾರ್‌ಗೆ 2025ರ ಜನವರಿ 7ರಂದು ಕಳುಹಿಸಿದರುವ ನೆನಪೋಲೆಯಲ್ಲಿ ಸೂಚಿಸಿದ್ದಾರೆ.

‘ಬಾಣಸವಾಡಿ ಗ್ರಾಮದ ಸರ್ವೆ ನಂ. 261ರ ಸರ್ಕಾರಿ ಜಮೀನಿನನ್ನು ಲಕ್ಷ್ಮೀನಾರಾಯಣರ ಒತ್ತಡದಿಂದ ಕೃಷ್ಣರಾಜಪುರದ ಉಪ ನೋಂದಣಾಧಿಕಾರಿ, ಪೂರ್ವ ತಾಲ್ಲೂಕಿನ ತಹಶೀಲ್ದಾರ್ ಅವರು ಉತ್ತರ ಉಪ ವಿಭಾಗದ ಉಪ ವಿಭಾಗಾಧಿಕಾರಿ ಅವರ ಸೂಚನೆ ಧಿಕ್ಕರಿಸಿ ನೋಂದಣಿ, ಖಾತಾ ಮಾಡಿದ್ದಾರೆ ಎಂದು ಎಂ.ಮುನಿರಾಜು ಅವರು ಕಂದಾಯ ಸಚಿವರಿಗೆ ದೂರು ಸಲ್ಲಿಸಿದ್ದರು. ಅದನ್ನು ಉಲ್ಲೇಖಿಸಿ ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರು 2023ರ ಡಿಸೆಂಬರ್ 11ರಂದು ಪತ್ರ ಬರೆದಿದ್ದರು’ ಎಂದು ನೆನಪೋಲೆಯಲ್ಲಿ ಉಲ್ಲೇಖಿಸಿದ್ದಾರೆ.

‘ಬಿಡಿಎ ಜಾಗ ಖಾಸಗಿಯವರಿಗೆ ಮಾರಾಟ’ ಶೀರ್ಷಿಕೆಯಡಿ ‘ಪ್ರಜಾವಾಣಿ’ಯಲ್ಲಿ 2023ರ ಡಿ.8ರಂದು ಪ್ರಕಟ ಆಗಿದ್ದ ವಿಶೇಷ ವರದಿ ಪ್ರಸ್ತಾಪಿಸಿರುವ ಅವರು, ‘ಅಕ್ರಮವನ್ನು ಮುಚ್ಚಿ ಹಾಕಲು ತೆರೆ–ಮರೆಯಲ್ಲಿ ಪ್ರಯತ್ನಿಸಲಾಗುತ್ತಿದೆ. ಸರ್ಕಾರಿ ಜಮೀನನ್ನು ಉಳಿಸಬೇಕೆಂದು ಮನವಿದಾರರು ಕೋರಿದ್ದು, ನಿಯಮಗಳ ಅನುಸಾರ ಕ್ರಮ ಕೈಗೊಂಡು, ಅದನ್ನು ವರದಿ ಮಾಡಿ ತಿಳಿಸಬೇಕು. ಈವರೆಗೆ ಕಾನೂನು ರೀತಿ ಕೈಗೊಂಡ ಕ್ರಮದ ಬಗ್ಗೆ ಮನವಿದಾರರಿಗೂ ಮಾಹಿತಿ ನೀಡಬೇಕು’ ಎಂದು ಸೂಚಿಸಿದ್ದಾರೆ.

AUTHORIZED NISSAN DEALERS: KARNATAKA: BENGALURU: MARATHALLI RING ROAD: RAJA NISSAN 8291047558, BRIGADE ROAD: RAJA NISSAN- 8291047634, HOSUR ROAD: RAJA NISSAN- 8291047640, KANAKAPURA ROAD: RAJA NISSAN- 8291047648, NAGARBHAVI: JUBILANT NISSAN- 8291061402, HBR LAYOUT: JUBILANT NISSAN- 8291061402, HOSPET: RAYSLINE NISSAN- 9619894522, BELGAUM: SWASTI NISSAN- 9619894719, HUBLI: SWASTI NISSAN- 8291047572, MANGALORE: PAI SALES- 7039030479, MYSORE: HONNASSIRI NISSAN- 8291048578.

†Terms & conditions apply. Benefits mentioned are of MY2024 model year cars till stock lasts. All prices ex-showroom Delhi. Features may vary from variant to variant. Colours, Models and variant are indicative and for depiction only and may vary due to printing constraints. Accessories shown may not be part of standard fitment. **The scheme is applicable on vehicles invoiced on or before 31st Jan 2025. Please visit your nearest Nissan dealer for more information. Finance is at the sole discretion of finance partners and NRFSI. *Segment/Class refers to B-SUV models with Length <4m. ‡Standard Warranty 3 years or 100k kms whichever comes first. Arkamys® is a registered trademark. ˜Offer applicable on Nissan Magnite only and customer needs to provide certificate of deposit.

NISSAN FINANCE

TBWA\xxxx1124

‘ಸುರಂಗ ರಸ್ತೆ ಯೋಜನೆ ಮರು ಪರಿಶೀಲನೆ ಅಗತ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಗರದಲ್ಲಿ ವಾಹನ ಸಂಚಾರ ವ್ಯವಸ್ಥೆಯನ್ನು ಹದಗೆಡಿಸುವ ಹಾಗೂ ಪರಿಸರಕ್ಕೆ ಧಕ್ಕೆ ತರುವ ಸುರಂಗ ರಸ್ತೆ ಯೋಜನೆಯನ್ನು ಮರು ಪರಿಶೀಲಿಸಬೇಕು’ ಎಂದು ಸಂಸದ ಪಿ.ಸಿ. ಮೋಹನ್ ಅವರು ಬಿಬಿಎಂಪಿ ಮುಖ್ಯ ಆಯುಕ್ತರಿಗೆ ಪತ್ರ ಬರೆದಿದ್ದಾರೆ.

ಹೆಬ್ಬಾಳದಿಂದ ಸಿಲ್ಕ್ ಬೋರ್ಡ್ ಜಂಕ್ಷನ್‌ವರೆಗಿನ 18 ಕಿ.ಮೀ ಉದ್ದ ಸುರಂಗ ರಸ್ತೆಗೆ ₹8,043 ಕೋಟಿ ವೆಚ್ಚ ಮಾಡಲು ಮುಂದಾಗಿದೆ.

‘ಈ ಯೋಜನೆಯಲ್ಲಿ ಸಾಕಷ್ಟು ತಾಂತ್ರಿಕ ದೋಷಗಳಿವೆ. ನಗರ ಸಂಚಾರ ಯೋಜನೆಯನ್ನು ತಪ್ಪಾಗಿ ಅರ್ಥೈಸಲಾಗಿದೆ. ವಿಸ್ತೃತ ಯೋಜನಾ ವರದಿಯಲ್ಲಿ (ಡಿಪಿಆರ್) ಸಾಕಷ್ಟು ತಪ್ಪುಗಳಿವೆ. ಮುಂಬೈ ಕೋಸ್ಟಲ್ ರಸ್ತೆ ಯೋಜನೆಯ ವಿವರಗಳನ್ನು ಇದರಲ್ಲಿ ಸೇರಿಸಲಾಗಿದೆ’ ಎಂದಿದ್ದಾರೆ.

‘ನಗರದ ಎಲ್ಲ ಯೋಜನೆಗಳು ನಾಗರಿಕರ ಕೇಂದ್ರೀಕೃತವಾಗಿದ್ದು, ಪಾರದರ್ಶಕತೆ ಮತ್ತು ಹೊಣೆಗಾರಿಕೆಯನ್ನು ಹೊಂದಿರಬೇಕು’ ಎಂದು ಹೇಳಿದ್ದಾರೆ.

ಒಂದು ಪುಟ ಅಷ್ಟೇ: ‘ಸುರಂಗ ರಸ್ತೆಯ ಡಿಪಿಆರ್ ಸಿದ್ಧಪಡಿಸಿರುವ ರೋಡಿಕ್ಸ್ ಸಂಸ್ಥೆ ತಪ್ಪಾಗಿ ಒಂದು ಪುಟ ಸೇರಿಸಿದೆ. ಅದು ಯೋಜನೆಗೆ ಸಂಬಂಧಿಸಿದ್ದಲ್ಲ. ಉಳಿದದ್ದು ಸರಿಯಾಗಿದೆ. ಆದರೂ ಅವರ ತಪ್ಪಿಗೆ ₹5 ಲಕ್ಷ ದಂಡ ವಿಧಿಸಲಾಗಿದೆ’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

ಸುರಂಗ ರಸ್ತೆಯ ಡಿಪಿಆರ್ ತಯಾರಿಸಲು ಬಿಬಿಎಂಪಿ ₹9.45 ಕೋಟಿ ವೆಚ್ಚ ಮಾಡಿದೆ ಎನ್ನಲಾಗಿದೆ.

ಕಚೇರಿಗಳಲ್ಲಿ ವ್ಯಾಪಕ ಶೋಧ • ಹತ್ತಾರು ಅಕ್ರಮ, ಕರ್ತವ್ಯಲೋಪದ ಹಲವು ಪ್ರಕರಣ ಪತ್ತೆ

ಬಿಬಿಎಂಪಿ: 54 ಕಡೆ ‘ಲೋಕಾ’ ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) ವಿವಿಧ ಇಲಾಖೆಗಳ 54 ಕಚೇರಿಗಳ ಮೇಲೆ ದಿಢೀರ್ ದಾಳಿ ನಡೆಸಿದ ಲೋಕಾಯುಕ್ತರು ಮತ್ತು ಲೋಕಾಯುಕ್ತ ಪೊಲೀಸರು ಹಲವಾರು ಕರ್ತವ್ಯ ಲೋಪಗಳನ್ನು ಪತ್ತೆ ಮಾಡಿದ್ದಾರೆ.

‘ಬಿಬಿಎಂಪಿ ಕಂದಾಯ ಅಧಿಕಾರಿ (ಆರ್‌ಒ) ಮತ್ತು ಸಹಾಯಕ ಕಂದಾಯ ಅಧಿಕಾರಿ (ಎಆರ್‌ಒ) ಕಚೇರಿಗಳಲ್ಲಿ ಖಾತೆ ಹಂಚಿಕೆ, ಇ-ಖಾತಾ ನೋಂದಣಿಯಲ್ಲಿ ಸಮಸ್ಯೆ ಎದುರಿಸುತ್ತಿರುವ ಬಗ್ಗೆ ದೂರುಗಳು ಬಂದಿದ್ದವು. ಅನಧಿಕೃತ ಕಟ್ಟಡಗಳಿಗೆ ನಾಮಕಾವಸ್ಥೆ ನೋಟಿಸ್ ನೀಡಿ, ಕಾಮಗಾರಿ ನಡೆಯಲು ಬಿಟ್ಟಿರುವ ಬಗ್ಗೆ 2023ರ ಆಗಸ್ಟ್‌ನಲ್ಲಿಯೇ ಪ್ರಕರಣ ದಾಖಲಾಗಿತ್ತು. ಈ ಸಂಬಂಧ ಶುಕ್ರವಾರ ದಿಢೀರ್ ದಾಳಿ ನಡೆಸಲಾಯಿತು’ ಎಂದು ಲೋಕಾಯುಕ್ತದ ಪ್ರಕಟಣೆ ತಿಳಿಸಿದೆ.

‘ಮಧ್ಯಾಹ್ನ 3.30ರ ವೇಳೆಗೆ ಆರ್‌ಒ ಮತ್ತು ಎಆರ್‌ಒ ಕಚೇರಿಗಳು ಸೇರಿ ಕಂದಾಯ ವಿಭಾಗದ 30 ಕಚೇರಿಗಳ ಮೇಲೆ ಹಾಗೂ ಎಂಜಿನಿಯರಿಂಗ್ ವಿಭಾಗದ 24 ಕಚೇರಿಗಳ ಮೇಲೆ ಏಕಕಾಲಕ್ಕೆ ದಾಳಿ ನಡೆಸಲಾಯಿತು. ಈ ವೇಳೆ ಕರ್ತವ್ಯಲೋಪದ ಹಲವು ಅಂಶಗಳು ಪತ್ತೆಯಾದವು’ ಎಂದು ತಿಳಿಸಿದೆ.

‘ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ ಅವರು ಹೆಬ್ಬಾಳ ಉಪವಿಭಾಗದ ಮುನಿರೆಡ್ಡಿ ಪಾಳ್ಯದ ಎಆರ್‌ಒ ಕಚೇರಿಗೆ ಖುದ್ದು ಭೇಟಿ ನೀಡಿದರು. ಆಗ ಎಆರ್‌ಒ ಕಚೇರಿಯಲ್ಲಿ ಇರಲಿಲ್ಲ, ಹಾಜರಾತಿಗೆ ಸಹಿ ಮಾಡಿರಲಿಲ್ಲ. ಕರೆ ಮಾಡಿ ವಿಚಾರಿಸಿದಾಗ, ‘ಕೇಂದ್ರ ಕಚೇರಿಗೆ ಹೋಗಿದ್ದೇನೆ’ ಎಂದರು. ವಿವರಣೆ ನೀಡಲು ಲೋಕಾಯುಕ್ತರು ಸೂಚಿಸಿದರು’ ಎಂದು ವಿವರಿಸಿದೆ.

‘ಅದೇ ಕಚೇರಿಯಲ್ಲಿ ಒಟ್ಟು 22 ಸಿಬ್ಬಂದಿ ಇದ್ದು, ಹಾಜರಾತಿಯಲ್ಲಿ 21 ಸಹಿಗಳಿವೆ. ಆದರೆ ಕಚೇರಿಯಲ್ಲಿ ಮೂವರಷ್ಟೇ ಇದ್ದರು. ನಗದು ವಹಿ, ಅಧಿಕಾರಿಗಳ ಚಲನ-ವಲನ ವಹಿ ನಿರ್ವಹಣೆ ಮಾಡದೇ ಇರುವ ಬಗ್ಗೆ ಸಿಬ್ಬಂದಿಯನ್ನು ಲೋಕಾಯುಕ್ತರು ತರಾಟೆಗೆ ತೆಗೆದುಕೊಂಡರು. ಲೋಪಗಳನ್ನು ಸರಿಪಡಿಸಿ ವರದಿ ನೀಡಿ ಎಂದು ಸೂಚಿಸಿದರು’ ಎಂದಿದೆ.

ಉಪ ಲೋಕಾಯುಕ್ತ ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ ಅವರು ಚಾಮರಾಜಪೇಟೆ, ವಸಂತನಗರ ಉಪವಿಭಾಗದ ಎಆರ್‌ಒ ಕಚೇರಿಗಳು ಮತ್ತು ಶಿವಾಜಿನಗರ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್ ಕಚೇರಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಉಪ ಲೋಕಾಯುಕ್ತ ನ್ಯಾಯಮೂರ್ತಿ ಬಿ.ವೀರಪ್ಪ ಅವರು ಚಿಕ್ಕಪೇಟೆ, ಜಯನಗರ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್ ಕಚೇರಿಗಳು ಮತ್ತು ಸೌತ್ ಎಂಡ್ ವೃತ್ತದ ಎಆರ್‌ಒ ಕಚೇರಿಯಲ್ಲಿ ಪರಿಶೀಲನೆ ನಡೆಸಿದರು.

ಓಡಿ ಹೋದ ಅಧಿಕಾರಿ: ದಾಸರಹಳ್ಳಿ ವಿಭಾಗದ ಎಆರ್‌ಒ ಮತ್ತು ಕಾರ್ಯನಿರ್ವಾಹಕ ಎಂಜಿನಿಯರ್ ಕಚೇರಿಗಳ ಮೇಲೆ ದಾಳಿ ನಡೆಸಿದ ವೇಳೆ ಅಧಿಕಾರಿಯೊಬ್ಬರು ಪರಾರಿಯಾಗಿದ್ದಾರೆ. ಬ್ಯಾಗು, ಕಡತಗಳನ್ನು ಕಚೇರಿಯಲ್ಲಿ ಬಿಟ್ಟು ಓಡಿ ಹೋಗಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಎಲ್ಲ ಕಚೇರಿಗಳಲ್ಲಿ ತಡರಾತ್ರಿಯೂ ಪರಿಶೀಲನೆ ಮುಂದುವರೆದಿತ್ತು.

ಮುನಿರೆಡ್ಡಿಪಾಳ್ಯದ ಎಆರ್‌ಒ ಕಚೇರಿಯಲ್ಲಿ ಸಿಬ್ಬಂದಿಯನ್ನು ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ ಅವರು ತರಾಟೆಗೆ ತೆಗೆದುಕೊಂಡರು

ಕೆ.ಆರ್.ಪುರ: ₹93,000 ನಗದು ಪತ್ತೆ

‘ಕೆ.ಆರ್.ಪುರದ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್ ಕಚೇರಿಯ ಮೇಲಿನ ದಾಳಿ ವೇಳೆ ದಾಖಲೆ ಇಲ್ಲದ ₹93,000 ನಗದು ಪತ್ತೆಯಾಗಿದೆ. ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಬಳಿ ₹50,000 ಮತ್ತು ಸಹಾಯಕ ಎಂಜಿನಿಯರ್ ಬಳಿ ₹43,000 ನಗದು ಇತ್ತು’ ಎಂದು ಲೋಕಾಯುಕ್ತವು ತಿಳಿಸಿದೆ.

‘ನಗದಿನ ವಿವರಗಳನ್ನು ಕಚೇರಿ ನಗದು ವಹಿಯಲ್ಲಿ ನಮೂದಿಸಿಲ್ಲ. ಜತೆಗೆ ಸಂಬಂಧಿತ ಅಧಿಕಾರಿಗಳು ಸಮರ್ಪಕ ವಿವರಣೆಯನ್ನೂ ನೀಡಿಲ್ಲ. ನಗದು ವಶಕ್ಕೆ ಪಡೆದು, ಮುಂದಿನ ಕ್ರಮ ತೆಗೆದುಕೊಳ್ಳಲಾಗಿದೆ’ ಎಂದು ಹೇಳಿದೆ.

ಅಮ್ಮನ ಬದಲು ಮಗ ಕೆಲಸ, ಬಂಧನ

ಸೌತ್ ಎಂಡ್‌ವೃತ್ತದ ಬಳಿ ಇರುವ ಎಆರ್‌ಒ ಕಚೇರಿಯ ‘ಕೇಸ್ ವರ್ಕರ್’ ಕವಿತಾ ಅವರ ಬದಲಿಗೆ, ಅವರ ಮಗ ನವೀನ್ ಎಂಬಾತ ಕರ್ತವ್ಯ ನಿರ್ವಹಿಸುತ್ತಿರುವುದು ಉಪ ಲೋಕಾಯುಕ್ತ ನ್ಯಾಯಮೂರ್ತಿ ಬಿ.ವೀರಪ್ಪ ಅವರು ದಾಳಿ ನಡೆಸಿದ ವೇಳೆ ಪತ್ತೆಯಾಗಿದೆ.

ನ್ಯಾಯಮೂರ್ತಿ ಬಿ.ವೀರಪ್ಪ ಅವರ ಸೂಚನೆಯಂತೆ ಸಿದ್ದಾಪುರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಿ, ನವೀನ್‌ನನ್ನು ಬಂಧಿಸಲಾಗಿದೆ.

ಕಚೇರಿಗೆ ಮಧ್ಯಾಹ್ನ 4ರ ವೇಳೆಗೆ ದಾಳಿ ನಡೆಸಿದಾಗ ಕಚೇರಿಯಲ್ಲಿ ಯಾರೂ ಇಲ್ಲದೇ ಇರುವ ಬಗ್ಗೆ ಉಪ ಲೋಕಾಯುಕ್ತರು ಪ್ರಶ್ನೆ ಮಾಡಿದರು. ಹಾಜರಾತಿ ಪುಸ್ತಕ ತರಿಸಿ, ಪರಿಶೀಲನೆ ವೇಳೆ ಕವಿತಾ ಬದಲಿಗೆ ನವೀನ್ ಹಾಜರಿದ್ದರು. ಇದನ್ನು ಪ್ರಶ್ನಿಸಿದಾಗ ನವೀನ್, ‘ಅಮ್ಮ ಮನೆಯಲ್ಲಿ ಅಡುಗೆ ಮಾಡುತ್ತಿದ್ದಾರೆ. ಅವರ ಬದಲಿಗೆ ನಾನು ಕೆಲಸಕ್ಕೆ ಬಂದಿದ್ದೇನೆ’ ಎಂದು ಉತ್ತರಿಸಿದರು.

ಕವಿತಾ ಅವರಿಗೆ ಉಪ ಲೋಕಾಯುಕ್ತರೇ ಕರೆ ಮಾಡಿದಾಗ, ‘ಮನೆಯಲ್ಲಿ ತಿಥಿ ಕಾರ್ಯಕ್ರಮ ನಡೆಯುತ್ತಿದೆ’ ಎಂದು ತಿಳಿಸಿದರು.

₹35,000 ಲಂಚ: ಅಧಿಕಾರಿ ಬಂಧನ

ವಾಹನಗಳ ರಹದಾರಿ ನೀಡಲು ₹35,000 ಲಂಚ ಪಡೆಯುವಾಗ ವೇಳೆ ಶಾಂತಿನಗರದ ಪ್ರಾದೇಶಿಕ ಸಾರಿಗೆ ಕಚೇರಿಯ ಅಧಿಕಾರಿಯೊಬ್ಬರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

ಅರ್ಬಾಜ್ ಖಾನ್ ಎಂಬುವವರು ತಮ್ಮ ಆಟೊಗಳ ರಹದಾರಿ (ಪರ್ಮಿಟ್) ಪಡೆಯಲು ಶಾಂತಿನಗರದ ಕಚೇರಿಗೆ ಅರ್ಜಿ ಸಲ್ಲಿಸಿದ್ದರು. ಅವರ ವಾಹನಗಳ ರಹದಾರಿ ಪತ್ರಗಳು ಸಿದ್ದವಾಗಿದ್ದು, ಅವನ್ನು ನೀಡಲು ಪ್ರಥಮ ದರ್ಜೆ ಸಹಾಯಕ ವೆಂಕಟೇಶ್ ₹35,000 ಲಂಚ ಕೇಳಿದ್ದರು. ಈ ಬಗ್ಗೆ ಅರ್ಬಾಜ್ ಲೋಕಾಯುಕ್ತಕ್ಕೆ ದೂರು ನೀಡಿದ್ದರು.

ಸಾವರ್ಕರ್ ಅವಹೇಳನ ರಾಹುಲ್‌ಗೆ ಜಾಮೀನು

ಪುಣೆ (ಪಿಟಿಐ): ವಿ.ಡಿ. ಸಾವರ್ಕರ್ ಬಗ್ಗೆ ಮಾನಹಾನಿಕರ ಹೇಳಿಕೆ ನೀಡಿದ್ದಾರೆ ಎನ್ನಲಾದ ಪ್ರಕರಣ ಸಂಬಂಧ, ಪುಣೆಯ ವಿಶೇಷ ನ್ಯಾಯಾಲಯವು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರಿಗೆ ಶುಕ್ರವಾರ ಜಾಮೀನು ನೀಡಿದೆ.

ಪ್ರಕರಣದ ವಿಚಾರಣೆ ನಡೆಸಿದ ‘ಶಾಸಕರು ಹಾಗೂ ಸಂಸದರ ವಿಶೇಷ ನ್ಯಾಯಾಲಯ’, ₹25 ಸಾವಿರ ಮೊತ್ತದ ವೈಯಕ್ತಿಕ ಬಾಂಡ್ ಹಾಗೂ ಒಬ್ಬರ ಭದ್ರತೆ ಒದಗಿಸಬೇಕೆಂದು ಸೂಚಿಸಿ, ಜಾಮೀನು ನೀಡಿತು. ರಾಹುಲ್ ಗಾಂಧಿ ಅವರು ವಿಡಿಯೊ ಕಾನ್ಫರೆನ್ಸ್ ಮುಖಾಂತರ ವಿಚಾರಣೆಗೆ ಹಾಜರಾಗಿದ್ದರು. ಕಾಂಗ್ರೆಸ್ ನಾಯಕ ಮೋಹನ್ ಜೋಶಿ ಭದ್ರತೆ ನೀಡಿದರು.

ರಾಹುಲ್ ಗಾಂಧಿ

ವಿಚಾರಣೆಗೆ ಹಾಜರಾಗುವುದರಿಂದ ರಾಹುಲ್ ಗಾಂಧಿ ಅವರಿಗೆ ನ್ಯಾಯಾಲಯವು ಪೂರ್ಣ ಪ್ರಮಾಣದ ವಿನಾಯಿತಿಯನ್ನೂ ನೀಡಿದೆ ಎಂದು ರಾಹುಲ್ ಗಾಂಧಿ ಪರ ವಾದ ಮಂಡಿಸಿದ ವಕೀಲ ಮಿಲಿಂದ್ ಪವಾರ್ ತಿಳಿಸಿದರು. ನ್ಯಾಯಾಲಯವು ಪ್ರಕರಣದ ವಿಚಾರಣೆಯನ್ನು ಫೆಬ್ರುವರಿ18ಕ್ಕೆ ಮುಂದೂಡಿರುವುದಾಗಿಯೂ ಅವರು ಹೇಳಿದರು.

ರಾಹುಲ್ ಗಾಂಧಿ ಲಂಡನ್‌ನಲ್ಲಿ 2023ರ ಮಾರ್ಚ್‌ನಲ್ಲಿ ಭಾಷಣ ಮಾಡುವಾಗ, ಸ್ವಾತಂತ್ರ್ಯ ಹೋರಾಟಗಾರ ವಿ.ಡಿ. ಸಾವರ್ಕರ್ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿದ್ದಾರೆಂದು ಆರೋಪಿಸಿ, ಸಾವರ್ಕರ್ ಮೊಮ್ಮಗ ದೂರು ದಾಖಲಿಸಿದ್ದರು.

ಬೆಳಗಾವಿ: ಉದ್ಯಮಿ ಮೇಲೆ ಗುಂಡಿನ ದಾಳಿ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಇಲ್ಲಿನ ಗಣೇಶಪುರದ ರಸ್ತೆಯಲ್ಲಿ ಶುಕ್ರವಾರ ನಸುಕಿನಲ್ಲಿ ರಿಯಲ್ ಎಸ್ಟೇಟ್ ಉದ್ಯಮಿ ಪ್ರಫುಲ್ ಬಾಲಕೃಷ್ಣ ಪಾಟೀಲ (30) ಅವರ ಮೇಲೆ ಗುಂಡಿನ ದಾಳಿ ನಡೆದಿದೆ.

‘ಶಾಹೂನಗರದ ನಿವಾಸಿ ಪ್ರಫುಲ್ ಕಾರಿನಲ್ಲಿ ಹೋಗುತ್ತಿದ್ದ ವೇಳೆ ಬೈಕ್‌ನಲ್ಲಿ ಬಂದ ದುಷ್ಕರ್ಮಿಗಳು ಅಡ್ಡಗಟ್ಟಿ, ನಾಲ್ಕು ಸುತ್ತು ಗುಂಡು ಹಾರಿಸಿದರು. ಒಂದು ಗುಂಡು ಅವರ ಹಣೆಯ ಭಾಗಕ್ಕೆ ತಾಗಿ ಹೋಯಿತು. ಕಾರಿನ ಗಾಜು ಸಿಡಿದು ಮುಖಕ್ಕೆ ಗಾಯಗಳಾಗಿವೆ’ ಎಂದು ಪೊಲೀಸ್ ಕಮಿಷನರ್ ಯಡಾ ಮಾರ್ಟಿನ್ ಮಾರ್ಬನ್ಯಾಂಗ್ ‘ಪ್ರಜಾವಾಣಿ’ಗೆ ತಿಳಿಸಿದರು.

ಪ್ರಫುಲ್

‘ಹಳೆಯದ್ವೇಷದಿಂದದಾಳಿನಡೆದಿರಬಹುದು. ಹೆಚ್ಚಿನ ಮಾಹಿತಿ ಸಂಗ್ರಹಿಸಲಾಗುತ್ತಿದೆ’ ಎಂದು ತಿಳಿಸಿದರು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು–560020.

ಸಂ: ಬೆಂಅಪ್ರಾ/ನಯೋಸ/CLU-69/2636/2024–25 ದಿನಾಂಕ: 09.01.2025

ಪ್ರಕಟಣೆ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ಪರಿಷ್ಕೃತ ಮಹಾಯೋಜನೆ–2015 ಸರ್ಕಾರದ ಆದೇಶ ಸಂಖ್ಯೆ: ಯುಡಿಡಿ 540 ಬೆಂಂಆಸೇ 2004, ದಿನಾಂಕ 22/06/2007 ರಲ್ಲಿ ಅನುಮೋದನೆಯಾಗಿದ್ದು, ಐದು ವರ್ಷಗಳ ಅವಧಿಯು ಈಗಾಗಲೇ ಪೂರ್ಣಗೊಂಡಿದ್ದು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 (2) ರ ಅಡಿಯಲ್ಲಿ ಪ್ರಶ್ನಿತ ಜಮೀನುಗಳ ಉದ್ಯಾನವನ/ಬಯಲುಜಾಗ ಭೂಉಪಯೋಗ ರದ್ದಾಗಿರುತ್ತದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 69 (4) ರನ್ವಯ ಈ ಕೆಳಕಂಡ ಜಮೀನುಗಳನ್ನು ವಾಣಿಜ್ಯ ಉಪಯೋಗಕ್ಕಾಗಿ ಭೂಉಪಯೋಗ ನಿಗದಿಪಡಿಸಲು ಅರ್ಜಿದಾರರು ಕೋರಿರುತ್ತಾರೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 (3) ರ ಅಡಿಯಲ್ಲಿ ಈ ಕೆಳಕಂಡಂತೆ ಭೂಉಪಯೋಗ ನಿಗದಿಪಡಿಸುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಸಲಹೆ/ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಸಲಹೆ/ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ. ನಂ	ವಿಸ್ತೀರ್ಣ ಎ–ಗುಂ	ಪರಿಷ್ಕೃತ ಮಹಾಯೋಜನೆ–2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1	ಶ್ರೀಮತಿ. ಜೆ. ಲಲಿತ	ಬೆಂಗಳೂರು ಪೂರ್ವ	ವರ್ತೂರು	ಸಿದ್ಧಾಪುರ	27/1A2	0–07	ಉದ್ಯಾನವನ/ ಬಯಲುಜಾಗ	ವಾಣಿಜ್ಯ
2					27/1A3	0–03		
3					27/1A5	0–03		
4					27/1B2	0–05		
					ಒಟ್ಟು	0–18		

ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು.

ಕೇಂದ್ರಿಯ ಮಾಧ್ಯಮಿಕ ಶಿಕ್ಷಣ ಮಂಡಳಿ

ಖಾಲಿಹುದ್ದೆಗಳ ಭರ್ತಿ ಅಧಿಸೂಚನೆ

ಕೇಂದ್ರಿಯ ಮಾಧ್ಯಮಿಕ ಶಿಕ್ಷಣ ಮಂಡಳಿ (ಸಿಬಿಎಸ್‌ಇ) ಸಂಸ್ಥೆಯು, ಭಾರತ ಸರ್ಕಾರದ ಶಿಕ್ಷಣ ಸಚಿವಾಲಯದ ನೇತೃತ್ವದ ಅಡಿಯಲ್ಲಿನ ಒಂದು ಪ್ರಮುಖ ರಾಷ್ಟ್ರೀಯ ಸಾರ್ವಜನಿಕ ಪರೀಕ್ಷೆಗಳ ಮಂಡಳಿಯಾಗಿದೆ. ಈ ಮಂಡಳಿಯು ತನ್ನ ಅಡಿಯಲ್ಲಿ ಸಂಯೋಜಿತ ಮಾಧ್ಯಮಿಕ ಮತ್ತು ಹಿರಿಯ ಮಾಧ್ಯಮಿಕ ಶಾಲೆಗಳಿಗೆ ಸಾರ್ವಜನಿಕ ಪರೀಕ್ಷೆಗಳನ್ನು ಕೈಗೊಳ್ಳುವ ಮತ್ತು ನಿಯಂತ್ರಣ ಪ್ರಾಧಿಕಾರದಿಂದ ನೀಡಲಾಗುವ ಇನ್ನಿತರೆ ಚಟುವಟಿಕೆಗಳನ್ನು ಕೈಗೊಳ್ಳುವ ಅಧಿಕಾರ ಹೊಂದಿರುತ್ತದೆ.

ಇದೀಗ, ಈ ಮಂಡಳಿಯು ಕೆಳಕಂಡ ಹುದ್ದೆಗಳನ್ನು ಅಖಿಲ ಭಾರತ ಸ್ಪರ್ಧಾತ್ಮಕ ಪರೀಕ್ಷೆ ಮುಖಾಂತರ ನೇರ ನೇಮಕಾತಿ ಆಧಾರದಲ್ಲಿ ಭರ್ತಿ ಮಾಡಿಕೊಳ್ಳಲು ಆಸಕ್ತಿಯುಳ್ಳ ಮತ್ತು ಅರ್ಹ (ಭಾರತೀಯ ನಾಗರಿಕ) ಅಭ್ಯರ್ಥಿಗಳಿಂದ ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಿದ್ದಾರೆ. ಆಸಕ್ತಿಯುಳ್ಳ ಅಭ್ಯರ್ಥಿಗಳು ಮಂಡಳಿಯ https://cbse.nic.in ವೆಬ್‌ಸೈಟ್ ಮೂಲಕ ಆನ್‌ಲೈನ್ ಅರ್ಜಿ ಸಲ್ಲಿಸಬಹುದು. ಇನ್ನಿತರ ಯಾವುದೇ ವಿಧಾನದಲ್ಲಿ ಸಲ್ಲಿಕೆಯಾಗುವ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ. ಆಯ್ಕೆಗೊಂಡ ಅಭ್ಯರ್ಥಿಗಳನ್ನು ಸಿಬಿಎಸ್‌ಇ ಮಂಡಳಿಯ ಯಾವುದೇ ಕಚೇರಿಯಲ್ಲಿ ನಿಯೋಜಿಸಬಹುದಾಗಿರುತ್ತದೆ. ಈ ಜಾಹೀರಾತಿನಲ್ಲಿ ನೀಡಲಾಗಿರುವ ಖಾಲಿಹುದ್ದೆಗಳ ಸಂಖ್ಯೆಯು ತಾತ್ಕಾಲಿಕವಾಗಿದ್ದು, ಸದರಿ ಸಂಖ್ಯೆಯಲ್ಲಿ ಹೆಚ್ಚು ಅಥವಾ ಕಡಿಮೆ ಆಗಬಹುದಾಗಿರುತ್ತದೆ.

ಹುದ್ದೆಯ ಸಂಕೇತ	ವೃಂದ	ಹುದ್ದೆಗಳ ವಿವರ	ಎಸ್ ಸಿ	ಎಸ್ ಟಿ	ಒಬಿಸಿ ಎನ್‌ಸಿಎಲ್	ಇಡಬ್ಲ್ಯುಎಸ್	ಯುಆರ್	ಒಟ್ಟು	ಪಿಡಬ್ಲ್ಯುಬಿಡಿ	ಇಎಸ್ಎಂ
			ಲಂಬ ಮೀಸಲಾತಿ						ಸಮನಾಂತರ ಮೀಸಲಾತಿ	
10/24	ಬಿ	ಸೂಪರಿಂಟೆಂಡೆಂಟ್ ವೇತನ ಹಂತ–6	21	10	38	14	59	142	06	–
11/24	ಸಿ	ಜೂನಿಯರ್ ಅಸಿಸ್ಟೆಂಟ್ ವೇತನ ಹಂತ–2	09	09	34	13	05	70	02	07

ಆನ್‌ಲೈನ್ ಅರ್ಜಿ ನೋಂದಣಿ	02.01.2025 ರಿಂದ 31.01.2025 ರವರೆಗೆ

ಅರ್ಹತಾ ಮಾನದಂಡ, ಪ್ರಾಯ ಸಡಿಲಿಕೆ, ಪರೀಕ್ಷಾ ಶುಲ್ಕ, ಪೇ ಸ್ಕೇಲ್, ಪರೀಕ್ಷಾ ಕೇಂದ್ರಗಳು, ಮಹತ್ವದ ಸೂಚನೆಗಳು, ಪರೀಕ್ಷಾ ಯೋಜನೆ ಮತ್ತು ಪಠ್ಯಕ್ರಮ, ಆಯ್ಕೆ ಪ್ರಕ್ರಿಯೆ ವಿಧಾನ ಮುಂತಾದ ವಿವರವಾದ ಮಾಹಿತಿಯನ್ನು, ಅಭ್ಯರ್ಥಿಗಳು ಮಂಡಳಿಯ https://cbse.gov.in ವೆಬ್‌ಸೈಟ್‌ಗೆ ಭೇಟಿ ನೀಡಿ ಪಡೆದುಕೊಳ್ಳಬಹುದು.

CBC 21107/12/0010/2425 ಕಾರ್ಯದರ್ಶಿ

“ಇಂಡೋ–ಟಿಬೆಟನ್ ಬಾರ್ಡರ್ ಪೊಲೀಸ್ ಫೋರ್ಸ್” (ಗೃಹ ವ್ಯವಹಾರಗಳ ಸಚಿವಾಲಯ)

ಭಾರತ ಸರ್ಕಾರ

ಅಸಿಸ್ಟಂಟ್ ಕಮಾಂಡಂಟ್ (ಟೆಲಿಕಮ್ಯುನಿಕೇಶನ್) ಹುದ್ದೆಗೆ ನೇಮಕಾತಿ

ಇಂಡೋ–ಟಿಬೆಟನ್ ಬಾರ್ಡರ್ ಪೊಲೀಸ್ ಫೋರ್ಸ್ ಇವರು, ‘ಎ’ ವೃಂದದ ಗೆಜೆಟೆಡ್ ಪೋಸ್ಟ್ (ನಾನ್ ಮಿನಿಸ್ಟೇರಿಯಲ್) ಅಸಿಸ್ಟಂಟ್ ಕಮಾಂಡಂಟ್ (ಟೆಲಿಕಮ್ಯುನಿಕೇಶನ್) 48 ಖಾಲಿಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಅರ್ಹ ಭಾರತೀಯ ಪುರುಷ ಮತ್ತು ಮಹಿಳಾ ನಾಗರಿಕರಿಂದ ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಿದ್ದಾರೆ.

2. ಖಾಲಿಹುದ್ದೆಗಳ ವಿವರ ಕೆಳಗಿನಂತಿರುತ್ತದೆ:–

ಹುದ್ದೆಯ ಹೆಸರು	ಒಟ್ಟು ಖಾಲಿಹುದ್ದೆಗಳು	ಯುಆರ್	ಎಸ್‌ಸಿ	ಎಸ್‌ಟಿ	ಒಬಿಸಿ	ಇಡಬ್ಲ್ಯುಎಸ್
ಅಸಿಸ್ಟಂಟ್ ಕಮಾಂಡಂಟ್ (ಟೆಲಿಕಮ್ಯುನಿಕೇಶನ್)	48	21	7	3	13	4

3. ಒಟ್ಟಾರೆ ಖಾಲಿಹುದ್ದೆಗಳಲ್ಲಿ **ಬ್ಯಾಕ್‌ಲಾಗ್** ಹುದ್ದೆಗಳು ಕೂಡ ಅಡಕಗೊಂಡಿದ್ದು, ಆಡಳಿತಾತ್ಮಕ ಕಾರಣಗಳಿಂದಾಗಿ ಯಾವುದೇ ಸೂಚನೆ ನೀಡದೆಯೆ ಖಾಲಿಹುದ್ದೆಗಳ ಸಂಖ್ಯೆಯಲ್ಲಿ ಹೆಚ್ಚು ಅಥವಾ ಕಡಿಮೆ ಆಗಬಹುದಾಗಿರುತ್ತದೆ. ಈ ಜಾಹೀರಾತು ಪ್ರಕಟಗೊಂಡ ಬಳಿಕ, ನೇಮಕಾತಿ ಪ್ರಕ್ರಿಯೆಯ ಕ್ರಮಾನುಗತವನ್ನು ಮಾರ್ಪಾಡು ಮಾಡುವ ಹಕ್ಕನ್ನು ಐಟಿಬಿಪಿ ಕಾಯ್ದಿರಿಸಿಕೊಂಡಿರುತ್ತದೆ. ಅಲ್ಲದೆ, ಯಾವುದೇ ಕಾರಣ ನೀಡದೆಯೆ, ಯಾವುದೇ ಹಂತದಲ್ಲಿ ಸದರಿ ನೇಮಕಾತಿಯನ್ನು ರದ್ದುಪಡಿಸುವ ಅಥವಾ ಮುಂದೂಡುವ ಹಕ್ಕನ್ನು ಕೂಡ ಐಟಿಬಿಪಿ ಕಾಯ್ದಿರಿಸಿಕೊಂಡಿರುತ್ತದೆ.

4. **7ನೇ ಸಿಪಿಸಿ’ಗೆ ಅನುಗುಣವಾಗಿರುವ ಪೇ ಮ್ಯಾಟ್ರಿಕ್ಸ್‌ನಲ್ಲಿನ ಪೇ ಸ್ಕೇಲ್–ಲೆವೆಲ್–10 (56,100–1,77,500)**

5. **ಅಭ್ಯರ್ಥಿಗಳ ಅರ್ಜಿಗಳನ್ನು ಐಟಿಬಿಪಿಎಫ್’ನ https://recruitment.itbpolice.nic.in ನೇಮಕಾತಿ ವೆಬ್‌ಸೈಟ್ ಮೂಲಕ ಮಾತ್ರ ಸ್ವೀಕರಿಸಲಾಗುತ್ತದೆ. ಆಫ್‌ಲೈನ್ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.** ವೇತನ ಮತ್ತು ಭತ್ಯೆಗಳು, ಅರ್ಹತಾ ಷರತ್ತುಗಳು, ಆನ್‌ಲೈನ್ ಅರ್ಜಿ ನಮೂನೆಯನ್ನು ಭರ್ತಿ ಮಾಡುವ ವಿಧಾನ ಮತ್ತು ಪರೀಕ್ಷೆ ಮುಂತಾದವುಗಳನ್ನು ಕುರಿತ ವಿವರವಾದ ಮಾಹಿತಿಗಾಗಿ, ಅಭ್ಯರ್ಥಿಗಳು ಮೇಲ್ಕಂಡ ವೆಬ್‌ಸೈಟ್‌ನಲ್ಲಿ ಪ್ರಕಟವಾಗಿರುವ ಜಾಹೀರಾತನ್ನು ಪರಿಶೀಲಿಸಬೇಕೆಂದು ಸೂಚಿಸಲಾಗಿದೆ. ಅಭ್ಯರ್ಥಿಗಳು ತಮ್ಮ ಅರ್ಜಿ ಸಲ್ಲಿಸುವುದಕ್ಕೂ ಮುನ್ನ, ಅರ್ಹತಾ ಮಾನದಂಡಗಳನ್ನು ಜಾಗ್ರತೆಯಿಂದ ಓದಿಕೊಳ್ಳಬೇಕೆಂದು ಕೋರಲಾಗಿದೆ.

ಆನ್‌ಲೈನ್ ಅರ್ಜಿ ಸಲ್ಲಿಸುವ ವಿಧಾನವು 21.01.2025 ರಂದು ಮಧ್ಯರಾತ್ರಿ 00:01 ಗಂಟೆಗೆ ಆರಂಭವಾಗುತ್ತದೆ ಮತ್ತು 19.02.2025 ರಂದು ಮಧ್ಯರಾತ್ರಿ 11:59 ಗಂಟೆಗೆ ಮುಕ್ತಾಯಗೊಳ್ಳುತ್ತದೆ.

ಸಹಿ/– ಡಿಐಜಿ (ನೇಮಕಾತಿ) ಮಹಾನಿರ್ದೇಶಕರು, ಐಟಿಬಿಪಿ

CBC 19143/11/0038/2425

ಐಸಿಎಆರ್ – ರಾಷ್ಟ್ರೀಯ ಪಶು ಪೋಷಣೆ ಮತ್ತು ಶರೀರ ಕ್ರಿಯಾ ವಿಜ್ಞಾನ ಸಂಸ್ಥೆ

ಆಡುಗೋಡಿ, ಬೆಂಗಳೂರು – 560030

ಕೃಷಿ ಸಂಶೋಧನೆ ಮತ್ತು ಶಿಕ್ಷಣ ಇಲಾಖೆ, ಭಾರತ ಸರ್ಕಾರ

ಎನ್‌ಐಎಎನ್‌ಪಿ/ಎಡಿವಿ–02–ಸಿಡಿಎನ್/2024–25

ಎಟಿಐಸಿ ಡಿವಿಜನ್ ಅಡಿಯಲ್ಲಿ ತಾತ್ಕಾಲಿಕ ಆಧಾರದ ಮೇರೆಗೆ ಒಂದು ಯಂಗ್ ಪ್ರೊಫೆಷನಲ್ 1 ಹುದ್ದೆಗೆ ನಿಯೋಜಿಸಿಕೊಳ್ಳಲು 28.01.2025 ರಂದು ಬೆಳಗ್ಗೆ 10.30 ಗಂಟೆಗೆ ನೇರ ಸಂದರ್ಶನ ಏರ್ಪಡಿಸಲಾಗಿದೆ. ಕ್ರೋಢಿಕೃತ ಮಾಸಿಕ ವೇತನ ರೂ. 30,000/– ಆಗಿರುತ್ತದೆ. ವಿವರವಾದ ಜಾಹೀರಾತಿಗಾಗಿ ದಯವಿಟ್ಟು ಸಂಸ್ಥೆಯ www.nianp.res.in ವೆಬ್‌ಸೈಟ್‌ಗೆ ಭೇಟಿ ಕೊಡಿ.

ಸಹಿ/– ಹಿರಿಯ ಆಡಳಿತಾಧಿಕಾರಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ.,

ರಾಜರಾಮ್ ಮೋಹನ್‌ರಾಯ್ ರಸ್ತೆ, ಸಂಪಂಗಿ ರಾಮನಗರ, ಬೆಂಗಳೂರು–560027

ಚುನಾವಣೆ ವೇಳಾಪಟ್ಟಿ ಪ್ರಕಟಣೆ

ಮಾನ್ಯ ಸದಸ್ಯರ ಗಮನಕ್ಕೆ ತಿಳಿಯಪಡಿಸುವುದೇನೆಂದರೆ ಮೇಲ್ಕಂಡ ಸಹಕಾರ ಸಂಘದ 05 ವರ್ಷಗಳ ಅವಧಿಯ ಆಡಳಿತ ಮಂಡಳಿಗೆ **ದಿನಾಂಕ: 26–01–2025 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪ್ರೌಢಶಾಲೆ, ಗಾಂಧಿನಗರ, ಬೆಂಗಳೂರು–560009,** ಇಲ್ಲಿ ಚುನಾವಣೆಯನ್ನು ನಡೆಸಲು ಚುನಾವಣಾ ವೇಳಾಪಟ್ಟಿಯನ್ನು ಪ್ರಕಟಿಸಲಾಗಿದೆ. ಇದರನ್ವಯ ದಿನಾಂಕ: 18–01–2025 ರಂದು ನಾಮಪತ್ರಗಳನ್ನು ಸಲ್ಲಿಸಲು ಕೊನೆ ದಿನಾಂಕವಾಗಿರುತ್ತದೆ. ದಿನಾಂಕ: 19–01–2025 ರಂದು ನಾಮಪತ್ರಗಳ ಪರಿಶೀಲನೆ ನಡೆಯಲಿದ್ದು, ದಿನಾಂಕ: 20–01–2025 ರಂದು ಮಧ್ಯಾಹ್ನ 3:00 ಗಂಟೆಯ ಒಳಗೆ ನಾಮಪತ್ರಗಳನ್ನು ವಾಪಸ್ಸು ಪಡೆಯಬಹುದಾಗಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಸಹಕಾರ ಸಂಘವನ್ನು ಸಂಪರ್ಕಿಸಬಹುದಾಗಿರುತ್ತದೆ.

ಸಹಿ/–
ರಿಟರ್ನಿಂಗ್ ಅಧಿಕಾರಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ, ಬೆಂಗಳೂರು

ಎಫ್. ನಂ. 2(11)/2020–ಪಿಎಲ್–ಪಾರ್ಟ್ (2)

ಭಾರತ ಸರ್ಕಾರ

ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ (ನೀತಿ ಮತ್ತು ಕಾನೂನು ವಿಭಾಗ)

ಲೆವೆಲ್–1, ಜಲ ವಿಂಗ್, ಇಂದಿರಾ ಪರ್ಯಾವರಣ ಭವನ, ಜೋರ್ ಬಾಘ್ ರಸ್ತೆ, ನವದೆಹಲಿ–03

ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ ಇವರು ತಮ್ಮ ನೀತಿ ಮತ್ತು ಕಾನೂನು ವಿಭಾಗದಲ್ಲಿ ಇಪ್ಪತ್ತೆರಡು (22) ಅಸೋಸಿಯೇಟ್ (ಲೀಗಲ್) ಹುದ್ದೆಗಳನ್ನು ಗುತ್ತಿಗೆ ಆಧಾರದಲ್ಲಿ ಭರ್ತಿ ಮಾಡಿಕೊಳ್ಳಲು ಅರ್ಜಿಗಳನ್ನು ಆಹ್ವಾನಿಸಿದ್ದು, ಸದರಿ ಹುದ್ದೆಯ ಕ್ರೋಢಿಕೃತ ಮಾಸಿಕ ಸಂಭಾವನೆಯು ರೂ. 40,000/– ದಿಂದ ರೂ. 1,00,000/– ಶ್ರೇಣಿಯಲ್ಲಿರುತ್ತದೆ.

ಅರ್ಜಿ ನಮೂನೆ, ಅರ್ಹತೆಗಳು, ನಿಯೋಜನೆಗೆ ಸಂಬಂಧಿತ ನಿಬಂಧನೆಗಳು, ವಯೋಮಿತಿ, ಸೇವಾ ಷರತ್ತು ಇತ್ಯಾದಿ ಒಳಗೊಂಡಿರುವ ವಿವರವಾದ ಜಾಹೀರಾತನ್ನು ಸಚಿವಾಲಯದ www.moef.gov.in, https://moefccrecruitment.nic.in/moef-legal-recruitment ವೆಬ್‌ಸೈಟ್‌ನಲ್ಲಿ ಕಾಣಬಹುದು. ಸಚಿವಾಲಯದಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ **31/03/2025** (ರಾತ್ರಿ 11:59). ಎಲ್ಲಾ ಅರ್ಜಿಗಳನ್ನು ಅಡಕಗಳೊಂದಿಗೆ ಆನ್‌ಲೈನ್‌ನಲ್ಲಿ ಸದರಿ ಲಿಂಕ್ ಮೂಲಕ ಸಲ್ಲಿಸುವುದು https://moefccrecruitment.nic.in/moef-legal-recruitment. ಇನ್ನಿತರ ಯಾವುದೇ ವಿಧಾನದಲ್ಲಿ ಸಲ್ಲಿಕೆಯಾಗುವ ಅರ್ಜಿಗಳನ್ನು ಮತ್ತು ಕೊನೆಯ ದಿನಾಂಕದ ಬಳಿಕ ಸಲ್ಲಿಕೆಯಾಗುವ ಅರ್ಜಿಗಳನ್ನು ಸಚಿವಾಲಯವು ಪರಿಗಣಿಸುವುದಿಲ್ಲ.

CBC 13101/11/0012/2425

ಕೃಷಿ ಇಲಾಖೆ

ಸಹಾಯಕ ಕೃಷಿ ನಿರ್ದೇಶಕರು, ಶ್ರೀನಿವಾಸಪುರ ತಾಲ್ಲೂಕು, ಕೋಲಾರ ಜಿಲ್ಲೆ

ಸಂ:ಸ.ಕೃ.ನಿ/ತಾಂ–2/ಕೃಉ/ಟೆಂಡರ್/2024–25 ದಿನಾಂಕ: 09.01.2025

ಅಲ್ಪಾವಧಿ ಟೆಂಡರ್ ಪ್ರಕಟಣೆ

2024–2025 ಹಾಗೂ 2025–26 ನೇ ಸಾಲಿನ ಕೃಷಿ ಇಲಾಖಾ ವತಿಯಿಂದ ಆಹಾರ ಮತ್ತು ಪೌಷ್ಠಿಕ ಭದ್ರತೆ ಯೋಜನೆಯಡಿ ರೈತರಿಗೆ ನಿಗಧಿತ ರಿಯಾಯಿತಿ ದರದಲ್ಲಿ ಮಾನವ ಹಾಗೂ ಎತ್ತು ಚಾಲಿತ ಕೃಷಿ ಉಪಕರಣಗಳಾದ ಕೆ.ಎಂ ನೇಗಿಲು ಸುಧಾರಿತ ಕುಡುಗೋಲು, ಕಬ್ಬಿಣದ ಹಲುಬೆ, ದಾಸ್ತಾನು ಕಣಜ, ಗುದ್ದಲಿ, ಪ್ಲಾಸ್ಟಿಕ್ ಬಾಂಡ್ಲಿ, ಕಬ್ಬಿಣದ ಬಾಂಡ್ಲಿ, ಇತ್ಯಾದಿ ಉಪಕರಣಗಳನ್ನು ಸರಬರಾಜು ಮಾಡಲು ಅಲ್ಪಾವಧಿ ಟೆಂಡರ್‌ನ್ನು ಕರೆಯಲಾಗಿದೆ.

ಟೆಂಡರ್ ದಸ್ತಾವೇಜು ಸಹಾಯಕ ಕೃಷಿ ನಿರ್ದೇಶಕರ ಕಛೇರಿ ಶ್ರೀನಿವಾಸಪುರ ಇಲ್ಲಿ ಲಭ್ಯವಿದ್ದು ಇಚ್ಚೆಯುಳ್ಳ ಸಂಸ್ಥೆಯವರು ಪೂರ್ಣ ಭರ್ತಿ ಮಾಡಿದ ಟೆಂಡರ್ ಪ್ರತಿ ಸಲ್ಲಿಸುವ **ಕೊನೆಯ ದಿನಾಂಕ :23.01.2025 ರ ಅಪರಾಹ್ನ 1.30 ಗಂಟೆ ಆಗಿರುತ್ತದೆ. ತಾಂತ್ರಿಕ ಬಿಡ್‌ಗಳನ್ನು ದಿನಾಂಕ 24.01.2025 ರಂದು ಪೂರ್ವಾಹ್ನ 11.00 ಗಂಟೆಗೆ** ಸಹಾಯಕ ಕೃಷಿ ನಿರ್ದೇಶಕರ ಕಛೇರಿ ಶ್ರೀನಿವಾಸಪುರ ಇಲ್ಲಿ ತೆರೆಯಲಾಗುವುದು.

ಷರತ್ತು ಮತ್ತು ನಿಬಂಧನೆಗಳನ್ನು ಅರ್ಜಿಯೊಂದಿಗೆ ಪಡೆಯತಕ್ಕದ್ದು/ ಹೆಚ್ಚಿನ ಮಾಹಿತಿಯನ್ನು ಕಛೇರಿಯ ಸಮಯದಲ್ಲಿ ಪಡೆಯಬಹುದು.

ಸಹಿ/– ಸಹಾಯಕ ಕೃಷಿ ನಿರ್ದೇಶಕರು, ಶ್ರೀನಿವಾಸಪುರ ತಾಲ್ಲೂಕು, ಕೋಲಾರ ಜಿಲ್ಲೆ

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:392/ಕೆಎಸ್‌ಎಂಸಿಎ/2024–25

ನಗರದಲ್ಲಿ ಇಂದು

ಶ್ರೀನಿವಾಸ ಕಲ್ಯಾಣ ಮಹೋತ್ಸವ: ಆಯೋಜನೆ: ಶನೈಶ್ಚರಸ್ವಾಮಿ ದೇವಸ್ಥಾನ ಸೇವಾ ಸಮಿತಿ ಟ್ರಸ್ಟ್, ಸ್ಥಳ: ಮಾತಾ ಅಮೃತಾನಂದ ಆಶ್ರಮದ ಹೆಬ್ಬಾಗಿಲು, ಮರಿಯಪ್ಪನ ಪಾಳ್ಯ, ಬೆಳಿಗ್ಗೆ 9

ಉಪನ್ಯಾಸ-ಕವಿಗೋಷ್ಠಿ-ಭರತನಾಟ್ಯ ಕಾರ್ಯಕ್ರಮ: ‘ನಾನೊಂದ್ರೆ ನಂಗಿಷ್ಟ’ ಉಪನ್ಯಾಸ: ಡಿ.ಎಂ. ಹೆಗಡೆ, ಸಂಕ್ರಾಂತಿ ಕವಿಗೋಷ್ಠಿ ಅಧ್ಯಕ್ಷತೆ: ಎಂ.ಆರ್. ಕಮಲಾ, ಭರತನಾಟ್ಯ: ನವ್ಯಾ ಪ್ರಮೋದ್ ಮತ್ತು ಶಿಷ್ಯರು, ಆಯೋಜನೆ ಹಾಗೂ ಸ್ಥಳ: ಬೆಳ್ಳಿ ಭವನ, ಕ.ವಿ.ಪ್ರ.ನಿ.ನಿ. ಲೆಕ್ಕಾಧಿಕಾರಿಗಳ ಸಂಘ, ಆನಂದರಾವ್ ವೃತ್ತ, ಬೆಳಿಗ್ಗೆ 10

ಅಂಧರ ರಾಜ್ಯಮಟ್ಟದ ಪ್ರತಿಭಾನ್ವೇಷಣೆ ಸಾಂಸ್ಕೃತಿಕ ಸ್ಪರ್ಧೆಗಳ ಉದ್ಘಾಟನೆ ಸಮಾರಂಭ: ಅತಿಥಿಗಳು: ದಿನೇಶ್ ಗುಂಡೂರಾವ್, ರಕ್ಷಾ ರಾಮಯ್ಯ, ಆಯೋಜನೆ: ಸ್ನೇಹದೀಪ್ ಟ್ರಸ್ಟ್ ಫಾರ್ ದಿ ಡಿಸೇಬಲ್ಡ್, ಸ್ಥಳ: ಬಿಡಬ್ಲ್ಯುಎಸ್‌ಎಸ್‌ಬಿ ರಜತಭವನ, 8ನೇ ಮುಖ್ಯರಸ್ತೆ, ಮಲ್ಲೇಶ್ವರ ಬೆಳಿಗ್ಗೆ 10

ಮರೆಯಲಾಗದ ಮಹನೀಯರು: ದ.ರಾ. ಬೇಂದ್ರೆ, ಚಂದ್ರಶೇಖರ ಕಂಬಾರ, ಎಂ.ಎನ್. ವ್ಯಾಸರಾವ್, ಕೆ.ಎಸ್. ನರಸಿಂಹಸ್ವಾಮಿ ಅವರಿಗೆ ಗೀತ ಗೌರವ, ಉದ್ಘಾಟನೆ: ನ್ಯಾ.ವಿ. ಗೋಪಾಲಗೌಡ, ಉಪಸ್ಥಿತಿ: ಚಂದ್ರಶೇಖರ ಕಂಬಾರ, ಅಧ್ಯಕ್ಷತೆ: ಎಚ್.ಎಸ್. ವೆಂಕಟೇಶಮೂರ್ತಿ, ಉಪಸ್ಥಿತಿ: ವೈ.ಕೆ. ಮುದ್ದುಕೃಷ್ಣ, ಆಯೋಜನೆ: ಕರ್ನಾಟಕ ಸುಗಮ ಸಂಗೀತ ಪರಿಷತ್ತು, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 10.30

ಪೂರ್ಣಾನಂದಪುರ ಸ್ವಾಮೀಜಿ ಅವರಿಗೆ ದ್ವಿತೀಯ ಪೀಠಾರೋಹಣ ಸಮಾರಂಭ: ಉದ್ಘಾಟನೆ: ಸಿದ್ದರಾಮಯ್ಯ, ಪ್ರಸಾದ ಮನೆ ಕಟ್ಟಡ ಉದ್ಘಾಟನೆ: ಡಿ.ಕೆ. ಶಿವಕುಮಾರ್, ಅತಿಥಿಗಳು: ಎಚ್.ಕೆ. ಪಾಟೀಲ, ದಿನೇಶ್ ಗುಂಡೂರಾವ್. ಎಚ್. ಸಿ.ಮಹದೇವಪ್ಪ, ಎನ್.ರಾಜಣ್ಣ, ಶಿವರಾಜ್ ತಂಗಡಗಿ, ಜಿ.ಸಿ. ಚಂದ್ರಶೇಖರ್, ಅಧ್ಯಕ್ಷತೆ: ಜಿ.ಎನ್.ವೇಣುಗೋಪಾಲ್, ಆಯೋಜನೆ: ವಿಶ್ವಗಾಣಿಗರ ಚಾರಿಟಬಲ್ ಟ್ರಸ್ಟ್, ಸ್ಥಳ: ತೈಲೇಶ್ವರ ಗಾಣಿಗರ ಮಹಾಸಂಸ್ಥಾನ ಮಠ, ನಗರೂರು ಬಡಾವಣೆ, ಮಾದನಾಯಕನಹಳ್ಳಿ, ಬೆಳಿಗ್ಗೆ 11

ಎಸ್.ಪಿ. ಪದ್ಮಪ್ರಸಾದ್ ಅವರು ಸಂಪಾದಿಸಿರುವ ‘ಕನ್ನಡ ಜೈನ ಸಾಹಿತ್ಯ ಚರಿತ್ರೆ’ ಸಂಪುಟ ಬಿಡುಗಡೆ: ಹಂ.ಪ. ನಾಗರಾಜಯ್ಯ, ಅಧ್ಯಕ್ಷತೆ: ವೂಡೇ ಪಿ. ಕೃಷ್ಣ, ಕೃತಿ ಬಗ್ಗೆ ಮಾತು: ನರಹಳ್ಳಿ ಬಾಲಸುಬ್ರಮಣ್ಯ, ಎಂ.ಎಸ್. ಆಶಾದೇವಿ, ಉಪಸ್ಥಿತಿ: ಎಂ.ಪ್ರಕಾಶಮೂರ್ತಿ, ಆಯೋಜನೆ: ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಶೇಷಾದ್ರಿಪುರಂ ಶಿಕ್ಷಣ ದತ್ತಿ, ಸ್ಥಳ: ಶೇಷಾದ್ರಿಪುರಂ ಶಿಕ್ಷಣ ದತ್ತಿ ಸಭಾಂಗಣ, ಶೇಷಾದ್ರಿಪುರ, ಬೆಳಿಗ್ಗೆ 10.30

ಅತ್ಯುತ್ತಮ ಹೈನುಗಾರ್ತಿ ಪ್ರಶಸ್ತಿ ಪ್ರದಾನ ಸಮಾರಂಭ: ಮುಖ್ಯ ಅತಿಥಿ: ಕೆ. ವೆಂಕಟೇಶ್, ಗೌರವ ಅತಿಥಿಗಳು: ಭೀಮಾ ನಾಯ್ಕ್, ಕೆ.ಎಸ್. ಮಣಿ, ಬಿ. ಶಿವಸ್ವಾಮಿ, ಅಧ್ಯಕ್ಷತೆ: ಆರ್.ಎಸ್. ಸೋಧಿ, ಆಯೋಜನೆ: ಭಾರತೀಯ ಡೇರಿ ಸಂಘದ ದಕ್ಷಿಣ ವಲಯ, ಸ್ಥಳ: ನಿಮ್ಹಾನ್ಸ್ ಸಮ್ಮೇಳನ ಸಭಾಂಗಣ, ಬೆಳಿಗ್ಗೆ 10.30

ಶಾಲಾ–ಕಾಲೇಜು ವಾರ್ಷಿಕೋತ್ಸವ ಸಮಾರಂಭ: ಉದ್ಘಾಟನೆ: ಕೆ. ಗೋಪಾಲಯ್ಯ, ಮುಖ್ಯ ಅತಿಥಿಗಳು: ರಾಜು ಎನ್., ಮಲ್ಲಿಕಾರ್ಜುನ ಎನ್. ಸಿ., ನಂದಕುಮಾರ್, ಅಧ್ಯಕ್ಷತೆ: ರವಿಪ್ರಕಾಶ್, ಆಯೋಜನೆ ಹಾಗೂ ಸ್ಥಳ: ಅಂಬೇಡ್ಕರ್ ಮೆಮೋರಿಯಲ್ ಸೊಸೈಟಿ, ಪಶ್ಚಿಮ ಕಾರ್ಡ್ ರಸ್ತೆ, ಮಹಾಲಕ್ಷ್ಮೀಪುರ, ಬೆಳಿಗ್ಗೆ 10.30

ಕನ್ನಡ ಬಾವುಟ ಹಾರಿಸಿದವರು ನೆನಪಿನ ಮಾಲೆ 22, ಎಂ. ಚಿದಾನಂದಮೂರ್ತಿ 5ನೇ ಸಂಸ್ಮರಣೆ: ‘ಕನ್ನಡಿಗರಿಗೆ ಉದ್ಯೋಗ’ ಉಪನ್ಯಾಸ: ರಾ.ನಂ. ಚಂದ್ರಶೇಖರ, ಅಧ್ಯಕ್ಷತೆ: ಆರ್. ಶೇಷಶಾಸ್ತ್ರಿ, ಚಿದಾನಂದಮೂರ್ತಿ ನೆನಪಿನ ಗೌರವ: ಎಂ.ಆರ್. ಸತ್ಯನಾರಾಯಣ, ಆಯೋಜನೆ: ಕನ್ನಡ ಗೆಳೆಯರ ಬಳಗ, ಕರ್ನಾಟಕ ವಿಕಾಸ ರಂಗ, ಸ್ಥಳ: ಬಿ.ಎಂ.ಶ್ರೀ. ಪ್ರತಿಮೆ ಎದುರು, ನ್ಯಾಷನಲ್ ಹೈಸ್ಕೂಲು ವೃತ್ತ, ಬಸವನಗುಡಿ, ಬೆಳಿಗ್ಗೆ 11

ಸಾರಥಿ ನಂ 1 ಸಂಸ್ಥೆಯ ಬೆಳ್ಳಿ ಮಹೋತ್ಸವ: ಉದ್ಘಾಟನೆ: ಸಂತೋಷ್ ಲಾಡ್, ಅಧ್ಯಕ್ಷತೆ: ರಾಮಲಿಂಗಾರೆಡ್ಡಿ, ಲಾಂಛನ ಬಿಡುಗಡೆ: ಧ್ರುವ ಸರ್ಜಾ, ಆಯೋಜನೆ: ಇಂಡಿಯನ್ ವೆಹಿಕಲ್ ಡ್ರೈವರ್ಸ್ ಟ್ರೇಡ್ ಯೂನಿಯನ್, ಸ್ನೇಹಜೀವಿ ಚಾಲಕರ ಟ್ರೇಡ್ ಯೂನಿಯನ್, ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಂಗಣ, ಸಂಪಂಗಿರಾಮನಗರ, ಬೆಳಿಗ್ಗೆ 11

47ನೇ ಶಾಲಾ ವಾರ್ಷಿಕೋತ್ಸವ: ಅಧ್ಯಕ್ಷತೆ: ಆರ್.ಕೃಷ್ಣಪ್ಪ,ಮುಖ್ಯ ಅತಿಥಿ: ಹನುಮಂತರಾಯ ಡಿ., ಉಪಸ್ಥಿತಿ: ಕೆ.ಎಸ್. ನಾಗರಾಜು, ಗೌರವ ಅತಿಥಿಗಳು: ವಿ.ಎಸ್. ಹಿರೇಮಠ್, ಪಿ.ಎಂ. ನಾರಾಯಣಸ್ವಾಮಿ, ಆಯೋಜನೆ: ಮಮತಾ ವಿದ್ಯಾ ಸಂಸ್ಥೆ, ಮಮತಾ ಕನ್ನಡ ಹಾಗೂ ಆಂಗ್ಲ ಪ್ರಾಥಮಿಕ ಮತ್ತು ಪ್ರೌಢಶಾಲೆ, ಸ್ಥಳ: ಕೆ.ಎಚ್.ಎಂ. ಸಮುದಾಯ ಭವನ, ಗಂಗಾನಗರ, ಮಧ್ಯಾಹ್ನ 3

‘ಕಲಾ ಸೌರಭ’ 46ನೇ ಶಾಲಾ ವಾರ್ಷಿಕೋತ್ಸವ ಸಮಾರಂಭ: ಮುಖ್ಯ ಅತಿಥಿ: ಎಂ.ಕೃಷ್ಣಪ್ಪ, ಅಧ್ಯಕ್ಷತೆ: ಪುಟ್ಟಣ್ಣ, ಆಯೋಜನೆ: ಗುರುಕುಲ ಇಂಟರ್ ನ್ಯಾಷನಲ್ ಶಾಲೆ, ಸ್ಥಳ: ಸರ್ಕಾರಿ ಪ್ರಾಥಮಿಕ ಶಾಲೆಯ ಆಟದ ಮೈದಾನ, 2ನೇ ಕ್ರಾಸ್, ಮಾಗಡಿ ರಸ್ತೆ, ಸಂಜೆ 4

ಸಾಹಿತ್ಯ ಸಂಜೆ: ‘ನಾನು ಸತ್ತ ಮೇಲೆ’ ಕವನ ಸಂಕಲನ, ‘ತುಯ್ತವೆಲ್ಲ ನವ್ಯದತ್ತ’ ಕಾವ್ಯ ಲೋಕ ಮೀಮಾಂಸೆಯ ಹೊತ್ತಿಗೆ ಕುರಿತು ಚರ್ಚೆ: ಬಸವರಾಜ ಕಲ್ಗುಡಿ, ಸುಭಾಷ್ ರಾಜಮಾನೆ, ಆಯೋಜನೆ: ಸುಚಿತ್ರಾ ಸಿನಿಮಾ ಮತ್ತು ಸಾಂಸ್ಕೃತಿಕ ಅಕಾಡೆಮಿ, ಸ್ಥಳ: ಸುಚಿತ್ರ, ಬನಶಂಕರಿ, ಸಂಜೆ 5

ವಿವೇಕಾನಂದ ಬಾಲಕ ಸಂಘ ಮತ್ತು ವಿವೇಕಾನಂದ ಯುವಕ ಸಂಘದ ವಾರ್ಷಿಕೋತ್ಸವ: ಮುಖ್ಯ ಅತಿಥಿಗಳು: ಸ್ವಾಮಿ ಮಹಾಮೇಧಾನಂದಜಿ, ಎಂ.ಎ. ಬಾಲಸುಬ್ರಮಣ್ಯ, ಆಯೋಜನೆ: ರಾಮಕೃಷ್ಣ ಮಠ, ಸ್ಥಳ: ಸ್ವಾಮಿ ವಿವೇಕಾನಂದ ಶತಾಬ್ದ ಸಭಾಂಗಣ, ರಾಮಕೃಷ್ಣ ಮಠ, ಬಸವನಗುಡಿ, ಸಂಜೆ 5

ಟಿ. ತಿಮ್ಮೇಗೌಡ ಅವರ ‘ಆಡಳಿತದ ಅಂಗಳದಲ್ಲಿ’ ಪುಸ್ತಕ ಬಿಡುಗಡೆ: ಗೊ.ರು. ಚನ್ನಬಸಪ್ಪ, ಸಾನ್ನಿಧ್ಯ: ನಿರ್ಮಲಾನಂದನಾಥ ಸ್ವಾಮೀಜಿ, ಅಧ್ಯಕ್ಷತೆ: ವೈ.ಕೆ. ಪುಟ್ಟಸೋಮೇಗೌಡ, ಪುಸ್ತಕದ ಬಗ್ಗೆ ಮಾತು: ಚಿರಂಜೀವಿ ಸಿಂಘ್, ಮುಖ್ಯ ಅತಿಥಿಗಳು: ವಿಜಯಭಾಸ್ಕರ್, ಡಿ.ಎನ್. ಮುನಿಕೃಷ್ಣ, ಆಯೋಜನೆ: ಜೀವನ್ಮುಖಿ ಪ್ರಕಾಶನ, ಸ್ಥಳ: ಬಾಪೂ ಸಭಾಂಗಣ, ಗಾಂಧಿಭವನ, ಕುಮಾರಕೃಪಾ ರಸ್ತೆ, ಸಂಜೆ 5

ಟಿ.ತಿಮ್ಮೇಗೌಡ

ಭರನಾಟ್ಯ ರಂಗಪ್ರವೇಶ: ತನ್ಮಯಿ ಸುಧಾಕರ್, ಮುಖ್ಯ ಅತಿಥಿಗಳು: ನಾಗಾನಂದ ದೊರೆಸ್ವಾಮಿ, ಎಂ. ಸೂರ್ಯಪ್ರಸಾದ್, ಟಿ. ಸಾಯಿರಾಮ್ ಪ್ರಸಾದ್, ತೇಜೇಶ್ ಎಸ್., ವಿನಯಾ ನಾರಾಯಣನ್, ಸ್ಥಳ: ಜೆಎಸ್‌ಎಸ್ ಸಭಾಂಗಣ, ಶಿವರಾತ್ರೇಶ್ವರ ವೃತ್ತ, ಜಯನಗರ 8ನೆ ಬ್ಲಾಕ್, ಸಂಜೆ 5



ರಂಗನಾಯಕಮ್ಮ ಮತ್ತು ಜಿ. ಸುಬ್ಬರಾವ್ ಸಂಗೀತ ದತ್ತಿ ಕಾರ್ಯಕ್ರಮ: ಸಂಗೀತ ಕಛೇರಿ: ಭವಾನಿ ಎಂ. ರಾವ್, ಆಯೋಜನೆ: ಬಿ.ಎಂ.ಶ್ರೀ. ಪ್ರತಿಷ್ಠಾನ, ಸ್ಥಳ: ಎಂ.ವಿ. ಸೀ. ಸಭಾಂಗಣ, ಬಿ.ಎಂ. ಶ್ರೀ. ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 5

ಜಿ.ಎಸ್. ಸಿದ್ಧಲಿಂಗಯ್ಯ ಅವರಿಗೆ ‘ಬಸವ ಪ್ರಶಸ್ತಿ’ ಪ್ರದಾನ: ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ: ಬಿ.ಆರ್. ಪಾಟೀಲ, ಅಧ್ಯಕ್ಷತೆ: ಬಸವರಾಜ ಸಾದರ, ಅಭಿನಂದನಾ ನುಡಿ: ಎಂ.ಎಸ್. ಆಶಾದೇವಿ, ಆಯೋಜನೆ: ಸುಭಾಷ್ಚಂದ್ರ ಪಾಟೀಲ ಸ್ಮಾರಕ ಜನಕಲ್ಯಾಣ ಟ್ರಸ್ಟ್, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಸಂಜೆ 5.30

ಹಾಸ್ಯ ಜುಗಲ್‌ಬಂದಿ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ: ಸಾನ್ನಿಧ್ಯ: ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ, ಹಾಸ್ಯ ಜುಗಲ್‌ಬಂದಿ: ಹಿರೇಮಗಳೂರು ಕಣ್ಣನ್, ನಾಗಶ್ರೀ ತ್ಯಾಗರಾಜ್, ಆಯೋಜನೆ ಹಾಗೂ ಸ್ಥಳ: ತರಳಬಾಳು ಕೇಂದ್ರ, ಆರ್.ಟಿ. ನಗರ, ಸಂಜೆ 6

ವಜ್ರ ಮಹೋತ್ಸವ ಸಂಭ್ರಮ: ಪಿಟೀಲು–ವೀಣೆ ಜುಗಲ್‌ಬಂದಿ: ಬಿ. ರಘುರಾಮ್, ಎಲ್.ವಿ. ಮುಕುಂದ್, ಆಯೋಜನೆ: ನಾದಜ್ಯೋತಿ ಸಂಗೀತ ಸಭಾ ಟ್ರಸ್ಟ್, ಸ್ಥಳ: ಶ್ರೀರಾಮ ಮಂದಿರ, ಮಲ್ಲೇಶ್ವರ, ಸಂಜೆ 6

ಜಯಂತ ಕಾಯ್ಕಿಣಿ ವಿರಚಿತ ‘ಸೇವಂತಿ ಪ್ರಸಂಗ’ ನಾಟಕ ಪ್ರದರ್ಶನ: ನಿರ್ದೇಶನ: ವಿಜಯ್ ಕಶ್ಯಪ್ ಕೆ.ಎಸ್., ಆಯೋಜನೆ: ರಂಗರಸಧಾರೆ, ಸ್ಥಳ: ಡಾ.ಸಿ. ಅಶ್ವಥ್ ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 7

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. 01–ಎಸ್‌ಎನ್‌ಟಿ–ಎಂವೈಎಸ್–2025

ದಿನಾಂಕ : 03–01–2025

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಗಳಿಗಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ	ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
1	ಮೈಸೂರು ವಿಭಾಗದಲ್ಲಿ ಎರಡು ವರ್ಷಗಳ ಅವಧಿಗೆ ಇಎಂಸಿ ಸಾಕೆಟ್‌ಗಳನ್ನು ಪರೀಕ್ಷಿಸುವುದು	ರೂ. 71,08,644.48
2	ಮೈಸೂರು ವಿಭಾಗದ ಮಾಯಕೊಂಡ, ಅಜ್ಜಂಪುರ, ಹಳಿಯೂರು, ಸಾಸಲು, ರಾಮಗಿರಿ, ಹೊಸದುರ್ಗ ರೋಡ್, ಶಿವಪುರ, ಕರಡಿ, ಮಸರಹಳ್ಳಿ ನಿಲ್ದಾಣದಲ್ಲಿ ಪ್ಲಾಟ್‌ಫಾರಂನ ವಿಸ್ತರಣೆಯ ಕಾಮಗಾರಿಗೆ ಸಂಬಂಧಿಸಿದಂತೆ ಎಸ್ & ಟಿ ಕಾಮಗಾರಿ.	ರೂ. 1,19,37,721.1
3	ಮೈಸೂರು ವಿಭಾಗದ ಚಿಕ್ಕಜಾಜೂರು – ರಾಯದುರ್ಗ ಮತ್ತು ಚಿಕ್ಕಜಾಜೂರು – ಕರಜಗಿ ಸೆಕ್ಷನ್‌ಗಳ ನಡುವೆ ನಿರ್ಮಾಣದಿಂದ ಕಟ್ಟಿಂಗ್‌ನಲ್ಲಿ ಡ್ರೈನೇಜ್‌ಗೆ ರಕ್ಷಣೆ / ಅಭಿವೃದ್ಧಿಗಳಿಗೆ ಸಂಬಂಧಿಸಿದಂತೆ ಟೆಲಿಕಾಂ ಕೇಬಲ್‌ಗಳನ್ನು ಸ್ಥಳಾಂತರಿಸುವುದು.	ರೂ. 62,77,855.94

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 27–01–2025 ರಂದು 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಹಿರಿಯ ವಿಭಾಗೀಯ ಸಿಗ್ನಲ್ & ಟೆಲಿಕಮ್ಯುನಿಕೇಶನ್ ಇಂಜಿನಿಯರ್, ಮೈಸೂರು

ಪಿಯುಬಿ/689/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2024–25

South Western Railway - SWR SWRRLY SWRRLY

IN THE COURT OF THE 1st ADDL SENIOR CIVIL JUDGE AND JMFC, AT NELAMANGALA-O.S.NO.168/2020

BETWEEN : G. SHARATH REDDY, S/o Late G.Krishna Mohan Reddy, Aged about 66 years, R/at No.43, Miraya Grant, Vittal Malya Road, Bangalore-560001. **...PLAINTIFF**

AND: SAMPATH KUMAR AND OTHERS ...DEFENDANTS

SUMMONS TO THE DEFENDANT

To, Defendant No. 10:-
Smt. Monica K. N, W/o Nikhil Pradyumn Patil, aged about 33 years, R/at. No.41/B, 3rd Stage, 1st Main Road, Vinayakalayout, Vijayanagar, Bangalore -560040.

Whereas the above named Plaintiff instituted a suit against Defendants for the relief of Specific Performance in respect of the suit schedule properties and also an interim Application has been filed to implead You as the necessary party.

You are hereby summoned to appear before this court **on 01-02-2025 at 11am** in person or through advocate / pleader to answer the question to the same, failing which the suit will be heard and determined ex-parte,

Given under my hand and seal of the court, **on 10-01-2025.**

SCHEDULE "A"

Vacant Sites bearing Nos. 1, 2, 3, 4, 5, 6, 7, 8, 9, 10, 43, 44, 45, 46, 47, 48, 49, 50, 51, 52, 87, 88, 89, 90, 91, 92, 93, 94, 95, 96, 97, 98, 99, 100, 101, 102, 103, 104, in all measuring 48000 sq.feet, situated in the layout known as "VENKATADRI ENCLAVE" formed in the Main Schedule Property i.e. New Sy.No.19 and New Sy.No.20/6, Old Sy.No.20, situated at Venkatapura Village, Dasanapura Hobli, Bangalore North Taluk, as per Layout plan **and Bounded on the Following Boundaries -**
East by : Land bearing in Sy.No.18 and 20/7,
West by : Byregowdanahalli Village Boundary,
North by : Remaining Land bearing in Sy. No.20/6,
South by : Byregowdanahalli Village Boundary.

By Order Of The Court, Sheristedar Senior Civil Judge & JMFC Nelamangala

Mr. Reny Sebastain,
Advocate for Plaintiff , TSA Legal, No.F02, 1st Floor, Inclover Spring Leaf, No.18, Wood Street, Ashoknagar, Bengaluru-560025.

ಯುವಕರ ಹುಚ್ಚಾಟ: ರೋಗಿಗಳು, ವೃದ್ಧರು, ಮಕ್ಕಳಿಗೆ ಆಪತ್ತು • ಕಡಿವಾಣ ಹಾಕಲು ನಾಗರಿಕರ ಒತ್ತಾಯ

ರಾತ್ರಿಯೂ ಪಟಾಕಿ ಸಿಡಿತ: ನಿವಾಸಿಗಳಿಗೆ ಸಂಕಟ

• ಆದಿತ್ಯ ಕೆ.ಎ.

ಬೆಂಗಳೂರು: ದೀಪಾವಳಿ ಹಬ್ಬ ಕಳೆದು ಎರಡು ತಿಂಗಳು ಕಳೆದಿದ್ದರೂ ಈಗಲೂ ಹಲವು ಬಡಾವಣೆ, ಪ್ರಮುಖ ರಸ್ತೆ, ಪುಟ್ಟ ಗಲ್ಲಿಗಳು, ಅಪಾರ್ಟ್‌ಮೆಂಟ್‌ನ ಚಾವಣಿ, ನಿರ್ಜನ ಪ್ರದೇಶಗಳಲ್ಲಿ ರಾತ್ರಿ 10ರ ಬಳಿಕ ಪಟಾಕಿಗಳು ಸದ್ದು ಮಾಡುತ್ತಿದ್ದು, ಜನರ ನಿದ್ದೆಗೆಡಿಸಿವೆ.

ಜನವಸತಿ ಪ್ರದೇಶಗಳಲ್ಲಿ ಸಂಭ್ರಮಾಚರಣೆ ನೆಪದಲ್ಲಿ ಕೆಲವು ಯುವಕರು ರಾತ್ರಿ ಪಟಾಕಿ ಸಿಡಿಸಿ ಹುಚ್ಚಾಟ ನಡೆಸುತ್ತಿರುವ ಪರಿಣಾಮ ವೃದ್ಧರು, ರೋಗಿಗಳು ಹಾಗೂ ಪುಟ್ಟ ಮಕ್ಕಳಿಗೆ ಆಪತ್ತು ತರುತ್ತಿದೆ. ಇದು ನಗರದ ವಾಯು ಮಾಲಿನ್ಯ ಹೆಚ್ಚಳಕ್ಕೂ ಕಾರಣವಾಗುತ್ತಿದೆ.

ಯುವಕರು ಮೋಜಿಗಾಗಿ ಹಾಗೂ ಮದ್ಯದ ನಶೆಯಲ್ಲಿ ಪಟಾಕಿ ಸಿಡಿಸುತ್ತಿದ್ದು, ತೊಂದರೆ ಆಗುತ್ತಿದೆ ಎಂದು ಹಲವು ಸಾರ್ವಜನಿಕರು ಅಳಲು ತೋಡಿಕೊಂಡಿದ್ದಾರೆ.

ಬಸವನಗುಡಿ, ಎನ್‌.ಆರ್‌. ಕಾಲೊನಿ, ಬನಶಂಕರಿ, ಕುಮಾರಸ್ವಾಮಿ ಲೇಔಟ್‌, ಪದ್ಮನಾಭ ನಗರ, ಕೆ.ಆರ್‌. ಮಾರುಕಟ್ಟೆ ಸುತ್ತಮುತ್ತ, ಚಾಮರಾಜಪೇಟೆ, ಹುಳಿಮಾವು, ಇಂದಿರಾನಗರ, ಕೆಂಗೇರಿ, ದಾಸರಹಳ್ಳಿ, ವಿಜಯನಗರ, ಮೈಕೊ ಲೇಔಟ್‌, ಚಂದ್ರಾ ಲೇಔಟ್‌, ನಾಗವಾರ, ಲಗ್ಗೆರೆ, ಕೋಣನಕುಂಟೆ, ವಿದ್ಯಾರಣ್ಯಪುರ, ಸುಂಕದಕಟ್ಟೆ, ಕೆಆರ್‌ ಪುರ, ವೈಟ್‌ಫೀಲ್ಡ್‌... ಹೀಗೆ ಹಲವು ಬಡಾವಣೆಗಳಲ್ಲಿ ರಾತ್ರಿ ಪಟಾಕಿಗಳ ಸದ್ದು ಜನರ ನೆಮ್ಮದಿಗೆ ಭಂಗ ತರುತ್ತಿದೆ.

ಹಬ್ಬ, ಜಾತ್ರೆ, ದೇವರ ಉತ್ಸವದ ವೇಳೆ ಆಯೋಜಕರು ಪೊಲೀಸರ ಅನುಮತಿ ಪಡೆದು ರಾತ್ರಿ ವೇಳೆ ಪಟಾಕಿ ಸಿಡಿಸುವುದು, ಧ್ವನಿವರ್ಧಕ ಅಳವಡಿಕೆ ಮಾಡುತ್ತಾರೆ. ಯಾವುದೇ ಉತ್ಸವಗಳು ಇಲ್ಲದಿದ್ದರೂ ಪಟಾಕಿ ಸಿಡಿಸುತ್ತಿರುವುದು ಈಗ ಕಂಡುಬರುತ್ತಿದೆ. ರಾಜಕಾರಣಿಗಳ ಮನೆಗಳ ಎದುರು ಪಟಾಕಿ ಸದ್ದು ಈಗಲೂ ಜೋರಾಗಿದೆ ಎಂದು ವೃದ್ಧರು ಅಳಲು ತೋಡಿಕೊಂಡಿದ್ದಾರೆ.

‘ರಾತ್ರಿ ವೇಳೆ ಈ ರೀತಿಯ ಕೃತ್ಯಕ್ಕೆ ಪೊಲೀಸರು ಕಡಿವಾಣ ಹಾಕಬೇಕು. ಪ್ರಯಾಣಿಕರನ್ನು ಕರೆದೊಯ್ಯುವ ವೇಳೆ ಗಲ್ಲಿಗಳಲ್ಲಿ ಸುಮ್ಮನೆ ಪಟಾಕಿ ಸಿಡಿಸುತ್ತಾರೆ. ಯಾವುದೇ ಮುನ್ನೆಚ್ಚರಿಕೆ ಕೈಗೊಂಡಿರುವುದಿಲ್ಲ. ಎಲ್ಲಿ ಆಟೊಗಳ ಮೇಲೆ ಪಟಾಕಿ ಎಸೆಯುತ್ತಾರೆಯೋ ಎನ್ನುವ ಭಯ ಕಾಡುತ್ತದೆ. ಹುಚ್ಚಾಟ ನಡೆಸುವ ಕಿಡಿಗೇಡಿಗಳನ್ನು ಪತ್ತೆಹಚ್ಚಿ ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು’ ಎಂದು ಆಟೊ ಚಾಲಕ ಲೋಕೇಶ್‌ ಆಗ್ರಹಿಸಿದರು.

ಹಲವು ಅನಾಹುತ: ಪುಂಡರ ಹುಚ್ಚಾಟದಿಂದ ಹಲವು ಅನಾಹುತಗಳು ಸಂಭವಿಸುತ್ತಿವೆ. ಅಕ್ಕಪಕ್ಕದ ನಿವಾಸಿಗಳಿಗೂ ತೊಂದರೆ ಆಗುತ್ತಿದೆ. ಪರೀಕ್ಷಾ ಸಂದರ್ಭಗಳಲ್ಲಿ ಮಕ್ಕಳ ಓದಿಗೂ ಅಡಚಣೆ ಉಂಟಾಗುತ್ತಿದೆ ಎಂದು ಪೋಷಕರು ಅಳಲು ತೋಡಿಕೊಂಡಿದ್ದಾರೆ.

ಯುವಕರಿಬ್ಬರು ದ್ವಿಚಕ್ರ ವಾಹನದಲ್ಲಿ ಕುಳಿತು ಪಟಾಕಿಗೆ ಬೆಂಕಿ ಹಚ್ಚಿ ಎಸೆಯುತ್ತಾ ಸಾಗಿದ್ದ ಘಟನೆ ಹೆಣ್ಣೂರು ರಸ್ತೆಯಲ್ಲಿ ಇತ್ತೀಚೆಗೆ ನಡೆದಿತ್ತು (ಸಂಗ್ರಹ ಚಿತ್ರ)

ಕೆಲ ದಿನಗಳ ಹಿಂದೆ ಪಟಾಕಿ ಸಿಡಿಸುವಾಗ ಸ್ನೇಹಿತರ ಸವಾಲು ಸ್ವೀಕರಿಸಲು ಹೋಗಿ ವ್ಯಕ್ತಿಯೊಬ್ಬರು ಪ್ರಾಣ ಕಳೆದುಕೊಂಡಿದ್ದರು. ಕೋಣನಕುಂಟೆ ಠಾಣಾ ವ್ಯಾಪ್ತಿಯಲ್ಲಿ ಪಟಾಕಿ ಹಚ್ಚುವಾಗ ಡಬ್ಬದ ಮೇಲೆ ಕುಳಿತರೆ ಆಟೊ ಕೊಡಿಸುವುದಾಗಿ ಆರೋಪಿಗಳು ವ್ಯಕ್ತಿಯೊಬ್ಬರಿಗೆ ಆಮಿಷ ಒಡ್ಡಿದ್ದರು. ಮದ್ಯದ ಅಮಲಿನಲ್ಲಿದ್ದ ಆ ವ್ಯಕ್ತಿ ಸವಾಲು ಸ್ವೀಕರಿಸಿ, ಪ್ರಾಣ ಕಳೆದುಕೊಂಡಿದ್ದರು.

ದ್ವಿಚಕ್ರ ವಾಹನ ಓಡಿಸುತ್ತಾ ಪಟಾಕಿಗೆ ಬೆಂಕಿ ಇಟ್ಟು ಎಸೆಯುತ್ತಾ ಪುಂಡಾಟ ನಡೆಸಿದ್ದ ಘಟನೆ ಇತ್ತೀಚೆಗೆ ಹೆಣ್ಣೂರು ಮುಖ್ಯ ರಸ್ತೆಯಲ್ಲಿ ನಡೆದಿತ್ತು. ಆರೋಪಿಗಳನ್ನು ಪತ್ತೆಹಚ್ಚಿದ್ದ ಪೊಲೀಸರು, ಇಬ್ಬರನ್ನು ಬಂಧಿಸಿದ್ದರು. ಕಿಡಿಗೇಡಿಗಳು ಈ ರೀತಿ ಪುಂಡಾಟ ನಡೆಸಿ ಬೇರೆಯವರಿಗೆ ಆಪತ್ತು ತರುತ್ತಿದ್ದಾರೆ ಎಂದು ಸ್ಥಳೀಯರು ಆತಂಕ ವ್ಯಕ್ತಪಡಿಸಿದ್ದಾರೆ.

ರಾತ್ರಿ ವೇಳೆ ಪಟಾಕಿ ಸಿಡಿಸಿ ತೊಂದರೆ ನೀಡುತ್ತಿದ್ದರೆ ಪೊಲೀಸ್ ಸಹಾಯವಾಣಿ 112ಗೆ ಕರೆ ಮಾಡಿ ಮಾಹಿತಿ ನೀಡಬಹುದು. ಸಿಸಿಟಿವಿ ಕ್ಯಾಮೆರಾಗಳ ದೃಶ್ಯಾವಳಿ ಪರಿಶೀಲಿಸಿ ಪೊಲೀಸರು ಕ್ರಮ ಕೈಗೊಳ್ಳಲಿದ್ದಾರೆ

ಬಿ.ದಯಾನಂದ
ನಗರ ಪೊಲೀಸ್ ಕಮಿಷನರ್

ಕೆಲವು ಯುವಕರು ಮದ್ಯ ಸೇವಿಸಿ ‘ರೀಲ್ಸ್’ ಮಾಡಿ ಸಾಮಾಜಿಕ ಜಾಲತಾಣದಲ್ಲಿ ವಿಡಿಯೊ ಹಂಚಿಕೊಳ್ಳಲು ರಾತ್ರಿ ವೇಳೆ ಪಟಾಕಿ ಸಿಡಿಸಿ ತೊಂದರೆ ನೀಡುತ್ತಿದ್ದಾರೆ ಎಂದು ದಾಸರಹಳ್ಳಿಯ ನಿವಾಸಿ ಜ್ಯೋತಿ ದೂರಿದರು.

ಈ ರೀತಿ ಪಟಾಕಿ ಸಿಡಿಸುತ್ತಿರುವುದರಿಂದ ವಾಯುಮಾಲಿನ್ಯ ಹೆಚ್ಚಾಗಿ ಸಾಂಕ್ರಾಮಿಕ ಕಾಯಿಲೆಗೆ ಕಾರಣವಾಗುತ್ತಿದೆ. ಶಬ್ದ ಮಾಲಿನ್ಯದಿಂದ ಆಸ್ಪತ್ರೆಗಳಲ್ಲಿ ದಾಖಲಾಗಿರುವ ರೋಗಿಗಳು ಸಂಕಟ ಪಡುತ್ತಿದ್ದಾರೆ ಎಂದು ವೈದ್ಯರು ಹೇಳಿದರು.

ನಿಯಂತ್ರಣ ಬೇಕು

ಜನ್ಮ ದಿನಾಚರಣೆ, ಹೊಸ ವರ್ಷ, ಮದುವೆ ಸಮಾರಂಭಗಳ ಹೆಸರಿನಲ್ಲಿ ರಾತ್ರಿ ವೇಳೆ ಪಟಾಕಿ ಸಿಡಿಸಿ ಸಂಭ್ರಮಿಸುವುದರಿಂದ ಮಲಗಿರುವ ಮಕ್ಕಳು, ಹಿರಿಯರು, ಪ್ರಾಣಿ– ಪಕ್ಷಿಗಳು ಎಚ್ಚರಗೊಂಡು ಗಾಬರಿಗೊಳ್ಳುತ್ತಿವೆ.

ಕೆ.ತೇಜಸ್ವಿನಿ, ಕಲ್ಕೆರೆ

ಆರೋಗ್ಯದ ಮೇಲೆ ಪರಿಣಾಮ

ಹೆಚ್ಚುತ್ತಿರುವ ಶಬ್ದ ಮಾಲಿನ್ಯದಿಂದ ಪರಿಸರ ಮತ್ತು ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಪಟಾಕಿ ಸಿಡಿಸುವುದು, ಡಿ.ಜೆ ಶಬ್ದದಿಂದ ಅನೇಕರಿಗೆ ಕಿರಿಕಿರಿ ಆಗುತ್ತಿದೆ.

ಮಧುಶ್ರೀ ಪಾಟೀಲ್, ಕೆ.ಆರ್. ಪುರ

ವಾತಾವರಣ ಕಲುಷಿತ

ನಗರದ ವಾತಾವರಣ ಹೆಚ್ಚು ಕಲುಷಿತಗೊಳ್ಳುತ್ತಿರುವುದು ಆತಂಕಕಾರಿ. ದೆಹಲಿ ಸರ್ಕಾರ ಪಟಾಕಿ ನಿಷೇಧಿಸಿ ಮೇಲ್ಪಂಕ್ತಿ ಹಾಕಿಕೊಟ್ಟಿದೆ. ನಮ್ಮ ರಾಜ್ಯದಲ್ಲಿ ಇನ್ನಾದರೂ ದೀಪಾವಳಿ ಹಬ್ಬದ ವೇಳೆ ಹಸಿರು ಪಟಾಕಿ ಮಾರಾಟಕ್ಕೆ ಅವಕಾಶ ಕಲ್ಪಿಸಬೇಕು. ಉಳಿದ ಸಂದರ್ಭದಲ್ಲಿ ಹಸಿರು ಪಟಾಕಿ ಮಾರಾಟ ಹಾಗೂ ಸಿಡಿಸುವುದನ್ನೂ ನಿಷೇಧಿಸಬೇಕು.

ಕೆ.ಜಿ.ಕುಮಾರ್, ಅಧ್ಯಕ್ಷ, ಹಸಿರು ಪ್ರತಿಷ್ಠಾನ

ಮಾರಾಟವನ್ನೇ ನಿಷೇಧಿಸಿ

ಸಭೆ, ಸಮಾರಂಭಗಳು ಮತ್ತು ಗಣ್ಯರನ್ನು ಸ್ವಾಗತಿಸಲು ವಿನಾಕಾರಣ ಪಟಾಕಿ ಸಿಡಿಸಿ ಪರಿಸರ ಹಾಳು ಮಾಡಲಾಗುತ್ತಿದೆ. ರಾತ್ರಿ ನಡೆಯುವ ಕಾರ್ಯಕ್ರಮಗಳಲ್ಲಿ ಪಟಾಕಿ ಹಾವಳಿ ತೀವ್ರವಾಗಿದೆ. ದೀಪಾವಳಿ ಹೊರತುಪಡಿಸಿ ಬೇರೆ ಸಂದರ್ಭದಲ್ಲಿ ಪಟಾಕಿ ಮಾರಾಟವನ್ನೇ ನಿಷೇಧಿಸಬೇಕು. ಪಟಾಕಿ ಸಂಗ್ರಹಿಸಿರುವ ಮಳಿಗೆಗಳ ಮೇಲೆ ಪೊಲೀಸರು ದಾಳಿ ನಡೆಸಬೇಕು.

ಭರತ್ ಸೌಂದರ್ಯ,
ವಿದ್ಯಾಮಾನ್ಯ ವಿದ್ಯಾಕೇಂದ್ರ ಶಾಲೆ, ಅಂದ್ರಹಳ್ಳಿ ಮುಖ್ಯರಸ್ತೆ

ಮಗಳು, ಅಳಿಯನ ಜಗಳ ಬಿಡಿಸಲು ಹೋಗಿ ಕೊಲೆಯಾದ ಮಾವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಂದ್ರಾ ಲೇಔಟ್ ಠಾಣೆ ವ್ಯಾಪ್ತಿಯ ಮೆಟ್ರೊಲೇಔಟ್‌ನಲ್ಲಿ ಮಗಳು– ಅಳಿಯನ ಗಲಾಟೆ ಬಿಡಿಸಲು ಹೋಗಿದ್ದ ಮಾವನ ಕೊಲೆಯಾಗಿದೆ. ಈ ಸಂಬಂಧ ಅಳಿಯನ ವಿರುದ್ಧ ಕೊಲೆ ಪ್ರಕರಣ ದಾಖಲಿಸಿಕೊಂಡು ತಲೆಮರೆಸಿಕೊಂಡಿರುವ ಆರೋಪಿ ಪತ್ತೆಗೆ ಶೋಧ ನಡೆಸುತ್ತಿದ್ದಾರೆ.

ಮೆಟ್ರೋ ಲೇಔಟ್‌ನ ಅಲ್ಲಾ ಭಕ್ಷ್ (56) ಕೊಲೆಯಾದವರು. ಅಲ್ಲಾಭಕ್ಷ್ ಅವರ ಮಗಳನ್ನು ಸಲೀಂ ಪಾಷಾ ಅವರು ಮದುವೆ ಆಗಿದ್ದ. ಆರೋಪಿಯ ತಮ್ಮ ಅಣ್ಣನ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ.

ಜ.8ರಂದು ಸಲೀಂ ಪಾಷಾ ಹೊರಗೆ ಯಾರೊಂದಿಗೋ ಗಲಾಟೆ ಮಾಡಿಕೊಂಡು ಮನೆಗೆ ಬಂದಿದ್ದ. ಮನೆಗೆ ಬಂದ ಮೇಲೂ ಪತ್ನಿಯೊಂದಿಗೆ ಗಲಾಟೆ ಮಾಡುತ್ತಿದ್ದ. ಮಗಳು ಹಾಗೂ ಅಳಿಯನ ಮಧ್ಯೆ ನಡೆಯುತ್ತಿದ್ದ ಗಲಾಟೆಯನ್ನು ಬಿಡಿಸಲು ಅಲ್ಲಾಭಕ್ಷ್ ಮಧ್ಯ ಪ್ರವೇಶಿಸಿದ್ದರು. ಈ ವೇಳೆ ಸಲೀಂ ಪಾಷಾ ಮಾವ ಹಾಗೂ ಪತ್ನಿಗೆ ಚಾಕುವಿನಿಂದ ಇರಿದಿದ್ದ. ಕಿರುಚಾಟ ಗಮನಿಸಿದ್ದ ಪಕ್ಕದ ಮನೆಯ ಅಭಿಜುಲ್ಲಾ ಅವರು ಜಗಳ ಬಿಡಿಸಲು ಬಂದಿದ್ದರು. ಅವರ ಮೇಲೂ ಆರೋಪಿ ದಾಳಿ ನಡೆಸಿ ಚಾಕುವಿನಿಂದ ಇರಿದಿದ್ದ. ಅಲ್ಲಾಭಕ್ಷ್ ಅವರು ಗಂಭೀರವಾಗಿ ಗಾಯಗೊಂಡಿದ್ದರು ಎಂದು ಮೂಲಗಳು ತಿಳಿಸಿವೆ.

ಕೃತ್ಯದ ಬಳಿಕ ಆರೋಪಿ ಪರಾರಿ ಆಗಿದ್ದ. ಗಾಯಾಳುಗಳನ್ನು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಶಸ್ತ್ರಚಿಕಿತ್ಸೆ ಆಗಿದ್ದ ಅಲ್ಲಾಭಕ್ಷ್ ಶುಕ್ರವಾರ ಬೆಳಿಗ್ಗೆ ಮೃತಪಟ್ಟಿದ್ದಾರೆ. ಉಳಿದ ಇಬ್ಬರಿಗೆ ಚಿಕಿತ್ಸೆ ಮುಂದುವರಿದಿದೆ ಎಂದು ಪೊಲೀಸರು ಹೇಳಿದರು.

ಪತ್ನಿ ಸೇರಿ ನಾಲ್ವರ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮ್ಯಾಟ್ರಿಮೊನಿ ಮೂಲಕ ಸಂಗಾತಿ ಆಯ್ಕೆ ಮಾಡಿಕೊಂಡು ಎರಡನೇ ವಿವಾಹವಾಗಿದ್ದ ವೃದ್ಧರೊಬ್ಬರು ಪತ್ನಿಯಿಂದಲೇ ಮೋಸ ಹೋಗಿರುವ ಘಟನೆ ನಡೆದಿದೆ. ಈ ಸಂಬಂಧ ಬಸವೇಶ್ವರ ನಗರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ವಂಚನೆಗೊಳಗಾದ ಗಣಪತಿ ನಗರದ ನಿವಾಸಿ 62 ವರ್ಷದ ರಾಮಕೃಷ್ಣ ಅವರ ದೂರು ಆಧರಿಸಿ ಪತ್ನಿ ವಿಜಯಲಕ್ಷ್ಮೀ ಸೇರಿ ನಾಲ್ವರ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

‘ರಾಮಕೃಷ್ಣ ಅವರ ಪತ್ನಿ ಅನಾರೋಗ್ಯದಿಂದ ನಿಧನರಾಗಿದ್ದರು. ಮ್ಯಾಟ್ರಿಮೊನಿಯಲ್ಲಿ ಪರಿಚಯ ಆಗಿದ್ದ ವಿಜಯಲಕ್ಷ್ಮೀ ಅವರನ್ನು 2020ರಲ್ಲಿ ಮದುವೆಯಾಗಿದ್ದರು’ ಎಂದು ಪೊಲೀಸರು ತಿಳಿಸಿದ್ದಾರೆ.

‘ನನ್ನ ಪಿ.ಎಫ್ ಖಾತೆಯ ಹಣ ಕಬಳಿಸಲು ಪತ್ನಿ ಸಂಚು ರೂಪಿಸಿದ್ದಳು. ಹಣ ನೀಡುವಂತೆ ಕಿರುಕುಳ ನೀಡುತ್ತಿದ್ದಳು. ಆತ್ಮಹತ್ಯೆ ಬೆದರಿಕೆ ಹಾಕಿದ್ದಳು’ ಎಂದು ರಾಮಕೃಷ್ಣ ದೂರಿನಲ್ಲಿ ಆರೋಪಿಸಿದ್ದಾರೆ.

‘ಏಳು ಮದುವೆಯಾಗಿದ್ದ ವಿಜಯಲಕ್ಷ್ಮೀ, ಗೋಪ್ಯತೆ ಕಾಪಾಡಿಕೊಂಡು ಸುಳ್ಳು ಹೇಳಿ ಎಂಟನೇ ಮದುವೆ ಮಾಡಿಕೊಂಡಿದ್ದಳು. ಹಿಂದೆ ವಿವಾಹವಾಗಿದ್ದ ಗಂಡಂದಿರ ಬಳಿ ಚಿನ್ನಾಭರಣ, ನಗದು ದೋಚಿದ್ದಳು. ಹಣ ಕೇಳಿದರೆ ಆತ್ಮಹತ್ಯೆ ಬೆದರಿಕೆ ಹಾಕುತ್ತಿದ್ದಳು. ನನಗೂ ಹೀಗೇ ಬೆದರಿಕೆ ಹಾಕಿದ್ದಳು’ ಎಂದಿದ್ದಾರೆ.

‘ಮಂಡ್ಯ ಹಾಗೂ ಮದ್ದೂರು ನ್ಯಾಯಾಲಯಗಳಲ್ಲಿ ನನ್ನ ವಿರುದ್ಧ ಪತ್ನಿ ಸುಳ್ಳು ಚೆಕ್ ಬೌನ್ಸ್ ಪ್ರಕರಣ ದಾಖಲಿಸಿದ್ದಳು’ ಎಂದು ಅವರು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

‘ಮನೆಯಲ್ಲಿ ಯಾರೂ ಇಲ್ಲದಾಗ ಇತರೆ ಆರೋಪಿಗಳನ್ನು ಕರೆಯಿಸಿಕೊಂಡು ಮದ್ಯಪಾನ ಮಾಡುತ್ತಿದ್ದಳು. ಮನೆಯಲ್ಲಿದ್ದ ₹25 ಲಕ್ಷ ಕಳ್ಳತನ ಮಾಡಿದ್ದಾಳೆ’ ಎಂದು ಅವರು ಆರೋಪಿಸಿದ್ದಾರೆ.

ಬಿಯರ್ ಬಾಟಲಿ ವಿಚಾರಕ್ಕೆ ಗಲಾಟೆ: ಏಳು ಆರೋಪಿಗಳಿಂದ ಕೃತ್ಯ

ಪಾರ್ಟಿ ವೇಳೆ ಸ್ನೇಹಿತನ ಕೊಲೆ: ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಸ ವರ್ಷಾಚರಣೆ ವೇಳೆ ಸ್ನೇಹಿತನ ಮೇಲೆ ಹಲ್ಲೆ ನಡೆಸಿ, ಕೊಲೆ ಮಾಡಿದ್ದ ಏಳು ಆರೋಪಿಗಳನ್ನು ಕೆ.ಪಿ.ಅಗ್ರಹಾರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಆಟೊ ಚಾಲಕ ಕುಶಾಲ್ (24) ಕೊಲೆಯಾದ ವ್ಯಕ್ತಿ. ಹರಿತ ಆಯುಧಗಳಿಂದ ಹಲ್ಲೆ ಮಾಡಿ, ಸಾವಿಗೆ ಕಾರಣರಾಗಿದ್ದ ಆರೋಪದಡಿ ಸಾಗರ್, ದಿಲೀಪ್, ಗಂಗಾಧರ್, ವಿಜಯ್, ಮಾದೇಶ್ ಹಾಗೂ ಕಾನೂನು ಸಂಘರ್ಷಕ್ಕೊಳಗಾದ ಇಬ್ಬರು ಬಾಲಕರನ್ನು ಬಂಧಿಸಲಾಗಿದೆ.

ಡಿಸೆಂಬರ್ 31ರ ರಾತ್ರಿ ಕುಶಾಲ್ ಹಾಗೂ ಆರೋಪಿಗಳು ಭುವನೇಶ್ವರಿ ನಗರದ ಸೇತುವೆ ಬಳಿ ಮದ್ಯ ಸೇವಿಸಿದ್ದರು. ಮದ್ಯದ ಅಮಲಿನಲ್ಲಿದ್ದ ಕುಶಾಲ್, ಆರೋಪಿಗಳ ಕೈಯಲ್ಲಿದ್ದ ಬಿಯರ್ ಬಾಟಲಿ ಕಿತ್ತುಕೊಳ್ಳುವ ಮೂಲಕ ಕಿರಿಕಿರಿಯುಂಟು ಮಾಡುತ್ತಿದ್ದ.

ಇದರಿಂದ ಕೋಪಗೊಂಡ ಆರೋಪಿಗಳು, ಕುಶಾಲ್‌ನ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ ಮಾಡಿ ಪರಾರಿಯಾಗಿದ್ದರು. ರಕ್ತದ ಮಡುವಿನಲ್ಲಿ ಬಿದ್ದಿದ್ದ ಕುಶಾಲ್‌ನನ್ನು ಬಳಿಕ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿತ್ತು ಎಂದು ಪೊಲೀಸರು ತಿಳಿಸಿದರು. ಕುಶಾಲ್ ಚಿಕಿತ್ಸೆಗೆ ಸ್ಪಂದಿಸದೆ ಎಂಟು ದಿನದ ಬಳಿಕ ಮೃತಪಟ್ಟಿದ್ದ.



ಮಾದೇಶ್

ವಿಜಯ್

ಸಾಗರ್

ದಿಲೀಪ್

ಗಂಗಾಧರ್

ತಮ್ಮನ ಕೊಲೆ, ಬಂಧನ

ಬೆಂಗಳೂರು: ಮದ್ಯಪಾನ ಮಾಡಿ ತಾಯಿಗೆ ನಿಂದಿಸುತ್ತಿದ್ದ ತಮ್ಮನನ್ನು ಚೂರಿಯಿಂದ ಇರಿದು ಕೊಲೆ ಮಾಡಿದ ಅಣ್ಣನನ್ನು ಕೆ.ಜಿ. ಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕೆ.ಜಿ. ಹಳ್ಳಿಯ ಅಕ್ಬರ್ (29) ಬಂಧಿತ. ಈತನ ತಮ್ಮ ಅಕ್ರಂ ಬೇಗ್ (28) ಕೊಲೆಯಾದ ವ್ಯಕ್ತಿ. ಹೌಸ್‌ಕೀಪಿಂಗ್ ಕೆಲಸ ಮಾಡುತ್ತಿದ್ದ ಅಕ್ರಂ, ಕೆ.ಜಿ. ಹಳ್ಳಿಯಲ್ಲಿ ತಾಯಿ ಜೊತೆಗೆ ವಾಸಿಸುತ್ತಿದ್ದ. ತಾಯಿ ಅಫ್ರೀನ್(50) ಗೃಹಿಣಿ. ಆರೋಪಿ ಅಕ್ಬರ್ ಆಟೊ ಚಾಲಕನಾಗಿದ್ದ. ಕೊಲೆಯಾದ ಅಕ್ರಂ ಪ್ರತಿನಿತ್ಯ ಮದ್ಯಪಾನ ಮಾಡಿ ಬಂದು ತಾಯಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ ಹಲ್ಲೆ ಮಾಡುತ್ತಿದ್ದ. ಬುಧವಾರ ರಾತ್ರಿಯೂ ತಾಯಿ ಜೊತೆಗೆ ಜಗಳ ಮಾಡುತ್ತಿದ್ದ ವೇಳೆ ಹಿರಿಯ ಪುತ್ರ ಅಕ್ಬರ್ ಮನೆಗೆ ಬಂದಿದ್ದ. ಆಕ್ರೋಶಗೊಂಡು ಅಡುಗೆ ಮನೆಯಲ್ಲಿದ್ದ ಚೂರಿಯಿಂದ ಅಕ್ರಂಗೆ ಇರಿದು ಕೊಲೆ ಮಾಡಿದ್ದ ಎಂದು ಪೊಲೀಸರು ಹೇಳಿದರು.

ಅಪರಾಧ ಸುದ್ದಿ

ಕಾಂಡಿಮೆಂಟ್ಸ್ ಸಿಬ್ಬಂದಿ ಮೇಲೆ ಹಲ್ಲೆ

ಬೆಂಗಳೂರು: ಸಿಗರೇಟ್ ವಿಚಾರವಾಗಿ ಕಾಂಡಿಮೆಂಟ್ಸ್ ಸಿಬ್ಬಂದಿ ಮೇಲೆ ಹಲ್ಲೆ ಮಾಡಿ, ಜೀವ ಬೆದರಿಕೆ ಹಾಕಿದ್ದ ಇಬ್ಬರು ಆರೋಪಿಗಳನ್ನು ಸಂಜಯನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಪೈ ಬಡಾವಣೆ ನಿವಾಸಿ ಗುರು (28) ಹಾಗೂ ಭೂಪಸಂದ್ರದ ವಿಶ್ವಾಸ್ (24) ಅವರನ್ನು ಬಂಧಿತರು. ಕೋರ್ಟ್ ಇವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ. ಗುರು ವೋಲ್ವೊ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರೆ, ಗುರು ಆಟೊ ಓಡಿಸುತ್ತಿದ್ದ.

ಸಂಜಯನಗರದ ಭೂಪಸಂದ್ರದಲ್ಲಿರುವ ಗುರು ರಾಘವೇಂದ್ರ ಕಾಂಡಿಮೆಂಟ್ಸ್ ಬಳಿ ಬುಧವಾರ ಸಂಜೆ ಬಂದಿದ್ದ ಆರೋಪಿಗಳು, ಮೊದಲು ಜ್ಯೂಸ್ ಕೇಳಿದ್ದರು. ನಂತರ ಸಿಗರೇಟ್ ಕೊಡುವಂತೆ ಅವಾಚ್ಯ ಶಬ್ದಗಳಿಂದ ನಿಂದಿಸಿ, ಸಿಬ್ಬಂದಿ ಮೇಲೆ ಹಲ್ಲೆ ನಡೆಸಿ, ಜೀವ ಬೆದರಿಕೆ ಹಾಕಿದ್ದರು. ಹಲ್ಲೆ ನಡೆಸಿದ್ದ ವಿಡಿಯೊ ಜಾಲತಾಣದಲ್ಲಿ ಹರಿದಾಡಿತ್ತು.

ಮಗು ಮೇಲೆ ನಾಯಿ ದಾಳಿ ಗಂಭೀರ ಗಾಯ

ಬೆಂಗಳೂರು: ಇಂದಿರಾನಗರದ ಕದಿರಯ್ಯನ ಪಾಳ್ಯದಲ್ಲಿ ಮನೆ ಮುಂದೆ ಆಟವಾಡುತ್ತಿದ್ದ ರಿಶಾನ್ ಎಂಬ ನಾಲ್ಕು ವರ್ಷದ ಮಗುವಿನ ಮೇಲೆ ನಾಯಿ ದಾಳಿ ನಡೆಸಿ, ಕಚ್ಚಿ ಗಂಭೀರವಾಗಿ ಗಾಯಗೊಳಿಸಿದೆ.

ಮಗುವಿನ ರಕ್ಷಣೆಗೆ ಧಾವಿಸಿದ ತಂದೆಗೂ ಕಚ್ಚಿದೆ. ಗಾಯಗೊಂಡಿರುವ ಇಬ್ಬರಿಗೂ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗಿದ್ದು, ಚೇತರಿಸಿಕೊಳ್ಳುತ್ತಿದ್ದಾರೆ.

ಜನವರಿ 5ರಂದು ಘಟನೆ ನಡೆದಿದ್ದು, ನಾಯಿ ಸಾಕಿಕೊಂಡಿದ್ದ ಮಂಗೇಶ್ವರಿ ಹಾಗೂ ಅವರ ಪುತ್ರ ಸಂಜಯ್ ವಿರುದ್ಧ ಇಂದಿರಾನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕದಿರಯ್ಯನ ಪಾಳ್ಯದಲ್ಲಿ ಕೇರಳದ ರಿಶಾದ್ ದಂಪತಿ, ಪುತ್ರ ರಿಶಾನ್ ವಾಸವಿದ್ದಾರೆ. ಅದೇ ಕಟ್ಟಡದಲ್ಲಿ ವಾಸವಿದ್ದ ಮಂಗೇಶ್ವರಿ ಹಾಗೂ ಅವರ ಪುತ್ರ ಸಂಜಯ್ ನಾಯಿ ಸಾಕಿದ್ದರು. ಜನವರಿ 5ರಂದು ಮನೆ ಬಳಿ ಆಟವಾಡುತ್ತಿದ್ದ ರಿಶಾನ್‌ನನ್ನು ಮೆಟ್ಟಿಲು ಮೇಲೆ ಎಳೆದೊಯ್ದ ನಾಯಿ, ಕಚ್ಚಲಾರಂಭಿಸಿದೆ.

ಮಗನ ಚೀರಾಟ ಕೇಳಿದ ತಂದೆ ರಿಶಾದ್ ಓಡಿ ಹೋಗಿ ನಾಯಿಯ ಬಾಯಿಯಿಂದ ಮಗುವನ್ನು ರಕ್ಷಿಸಿದ್ದಾರೆ. ಈ ವೇಳೆ ರಿಶಾದ್ ಅವರಿಗೂ ಸಹ ಕಚ್ಚಿ ಗಾಯಗೊಳಿಸಿದೆ.

102 ಪಿಎಸ್‌ಐಗಳಿಗೆ ಬಡ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ 102 ಪೊಲೀಸ್ ಸಬ್ ಇನ್‌ಸ್ಪೆಕ್ಟರ್‌ಗಳಿಗೆ ಇನ್‌ಸ್ಪೆಕ್ಟರ್‌ಗಳಾಗಿ ಬಡ್ತಿ ನೀಡಿ ವರ್ಗಾವಣೆ ಮಾಡಲಾಗಿದೆ.

ಅದರ ಜತೆಯಲ್ಲೇ 41 ಇನ್‌ಸ್ಪೆಕ್ಟರ್‌ಗಳು ಹಾಗೂ11 ಡಿವೈಎಸ್‌ಪಿಗಳನ್ನು ವರ್ಗಾವಣೆಗೊಳಿಸಿ ಎಡಿಜಿಪಿ (ಆಡಳಿತ) ಸೌಮೇಂದು ಮುಖರ್ಜಿ ಆದೇಶ ಹೊರಡಿಸಿದ್ದಾರೆ.

ಜನತಾ ಸೇವಾ ಕೋ-ಆಪರೇಟಿವ್ ಬ್ಯಾಂಕ್ ಲಿ.,

ನಂ.24, “ಸುವರ್ಣ ಭವನ”, 1ನೇ ಮುಖ್ಯರಸ್ತೆ, ಹಂಪಿನಗರ, ವಿಜಯನಗರ 2ನೇ ಹಂತ, ಬೆಂಗಳೂರು–560104.
ದೂ. 23300497 41159606 , ಫ್ಯಾಕ್ಸ್ : 23359600 ಇ–ಮೇಲ್ : vjn@jscbl.com

ಟೆಂಡರ್ ಮತ್ತು ಹರಾಜು ಮಾರಾಟ ಸೂಚನೆ

2002ರ ಹಣಕಾಸು ಆಸ್ತಿಗಳ ಭದ್ರತಾ ಮತ್ತು ಪುನರ್ ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯಿದೆಯ ಅಡಿಯಲ್ಲಿ ಹರಾಜು ಮಾರಾಟ ಮುಂದುವರಿದಂತೆ

ಸಾಲಗಾರರಾದ ಮೆ. ನಂದಿ ಲಾಜಿಸ್ಟಿಕ್ಸ್, ಪ್ರತಿನಿಧಿಸುವ ಪಾಲುದಾರರು: (1) ಶ್ರೀಮತಿ. ಕುಸುಮಾ ಆರ್, ಕೋಂ. ಸಿ. ಗಂಗಾಧರ ಮೂರ್ತಿ ಮತ್ತು **(2) ಶ್ರೀ. ಮೋಹನ್ ಕುಮಾರ್ ಜಿ ಎಂ** ಬಿನ್ ಗಂಗಾಧರ ಮೂರ್ತಿ, ನೋಂದಾಯಿತ ಕಚೇರಿ ವಿಳಾಸ : ನಂ.1, 1ನೇ ಕ್ರಾಸ್, ಅಹುಜಾ ಚೇಂಬರ್ಸ್, ನಂ.306, 3ನೇ ಮಹಡಿ, ಕುಮಾರಕೃಪಾ ರಸ್ತೆ, ಬೆಂಗಳೂರು–560001. **ಇವರಿಬ್ಬರ ವಿಳಾಸ :** ನಂ.322, 3ನೇ ಎ ಕ್ರಾಸ್, 2ನೇ ಬ್ಲಾಕ್, 3 ನೇ ಹಂತ, ಬಸವೇಶ್ವರನಗರ, ಬೆಂಗಳೂರು–560079. ಇವರುಗಳು **ಜನತಾ ಸೇವಾ ಕೋ-ಆಪರೇಟಿವ್ ಬ್ಯಾಂಕ್ ಲಿ.,’** ರವರಿಂದ ಪಡೆದ ಸಾಲ ಮರುಪಾವತಿ ಮಾಡುವಲ್ಲಿ ವಿಫಲರಾಗಿರುತ್ತಾರೆ. ಷರತ್ತು ಮತ್ತು ನಿಯಮಗಳ ಒಪ್ಪಂದದ ಅನುಸಾರ ಒಟ್ಟು ಮೊತ್ತ **ಖಾತೆ ಸಂಖ್ಯೆ : ಬಿಎಲ್–107, ರೂ. 4,17,79,111/– (ರೂಪಾಯಿ ನಾಲ್ಕು ಕೋಟಿ ಹದಿನೇಳು ಲಕ್ಷದ ಎಪ್ಪತ್ತೊಂಭತ್ತು ಸಾವಿರದ ಒಂದುನೂರ ಹನ್ನೊಂದು ಮಾತ್ರ)** ದಿನಾಂಕ **09.01.2025** ರಂದು ಇದ್ದಂತೆ ಜೊತೆಗೆ ನಂತರ ಅನ್ವಯವಾಗುವ ದರದಲ್ಲಿ ಬಡ್ಡಿ ಮತ್ತು ಖರ್ಚು ವೆಚ್ಚಗಳು.

ಶ್ರೀ. ಮೋಹನ್ ಕುಮಾರ್ ಜಿ ಎಂ ಬಿನ್ ಗಂಗಾಧರ ಮೂರ್ತಿ.ಸಿ

ಶ್ರೀಮತಿ. ಕುಸುಮಾ ಆರ್ ಕೋಂ ಗಂಗಾಧರ ಮೂರ್ತಿ.ಸಿ

ಸರ್ಫೇಸಿ ಕಾಯ್ದೆ 2002 ರ ಸೆಕ್ಷನ್ 13 (2) ರ ಅಡಿಯಲ್ಲಿ ಮತ್ತು ಕಾಯಿದೆಯ ಸೆಕ್ಷನ್ 13 (4) ರ ಅಡಿಯಲ್ಲಿ ನೀಡಲಾಗಿರುವ ಅಧಿಕಾರಗಳನ್ನು ಅನುಸರಿಸಲು ಮತ್ತು ಚಲಾಯಿಸಲು ಬ್ಯಾಂಕ್ ನೋಟಿಸ್ ನೀಡಿರುತ್ತಾರೆ, ಅಧಿಕೃತ ಅಧಿಕಾರಿ ಅಡಮಾನದ ಆಸ್ತಿಯನ್ನು ಸ್ವಾಧೀನಪಡಿಸಿಕೊಂಡಿದ್ದಾರೆ ಮತ್ತು ಅದರ ವಿವರಗಳನ್ನು ಕೆಳಗೆ ಸಂಪೂರ್ಣವಾಗಿ ವಿವರಿಸಲಾಗಿದೆ, ಮತ್ತು ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು, 2002 ರ ಸಂಬಂಧಿತ ನಿಯಮಗಳೊಂದಿಗೆ ಓದಿದ ಸರ್ಫೇಸಿ ಕಾಯ್ದೆಯ ನಿಬಂಧನೆಗಳ ಅಡಿಯಲ್ಲಿ ಈ ಕೆಳಗಿನ ಆಸ್ತಿಯನ್ನು ಮಾರಾಟ ಮಾಡಲು ಬ್ಯಾಂಕ್ ನಿರ್ಧರಿಸಿದೆ.

ಸ್ವತ್ತಿನ ವಿವರ	ಟೆಂಡರ್ ತೆರೆಯುವ ದಿನಾಂಕ, ಸಮಯ ಮತ್ತು ಹರಾಜಿನ ಸ್ಥಳ	ಮೀಸಲು ಬೆಲೆ
ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಖಾಲಿ ನಿವೇಶನ ಹೊಸ ಮುನಿಸಿಪಲ್ ನಂ.1, (ಹಳೆ ನಂ. 3), ಈ ಆಸ್ತಿಯು 2ನೇ ಮುಖ್ಯರಸ್ತೆ, ಜೆ.ಡಿ.ಹಳ್ಳಿ, 5ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು–560010 ರಲ್ಲಿದ್ದು, ಪಿಐಡಿ ನಂ. 22–91–1, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ : 141 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ : 51 ಅಡಿ, ಮತ್ತು ಚಕ್ಕುಬಂದಿ : ಪೂರ್ವಕ್ಕೆ : ರಸ್ತೆ, ಪಶ್ಚಿಮಕ್ಕೆ : 6 ಅಡಿ ಪ್ಯಾಸೇಜ್, ಉತ್ತರಕ್ಕೆ : 7 ಅಡಿ ಕಾಮನ್ ಪ್ಯಾಸೇಜ್, ದಕ್ಷಿಣಕ್ಕೆ : ಖಾಸಗಿ ಆಸ್ತಿ.	14.02.2025 ಬೆಳಿಗ್ಗೆ 11.30 ಕ್ಕೆ ಹೊಸ ಪುರಸಭೆ ನಂ.1, (ಹಳೆಯ ನಂ.3), 2ನೇ ಮುಖ್ಯ ರಸ್ತೆ, ಜೆ ಡಿ ಹಳ್ಳಿ, 5ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು	ರೂ.6,86,74,000/– (ರೂಪಾಯಿ ಆರು ಕೋಟಿ ಎಂಭತ್ತಾರು ಲಕ್ಷದ ಎಪ್ಪತ್ತನಾಲ್ಕು ಸಾವಿರ ಮಾತ್ರ) ಇಎಂಡಿ : 10% ರಂತೆ ಮೀಸಲು ಬೆಲೆ ರೂ. 68,67,400/– (ರೂಪಾಯಿ ಅರವತ್ತೆಂಟು ಲಕ್ಷದ ಅರವತ್ತೇಳು ಸಾವಿರ ನಾಲ್ಕುನೂರು ಮಾತ್ರ)

ಬಹಿರಂಗ ಹರಾಜಿನ ನಿಯಮ ಮತ್ತು ಷರತ್ತುಗಳು: – (1) ಟೆಂಡರ್ ಫಾರಂಗಳನ್ನು ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ಲಿ., ನಂ.24, “ಸುವರ್ಣ ಭವನ” 1ನೇ ಮುಖ್ಯರಸ್ತೆ, ಹಕ್ಕ ರಸ್ತೆ, ಹಂಪಿನಗರ, ವಿಜಯನಗರ 2ನೇ ಹಂತ, ಬೆಂಗಳೂರು. (ದೂರವಾಣಿ ಸಂಖ್ಯೆ: 080–23300497, 41159606) (2) ಇಚ್ಛಿಸುವ ಬಿಡ್‌ದಾರರು ಅವರ ಬಿಡ್‌ಗಳನ್ನು ನಿಗದಿತ ಟೆಂಡರ್ ಫಾರಂಗಳಲ್ಲಿ ಮೊಹರಾದ ಲಕೋಟೆಯಲ್ಲಿ ಮೀಸಲು ಬೆಲೆಯ ಶೇ.10% ಮೊತ್ತವನ್ನು **ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ಲಿ.,** ಬೆಂಗಳೂರು ಪರವಾಗಿ ಪಡೆದ ಡಿಮ್ಯಾಂಡ್ ಡ್ರಾಫ್ಟ್/ಬ್ಯಾಂಕರ್ಸ್ ಚೆಕ್/ಪೇ ಆರ್ಡರ್‌ಗಳನ್ನು ಈ ಟೆಂಡರ್–ಹರಾಜು ಮಾರಾಟ ಸೂಚನೆ ಪ್ರಕಟವಾದ ದಿನಾಂಕದ ನಂತರ ಪಡೆದಿರಬೇಕು. (3) ಅನಿಗದಿತ ರೂಪದಲ್ಲಿರುವ ಟೆಂಡರ್‌ಗಳನ್ನು ಸ್ವೀಕರಿಸಲಾಗುವುದಿಲ್ಲ, ಇಎಂಡಿಯೊಂದಿಗೆ ಟೆಂಡರ್‌ಗಳನ್ನು **ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ಲಿ.,** ಬೆಂಗಳೂರು, ಇವರಿಗೆ ದಿನಾಂಕ **13.02.2025 ಸಂಜೆ 5.00** ಗಂಟೆಯೊಳಗಾಗಿ ಸಲ್ಲಿಸಬೇಕು. ಇಎಂಡಿ ರಹಿತವಾದ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು. (4) ಆಸ್ತಿಯನ್ನು ಮೀಸಲು ಬೆಲೆಗಿಂತ ಕಡಿಮೆ ಮಾರಾಟ ಮಾಡಲಾಗುವುದಿಲ್ಲ. (5) ಒಂದು ವೇಳೆ ಬಿಡ್ಡರ್‌ಗಳು ಯಶಸ್ವಿಯಾಗದಿದ್ದಲ್ಲಿ ಇಎಂಡಿ ಮೊತ್ತವನ್ನು ಬಡ್ಡಿರಹಿತವಾಗಿ ಹಿಂತಿರುಗಿಸಲಾಗುವುದು. (6) ಯಶಸ್ವಿ ಬಿಡ್‌ದಾರರು ಹರಾಜು ಮಾರಾಟದ ನಿಯಮ ಮತ್ತು ನಿಬಂಧನೆಗಳನ್ನು ಪಾಲಿಸಲು ವಿಫಲರಾದಲ್ಲಿ ಇಎಂಡಿ ಮೊತ್ತವನ್ನು ಯಾವುದೇ ಸೂಚನೆಯನ್ನು ನೀಡದೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. (7) ಮೊಹರಾದ ಟೆಂಡರ್‌ಗಳನ್ನು ಅಧಿಕೃತ ಅಧಿಕಾರಿಯವರು ಹಾಜರಿರುವ ಟೆಂಡರ್‌ದಾರರ ಸಮ್ಮುಖದಲ್ಲಿ ದಿನಾಂಕ **14.02.2025 ರಂದು ಬೆಳಿಗ್ಗೆ 11.30** ಗಂಟೆಗೆ ತೆರೆಯುವರು. (8) ಟೆಂಡರ್‌ಗಳನ್ನು ತೆರೆದ ನಂತರ, ಉದ್ದೇಶಿತ ಬಿಡ್ದಾದರರಿಗೆ ಅಧಿಕೃತ ಅಧಿಕಾರಿಯ ವಿವೇಚನೆಯಿಂದ ಅವಕಾಶ ನೀಡಬಹುದು, ಆಫರ್ ಬೆಲೆಯನ್ನು ಹೆಚ್ಚಿಸಲು ತಮ್ಮ ನಡುವೆ ತೀವ್ರವಾದ ಬಿಡ್ಡಿಂಗ್ ಮಾಡಬಹುದು. (9) ಯಶಸ್ವಿ ಬಿಡ್‌ದಾರರು ಮಾರಾಟದ ಬೆಲೆಯ ಶೇ. 25% (ಇಎಂಡಿ ಹಣವನ್ನು ಸೇರಿ) ಹಣವನ್ನು ತಕ್ಷಣ ಹರಾಜಿನ ದಿನದಂದು ನಗದು ಅಥವಾ ಡಿಮ್ಯಾಂಡ್ ಡ್ರಾಫ್ಟ್ ರೂಪದಲ್ಲಿ ಪಾವತಿಸಬೇಕು ಮತ್ತು ಬಾಕಿ ಉಳಿದ ಮಾರಾಟದ ಮೊತ್ತವನ್ನು ಮಾರಾಟ ದೃಢೀಕರಣಗೊಂಡ 15 ದಿನಗಳ ಒಳಗೆ ಪಾವತಿಸಬೇಕು. ಒಂದು ವೇಳೆ ಯಶಸ್ವಿ ಬಿಡ್‌ದಾರರು ಹಣ ಪಾವತಿಸದಿದ್ದಲ್ಲಿ ಈವರೆಗೆ ಪಾವತಿಸಿರುವ ಎಲ್ಲಾ ಮೊತ್ತವನ್ನು ಯಾವುದೇ ಸೂಚನೆಯನ್ನು ನೀಡದೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಮತ್ತು ಆಸ್ತಿಯನ್ನು ಮರುಮಾರಾಟ ಮಾಡಲಾಗುವುದು. (10) ಯಶಸ್ವಿ ಬಿಡ್ಡರ್ ಅನ್ವಯವಾಗುವಂತೆ ಕಾನೂನು ಬದ್ಧ ವೆಚ್ಚಗಳಾದ ತೆರಿಗೆಗಳು/ಶುಲ್ಕ/ಆಸ್ತಿ ತೆರಿಗೆ/ಬೆಸ್ಕಾಂ ಶುಲ್ಕ/ ನೀರಿನ ಶುಲ್ಕ ವರ್ಗಾವಣೆ ವೆಚ್ಚಗಳಾದ ನೋಂದಣಿ ಮತ್ತು ಮುದ್ರಾಂಕ ಶುಲ್ಕವನ್ನು ಅನ್ವಯವಾಗುವ ಕಾನೂನಿನಂತೆ ಪಾವತಿಸಿದಲ್ಲಿ ಆಸ್ತಿಯನ್ನು ಅವರ ಪರವಾಗಿ ವರ್ಗಾಯಿಸಿ ಕೊಡಲಾಗುವುದು. (11) ಅಧಿಕೃತ ಅಧಿಕಾರಿಯವರು ಯಾವುದೇ ಟೆಂಡರ್‌ನ್ನು ಸ್ವೀಕರಿಸುವ/ತಿರಸ್ಕರಿಸುವ ಅಥವಾ ಹರಾಜು ಮಾರಾಟವನ್ನು ಯಾವುದೇ ಕಾರಣಗಳನ್ನು ನೀಡದೆ ಮುಂದೂಡುವ ಅಥವಾ ರದ್ದುಮಾಡುವ ಅಧಿಕಾರವನ್ನು ಹೊಂದಿರುತ್ತಾರೆ. ಯಾವುದೇ ಸೂಚನೆಯನ್ನು ನೀಡದೆ, ಜಾಹಿರಾತಿನಲ್ಲಿ ನೀಡಿರುವ ನಿಯಮ ಮತ್ತು ನಿಬಂಧನೆಗಳನ್ನು ಬದಲಾಯಿಸುವ ಅಧಿಕಾರವು ಅಧಿಕೃತ ಅಧಿಕಾರಿಯವರ ನಿರ್ಣಯಕ್ಕೆ ಒಳಪಟ್ಟಿದೆ. (12) ಮಾರಾಟವು ಬ್ಯಾಂಕ್ ದೃಢೀಕರಣಕ್ಕೆ ಒಳಪಟ್ಟಿರುತ್ತದೆ. (13) ಈ ಮಾರಾಟವು ಇಚ್ಛಿಸುವ ಬಿಡ್‌ದಾರರು ಆಸ್ತಿಯನ್ನು **ಬೆಳಗ್ಗೆ 10.00 ಘಂಟೆಯಿಂದ ಸಂಜೆ 5.00ರವರೆಗೆ,** ಷೆಡ್ಯೂಲಿನಲ್ಲಿ ತಿಳಿಸಿರುವ ವಿಳಾಸದಲ್ಲಿ ಅವರ ಸ್ವಂತ ಖರ್ಚಿನಲ್ಲಿ ಪರಿಶೀಲಿಸ ಬಹುದಾಗಿದೆ. (14) ಆಸ್ತಿಯನ್ನು **‘ಎಲ್ಲಿ ಹೇಗಿದೆಯೋ ಹಾಗೆ’ ಮತ್ತು ‘ಎಲ್ಲಿ ಏನಿದೆಯೋ ಹಾಗೆ’** ಆಧಾರದ ಮೇಲೆ ಮಾರಾಟಮಾಡಲಾಗುವುದು. ಇಚ್ಛಿಸುವ ಬಿಡ್‌ದಾರರು ಆಸ್ತಿಯ ಮೇಲಿನ ಋಣಭಾರಗಳು (ಎನ್‌ಕಂಬರೆನ್ಸ್) ಟೈಟಲ್ ಮಾಲೀಕತ್ವ ಶಾಸನಬದ್ಧ ಮಂಜೂರಾತಿಗಳು ಮುಂತಾದವುಗಳನ್ನು ಪರಿಶೀಲಿಸಬೇಕು. (15) ಡಿಆರ್‌ಟಿ/ಡಿಆರ್‌ಎಟಿ/ ಹೈಕೋರ್ಟ್ ಅಥವಾ ಯಾವುದೇ ಇತರ ನ್ಯಾಯಾಲಯದ ಮುಂದಿನ ಪ್ರಕ್ರಿಯೆಗಳ ತಡೆ ಸಂದರ್ಭದಲ್ಲಿ, ಹರಾಜನ್ನು ಮುಂದೂಡಬಹುದು ಅಥವಾ ರದ್ದುಗೊಳಿಸಬಹುದು ಮತ್ತು ಮಾರಾಟದಲ್ಲಿ ಭಾಗವಹಿಸುವ ವ್ಯಕ್ತಿಗಳು ಅಂತಹ ಮುಂದೂಡಿಕೆಗಾಗಿ ಹಾನಿ, ಪರಿಹಾರ ಅಥವಾ ವೆಚ್ಚವನ್ನು ಕ್ಲೈಮ್ ಮಾಡುವ ಹಕ್ಕನ್ನು ಹೊಂದಿರುವುದಿಲ್ಲ. (16) (ಸಾಲಗಾರರು / ಜಾಮೀನುದಾರರು / ಅಡಮಾನದಾರರು) ಅವರ ಬಾಕಿ ಮೊತ್ತವನ್ನು ಪೂರ್ಣವಾಗಿ ಮರುಪಾವತಿ ಮಾಡದಿದ್ದರೆ, ಕಾಯಿದೆಯ ಪ್ರಕಾರ ಅನ್ವಯವಾಗುವ ಇತರ ನಿಯಮಗಳು ಮತ್ತು ಷರತ್ತುಗಳನ್ನು ಮೇಲೆ ತಿಳಿಸಿದ ದಿನಾಂಕದಂದು ಹರಾಜು ಮಾರಾಟವನ್ನು ಹಿಡಿದಿಟ್ಟುಕೊಳ್ಳುವ ಬಗ್ಗೆ ಇದು ಸೂಚನೆಯಾಗಿದೆ.

ಹೆಚ್ಚಿನ ವಿವರಗಳಿಗಾಗಿ ಉದ್ದೇಶಿತ ಬಿಡ್ದುದಾರರು ಅಧಿಕೃತ ಅಧಿಕಾರಿ, ಜನತಾ ಸೇವಾ ಕೋ–ಆಪರೇಟೀವ್ ಬ್ಯಾಂಕ್ ಲಿ., ನಂ.24, “ಸುವರ್ಣ ಭವನ” 1ನೇ ಮುಖ್ಯರಸ್ತೆ, ಹಕ್ಕ ರಸ್ತೆ, ಹಂಪಿನಗರ, ವಿಜಯನಗರ 2ನೇ ಹಂತ, ಬೆಂಗಳೂರು. (ದೂ. 080–23300497, 41159606, 9945052783, 9845022879)
ಇ–ಮೇಲ್: vjn@jscbl.com.
ಆಸ್ತಿಯ ವಿವರಗಳನ್ನು ಖಚಿತಪಡಿಸಿಕೊಳ್ಳಲು ಮತ್ತು ಆಸ್ತಿಯ ಪರಿಶೀಲನೆಗಾಗಿ ಸಂಪರ್ಕ ಸಂಖ್ಯೆ: (080–23300497, 41159606), ಅಥವಾ ಶ್ರೀ. ನಿರಂಜನ್ ಕುಮಾರ್ ಟಿ, ಮೊಬೈಲ್: 9632383697 (ಮೆ. ಸನ್ ಡೆಟ್ ಮ್ಯಾನೇಜ್ಮೆಂಟ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್).

ದಿನಾಂಕ : 10.01.2025
ಸ್ಥಳ : ಬೆಂಗಳೂರು

ಸಹಿ/– ಅಧಿಕೃತ ಅಧಿಕಾರಿ
ಜನತಾ ಸೇವಾ ಕೋ–ಆಪರೇಟೀವ್ ಬ್ಯಾಂಕ್ ಲಿ.,

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE BUYING

Industrial & Factory

Hosur Road

TO BUY Industrial Lands 2 -10 acres/ Attibele/Chanadapura/Anekal, Hosur/Jigan/Sarjapur Road. 9900570439 Blumefield Industrial Realty and Projects Pvt Ltd

Joint Development

General

CONTACT US for Sale/ Joint Venture of Land with clear titles only in Bangalore. Direct sellers/ Developers contact: Vivek, Vignesh Jewel Empire- 9845950996

Sites

Banashankari

BDA SITES WANTED ARKAVATHY ANJANAPURA BANASHANKRI 6TH STAGE VISHWESHWARAIA KEMPEGOWDA ANY BDA LAYOUT: 9845062822/ 8660751654

WANTED SITE 50x80 Banashankari 6th Stage, Visweshawaraiah Layout, Any Facing, Broker Excuse, Owners Contant: 8105688602.

Kanakapura Road

WANTED SITE 30x40 40x60 Anjanapura BDA, Banashankari 6th Stage, Narayan`Nagar BCCHS Layout, Gubblala, Agent Excuse. Call: 9008259222.

Multiple Locations

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

Vishweshwariah Layout

"VISHVESHWARAIAH LAYOUT WANTED 20x30, 30x40,40x60, 50x80 BDA Sites for Immediate Settlement. Contact "Krishna' 9886294610"

DH Classifieds More value, more impact
ಪ್ರಜಾವಾಣಿ
RECRUITMENT
BOOK YOUR JOB ADS IN DH ALL KARNATAKA + PRAJAVANI BENGALURU CITY ON WEDNESDAY + SUNDAY
@ 2481/-* FOR 15 WORDS
www.dhclassifieds.com
BOOK NOW
*Conditions apply
For more details contact:
+91 9901641752 | +91 9845114560
+91 9900428036 | +91 9731810277
+91 9886213331 | 080- 45557163/164

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Commercial

COMMERCIAL PROPERTY 700sqft Ground Floor,300Sqft First Floor For Rent Sarjapur Road Near Wipro: 9844002912

8000 SQFT land available for rent in prime location in J.P.Nagar 7th phase opp Narayana college. Ph: 98459509996

Industrial And Factory

AVAILABLE OF Industrial Shed of 95000`sqft at Soukya Road, Whitefield. Available Built-to-Suit Warehouse 160000 sqft.`Vijipura Hoskote Contact: 9341234288/ 9663224353/ 9845417487.

TOURS & TRAVEL

Travel

VISIT BHUTAN, the most Wonderful Country with Expert Guide and Best Arrangements. GANESH SHENOY 8310028157

JOB OPPORTUNITIES

Situation Required

REQUIRED URGENTLY
A reputed Industrial Construction company working all over India required staff for following positions for their sites at various locations at Kerala, Tamilnadu, Karnataka.
Project Manager DCE / BE Civil above 12 years' experience in relevant field
SR/JR/Billing/ QA/QC/Planning Engineers DCE / BE Civil 3 to 7 years' experience in relevant field.
Sr. Supervisor/ Surveyors DCE / ITI 3 to 5years' experience in relevant field.
Industrial Safety Officer Graduation / DFS / ADIS with 3 to 5 years'experience in relevant field.
Accountant/ Stores/HR/Admin Graduates 3 to 5 years' experience in relevant field.
RAY CONSTRUCTIONS LIMITED Ray Compound, Plot No.2, Block No.2, Opp. IIT Market Post Powai, Mumbai - 400076
Tel: 9821624344 | 9920984950
beena@rayindia.co

Multiple Vacancy

REQUIRED TEACHERS Centre Head House keeping Security for upcoming Preschool JPNagar Phase2 Please Contact: 9341273990

EDUCATIONAL

Admission

ADMISSION OPEN D.Pharma LLB BNYS Ph.D BBA MBA AMIIE/ B.Tech TMIIE/ Diploma 10th 12th: 9341273990

AUTOMOTIVE

Four Wheelers Selling

Maruti

ALTO K10 Mangalore Doctor owner 2019 15000 kilometres White petrol automatic well maintained Maruti service center 7994147122

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

BUSINESS

Business to Business

Business

WANTED EXPERIENCED in Dry Cleaners as Business Partner for HSR Layout Contact: 90001 82908

PERSONAL

Change of Name

I, ASHWINI GURUNATH DESAI W/o.Gurunath Desai R/a Flat#.C1308 Segment 1, Brigade Omega, 1st Block BSK 6th Stage Subramanyapura Post Bengaluru 560061 have changed my Name to ASHWINI DESAI vide`affidavit dated:09.1.2025 before`Notary B.GopalaKrishna Bengaluru

I, ARCHANA JOLLY, residing at Bengaluru-35 have changed my name as ARADHANA JOLLY, vide affidavit dated 10/01/2025 before Notary K.S. Bammappanavar, Bangalore

I, SATHYABHAMA W/o Shreedhara Hemmadi, aged about 72 years, resident at #43, Anantha Nilaya, Terubeedi, Haliyuru, Shikaripura, Shivamogga District 577427. Have changed my name to Sathyabhama Shreedhara Hemmadi vide affidavit dated 09.01.2025 before Notary G.S Shivaprakash Rao Chintamani. Henceforth I shall be called as Sathyabhama Shreedhara Hemmadi only.

I, BHAVANI PULAGAM Residing at 401, Devikrupa Apartments, 4th Main, 6th Cross, Vallabhanagar, Uttarahalli, Bengaluru-560061 have changed my name to BHAVANI VENKATESH vide affidavit dated 02/01/2025 before notary Aravind Patil G.G, Bengaluru.

MORE Classifieds Ads on Subsequent Pages

‘ಅಮಿತ್ ಶಾ ಹೇಳಿಕೆ ಸಮರ್ಥಿಸಲ್ಲ’

ಪ್ರಜಾವಾಣಿ ವಾರ್ತೆ

ವಿಜಯಪುರ: ‘ರಾಜ್ಯಸಭೆಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಬಿ.ಆರ್. ಅಂಬೇಡ್ಕರ್ ಕುರಿತು ಮಾತನಾಡಿದ ಆ 11 ಸೆಕೆಂಡ್‌ಗಳ ಹೇಳಿಕೆಯನ್ನು ನಾನು ಸಮರ್ಥಿಸಿಕೊಳ್ಳಲ್ಲ’ ಎಂದು ಮಾಜಿ ಸಚಿವ ಎನ್.ಮಹೇಶ್ ಹೇಳಿದರು.

ಅವರ ಪಕ್ಕದಲ್ಲೇ ಇದ್ದ ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ತಕ್ಷಣವೇ ಪ್ರತಿಕ್ರಿಯಿಸಿ, ‘ಅಮಿತ್ ಶಾ ಅವರು ಅಂಬೇಡ್ಕರ್‌ರಿಗೆ ಎಲ್ಲಿಯೂ ಅಪಮಾನಿಸಿಲ್ಲ. ಕಾಂಗ್ರೆಸ್ ಮಾಡಿರುವ ಅವಮಾನವನ್ನು ಬಿಚ್ಚಿಡುವ ಕೆಲಸ ಶಾ ಮಾಡಿದ್ದಾರೆ. ಅವರ ಒಂದೂವರೆ ಗಂಟೆ ಭಾಷಣದಲ್ಲಿ ಆ ಒಂದು ಮಾತನ್ನು ಪ್ರತ್ಯೇಕವಾಗಿ ನೋಡುವುದು ಸರಿಯಲ್ಲ’ ಎಂದರು.

ಬಳಿಕ ಮಾತು ಮುಂದುವರಿಸಿದ ಎನ್.ಮಹೇಶ್, ‘ಅಂಬೇಡ್ಕರ್ ಅವರಿಗೆ ಕಾಂಗ್ರೆಸ್ ಮಾಡಿದ ಅನ್ಯಾಯವನ್ನು ರಾಜ್ಯಸಭೆಯಲ್ಲಿ ಎಳೆಎಳೆಯಾಗಿ ಹೇಳುವ ಭರದಲ್ಲಿ ಸಹಜವಾಗಿ ಮಾತನಾಡಿದ್ದಾರೆ. ಮಾತಿನ ವೇಗದಲ್ಲಿ ಅಂಬೇಡ್ಕರ್ ಬಗ್ಗೆ ಹೇಳಿಕೆ ನೀಡಿದ್ದಾರೆಯೇ ಹೊರತು, ಉದ್ದೇಶ ಪೂರ್ವಕವಾಗಿಯಲ್ಲ. ಅಂದು 1 ಗಂಟೆ 34 ನಿಮಿಷ ಅಮಿತ್ ಶಾ ಮಾತನಾಡಿದ್ದಾರೆ. ಶಾ ಅವರ ಮಾತನ್ನು ಸಮಗ್ರವಾಗಿ ನೋಡಬೇಕೇ ಹೊರತು, ಪ್ರತ್ಯೇಕವಾಗಿ ಅಲ್ಲ’ ಎಂದರು.

ರಾಜ್ಯ ಸರ್ಕಾರದ ವಿರುದ್ಧ ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ ವಾಗ್ದಾಳಿ

‘ಭತ್ತ ಖರೀದಿಗೂ ಗೋಣಿ ಚೀಲವಿಲ್ಲ’

ಪ್ರಜಾವಾಣಿ ವಾರ್ತೆ

ಮಂಡ್ಯ: ‘ಜನರು ಬೀದಿಗಿಳಿದು ಪ್ರತಿಭಟಿಸುವ ಮುನ್ನ ಭತ್ತ ಖರೀದಿ ಕೇಂದ್ರ ತೆರೆಯಿರಿ ಎಂದು ಜಿಲ್ಲಾಧಿಕಾರಿಗೆ ಕಳೆದ ವಾರವೇ ಹೇಳಿದ್ದೆ. ಪಾಪ ಇನ್ನೂ ಗೋಣಿಚೀಲ ಖರೀದಿಸುತ್ತಿದ್ದಾರೆ ಅನಿಸುತ್ತದೆ. ಸರ್ಕಾರದ ಬಳಿ ಗೋಣಿ ಚೀಲವಿಲ್ಲ. ಸಚಿವ ಎನ್.ಚಲುವರಾಯಸ್ವಾಮಿ ನನಗೆ ಅಭಿನಂದಿಸುವ ಬದಲು ಆ ಕೆಲಸ ಮೊದಲು ಮಾಡಲಿ’ ಎಂದು ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ ಹೇಳಿದರು.

ಮದ್ದೂರು ತಾಲ್ಲೂಕಿನ ಚಾಕನಕೆರೆಯಲ್ಲಿ ಶನಿವಾರ ಬಾಗಿನ ಸಲ್ಲಿಸಿದ ನಂತರ ಮಾಧ್ಯಮದವರೊಂದಿಗೆ ಮಾತನಾಡಿ, ‘ಸಚಿವ ಪರಮೇಶ್ವರ ಮನೆಯ ಔತಣಕೂಟದಲ್ಲಿ ಎಸ್‌ಸಿ, ಎಸ್‌ಟಿ ವಿದ್ಯಾರ್ಥಿಗಳ ಸ್ಕಾಲರ್‌ಶಿಪ್ ಬಗ್ಗೆ ಮಾತಾಡುತ್ತೇವೆ ಎಂದಿದ್ದಾರೆ. ಹಾಗಾದರೆ ಕ್ಯಾಬಿನೆಟ್ ಇರೋದು ಏಕೆ? ವಾಲ್ಮೀಕಿ ನಿಗಮದಲ್ಲಿ ಹೊಡೆದಿರೋ ದುಡ್ಡು ಬಂದಿಲ್ಲ ಅಂತ ಚರ್ಚೆ ಮಾಡ್ತಾರಾ? ಭೋವಿ ನಿಗಮದ ದುಡ್ಡಿನ ಪಾಲು ಬಂದಿಲ್ಲ ಎಂದು ಚರ್ಚಿಸ್ತಾರಾ? ಅಹಿಂದ ಮಹಾನ್ ನಾಯಕರು ಅಲ್ವಾ ಇವರು’ ಎಂದು ಅವರು ಟೀಕಿಸಿದರು.

ಮದ್ದೂರು ತಾಲ್ಲೂಕು ಚಾಕನಕೆರೆಗೆ ಬಾಗಿನ ಸಲ್ಲಿಸುವ ಮುನ್ನ ಗ್ರಾಮಸ್ಥರು ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ ಅವರನ್ನು ಶನಿವಾರ ರಥದ ಮೆರವಣಿಗೆಯಲ್ಲಿ ಕರೆ ತಂದರು. ಮಾಜಿ ಶಾಸಕರಾದ ಸುರೇಶ್‌ಗೌಡ, ಡಿ.ಸಿ.ತಮ್ಮಣ್ಣ, ಕೆ.ಅನ್ನದಾನಿ ಜೊತೆಯಲ್ಲಿದ್ದರು

ಶಾಶ್ವತ ಕಾರು ಕೊಡಿ: ಎಚ್‌ಡಿಕೆ

‘ಮಾಜಿ ಸಂಸದೆ ಸುಮಲತಾ ಅವರು ಬಳಸುತ್ತಿದ್ದ ಕಾರು ಹತ್ತಲ್ಲ ಎಂದು ನಾನು ಹೇಳಿಲ್ಲ. ಸಚಿವ ಚಲುವರಾಯಸ್ವಾಮಿಗೆ ಆ ವಿಚಾರ ಹೇಗೆ ಹೋಗಿದೆ ಗೊತ್ತಿಲ್ಲ. ಅದು ಸರ್ಕಾರಿ ಕಾರು, ಅದೇನು ನಮ್ಮಪ್ಪನ ಆಸ್ತಿನಾ? ನಾನು ಸಿಎಂ ಆಗಿದ್ದಾಗ ಸರ್ಕಾರಿ ಕಾರು, ಚಾಲಕ ಮತ್ತು ಸಂಬಳ ತೆಗೆದುಕೊಂಡಿಲ್ಲ. ಇದನ್ನು ಚಿಲ್ಲರೆ ರೀತಿ ರಾಜಕೀಯವಾಗಿ ಬೆಳೆಸುವ ಅಗತ್ಯವಿಲ್ಲ’ ಎಂದು ಎಚ್‌.ಡಿ.ಕುಮಾರಸ್ವಾಮಿ ಹೇಳಿದರು.

‘ನಾನು ಅಧಿಕಾರದಲ್ಲಿರುವವರೆಗೆ ಒಂದು ಶಾಶ್ವತ ಕಾರು ಕೊಡಿ ಅಂತ ಕೇಳಿರೋದು. ಇಂತಹ ಸಣ್ಣ ವಿಚಾರವನ್ನು ಚರ್ಚಿಸುವ ಸಂಸ್ಕೃತಿಯನ್ನು ಚಲುವರಾಯಸ್ವಾಮಿ ಬಿಡುವುದು ಒಳ್ಳೆಯದು’ ಎಂದರು.

ಶಂಕುಸ್ಥಾಪನೆ ಕಲ್ಲು: ‘ಕೇಂದ್ರ ಸರ್ಕಾರದ ಕಾರ್ಯಕ್ರಮಕ್ಕೆ ಚಲುವರಾಯಸ್ವಾಮಿ ಭೂಮಿಪೂಜೆ ಮಾಡಿದ್ದಾರೆ. ಇದರಲ್ಲಿ ನಾನು ರಾಜಕೀಯ ಮಾಡಲ್ಲ. ನಾನು ಮುಖ್ಯಮಂತ್ರಿ ಆಗಿದ್ದಾಗ ಕೊಟ್ಟ ಕಾರ್ಯಕ್ರಮಗಳು ಹಲವಿವೆ. ಕಲ್ಲನ್ನು ಶಂಕುಸ್ಥಾಪನೆ ಮಾಡೋದಾಗಿದ್ರೆ ರಾಜ್ಯದಾದ್ಯಂತ ನನ್ನ ಶಂಕುಸ್ಥಾಪನೆ ಕಲ್ಲುಗಳು ಇರುತ್ತಿದ್ದವು’ ಎಂದು ಹೇಳಿದರು.

‘ನಾನು ಹಲವು ಕೆರೆಗಳನ್ನು ತುಂಬಿಸಿದ್ದರೂ ಪ್ರಚಾರ ಪಡೆದಿಲ್ಲ. ನಿನ್ನೆ ಕೆರೆ ತುಂಬಿಸಿದ್ದೇವೆ ಎಂದು ಸಚಿವರು ಕುರಿ ಊಟ ಹಾಕಿಸಿದ್ದಾರೆ. ನಮ್ಮ ಕರ್ತವ್ಯ ಜನರ ಬದುಕು ಹಸನುಗೊಳಿಸುವುದೇ ಹೊರತು ಪ್ರಚಾರವಲ್ಲ. ರೈತರ ಸಾಲ ಮನ್ನಾ ಯೋಜನೆಯಲ್ಲಿ ₹190 ಕೋಟಿ ಬಾಕಿ ಇದೆ. ಜಿಲ್ಲೆಯ ರೈತರಿಗೆ ಹಣ ಬಂದಿಲ್ಲ. ಹಣ ಕೊಟ್ಟು ಪುಣ್ಯ ಕಟ್ಟಿಕೋ ಎಂದು ಚಲುವರಾಯಸ್ವಾಮಿಗೆ ಹೇಳ್ತೀನಿ’ ಎಂದರು.

ಸಚಿವ ಪ್ರಿಯಾಂಕ್ ಖರ್ಗೆ ಆಪ್ತ ಸೇರಿ ಐವರ ಬಂಧನ

ಪ್ರಜಾವಾಣಿ ವಾರ್ತೆ

ಬೀದರ್: ಯುವ ಗುತ್ತಿಗೆದಾರ ಸಚಿನ್ ಪಾಂಚಾಳ್ ಆತ್ಮಹತ್ಯೆ ಪ್ರಕರಣ ಸಂಬಂಧ ಸಿಐಡಿ ಅಧಿಕಾರಿಗಳು ಸಚಿವ ಪ್ರಿಯಾಂಕ್ ಖರ್ಗೆ ಆಪ್ತ, ಕಲಬುರಗಿಯ ಮಾಜಿ ಕಾರ್ಪೊರೇಟರ್ ರಾಜು ಕಪನೂರ ಸೇರಿದಂತೆ ಐವರನ್ನು ಶುಕ್ರವಾರ ಸಂಜೆ ಬಂಧಿಸಿದರು.

ಬಳಿಕ ಇಲ್ಲಿನ ಜೆಎಂಎಫ್‌ಸಿ ನ್ಯಾಯಾಲಯಕ್ಕೆ ಶುಕ್ರವಾರ ರಾತ್ರಿ ಹಾಜರು ಪಡಿಸಿದರು. ಆರೋಪಿಗಳನ್ನು ಐದು ದಿನ ಸಿಐಡಿ ಕಸ್ಟಡಿಗೆ ನೀಡಲು ಆದೇಶಿಸಲಾಗಿದೆ. ಹೆಚ್ಚುವರಿ ಜೆಎಂಎಫ್‌ಸಿ ನ್ಯಾಯಾಲಯದ ನ್ಯಾಯಾಧೀಶ ರಾಮಮೂರ್ತಿ ಅವರು ಆರೋಪಿಗಳ ಪರ ವಕೀಲರು ಹಾಗೂ ಸಿಐಡಿ ವಕೀಲರ ವಾದ–ಪ್ರತಿವಾದ ಆಲಿಸಿದ ಬಳಿಕ ಸಿಐಡಿ ಕಸ್ಟಡಿಗೆ ವಹಿಸಿ ಆದೇಶಿಸಿದರು.

ಸಿಐಡಿ ಅಧಿಕಾರಿಗಳು ರಾಜು ಕಪನೂರ, ಜಿಲ್ಲಾ ಪಂಚಾಯಿತಿ ಮಾಜಿ ಉಪಾಧ್ಯಕ್ಷ ಗೋರಖನಾಥ ಸಜ್ಜನ್, ಬ್ಲಾಕ್ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ನಂದಕುಮಾರ ನಾಗಭುಜಂಗೆ, ಕಲಬುರಗಿಯ ಪ್ರಥಮ ದರ್ಜೆ ಗುತ್ತಿಗೆದಾರ ರಾಮನಗೌಡ ಪಾಟೀಲ ಹಾಗೂ ಸತೀಶ ರತ್ನಾಕರ ದುಬಲಗುಂಡಿ ಅವರನ್ನು ತಮ್ಮ ಕಸ್ಟಡಿಗೆ ತೆಗೆದುಕೊಂಡರು.

ರಾಜು ಕಪನೂರ್

ಇದಕ್ಕೂ ಮುನ್ನ ನಗರದ ಬೀದರ್ ರೈಲ್ವೆ ಪೊಲೀಸ್ ಠಾಣೆಯಲ್ಲಿ ಸಿಐಡಿ ಡಿಐಜಿಪಿ ಶಾಂತನು ಸಿನ್ಹಾ ಎದುರು ಆರೋಪಿಗಳು ವಿಚಾರಣೆಗೆ ಹಾಜರಾದರು. ಎಲ್ಲರ ಹೇಳಿಕೆ ದಾಖಲಿಸಿದ ನಂತರ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ನ್ಯಾಯಾಲಯಕ್ಕೆ ಕರೆದುಕೊಂಡು ಹೋಗಿದ್ದರು.

ಘಟನೆ ನಡೆದ 17 ದಿನಗಳ ನಂತರ ಐವರು ಆರೋಪಿಗಳನ್ನು ಮೊದಲ ಬಾರಿಗೆ ವಿಚಾರಣೆಗೆ ಒಳಪಡಿಸಿ, ವಶಕ್ಕೆ ಪಡೆಯಲಾಗಿದೆ. ಕೊಲೆ ಬೆದರಿಕೆ ಇದೆ ಎಂದು ಆರೋಪಿಸಿ ಡೆತ್‌ನೋಟ್ ಬರೆದಿಟ್ಟು ಸಚಿನ್ ಪಾಂಚಾಳ್ ಡಿ. 26 ರಂದು ಆತ್ಮಹತ್ಯೆ ಮಾಡಿಕೊಂಡಿದ್ದರು. ಒಂಬತ್ತು ಜನರ ವಿರುದ್ಧ ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಇಬ್ಬರು ಪತ್ರಕರ್ತರು ಸೇರಿ ಮೂವರ ಬಂಧನ

ಪ್ರಜಾವಾಣಿ ವಾರ್ತೆ

ಮೈಸೂರು: ಪೊಲೀಸರೊಂದಿಗೆ ಬಂದಿರುವುದಾಗಿ ಹೇಳಿಕೊಂಡು ಮಹಿಳೆಯೊಬ್ಬರ ಮನೆಗೆ ಅಕ್ರಮವಾಗಿ ಪ್ರವೇಶಿಸಿ, ವೇಶ್ಯಾವಾಟಿಕೆಯ ಆರೋಪ ಮಾಡಿ, ಬೆದರಿಸಿ ಚಿನ್ನದ ಓಲೆ ಪಡೆದ ಆರೋಪದ ಮೇರೆಗೆ ಇಬ್ಬರು ಪತ್ರಕರ್ತರು ಸೇರಿ ಮೂವರನ್ನು ಹೆಬ್ಬಾಳ ಠಾಣೆಯ ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ರವಿಚಂದ್ರ ಹಂಚ್ಯಾ, ಪತ್ರಕರ್ತ ಮಂಜುನಾಥ್, ಪೊಲೀಸ್ ಎಂದು ಹೇಳಿಕೊಂಡಿದ್ದರೆನ್ನಲಾದ ಕೆ.ಎಚ್. ಹನುಮಂತರಾಜ್ ಬಂಧಿತರು. ತಲೆ ಮರೆಸಿಕೊಂಡಿರುವ ಮತ್ತೊಬ್ಬ ಆರೋಪಿ ಪತ್ರಕರ್ತ ಸೂರ್ಯವರ್ಧನ್, ಯೋಗೇಶ್ ಹಾಗೂ ದೊರೆಸ್ವಾಮಿ ಅವರಿಗಾಗಿ ಪತ್ತೆ ಕಾರ್ಯ ನಡೆದಿದೆ.

ಹಿನ್ನೆಲೆ: ‘ಡಿ.28ರಂದು ಸಂಜೆ ಆರೋಪಿಗಳು ನಮ್ಮ ಮನೆಗೆ ನುಗ್ಗಿ, ನಾವು ಮೀಡಿಯಾದವರು ಪೊಲೀಸರೊಂದಿಗೆ ಬಂದಿದ್ದೇವೆ. ನೀವು ಮನೆಯಲ್ಲಿ ವೇಶ್ಯಾವಾಟಿಕೆ ನಡೆಸುತ್ತಿದ್ದೀರಿ, ನಿಮ್ಮ ವಿರುದ್ಧ ಕೇಸ್ ಹಾಕಿಸುತ್ತೇವೆ ಎಂದು ಬೆದರಿಸಿದರು’ ಎಂದು ಹೆಬ್ಬಾಳ ಮೊದಲನೇ ಹಂತದ ನಿವಾಸಿ ಮಹಿಳೆ ಗುರುವಾರ ರಾತ್ರಿ ಠಾಣೆಗೆ ದೂರು ನೀಡಿದ್ದರು.

‘ನಾನು ವೇಶ್ಯಾವಾಟಿಕೆ ನಡೆಸುತ್ತಿಲ್ಲ ಎಂದರೂ ಒಪ್ಪದ ಅವರು, ಈ ವಿಷಯವನ್ನು ಯಾರಿಗೂ ಹೇಳಬಾರದೆಂದರೆ ₹1 ಲಕ್ಷ ಕೊಡಬೇಕು ಎಂದು ಬೆದರಿಸಿದರು. ಅಷ್ಟು ಹಣವಿಲ್ಲವೆಂದಾಗ ಚಿನ್ನದ ಕಿವಿಯೋಲೆಯನ್ನು ಬಿಚ್ಚಿಸಿ ಬೇಗ ಹಣ ನೀಡುವಂತೆ ತಿಳಿಸಿ ತೆರಳಿದ್ದರು. ಘಟನೆಯ ಬಳಿಕ ದೂರು ನೀಡಿದ್ದು, ಸಮಸ್ಯೆಯಾಗಬಹುದೆಂಬ ಆತಂಕದಿಂದ ಕಿವಿಯೋಲೆ ನೀಡಿರುವ ವಿಚಾರವನ್ನು ತಿಳಿಸಿರಲಿಲ್ಲ. ಅವರನ್ನು ಕರೆದು ಎಚ್ಚರಿಕೆ ನೀಡುವಂತೆ ಮನವಿ ಮಾಡಿದ್ದೆ. ನಂತರ ಆರೋಪಿಗಳು ಓಲೆ ವಾಪಸ್ ಕೊಟ್ಟು, ₹1 ಲಕ್ಷ ಕೊಡುವಂತೆ ಬೆದರಿಸಿದ್ದರು’ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

‘ಮಹಿಳೆಯ ದೂರನ್ನು ಗಂಭೀರವಾಗಿ ಪರಿಗಣಿಸಿದ್ದು, ಉಳಿದ ಆರೋಪಿಗಳನ್ನು ಶೀಘ್ರ ಬಂಧಿಸಲಾಗುವುದು’ ಎಂದು ಪೊಲೀಸರು ತಿಳಿಸಿದ್ದಾರೆ.

‘ಒದ್ದು ಕಿತ್ತುಕೊಳ್ಳಲು ಡಿಕೆಶಿ ತಯಾರಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಸ್ಥಾನವನ್ನು ಒದ್ದು ಕಿತ್ತುಕೊಳ್ಳುವ ಪ್ರಕ್ರಿಯೆಯಲ್ಲಿ ಡಿ.ಕೆ.ಶಿವಕುಮಾರ್ ನಿರತರಾಗಿದ್ದಾರೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ಕಾಂಗ್ರೆಸ್‌ನ ಔತಣಕೂಟ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಶಿವಕುಮಾರ್ ದಾಳಕ್ಕೆ ಸಿದ್ದರಾಮಯ್ಯ ಪ್ರತಿ ದಾಳ ಉರುಳಿಸಿ, ಡಿನ್ನರ್ ಪಾಲಿಟಿಕ್ಸ್‌ಗೆ ಚಾಲನೆ ನೀಡಿದ್ದಾರೆ. ಸದ್ಯವೇ ಸಿದ್ದರಾಮಯ್ಯ ಅವರ ಅಧಿಕಾರ ಅವಧಿ ಮುಗಿಯಲಿದೆ ಎಂದರು.

ಅಧಿವೇಶನದಲ್ಲಿ ಶಿವಕುಮಾರ್ ಮಾತನಾಡುವಾಗ ಒದ್ದು ಅಧಿಕಾರ ಕಿತ್ತುಕೊಳ್ಳುವ ವಿಚಾರ ಪ್ರಸ್ತಾಪಿಸಿದ್ದರು. ಅವರ ಗುರುಗಳು ಆ ರೀತಿ ಸಲಹೆ ನೀಡಿದ್ದರಂತೆ. ಆ ಪ್ರಕಾರ ಅವರು, ಈಗ ಒದ್ದು ಕಿತ್ತುಕೊಳ್ಳುವುದಕ್ಕೆ ತಯಾರಿ ನಡೆಸಿದ್ದಾರೆ. ಆಡಳಿತ ಪಕ್ಷದ ಜಗಳ ಬೀದಿಗೆ ಬಂದಿದೆ ಎಂದು ಅವರು ಹೇಳಿದರು.

ಪಾರ್ತಿಸುಬ್ಬ ಪ್ರಶಸ್ತಿಗೆ ಮಾಂಬಾಡಿ ಸುಬ್ರಹ್ಮಣ್ಯ ಭಟ್ ಆಯ್ಕೆ

ಕರ್ನಾಟಕ ಯಕ್ಷಗಾನ ಅಕಾಡೆಮಿಯ ಪ್ರಶಸ್ತಿ ಪ್ರಕಟ

ಪ್ರಜಾವಾಣಿ ವಾರ್ತೆ

ಉಡುಪಿ: ಕರ್ನಾಟಕ ಯಕ್ಷಗಾನ ಅಕಾಡೆಮಿಯ 2024ನೇ ಸಾಲಿನ ಪ್ರಶಸ್ತಿ ಪ್ರಕಟವಾಗಿದ್ದು, ಪಾರ್ತಿಸುಬ್ಬ ಪ್ರಶಸ್ತಿಗೆ ಹಿಮ್ಮೇಳ ವಾದಕ ಮಾಂಬಾಡಿ ಸುಬ್ರಹ್ಮಣ್ಯ ಭಟ್ ಆಯ್ಕೆಯಾಗಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಶುಕ್ರವಾರ ಪ್ರಶಸ್ತಿ ಪಟ್ಟಿ ಬಿಡುಗಡೆ ಮಾಡಿದ ಅಕಾಡೆಮಿ ಅಧ್ಯಕ್ಷ ತಲ್ಲೂರು ಶಿವರಾಮ ಶೆಟ್ಟಿ, ಪಾರ್ತಿಸುಬ್ಬ ಪ್ರಶಸ್ತಿಯು ₹1 ಲಕ್ಷ ನಗದು ಒಳಗೊಂಡಿದೆ ಎಂದರು.

ಅಕಾಡೆಮಿಯ ಗೌರವ ಪ್ರಶಸ್ತಿಗೆ ಕೊಳ್ತಿಗೆ ನಾರಾಯಣ ಗೌಡ (ಬೆಳ್ತಂಗಡಿ), ಕೋಡಿ ವಿಶ್ವನಾಥ ಗಾಣಿಗ (ಕುಂದಾಪುರ), ರಾಘವ ದಾಸ್ (ಬಂಟ್ವಾಳ), ಸುಬ್ರಾಯ ಹೊಳ್ಳ (ಬಂಟ್ವಾಳ) ಹಾಗೂ ಮೂಡಲಪಾಯ ಯಕ್ಷಗಾನ ಕಲಾವಿದ ಕಾಂತರಾಜು (ತುಮಕೂರು) ಅವರನ್ನು ಆಯ್ಕೆ ಮಾಡಲಾಗಿದೆ. ಗೌರವ ಪ್ರಶಸ್ತಿ ತಲಾ ₹50 ಸಾವಿರ ನಗದು ಒಳಗೊಂಡಿದೆ.

ಯಕ್ಷಸಿರಿ ವಾರ್ಷಿಕ ಪ್ರಶಸ್ತಿಗೆ ಅಡ್ಕ ಗೋಪಾಲಕೃಷ್ಣ ಭಟ್ (ಕಾಸರಗೋಡು),



ಮಾಂಬಾಡಿ ಸುಬ್ರಹ್ಮಣ್ಯ ಭಟ್

ಕೊಳ್ತಿಗೆ ನಾರಾಯಣ ಗೌಡ

ಕೋಡಿ ವಿಶ್ವನಾಥ ಗಾಣಿಗ

ರಾಘವ ದಾಸ್

ಸುಬ್ರಾಯ ಹೊಳ್ಳ

ಕಾಂತರಾಜು

ಜಗನ್ನಾಥ ಆಚಾರ್ಯ ಎಳ್ಳಂಪಳ್ಳಿ (ಉಡುಪಿ), ಮವ್ವಾರು ಬಾಲಕೃಷ್ಣ ಮಣಿಯಾಣಿ (ಕಾಸರಗೋಡು), ಉಮೇಶ್ ಕುಪ್ಪೆಪದವು (ಮಂಗಳೂರು), ಶಿವಾನಂದ ಗೀಜಗಾರು (ಶಿವಮೊಗ್ಗ), ಮುಗ್ವಾ ಗಣೇಶ್ ನಾಯ್ಕ (ಹೊನ್ನಾವರ), ಸುರೇಂದ್ರ ಮಲ್ಲಿ (ಮಂಗಳೂರು), ಅಂಡಾಲ ದೇವಿಪ್ರಸಾದ ಶೆಟ್ಟಿ (ಮಂಗಳೂರು), ಹಳುವಳ್ಳಿ ಜ್ಯೋತಿ (ಚಿಕ್ಕಮಗಳೂರು) ಹಾಗೂ ಮೂಡಲಪಾಯ ಯಕ್ಷಗಾನ ಕಲಾವಿದ ಕೃಷ್ಣಪ್ಪ (ಬೆಂಗಳೂರು ಗ್ರಾಮಾಂತರ) ಅವರನ್ನು ಆಯ್ಕೆ ಮಾಡಲಾಗಿದೆ. ಈ ಪ್ರಶಸ್ತಿಯು ತಲಾ ₹25 ಸಾವಿರ ನಗದು ಒಳಗೊಂಡಿದೆ.

ಕರ್ಕಿ ಹಿರಿಯ ಪರಮಯ್ಯ ಹಾಸ್ಯಗಾರ ದತ್ತಿನಿಧಿ ಪ್ರಶಸ್ತಿಗೆ ಕರ್ಗಲ್ಲು ವಿಶ್ವೇಶ್ವರ ಭಟ್ಟ (ಬಂಟ್ವಾಳ) ಅವರನ್ನು ಆಯ್ಕೆ ಮಾಡಲಾಗಿದೆ. ಈ ಪ್ರಶಸ್ತಿ ₹25 ಸಾವಿರ ನಗದು ಒಳಗೊಂಡಿದೆ.

ಪ್ರಶಸ್ತಿ ಪ್ರದಾನ ಸಮಾರಂಭವು ಫೆಬ್ರುವರಿ 16ರಂದು ಉಡುಪಿಯ ಯಕ್ಷಗಾನ ಕಲಾರಂಗದಲ್ಲಿ ನಡೆಯಲಿದೆ ಎಂದು ತಲ್ಲೂರು ಶಿವರಾಮ ಶೆಟ್ಟಿ ವಿವರಿಸಿದರು. ಪತ್ರಿಕಾಗೋಷ್ಠಿಯಲ್ಲಿ ಅಕಾಡೆಮಿ ರಿಜಿಸ್ಟ್ರಾರ್ ನಮ್ರತಾ ಎನ್. ಮತ್ತು ಸದಸ್ಯರು ಉಪಸ್ಥಿತರಿದ್ದರು.

ಶಾರದಾ ಪೀಠ: ಸ್ತೋತ್ರ ತ್ರಿವೇಣಿ ಕಾರ್ಯಕ್ರಮ ಇಂದು

ಪ್ರಜಾವಾಣಿ ವಾರ್ತೆ

ಶೃಂಗೇರಿ (ಚಿಕ್ಕಮಗಳೂರು): ಶಾರದಾ ಪೀಠದ 36ನೇ ಗುರು ಭಾರತೀತೀರ್ಥ ಸ್ವಾಮೀಜಿ ಅವರ ಸನ್ಯಾಸ ಸ್ವೀಕಾರದ 50ನೇ ವರ್ಷಾಚರಣೆಯನ್ನು ‘ಸುವರ್ಣ ಭಾರತೀ’ ಹೆಸರಿನಲ್ಲಿ ಇದೇ 11ರಂದು ಆಚರಿಸಲಾಗುತ್ತಿದ್ದು, ಸ್ತೋತ್ರ ತ್ರಿವೇಣಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಬೆಳಿಗ್ಗೆ 10.30ಕ್ಕೆ ಕಾರ್ಯಕ್ರಮ ಆರಂಭವಾಗಲಿದ್ದು, ಸಾಮೂಹಿಕ ಸ್ತೋತ್ರ ಸಮರ್ಪಣೆ ನಂತರ ಗುರುಗಳ ಆಶೀರ್ವಚನ ನಡೆಯಲಿದೆ. ಮಠದ ಕಿರಿಯ ಗುರು ವಿಧುಶೇಖರ ಭಾರತೀ ಸ್ವಾಮೀಜಿ ಅವರು ನೇತೃತ್ವ ವಹಿಸುವರು.

ಶಾರದಾ ಮಠದ ಗುರು ನಿವಾಸದ ಪಕ್ಕದಲ್ಲಿ ನರಸಿಂಹವನದ ಭಾರತೀತೀರ್ಥ ನಗರದ 20 ಎಕರೆ ಜಾಗದಲ್ಲಿ ಭವ್ಯ ವೇದಿಕೆ ಸಜ್ಜಾಗಿದೆ. 50 ಸಾವಿರ ಭಕ್ತರು ಸೇರಿ ಆದಿ ಶಂಕರಚಾರ್ಯ ವಿರಚಿತ ಮೂರು ಸ್ತೋತ್ರವನ್ನು ಪಠಿಸಿ ಸಮರ್ಪಿಸಲಿದ್ದಾರೆ.

ಭಕ್ತರನ್ನು ಕರೆತರಲು ಸಾರಿಗೆ ಸಂಸ್ಥೆಯ 700 ಬಸ್‌ಗಳನ್ನು ಕಾಯ್ದಿರಿಸಲಾಗಿದೆ. 5 ಸಾವಿರಕ್ಕೂ ಅಧಿಕ ಖಾಸಗಿ ವಾಹನಗಳು ಬರುವ ನಿರೀಕ್ಷೆ ಇದೆ. ವಾಹನ ನಿಲುಗಡೆ ಸ್ಥಳ, ಉಪಾಹಾರ ಮತ್ತು ಭೋಜನ ವ್ಯವಸ್ಥೆಗಾಗಿ 25 ವಿಭಾಗದಲ್ಲಿ 3 ಸಾವಿರಕ್ಕೂ ಅಧಿಕ ಸ್ವಯಂ ಸೇವಕರು ಸಿದ್ಧತೆ ನಡೆಸಿದ್ದಾರೆ.

ಭಾರತೀತೀರ್ಥ ಸ್ವಾಮೀಜಿ

ರಾಜ್ಯದ ವಿವಿಧ ಭಾಗದ 9 ಮಠದ ಪೀಠಾಧಿಪತಿಗಳು, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಕೇಂದ್ರ ಕೃಷಿ ಸಚಿವ ಶಿವರಾಜ ಸಿಂಗ್ ಚವ್ಹಾಣ್, ಜಿಲ್ಲಾ ಉಸ್ತುವಾರಿ ಸಚಿವ ಕೆ.ಜೆ. ಜಾರ್ಜ್, ಸಂಸದ ಕೋಟ ಶ್ರೀನಿವಾಸ ಪೂಜಾರಿ, ಶಾಸಕರು, ಅಧಿಕಾರಿಗಳು ಭಾಗವಹಿಸುವರು.

‘ಶಂಕರಾಚಾರ್ಯರ ಸ್ತೋತ್ರವನ್ನು ಜನ ಸಾಮಾನ್ಯರು ಪಠಿಸುವಂತೆ ಮಾಡುವ ಆಂದೋಲನವೇ ‘ಕಲ್ಯಾಣ ವೃಷ್ಟಿ ಸ್ತವ ಮಹಾಭಿಯಾನ. ಇದು ಸ್ತೋತ್ರ ತ್ರಿವೇಣಿಯ ಮಹಾ ಸಮರ್ಪಣಾ ಕಾರ್ಯಕ್ರಮವಾಗಿದೆ’ ಎಂದು ಶಾರದಾ ಪೀಠದ ಆಡಳಿತಾಧಿಕಾರಿ ಪಿ.ಎ. ಮುರುಳಿ ತಿಳಿಸಿದ್ದಾರೆ.

ಕರ್ನಾಟಕ ಸರ್ಕಾರ

ಕಾರ್ಮಿಕ ಇಲಾಖೆ

ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ

ಕಲ್ಯಾಣ ಸುರಕ್ಷಾ ಭವನ, ಬನ್ನೇರುಘಟ್ಟ ರಸ್ತೆ, ಐಟಿಐ ಕಾಂಪೌಂಡ್, ಡೈರಿ ಸರ್ಕಲ್, ಬೆಂಗಳೂರು–560029.

ದೂರವಾಣಿ ಸಂಖ್ಯೆ: 080–29753354, 29653354, 29543646 ವೆಬ್‌ಸೈಟ್: https://karbwwb.karnataka.gov.in

ಸಾರ್ವಜನಿಕ ಪ್ರಕಟಣೆ

ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗದ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕಾಯ್ದೆ 1996ರ ಅಡಿಯಲ್ಲಿ ರಚಿಸಲಾಗಿರುವ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಗೆ ಸಂಪನ್ಮೂಲವನ್ನು ಕ್ರೋಢೀಕರಿಸುವ ಸಲುವಾಗಿ, ಕಟ್ಟಡ ಮತ್ತು ಇತರೆ ನಿರ್ಮಾಣಗಾರರು ಹಾಗೂ ನಿಯೋಜಕರಿಂದ ನಿರ್ಮಾಣ ವೆಚ್ಚದ ಮೇಲೆ ಶೇ.1ರಷ್ಟು ಸುಂಕ ಸಂಗ್ರಹ ಮಾಡಲು ಕೇಂದ್ರ ಸರ್ಕಾರವು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಸುಂಕ ಕಾಯ್ದೆ, 1996ನ್ನು ಜಾರಿಗೆ ತಂದಿರುತ್ತದೆ. ಭೂಮಿಯ ಬೆಲೆ ಹಾಗೂ ಕಾರ್ಮಿಕ ನಷ್ಟ ಪರಿಹಾರ ಕಾಯ್ದೆ 1923 ರಡಿ ಕಾರ್ಮಿಕರು ಅಥವಾ ಅವರ ಅವಲಂಬಿತರಿಗೆ ನೀಡಲಾಗುವ ಪರಿಹಾರ ಮೊತ್ತವನ್ನು ಹೊರತುಪಡಿಸಿ, ಕಟ್ಟಡ ನಿರ್ಮಾಣಕ್ಕೆ ತಗಲುವ ವೆಚ್ಚದ ಮೇಲೆ ಶೇ.1ರಷ್ಟು ಸುಂಕವನ್ನು ಮಾಲೀಕರು/ಗುತ್ತಿಗೆದಾರರು ಪಾವತಿಸಬೇಕೆಂದು ಕೇಂದ್ರ ಸರ್ಕಾರವು ಅಧಿಸೂಚನೆಯನ್ನು ಹೊರಡಿಸಿರುತ್ತದೆ. ಸದರಿ ಅಧಿಸೂಚನೆಯನ್ವಯ ಕರ್ನಾಟಕದಲ್ಲಿ ಕೂಡ ಶೇ.1ರಷ್ಟು ಸುಂಕವನ್ನು ನಿರ್ಮಾಣ ವೆಚ್ಚದ ಮೇಲೆ ಪಾವತಿಸುವುದನ್ನು ಕಡ್ಡಾಯಗೊಳಿಸಿ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ.

ಕಾಯ್ದೆಯ ಅನ್ವಯಿಸುವಿಕೆ (ಮಂಡಳಿಗೆ ಸುಂಕ ಪಾವತಿಸಬೇಕಾದ ವ್ಯಕ್ತಿಗಳು /ಸಂಸ್ಥೆಗಳು)

ಹಿಂದಿನ 12 ತಿಂಗಳ ಅವಧಿಯಲ್ಲಿ 10 ಅಥವಾ ಅದಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಯಗಳಲ್ಲಿ ಕಾರ್ಮಿಕರನ್ನು ಕೆಲಸಕ್ಕೆ ನೇಮಿಸಿಕೊಂಡ ಸಂಸ್ಥೆಗಳು.

ಹಾಗೂ

ಎಲ್ಲಾ ಸರ್ಕಾರಿ ಇಲಾಖೆಗಳು, ಸಾರ್ವಜನಿಕ ವಲಯದ ಸಂಸ್ಥೆಗಳು ಮತ್ತು ಇತರೆ ಸರ್ಕಾರಿ ಸಂಸ್ಥೆಗಳು ಮುಖ್ಯ ಕಾಯಿದೆಯ ಸೆಕ್ಷನ್ 2(ಡಿ) ಅಡಿಯಲ್ಲಿ ಬರುವ ಯಾವುದೇ ಕಟ್ಟಡ ಅಥವಾ ಇತರೆ ನಿರ್ಮಾಣ ಕಾರ್ಯಗಳನ್ನು ಗುತ್ತಿಗೆದಾರರ ಮೂಲಕ ಕೈಗೊಂಡರೆ ಗುತ್ತಿಗೆದಾರರಿಗೆ ಮೊತ್ತವನ್ನು ಪಾವತಿ ಮಾಡುವ ಸಮಯದಲ್ಲಿ ಟೆಂಡರ್ ಅಧಿಸೂಚನೆಯ ಪ್ರಕಾರ ಅನುಮೋದಿಸಲಾದ ವೆಚ್ಚದ ಮೊತ್ತದಲ್ಲಿ ಶೇ.1ರಷ್ಟು ಮೊತ್ತವನ್ನು ಕಡಿತಗೊಳಿಸುವುದು.

ಕಟ್ಟಡ ಮತ್ತು ಇತರೆ ನಿರ್ಮಾಣ ಕೆಲಸಗಳು ಎಂದರೆ

ಕಟ್ಟಡ, ರಸ್ತೆಗಳು, ನೀರಾವರಿ, ಒಳಚರಂಡಿ, ವಿದ್ಯುತ್ ತಂತಿ, ಅಣೆಕಟ್ಟು, ಕಾಲುವೆಗಳು, ಜಲಾಶಯಗಳು ಇತ್ಯಾದಿಗಳ ಸಹಿತ ಎಲ್ಲಾ ನಿರ್ಮಾಣ, ಬದಲಾವಣೆ, ದುರಸ್ಥಿಕಾರ್ಯ ಕಾಮಗಾರಿಗಳು ಒಳಗೊಂಡಿರುತ್ತವೆ.

ಸುಂಕ ಪಾವತಿ

ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಸುಂಕ ಕಾಯ್ದೆ 1996 ಮತ್ತು ನಿಯಮಗಳು 1998 ರನ್ವಯ ಕಟ್ಟಡ ಮತ್ತು ಇತರೆ ನಿರ್ಮಾಣಗಾರರು ಹಾಗೂ ನಿಯೋಜಕರಿಂದ ನಿರ್ಮಾಣ ವೆಚ್ಚದ ಮೇಲೆ ಶೇ.1 ರಷ್ಟು ಸುಂಕ ಸಂಗ್ರಹ ಮಾಡಲು ಕೇಂದ್ರ ಸರ್ಕಾರವು ಈ ಕಾಯ್ದೆ / ನಿಯಮಗಳನ್ನು ಜಾರಿಗೆ ತಂದಿರುತ್ತದೆ. ಈ ಕಾಯ್ದೆಯಲ್ಲಿ ಭೂಮಿಯ ಬೆಲೆ ಹಾಗೂ ಕಾರ್ಮಿಕ ನಷ್ಟ ಪರಿಹಾರ ಕಾಯ್ದೆ 1923 ರಡಿ ಕಾರ್ಮಿಕರ ಅಥವಾ ಅವರ ಅವಲಂಬಿತರಿಗೆ ನೀಡಲಾಗುವ ಪರಿಹಾರ ಮೊತ್ತವನ್ನು ಹೊರತುಪಡಿಸಲಾಗಿರುತ್ತದೆ. ಮಾಲೀಕರು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸುಂಕ ನಿಯಮ 1998ರ ನಿಯಮ 6(1) ರನ್ವಯ ಕಾಮಗಾರಿ ಆರಂಭವಾಗಿರುವ ಅಥವಾ ಸುಂಕ ಮೊತ್ತವನ್ನು ಪಾವತಿ ಮಾಡಿರುವ ಬಗ್ಗೆ ತಮ್ಮ ಕಾರ್ಯವ್ಯಾಪ್ತಿಯಲ್ಲಿ ಬರುವ ಸುಂಕ ನಿರ್ಧರಣಾ ಅಧಿಕಾರಿಗಳಿಗೆ ನಿರ್ಮಾಣ ಕಾಮಗಾರಿಯ ವಿವರಗಳನ್ನು ಒಳಗೊಂಡ ನಮೂನೆ–1 ನ್ನು ಕಡ್ಡಾಯವಾಗಿ 30 ದಿನಗಳೊಳಗಾಗಿ ಸಲ್ಲಿಸಬೇಕಾಗಿರುತ್ತದೆ.

ಸುಂಕ ಪಾವತಿ ಮಾಡಬೇಕಾಗಿರುವ ಮಂಡಳಿಯ ಖಾತೆಯ ವಿವರ

- ಖಾತೆದಾರರ ಹೆಸರು : Karnataka Building & Other Construction Workers Welfare Board.
- ಖಾತೆದಾರರ ಬ್ಯಾಂಕಿನ ಹೆಸರು : ಕೆನರಾ ಬ್ಯಾಂಕ್, ಕಾರ್ಮಿಕರ ಕಲ್ಯಾಣ ಮಂಡಳಿ ಶಾಖೆ, ಕಲ್ಯಾಣ ಸುರಕ್ಷಾ ಭವನ, ಬನ್ನೇರುಘಟ್ಟ ರಸ್ತೆ, ಐಟಿಐ ಕಾಂಪೌಂಡ್, ಡೈರಿ ಸರ್ಕಲ್, ಬೆಂಗಳೂರು–560029
- ಖಾತೆ ಸಂಖ್ಯೆ : 1371101079786
- ಬ್ಯಾಂಕ್ IFSC ಕೋಡ್ ಸಂಖ್ಯೆ : CNRB0007295

ಖಜಾನೆ ಇಲಾಖೆಯ ಕೆ–2 ತಂತ್ರಾಂಶದ ಮೂಲಕ ಮೊತ್ತವನ್ನು ವರ್ಗಾವಣೆ/ಸಂದಾಯ ಮಾಡುವ ಸಂಸ್ಥೆಗಳು ಮಂಡಳಿಯ ಠೇವಣಿ ಖಾತೆ ಸಂಖ್ಯೆ: 26572E181 ಗೆ ಸಂದಾಯ ಮಾಡತಕ್ಕದ್ದು,

ದಂಡಗಳು :

1) **ಸುಂಕ ಪಾವತಿ ವಿಳಂಬವಾದಲ್ಲಿ ಪಾವತಿಸಬೇಕಾದ ಬಡ್ಡಿ:** ಪಾವತಿಸಬೇಕಾದ ಮೊತ್ತದ ಮೇಲೆ ತಿಂಗಳಿಗೆ ಶೇ.2 ರಷ್ಟು.
2) **ಸೆಸ್ ಪಾವತಿಸದಿದ್ದಲ್ಲಿ ದಂಡ:** ಪಾವತಿಸಬೇಕಾದ ಸೆಸ್ ಮೊತ್ತವನ್ನು ಮೀರದಂತೆ ಪ್ರಾಧಿಕಾರವು ದಂಡವನ್ನು ವಿಧಿಸಬಹುದು.
3) **ಯಾವುದೇ ಉದ್ಯೋಗದಾತರು /ಗುತ್ತಿಗೆದಾರರು ಯಾವುದೇ ಸುಳ್ಳು ದಾಖಲೆಗಳನ್ನು ಒದಗಿಸಿದರೆ :** ಆರು ತಿಂಗಳವರೆಗೆ ವಿಸ್ತರಿಸಬಹುದಾದ ಜೈಲು ಶಿಕ್ಷೆ ಅಥವಾ ಒಂದು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದ ದಂಡ ಅಥವಾ ಎರಡನ್ನೂ ವಿಧಿಸಬಹುದು.
4) **ಉದ್ದೇಶಪೂರ್ವಕ ಸುಂಕ ವಂಚನೆ:** ಆರು ತಿಂಗಳವರೆಗೆ ವಿಸ್ತರಿಸಬಹುದಾದ ಜೈಲು ಶಿಕ್ಷೆ ಅಥವಾ ಒಂದು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದ ದಂಡ ಅಥವಾ ಎರಡನ್ನೂ ವಿಧಿಸಬಹುದು.
5) ಈ ಕಾಯಿದೆಯ ಅಡಿಯಲ್ಲಿ ಬಾಕಿ ಇರುವ ಯಾವುದೇ ಮೊತ್ತವನ್ನು [ಉದ್ಯೋಗದಾತರಿಂದ ಯಾವುದೇ ಬಡ್ಡಿ ಅಥವಾ ದಂಡವನ್ನು ಒಳಗೊಂಡಂತೆ] ಭೂಕಂದಾಯದ ಬಾಕಿ ಇರುವ ರೀತಿಯಲ್ಲಿಯೇ ವಸೂಲಿ ಮಾಡಲಾಗುವುದು.

ಸಹಿ/–

ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಕಾರ್ಯದರ್ಶಿಗಳು

DIPR/CP/4270/Zen/2024-25

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: ಕಾರ್ಮಿಕ ಸಹಾಯವಾಣಿ 155214, ಕಾರ್ಮಿಕ ಅಧಿಕಾರಿಗಳು ಹಾಗೂ ಹಿರಿಯ ಕಾರ್ಮಿಕ ನಿರೀಕ್ಷಕರು/ಕಾರ್ಮಿಕ ನಿರೀಕ್ಷಕರು, ಕಾರ್ಮಿಕ ಇಲಾಖೆ. ವೆಬ್‌ಸೈಟ್: https://karbwwb.karnataka.gov.in

ವೈಕುಂಠ ಏಕಾದಶಿ; ಭಕ್ತರ ಸಂಭ್ರಮ

ನಗರದ ವಿವಿಧ ದೇಗುಲಗಳಲ್ಲಿ ವಿಶೇಷ ಪೂಜೆ • ವೈಕುಂಠದ್ವಾರ ರಚನೆ • ಗೋವಿಂದಾ ನಾಮಸ್ಮರಣೆ

ಶ್ರೀನಿವಾಸ ದರ್ಶನ... ರಾಜಾಜಿನಗರದ 'ಶ್ರೀ ಕೈಲಾಸ ವೈಕುಂಠ ಮಹಾಕ್ಷೇತ್ರ'ದಲ್ಲಿ ಶುಕ್ರವಾರ ಭಕ್ತಾದಿಗಳು ಸರದಿಯಲ್ಲಿ ದೇವರ ದರ್ಶನ ಪಡೆದರು

ಪ್ರಜಾವಾಣಿ ಚಿತ್ರಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿವಿಧ ದೇವಸ್ಥಾನಗಳಲ್ಲಿ ವೈಕುಂಠ ಏಕಾದಶಿಯ ಅಂಗವಾಗಿ ಶುಕ್ರವಾರ ಮುಂಜಾನೆ 3.30ರಿಂದಲೇ ವಿಶೇಷ ಪೂಜೆ, ಧಾರ್ಮಿಕ ವಿಧಿಗಳು ನಡೆದವು.

ಹಲವು ದೇವಸ್ಥಾನಗಳಲ್ಲಿ ವೈಕುಂಠದ ದ್ವಾರಗಳನ್ನು ನಿರ್ಮಿಸಿ, ಭಕ್ತರ ದರ್ಶನಕ್ಕೆ ಅನುವು ಕಲ್ಪಿಸಲಾಗಿತ್ತು. ಮುಂಜಾನೆಯ ಚಳಿಯಲ್ಲಿಯೂ ಭಕ್ತರು ಸಾಲಿನಲ್ಲಿ ನಿಂತು ದರ್ಶನ ಪಡೆದರು.

ನಗರದಲ್ಲಿರುವ ಕೃಷ್ಣ ಹಾಗೂ ವೆಂಕಟೇಶ್ವರ ದೇವಸ್ಥಾನಗಳಲ್ಲಿ ಅತ್ಯಂತ ವಿಶೇಷ ಸಂಭ್ರಮ, ಸಡಗರವಿತ್ತು. ಹಲವು ರೀತಿಯ ಪುಷ್ಪಗಳಿಂದ ಅಲಂಕಾರ ಹಾಗೂ ವಿಶೇಷ ಪೂಜೆ ನಡೆಸಲಾಯಿತು.

ಇಸ್ಕಾನ್ ದೇವಾಲಯದಲ್ಲಿ ಮುಂಜಾನೆ 3.45ರಿಂದ ವಿಶೇಷ ಪೂಜೆ, ಅಭಿಷೇಕ ನಡೆಯಿತು. ಮಲ್ಲೇಶ್ವರದ ವೈಯಾಲಿಕಾವಲ್‌ನಲ್ಲಿರುವ ತಿರುಮಲ ತಿರುಪತಿ ದೇವಸ್ಥಾನ ಟ್ರಸ್ಟ್‌ನ ವೆಂಕಟೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆಗಳು ನೆರವೇರಿದವು.

ಜೆ.ಪಿ.ನಗರದಲ್ಲಿರುವ ವೆಂಕಟೇಶ್ವರ ದೇವಾಲಯ, ಆರ್‌.ಟಿ.ನಗರದ ಮಠದ ಹಳ್ಳಿಯ ಲಕ್ಷ್ಮಿವೆಂಕಟೇಶ್ವರ ಸ್ವಾಮಿ ದೇವಸ್ಥಾನದಲ್ಲಿ ದೇವರಿಗೆ ವಿಶೇಷ ಅಲಂಕಾರ ಮಾಡಲಾಗಿತ್ತು. ರಾಜಾಜಿನಗರದ 'ಶ್ರೀ ಕೈಲಾಸ ವೈಕುಂಠ ಮಹಾಕ್ಷೇತ್ರ'ದಲ್ಲಿ ಭಕ್ತಾದಿಗಳು ದೇವರ ದರ್ಶನಕ್ಕೆ ಕೆಲವು ಗಂಟೆ ಸಾಲುಗಟ್ಟಿ ನಿಂತಿದ್ದರು.

ಕೆಲವು ದೇವಸ್ಥಾನಗಳಲ್ಲಿ ರಾಜಕಾರಣಿಗಳು ಹಾಗೂ ಸ್ಥಳೀಯ ಮುಖಂಡರ ಆಗಮನದಿಂದ ಸಾಮಾನ್ಯ ಭಕ್ತರು ದರ್ಶನಕ್ಕಾಗಿ ಕಾಯುವ ಪರಿಸ್ಥಿತಿ ಉಂಟಾಗಿತ್ತು. ವಿವಿಧ ದೇವಸ್ಥಾನಗಳಲ್ಲಿ ನಿರ್ಮಿಸಲಾಗಿದ್ದ ವೈಕುಂಠ ದ್ವಾರದ ಮೂಲಕ ಸಾಗುವಾಗ 'ಗೋವಿಂದಾ, ಗೋವಿಂದಾ' ಎಂದು ಸ್ಮರಿಸುತ್ತಿದ್ದರು.

ಪಶ್ಚಿಮ ಕಾರ್ಡ್ ರಸ್ತೆಯಲ್ಲಿರುವ ಇಸ್ಕಾನ್ ದೇವಾಲಯದಲ್ಲಿ 'ವೈಕುಂಠ ದ್ವಾರ' ಮುಂದೆ ಸೆಲ್ಫಿ ಸಂಭ್ರಮ

ಪಶ್ಚಿಮ ಕಾರ್ಡ್ ರಸ್ತೆಯಲ್ಲಿರುವ ಇಸ್ಕಾನ್ ದೇವಾಲಯದಲ್ಲಿ ಮಕ್ಕಳು ವಿಶೇಷಪೂಜೆ ಸಲ್ಲಿಸಿದರು

ಜೆ.ಪಿ. ನಗರದ ಶ್ರೀ ತಿರುಮಲಗಿರಿ ಲಕ್ಷ್ಮಿ ವೆಂಕಟೇಶ್ವರಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜೆ ನಡೆಯಿತು

ವೈಭವದ ವೈಕುಂಠ ಏಕಾದಶಿ

ರಾಜರಾಜೇಶ್ವರಿನಗರ: ವೈಕುಂಠ ಏಕಾದಶಿ ನಿಮಿತ್ತ ಮರಿಯಪ್ಪನಪಾಳ್ಯದ ಜ್ಞಾನಭಾರತಿ 2ನೇ ಹಂತದ ಶ್ರೀಶನೈಶ್ವರಸ್ವಾಮಿ ದೇಗುಲ ಸಮಿತಿ ಟ್ರಸ್ಟ್‌ನಿಂದ ಶುಕ್ರವಾರ ಅನ್ನಪ್ರಸಾದ, ಲಡ್ಡು ವಿತರಿಸಲಾಯಿತು.

ನಾಗದೇವನಹಳ್ಳಿಯಲ್ಲಿ ಮೂಡಲಗಿರಿ ತಿಮ್ಮಪ್ಪನ ದೇವಸ್ಥಾನ, ಅರೇಹಳ್ಳಿಯ ಎಜಿಎಸ್ ಬಡಾವಣೆಯ ತಪೋವನ ಕ್ಷೇತ್ರದಲ್ಲಿ ಲಕ್ಷ್ಮೀವೆಂಕಟೇಶ್ವರಸ್ವಾಮಿ ದೇವಾಲಯ, ಕೆಂಗುಂಟೆ, ಪಾಪರೆಡ್ಡಿಪಾಳ್ಯ, ದೇವಾಲಯಗಳಲ್ಲಿ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿದ್ದರು.

ತಪೋವನ ಕ್ಷೇತ್ರದಲ್ಲಿ ದೇವಸ್ಥಾನದಲ್ಲಿ ವಿಶೇಷ ಪೂಜೆ ನಡೆಯಿತು

ಜೆ.ಪಿ.ನಗರದ ಶ್ರೀ ತಿರುಮಲಗಿರಿ ಲಕ್ಷ್ಮಿ ವೆಂಕಟೇಶ್ವರಸ್ವಾಮಿ ದೇವಸ್ಥಾನದ ಆವರಣದಲ್ಲಿದ್ದ ಭಕ್ತರು

ಕೊಲೆ ಪ್ರಕರಣ: ಮೈಸೂರಿಗೆ ತೆರಳಲು ನಟನಿಗೆ ಕೋರ್ಟ್ ಅನುಮತಿ

ದರ್ಶನ್, ಪವಿತ್ರಾ ಮುಖಾಮುಖಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದ ಎಲ್ಲಾ 17 ಆರೋಪಿಗಳು ನಗರದ ಸಿಸಿಎಚ್ 57ನೇ ನ್ಯಾಯಾಲಯದ ಮುಂದೆ ಶುಕ್ರವಾರ ಹಾಜರಾದರು.

ಆರೋಪಿಗಳಿಗೆ ಜಾಮೀನು ನೀಡುವ ವೇಳೆ ಪ್ರತಿ ತಿಂಗಳು ನ್ಯಾಯಾಲಯದ ಮುಂದೆ ಹಾಜರಾಗಬೇಕು ಎಂಬ ಷರತ್ತು ವಿಧಿಸಲಾಗಿತ್ತು. ಆರೋಪಿಗಳ ಹಾಜರಿ ಪಡೆದುಕೊಂಡ ನ್ಯಾಯಾಧೀಶರು ಪ್ರಕರಣದ ವಿಚಾರಣೆಯನ್ನು ಫೆಬ್ರುವರಿ 25ಕ್ಕೆ ಮುಂದೂಡಿದರು.

ದರ್ಶನ್

ಪವಿತ್ರಾಗೌಡ

ದರ್ಶನ್ ತಮ್ಮ ಆಪ್ತ, ನಟ ಧನ್ವೀರ್ ಜೊತೆ ಕಾರಿನಲ್ಲಿ ನ್ಯಾಯಾಲಯಕ್ಕೆ ಬಂದರು. ಅವರೊಂದಿಗೆ ವಕೀಲರು ಸಹ ಇದ್ದರು. ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ಬಂಧನವಾದ ಬಳಿಕ ಮೊದಲ ಬಾರಿಗೆ ದರ್ಶನ್ ಹಾಗೂ ಪವಿತ್ರಾ ಗೌಡ ನ್ಯಾಯಾಲಯದಲ್ಲಿ ಮುಖಾಮುಖಿಯಾದರು.

ದರ್ಶನ್ ನೋಡುತ್ತಿದ್ದಂತೆ ಪವಿತ್ರಾ ಭಾವುಕರಾದರು. ಪವಿತ್ರಾ ಅವರ ಬೆನ್ನುತಟ್ಟಿ ದರ್ಶನ್ ಸಂತೈಸಿದರು. ಕೆಲ ಹೊತ್ತು ಇಬ್ಬರು ಚರ್ಚಿಸಿದರು. ಆಗ ದರ್ಶನ್ ಅವರ ಆರೋಗ್ಯ ವಿಚಾರಿಸಿದರು. ಮಾಧ್ಯಮಗಳು ಅವರನ್ನು ಸುತ್ತುವರಿಯುತ್ತಿದ್ದಂತೆ ಇಬ್ಬರೂ ಅಲ್ಲಿಂದ ಹೊರ ನಡೆದರು.

ಜನವರಿ 12ರಿಂದ ಐದು ದಿನ ಮೈಸೂರಿಗೆ ತೆರಳಲು ದರ್ಶನ್‌ಗೆ ನ್ಯಾಯಾಲಯ ಅನುಮತಿ ನೀಡಿದೆ.

ಇದೇ ವೇಳೆ ಹೊರ ರಾಜ್ಯದ ದೇವಾಲಯಗಳಿಗೆ ತೆರಳಲು ಅನುಮತಿ ಕೋರಿ ಪವಿತ್ರಾ ಗೌಡ ಸಲ್ಲಿಸಿದ್ದ ಮನವಿಗೂ ನ್ಯಾಯಾಲಯ ಅನುಮತಿ ನೀಡಿದೆ. ಅಲ್ಲದೇ ವ್ಯಾವಹಾರಿಕ ಕೆಲಸಗಳ ನಿಮಿತ್ತ ದೆಹಲಿ, ಮುಂಬೈಗೆ ತೆರಳಲು ಅನುಮತಿ ನೀಡಿದೆ.

ಮತ್ತೊಬ್ಬ ಆರೋಪಿ ನಾಗರಾಜ್‌ಗೆ ಜ.10 ರಿಂದ ಫೆಬ್ರುವರಿ 24ರವರೆಗೆ ಮೈಸೂರಿಗೆ ತೆರಳಲು ಅನುಮತಿ ನೀಡಲಾಗಿದೆ. ಚಿತ್ರದುರ್ಗದ ಆರೋಪಿಗಳಿಗೂ ತಮ್ಮ ಊರಿಗೆ ಹೋಗಲು ಅನುಮತಿ ಕೊಡಲಾಗಿದೆ.

ನ್ಯಾಯಾಲಯ ಅರ್ಜಿ ವಿಚಾರಣೆಯನ್ನು ಮುಂದೂಡಿದ ಬಳಿಕ ಆರೋಪಿಗಳು ಅವರ ವಕೀಲರೊಂದಿಗೆ ಚರ್ಚಿಸಿ ವಾಪಸ್ ಆದರು.

ವೈಕುಂಠ ಏಕಾದಶಿ, ವಿಶೇಷ ಪೂಜಾ ಕೈಂಕರ್ಯ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ವೈಕುಂಠ ಏಕಾದಶಿ ಪ್ರಯುಕ್ತ ಕೆ.ಆರ್.ಪುರದ ಪುರಾತನ ಕೋಟೆ ಶ್ರೀವೆಂಕಟರಮಣಸ್ವಾಮಿ ದೇವಾಲಯದ ಸನ್ನಿಧಿಯಲ್ಲಿ ವಿಶೇಷ ಪೂಜಾ ಕೈಂಕರ್ಯಗಳು ಜರಗಿದವು. ಶ್ರೀಕೋಟೆ ವೆಂಕಟರಮಣಸ್ವಾಮಿಗೆ ಹಾಲು, ತುಪ್ಪ, ಹಣ್ಣಿನ ವಿವಿಧ ದ್ರವಗಳಿಂದ ಅಭಿಷೇಕ ಕವಚಧಾರಣೆ, ಮಹಾ ಮಂಗಳಾರತಿ ನಡೆಯಿತು. ದೇಗುಲಕ್ಕೆ ಪುಷ್ಪಾಲಂಕಾರ ಮಾಡಲಾಗಿತ್ತು.

ಕೆ.ಆರ್.ಪುರ, ಬಾಣಸವಾಡಿ, ಮಹದೇವಪುರ, ಬೈಯ್ಯಪ್ಪನಹಳ್ಳಿ, ಹೊಸಕೋಟೆ, ಹೆಣ್ಣೂರು, ಬೈರತಿ, ಕಸ್ತೂರಿನಗರ, ಸೇರಿ ವಿವಿಧೆಡೆಯ ಭಕ್ತರು ದೇವರ ದರ್ಶನ ಪಡೆದರು.

ದೇವಸ್ಥಾನದ ಆಡಳಿತ ಟ್ರಸ್ಟ್ ಮತ್ತು ಕೆ.ಆರ್.ಪುರ ಸಮಾನ ಮನಸ್ಕ ಗ್ರಾಮಸ್ಥರ ವತಿಯಿಂದ ಮೂವತ್ತು ಸಾವಿರ ಲಾಡು ಭಕ್ತರಿಗೆ ವಿತರಿಸಲಾಯಿತು.

ಪೀಣ್ಯ ದಾಸರಹಳ್ಳಿ: ಚಿಕ್ಕಬಾಣಾವರದ ಹಳೆ ಗ್ರಾಮದ 600ವರ್ಷಗಳ ಇತಿಹಾಸವಿರುವ ಚನ್ನಕೇಶವ ದೇವಾಲಯದಲ್ಲಿ ವಿಶೇಷ ಪೂಜೆ ಹಮ್ಮಿಕೊಳ್ಳಲಾಯಿತು.

ಯಲಹಂಕ: ಬ್ಯಾಟರಾಯನಪುರ ಕ್ಷೇತ್ರದ ತರಬನಹಳ್ಳಿಯಲ್ಲಿರುವ ತಿರುಮಲ ದೇವರ ಸನ್ನಿಧಿಯಲ್ಲಿ ವೈಕುಂಠ ಏಕಾದಶಿ ಪ್ರಯುಕ್ತ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆದವು. ಯಲಹಂಕ ಉಪನಗರದ ಶ್ರೀನಿವಾಸ ದೇವಸ್ಥಾನದಲ್ಲಿ ಸ್ವಾಮಿಗೆ ವಿಶೇಷ ಅಲಂಕಾರ, ಅಭಿಷೇಕ, ಅರ್ಚನೆ, ಮಹಾಮಂಗಳಾರತಿ ಸೇರಿ ವಿವಿಧ ಪೂಜಾ ಕೈಂಕರ್ಯಗಳನ್ನು ನೆರವೇರಿಸಲಾಯಿತು.

ಬ್ಯಾಟರಾಯನಪುರ ಕ್ಷೇತ್ರದ ತರಬನಹಳ್ಳಿಯಲ್ಲಿರುವ ತಿರುಮಲ ದೇವರ ಸನ್ನಿಧಿಯಲ್ಲಿ ವೈಕುಂಠ ಏಕಾದಶಿ ಪ್ರಯುಕ್ತ, ಭಕ್ತರು ಸರತಿಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದರು

ವಿಶ್ವಾರಾಧ್ಯ ಜನಕಲ್ಯಾಣ ಪ್ರತಿಷ್ಠಾನವು ವಿಜಯನಗರದ ಜಗಜ್ಯೋತಿ ಬಸವೇಶ್ವರ ಸುಜ್ಞಾನ ಮಂಟಪದಲ್ಲಿ ಶುಕ್ರವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 'ಶಿವಕಮಲ ಸಾಹಿತ್ಯ' ಪ್ರಶಸ್ತಿಯನ್ನು ಮಲಯ ಶಾಂತಮುನಿ ಶಿವಾಚಾರ್ಯ ಸ್ವಾಮೀಜಿ ಅವರಿಗೆ ಪ್ರದಾನ ಮಾಡಲಾಯಿತು. ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಮಲ್ಲಿಕಾರ್ಜುನ ವಿಶ್ವಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ನಾಟಕ ಅಕಾಡೆಮಿ ಅಧ್ಯಕ್ಷ ನಾಗರಾಜ್ ಮೂರ್ತಿ, ವಾಗೇಶ್ ಪ್ರಸಾದ್ ಇದ್ದರು

9ನೇ ಆರೋಪಿ ಚೋಟಾ ವಿರುದ್ಧ ದೋಷಾರೋಪ ಪಟ್ಟಿ

ಹರಿಯಾಣದಿಂದ ಶಂಕಿತರಿಗೆ ಮದ್ದುಗುಂಡು ಪೂರೈಕೆ

ಪ್ರಜಾವಾಣಿ ವಾರ್ತೆ

ಕೋರ್ಟ್ ಸುದ್ದಿ

ಬೆಂಗಳೂರು: ನಗರದ ಹಲವೆಡೆ ಸ್ಫೋಟಕ್ಕೆ ಸಂಚು ರೂಪಿಸಿದ್ದ ಪ್ರಕರಣದ ತನಿಖೆ ನಡೆಸುತ್ತಿರುವ ರಾಷ್ಟ್ರೀಯ ತನಿಖಾ ದಳದ (ಎನ್‌ಐಎ) ಅಧಿಕಾರಿಗಳು, ಲಷ್ಕರ್ -ಇ-ತೊಯ್ಬಾ ಸಂಘಟನೆ ಜೊತೆ ನಂಟು ಹೊಂದಿದ್ದ ಶಂಕಿತ ಉಗ್ರ ವಿಕ್ರಂ ಕುಮಾರ್ ಅಲಿಯಾಸ್ ಚೋಟಾ ಉಸ್ಮಾನ್ ವಿರುದ್ಧ ಎನ್‌ಐಎ ವಿಶೇಷ ನ್ಯಾಯಾಲಯಕ್ಕೆ ಶುಕ್ರವಾರ ದೋಷಾರೋಪ ಪಟ್ಟಿ ಸಲ್ಲಿಸಿದ್ದಾರೆ.

ಈ ಪ್ರಕರಣದಲ್ಲಿ ವಿಕ್ರಂ ಒಂಬತ್ತನೇ ಆರೋಪಿ. ಬಿಹಾರದ ಬೇಗುಸರೈ ಗ್ರಾಮದ ವಿಕ್ರಂ ವಿರುದ್ಧ ದಾಖಲಾಗಿದ್ದ ಪ್ರಕರಣದ ತನಿಖೆ ನಡೆಸಿ ಐಪಿಸಿ ಸೆಕ್ಷನ್ 120ಬಿ, 17, 18, 20, 23 ಹಾಗೂ ಕಾನೂನು ಬಾಹಿರ ಚಟುವಟಿಕೆಗಳ ನಿಯಂತ್ರಣ ಕಾಯ್ದೆ (ಯುಪಿಎ) ಹಾಗೂ ಸ್ಫೋಟ ವಸ್ತುಗಳ ಕಾಯ್ದೆಯ ಸೆಕ್ಷನ್ 6ರ ಅಡಿ ಹೆಚ್ಚುವರಿ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ ಎಂದು ಎನ್‌ಐಎ ಮೂಲಗಳು ತಿಳಿಸಿವೆ.

ಸಿಸಿಬಿ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣ 2023ರ ಅಕ್ಟೋಬರ್‌ನಲ್ಲಿ ಎನ್‌ಐಎಗೆ ವರ್ಗಾವಣೆ ಆಗಿತ್ತು. ನಗರದ ಮನೆಯೊಂದರಲ್ಲಿ ವಾಕಿಟಾಕಿ, ಮದ್ದುಗುಂಡು, ಶಸ್ತ್ರಾಸ್ತ್ರ, ಡಿಜಿಟಲ್ ಪರಿಕರಗಳನ್ನು ಎನ್‌ಐಎ ಅಧಿಕಾರಿಗಳು ಜಪ್ತಿ ಮಾಡಿದ್ದರು. ತನಿಖೆಯಲ್ಲಿ ಭಾರತದ ಸಮಗ್ರತೆ, ಭದ್ರತೆಗೆ ಧಕ್ಕೆತರಲು ಶಂಕಿತ ಉಗ್ರರು ಹೊಂದಿದ್ದರು ಎಂಬುದು ಗೊತ್ತಾಗಿತ್ತು ಎಂದು ಮೂಲಗಳು ತಿಳಿಸಿವೆ.

ಆರೋಪಿ ವಿಕ್ರಂ ಕುಮಾರ್ ಕೊಲೆ ಪ್ರಕರಣದಲ್ಲಿ 2018ರಲ್ಲಿ ಜೈಲು ಸೇರಿದ್ದ. ಭಯೋತ್ಪಾದನೆ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾಗಿ ಬೆಂಗಳೂರಿನ ಪರಪ್ಪನ ಅಗ್ರಹಾರ ಜೈಲಿನಲ್ಲಿದ್ದ ಟಿ.ನಾಸೀರ್ ಜತೆಗೆ ಸಂಪರ್ಕಕ್ಕೆ ಬಂದಿದ್ದ. ಆಗ ನಾಸೀರ್ ಉಗ್ರ ಚಟುವಟಿಕೆ ನಡೆಸುವಂತೆ ವಿಕ್ರಂ ಮನಪರಿವರ್ತನೆ ಮಾಡಿದ್ದ. ಜೈಲಿನಿಂದ ವಿಕ್ರಂ ಬಿಡುಗಡೆಯಾದ ಮೇಲೂ ನಾಸೀರ್ ಹಾಗೂ ತಲೆಮರೆಸಿಕೊಂಡಿದ್ದ ಜುನೈದ್ ಅಹ್ಮದ್ ಸಂಪರ್ಕದಲ್ಲಿದ್ದ ಎಂದು ಮೂಲಗಳು ತಿಳಿಸಿವೆ.

2013ರ ಮೇನಲ್ಲಿ ಜುನೈದ್ ಸೂಚನೆ ಮೇರೆಗೆ ಹರಿಯಾಣದ ಅಂಬಾಲಾದಿಂದ ಗ್ರೆನೇಡ್, ವಾಕಿಟಾಕಿಗಳನ್ನು ಸಂಗ್ರಹಿಸಿಕೊಂಡು ಬಂದಿದ್ದ ವಿಕ್ರಂ, ಬೆಂಗಳೂರಿನಲ್ಲಿದ್ದ ನೆಲಸಿದ್ದ ಇತರೆ ಶಂಕಿತರಿಗೆ ಪೂರೈಸಿದ್ದ. ಈ ಹಿಂದೆ ಜುನೈದ್ ಆಹ್ಮದ್ ಸೇರಿ ಎಂಟು ಶಂಕಿತರ ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಸಲಾಗಿತ್ತು. ಉಳಿದ ಆರೋಪಿಗಳ ಪತ್ತೆ ಕಾರ್ಯ ಮುಂದುವರಿದಿದೆ ಎಂದು ಎನ್‌ಐಎ ತಿಳಿಸಿದೆ.

ಉಪನಿರ್ದೇಶಕರು (ಆಡಳಿತ) ರವರ ಕಛೇರಿ

ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಜಿಲ್ಲಾಡಳಿತ ಭವನ, ಬೀರಸಂದ್ರ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ.

ಸಂ.: ಆ2/ಲೇ.ಸಾ.ಸ.ಅನು/12/2024–25 ದಿನಾಂಕ: 10.01.2025

ಪತ್ರಿಕಾ ಪ್ರಕಟಣೆ

2024–25ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತ್ ಲಿಂಕ್ ಡಾಕ್ಯುಮೆಂಟ್ ಆಯವ್ಯಯದಲ್ಲಿ ಸರ್ಕಾರಿ ಪ್ರೌಢಶಾಲೆ ಶಾಲೆಗಳಿಗೆ 04 ಸೀಟರ್ ಡೆಸ್ಕ್ ಒದಗಿಸುವ ಸಂಬಂಧ ಆಸಕ್ತ ಸಂಸ್ಥೆ/ಏಜೆನ್ಸಿಗಳಿಂದ ದ್ವಿಲಕೋಟೆ ಪದ್ಧತಿಯಲ್ಲಿ ಇ–ಟೆಂಡರ್ ಅರ್ಜಿ ಆಹ್ವಾನಿಸಲಾಗಿದೆ.

ಟೆಂಡರ್‌ದಾರರಿಗೆ ಸೂಚನೆಗಳು

1. ಸರ್ಕಾರಿ ಪ್ರೌಢಶಾಲೆ ಶಾಲೆಗಳಿಗೆ 04 ಸೀಟರ್ ಡೆಸ್ಕ್ ಒದಗಿಸುವ ಸಂಬಂಧ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಪ್ರಕ್ರಿಯೆ ನಡೆಸಲಾಗುತ್ತಿದೆ.
2. ಟೆಂಡರ್ ಡಾಕ್ಯುಮೆಂಟ್‌ನ್ನು http://www.eproc.karnataka.gov.in ವೆಬ್‌ಸೈಟ್ ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. ಟೆಂಡರ್ ಪ್ರಕಟಣೆಗೆ ಸಂಬಂಧಿಸಿದಂತೆ ಯಾವುದೇ ತಿದ್ದುಪಡಿ, ಅವಧಿ ವಿಸ್ತರಣೆ ಹಾಗೂ ಇತರೆ ಹೆಚ್ಚಿನ ಸೂಚನೆಗಳನ್ನು ಸಂಬಂಧಿಸಿದ ವೆಬ್‌ಸೈಟ್ ಮೂಲಕವೇ ಪಡೆಯತಕ್ಕದ್ದು. ಮೇಲ್ಕಂಡ ಸೇವೆಯನ್ನು ಒದಗಿಸಲು ಆಸಕ್ತಿ ಇರುವ ಸಂಸ್ಥೆಗಳು ಇ–ಗವರ್ನೆನ್ಸ್ ಇಲಾಖೆಯಲ್ಲಿ ನೋಂದಣಿ ಪಡೆದು ಡಿಜಿಟಲ್ ಸಹಿಯನ್ನು ದೃಢೀಕರಣ ಪಡೆಯಬೇಕಾಗಿರುತ್ತದೆ.
3. ಈ ಸಂಬಂಧ http://www.eproc.karnataka.gov.in ಮೂಲಕವೇ ಪಡೆಯಬಹುದಾಗಿದೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಬೆಂಗಳೂರಿನಲ್ಲಿ ಇ–ಗವರ್ನೆನ್ಸ್ ಘಟಕವನ್ನು ಸಂಪರ್ಕಿಸಬಹುದಾಗಿದೆ.
4. ದೂರವಾಣಿ ಮೂಲಕ ಮಾಹಿತಿ ಪಡೆಯಲಿಚ್ಛಿಸುವವರು 080–23010900 / 23010901 ಗೆ ಕರೆ ಮಾಡಬಹುದು.
5. ಟೆಂಡರ್‌ನ ವೇಳಾಪಟ್ಟಿ ಹಾಗೂ ವಿವರಗಳು

1	ಟೆಂಡರ್ ಡಾಕ್ಯುಮೆಂಟ್‌ನ್ನು ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬೇಕಾದ ದಿನಾಂಕ	10.01.2025 ರಿಂದ 27.01.2025
2	ಟೆಂಡರ್ ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ (ವೆಬ್‌ಸೈಟ್ ಮೂಲಕ)	27.01.2025 ಸಂಜೆ 3.30 ಗಂಟೆವರೆಗೆ
3	ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಅವಧಿ	28.01.2025 ಮಧ್ಯಾಹ್ನ 12.00 ಗಂಟೆ ನಂತರ
4	ಆರ್ಥಿಕ ಬಿಡ್‌ಗಳನ್ನು ತೆರೆಯಬಹುದಾದ ಸಂಭಾವ್ಯ ದಿನಾಂಕ	30.01.2025 ಮಧ್ಯಾಹ್ನ 12.00 ಗಂಟೆ ನಂತರ
5	ಇ.ಎಂ.ಡಿ. ಮೊಬಲಗು (ವಿದ್ಯುನ್ಮಾನ ಪ್ರಕ್ರಿಯೆ ಮೂಲಕ ಮಾತ್ರ)	ರೂ. 22,000/–

6. ಉಪನಿರ್ದೇಶಕರು (ಆಡಳಿತ), ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ಈ ಕಛೇರಿಯ, ಕಛೇರಿ ಸಮಯದಲ್ಲಿ ಟೆಂಡರ್‌ನ ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 080–29566353 ಡಿ.ವೈ.ಪಿ.ಸಿ. 9448999325 ಗೆ ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿದೆ.

ಸಹಿ/–
ಉಪನಿರ್ದೇಶಕರು (ಆಡಳಿತ)
ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ

ವಾಸಸಂಇ/ಸಿಪಿ/ಎಎಎ/4238/2024–25

ನೋಟಿಸ್: ಲೋಕಾಯುಕ್ತ ನ್ಯಾಯಾಧೀಶರಿಗೆ ಹೈಕೋರ್ಟ್ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉದ್ಯಮಿ ಜೀವಾ ಆತ್ಮಹತ್ಯೆ ಪ್ರಕರಣದ ತನಿಖೆಗಾಗಿ ಸ್ವತಃ ಹೈಕೋರ್ಟ್ ರಚಿಸಿರುವ ವಿಶೇಷ ತನಿಖಾ ತಂಡಕ್ಕೆ (ಎಸ್‌ಐಟಿ) ಪ್ರಕರಣದ ವಿಚಾರಣೆ ನಡೆಸುತ್ತಿರುವ ಲೋಕಾಯುಕ್ತ ವಿಶೇಷ ಕೋರ್ಟ್‌ನ ನ್ಯಾಯಾಧೀಶರು ಷೋಕಾಸ್ ನೋಟಿಸ್ ನೀಡಿರುವುದನ್ನು ಹೈಕೋರ್ಟ್ ತೀವ್ರವಾಗಿ ತರಾಟೆಗೆ ತೆಗೆದುಕೊಂಡಿದೆ.

'ಸಿಸಿಎಚ್ 23ನೇ ವಿಶೇಷ ನ್ಯಾಯಾಲಯದ ನ್ಯಾಯಾಧೀಶರ ಈ ಕ್ರಮ ನ್ಯಾಯಾಂಗ ನಿಂದನೆ ವ್ಯಾಪ್ತಿಗೆ ಒಳಪಡುತ್ತದೆ. ಹೈಕೋರ್ಟ್ ನಿರ್ದೇಶನ ನೀಡದ ಹೊರತು ಎಸ್‌ಐಟಿಗೆ ಸಂಬಂಧಿಸಿದ ವಿಚಾರಕ್ಕೆ ಸಂಬಂಧಿಸಿ ಪ್ರತಿಕ್ರಿಯಿಸುವಾಗ ಎಚ್ಚರಿಕೆ ವಹಿಸಬೇಕು, ನಿಯಂತ್ರಣ ಕಾಪಾಡಿಕೊಳ್ಳಬೇಕು' ಎಂದು ನ್ಯಾಯಮೂರ್ತಿ ಎಂ.ನಾಗ ಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಎಚ್ಚರಿಸಿದೆ.

ಭೋವಿ ಅಭಿವೃದ್ಧಿ ನಿಗಮದಲ್ಲಿ ನಡೆದಿದೆ ಎನ್ನಲಾದ ಬಹುಕೋಟಿ ಮೊತ್ತದ ಅವ್ಯವಹಾರ ಆರೋಪದ ಪ್ರಕರಣದ ಆರೋಪಿಯಾಗಿದ್ದ ಜೀವಾ ಆತ್ಮಹತ್ಯೆ ಪ್ರಕರಣದ ತನಿಖೆಗೆ ಸಿಬಿಐ ಅಧಿಕಾರಿ ಜೊತೆ ಇಬ್ಬರು ಎಸ್.ಪಿ ದರ್ಜೆಯ ಅಧಿಕಾರಿಗಳನ್ನು ಒಳಗೊಂಡ ಎಸ್‌ಐಟಿ ನೇಮಕ ಮಾಡಿದ್ದ ತನ್ನ ಆದೇಶವನ್ನು ಹೈಕೋರ್ಟ್ ಸ್ಥಿರೀಕರಿಸಿತ್ತು.

ಇದರ ಬೆನ್ನಲ್ಲೇ; ಮೂವರೂ ಎಸ್‌ಐಟಿ ಅಧಿಕಾರಿಗಳು ಪ್ರಕರಣದ ತನಿಖೆಗಾಗಿ ಮುಖ್ಯ ತನಿಖಾಧಿಕಾರಿಯೊಬ್ಬರನ್ನು ನೇಮಕ ಮಾಡಿಕೊಂಡಿದ್ದರು. ಇದಕ್ಕೆ ಲೋಕಾಯುಕ್ತ ನ್ಯಾಯಾಧೀಶರು ಷೋಕಾಸ್ ನೋಟಿಸ್ ಜಾರಿಗೆ ಆದೇಶಿಸಿದ್ದರು. ಈ ನೋಟಿಸ್ ನೀಡಿಕೆ ಕುರಿತಂತೆ ಎಸ್‌ಐಟಿ ಮಧ್ಯಂತರ ಅರ್ಜಿ ಸಲ್ಲಿಸುವ ಮೂಲಕ ಹೈಕೋರ್ಟ್ ಗಮನಕ್ಕೆ ತಂದಿತ್ತು.

ಶುಕ್ರವಾರ ಮಧ್ಯಂತರ ಅರ್ಜಿ ವಿಚಾರಣೆ ವೇಳೆ ಸಿಬಿಐ ಪರ ವಕೀಲ ಪಿ.ಪ್ರಸನ್ನ ಕುಮಾರ್ ಮತ್ತು ರಾಜ್ಯದ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿ.ಎನ್. ಜಗದೀಶ್, 'ಅಗತ್ಯಬಿದ್ದಲ್ಲಿ ಎಸ್‌ಐಟಿ; ಬೇರೆ ಅಧಿಕಾರಿಗಳ ನೆರವು ಪಡೆಯಬಹುದು ಎಂಬ ಹೈಕೋರ್ಟ್‌ನ ಇದೇ ನ್ಯಾಯಪೀಠದ ಆದೇಶಕ್ಕೆ ಅನುಗುಣವಾಗಿಯೇ ಎಸ್‌ಐಟಿ ಬೇರೆ ಅಧಿಕಾರಿಗಳ ಸಹಾಯ ಪಡೆದಿದೆ. ಆದರೆ, ಲೋಕಾಯುಕ್ತ ನ್ಯಾಯಾಧೀಶರ ಕ್ರಮ ಹೈಕೋರ್ಟ್ ಆದೇಶಕ್ಕೆ ವಿರುದ್ಧವಾಗಿದೆ' ಎಂದು ನ್ಯಾಯಪೀಠಕ್ಕೆ ವಿವರಿಸಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, ಲೋಕಾಯುಕ್ತ ನ್ಯಾಯಾಧೀಶರಿಗೆ ಎಚ್ಚರಿಕೆ ನೀಡಿತಲ್ಲದೆ, 'ಜೀವಾ ಆತ್ಮಹತ್ಯೆಗೆ ಸಂಬಂಧಿಸಿ ಇದುವರೆಗೆ ನಡೆಸಿರುವ ತನಿಖಾ ವರದಿಯನ್ನು ಮುಂದಿನ ವಿಚಾರಣೆ ವೇಳೆಗೆ ಇದೇ ನ್ಯಾಯಪೀಠಕ್ಕೆ ಎಸ್‌ಐಟಿ ಮಂಡಿಸಬೇಕು' ಎಂದು ನಿರ್ದೇಶಿಸಿ ವಿಚಾರಣೆ ಮುಂದೂಡಿತು.

ಪ್ರತಿ ಸೋಮವಾರ ಬೆಳಿಗ್ಗೆ 4.15ರಿಂದ ಮೆಟ್ರೊ ಸಂಚಾರ

ಬೆಂಗಳೂರು: ವಾರಾಂತ್ಯದಲ್ಲಿ ಊರಿಗೆ ತೆರಳಿ ನಗರಕ್ಕೆ ಹಿಂದಿರುಗುವ ಪ್ರಯಾಣಿಕರ ಅನುಕೂಲಕ್ಕಾಗಿ ನಗರ ರೈಲ್ವೆ ನಿಲ್ದಾಣ ಹಾಗೂ ಬಸ್ ನಿಲ್ದಾಣಕ್ಕೆ ಸಂಪರ್ಕ ಒದಗಿಸುವ ಸಲುವಾಗಿ ಪ್ರತಿ ಸೋಮವಾರ ಮಾತ್ರ ಮೆಟ್ರೊ ಸೇವೆಯನ್ನು ಬೆಳಿಗ್ಗೆ 4.15ರಿಂದಲೇ ಆರಂಭವಾಗಲಿದೆ.

ಈ ಬದಲಾವಣೆ ಜನವರಿ 13ರಿಂದ ಜಾರಿಗೆ ಬರಲಿದೆ. ಉಳಿದ ದಿನ ಮೆಟ್ರೊ ರೈಲು ಸಂಚಾರದ ಸಮಯದಲ್ಲಿ ಬದಲಾವಣೆ ಇರುವುದಿಲ್ಲ ಎಂದು ಬಿಎಂಆರ್‌ಸಿಎಲ್ ಪ್ರಕಟಣೆ ತಿಳಿಸಿದೆ.

ಒಡನಾಡಿಗಳು, ವಿದ್ಯಾರ್ಥಿಗಳಿಂದ ಪ್ರೊ. ಮುಜಾಫರ್ ಅಸ್ಸಾದಿ ವ್ಯಕ್ತಿತ್ವದ ಮೆಲುಕು

'ಅಸ್ಸಾದಿ ಕುಲಪತಿಯಾಗಬೇಕಿತ್ತು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರೊ.ಮುಜಾಫರ್ ಅಸ್ಸಾದಿ ಅವರಿಗೆ ಅಸಂಖ್ಯಾತ ಸ್ನೇಹಿತ-ವಿದ್ಯಾರ್ಥಿಗಳಿದ್ದರು. ಮಹಿಳೆಯರ ಬಗ್ಗೆ ಅವರಿಗೆ ಕಾಳಜಿ, ಗೌರವವಿತ್ತು. ಸತ್ಯವನ್ನು ಧೈರ್ಯವಾಗಿ ಸಮಾಜಕ್ಕೆ ತಿಳಿಸುತ್ತಿದ್ದರು. ಅವರು ವಿಶ್ವವಿದ್ಯಾಲಯವೊಂದಕ್ಕೆ ಕುಲಪತಿಯಾಗಿ ನೇಮಕವಾಗಬೇಕಿತ್ತು...'

ನಗರದ ಸಾಲಾರ್ ಭವನದಲ್ಲಿ ಶುಕ್ರವಾರ ನಡೆದ, 'ಪ್ರೊ.ಮುಜಾಫರ್ ಅಸ್ಸಾದಿ' ಅವರ 'ಸ್ಮರಣೆ' ಕಾರ್ಯಕ್ರಮದಲ್ಲಿ ಅವರ ಒಡನಾಡಿಗಳು, ವಿದ್ಯಾರ್ಥಿಗಳು ಅವರನ್ನು ಪ್ರೀತಿಯಿಂದ ಸ್ಮರಿಸಿದರು.

ಅಲ್ ಅಮೀನ್ ಪದವಿ ಕಾಲೇಜಿನ ಪ್ರಾಧ್ಯಾಪಕಿ ಷಾಕಿರಾ ಖಾನುಂ, 'ಅಸ್ಸಾದಿಯವರಿಗೆ ಸತ್ಯ ಹೇಳುವ ಧೈರ್ಯವಿತ್ತು. ಮಹಿಳೆಯರ ಬಗ್ಗೆ ಕಾಳಜಿ ಇತ್ತು. ಕುಲಪತಿಯನ್ನಾಗಿ ನೇಮಿಸದಿದ್ದದ್ದು, ಅವರಿಗಷ್ಟೇ ಅಲ್ಲ, ಇಡೀ ನಮ್ಮ ಸಮುದಾಯಕ್ಕೆ ಮಾಡಿದ ಅಪಮಾನ' ಎಂದು ಬೇಸರ ವ್ಯಕ್ತಪಡಿಸಿದರು.

'ಅಸ್ಸಾದಿ ಅವರು ಬುಡಕಟ್ಟು ಸಮುದಾಯ ಕುರಿತು ಸಿದ್ಧಪಡಿಸಿರುವ ವರದಿ ಅನುಷ್ಠಾನಗೊಳಿಸುವ ಮೂಲಕ, ಸರ್ಕಾರ ಅವರಿಗೆ ಗೌರವ ಸಲ್ಲಿಸಬೇಕಿದೆ' ಎಂದು ಅಭಿಪ್ರಾಯಪಟ್ಟರು.

ಪತ್ರಕರ್ತ ದಿನೇಶ್ ಅಮಿನ್‌ಮಟ್ಟು ಮಾತನಾಡಿ, 'ರಾಜ್ಯಪಾಲರು ನಿರಾಕರಿಸಿದ್ದರಿಂದ ಅಸ್ಸಾದಿ ಅವರಿಗೆ ಕುಲಪತಿ ಹುದ್ದೆ ಸಿಕ್ಕಲಿಲ್ಲ. ಅವರು ಕುಲಪತಿ ಹುದ್ದೆಗೇರಲಿಲ್ಲ ಎಂದು ನೆನಪಿಸಿಕೊಳ್ಳುವ ಬದಲು, ಅವರು ಇಲ್ಲಿಯವರೆಗೆ ಬರೆದಿರುವ ಕೃತಿಗಳು, ಬರಹಗಳು, ಚಿಂತನೆಗಳ ಬಗ್ಗೆ ಹೆಚ್ಚು ಚರ್ಚೆ ಮಾಡಿದರೆ, ಅದು ನಾವು ಅವರಿಗೆ ಸಲ್ಲಿಸುವ ಗೌರವವಾಗುತ್ತದೆ' ಎಂದರು.

ಪ್ರಾಧ್ಯಾಪಕ ಕಿರಣ್ ಗಾಜನೂರು ಮಾತನಾಡಿ, 'ಪ್ರೊ. ಅಸ್ಸಾದಿಯವರಿಗೆ ಕುಲಪತಿ ಆಗಬೇಕೆಂಬ ಆಸೆ ಇರಲಿಲ್ಲ. ಆದರೆ, ಆ ಅರ್ಹತೆ ಇದೆ ಎಂದು ಅವರಿಗೆ ಅನ್ನಿಸಿತ್ತು. ಹಾಗಾಗಿ ಅವರು ತನ್ನ ಹಕ್ಕನ್ನು ಪ್ರತಿಪಾದಿಸುತ್ತಿದ್ದರು. ಇದನ್ನು ನಿರಾಕರಿಸಿರುವುದು, ವ್ಯವಸ್ಥೆಗೆ ಆಗಿರುವ ನಷ್ಟ' ಎಂದು ಅವರು ಹೇಳಿದರು.

'ನ್ಯೂಸ್ 18– ಕನ್ನಡ' ಸುದ್ದಿ ವಾಹಿನಿಯ ಸಂಪಾದಕ ಹರಿಪ್ರಸಾದ್, ಫ್ರಂಟ್‌ಲೈನ್ ಮ್ಯಾಗಜಿನ್‌ನ ಡೆಪ್ಯುಟಿ ಎಡಿಟರ್ ವಿಖಾರ್ ಅಹಮದ್, ಪ್ರಾಧ್ಯಾಪಕ ಎಸ್.ವೈ.ಸುರೇಂದ್ರ ಕುಮಾರ್ ಮಾತನಾಡಿದರು.

'ಮುಜಾಫರ್ ಅಸ್ಸಾದಿ ಒಂದು ಸ್ಮರಣೆ' ಕಾರ್ಯಕ್ರಮದಲ್ಲಿ (ಎಡದಿಂದ) ಕಿರಣ್ ಗಾಜನೂರು, ದಿನೇಶ್ ಅಮೀನ್‌ಮಟ್ಟು, ಎಸ್.ವೈ.ಸುರೇಂದ್ರ ಕುಮಾರ್, ಷಾಕಿರಾ ಖಾನುಂ ಮತ್ತು ಹರಿಪ್ರಸಾದ್ ಪಾಲ್ಗೊಂಡಿದ್ದರು —ಪ್ರಜಾವಾಣಿ ಚಿತ್ರ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ನಂ: ಬೆಂಅಪ್ರಾ/ನಯೋಸ/CLU-274/2656/2024–25 ದಿನಾಂಕ: 10.01.2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14–A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗು	ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀಮತಿ ಆರ್. ವಿದ್ಯಾ ಮತ್ತು ಎಸ್.ಎಂ. ಸೋಮಶೇಖರ್	ಬೆಂಗಳೂರು ದಕ್ಷಿಣ	ಕೆಂಗೇರಿ	ಅಗರ	204	10–0	ವ್ಯವಸಾಯ	ವಸತಿ

ಷರಾ: ಅರ್ಜಿದಾರರು ಈ ಜಮೀನಿನಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಸಾಕಷ್ಟು ಉದ್ಯೋಗ ಸೃಷ್ಟಿಯಾಗುತ್ತದೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಿನ್ಯಾಸದ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶದ ಅಭಿವೃದ್ಧಿಗೆ ಸಹಕಾರಿಯಾಗಲಿದೆ ಮತ್ತು ಲಾಜಿಸ್ಟಿಕ್ ಅನುಕೂಲವಾಗುತ್ತದೆ. ಯೋಜನಾಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು, ನಾಗರಿಕ ಸೌಲಭ್ಯದ ಜಾಗಗಳು ಮತ್ತು ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತವೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಪ್ರಶ್ನಿತ ಜಮೀನುಗಳನ್ನು 'ವ್ಯವಸಾಯ ವಲಯ' ದಿಂದ 'ವಸತಿ ಉಪಯೋಗಕ್ಕೆ' ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/- ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

ತ್ವರಿತಗತಿ ಶೈಕ್ಷಣಿಕ ಧನಸಹಾಯ ವಿತರಣೆಗೆ ಹೈಕೋರ್ಟ್ ಆದೇಶ ● 2021ರ ಅಧಿಸೂಚನೆ ಪ್ರಕಾರವೇ ಪಾವತಿಗೆ ಸೂಚನೆ

‘ಕಾರ್ಮಿಕರ ಮಕ್ಕಳ ಜೊತೆ ಚೆಲ್ಲಾಟ ಸಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಶೈಕ್ಷಣಿಕ ಧನಸಹಾಯ ಕೋರಿ, ಕರ್ನಾಟಕ ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕ ಕಲ್ಯಾಣ ಮಂಡಳಿಗೆ ಅರ್ಜಿ ಸಲ್ಲಿಸಿರುವ ಎಲ್ಲ ಮಕ್ಕಳಿಗೆ 2021ರ ಅಧಿಸೂಚನೆ ಅನ್ವಯ ಬಾಕಿ ಇರುವ ಮೂರು ವರ್ಷಗಳ ಶೈಕ್ಷಣಿಕ ಧನ ಸಹಾಯ ವಿತರಿಸಲು ತ್ವರಿತವಾಗಿ ಕ್ರಮ ಕೈಗೊಳ್ಳಬೇಕು’ ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ಆದೇಶಿಸಿದೆ.

‘ಕಟ್ಟಡ ಕಾರ್ಮಿಕರ ಮಕ್ಕಳಿಗೆ ಮೀಸಲಾದ ವರ್ಗದಲ್ಲಿ ಶೈಕ್ಷಣಿಕ ಸಹಾಯಧನ ಒದಗಿಸಲು ನಿರ್ದೇಶಿಸಬೇಕು’ ಎಂದು ಕೋರಿ, ‘ಕರ್ನಾಟಕ ರಾಜ್ಯ ಕಟ್ಟಡ ಮತ್ತು

ನಿರ್ಮಾಣ ಕಾರ್ಮಿಕರ ಫೆಡರೇಷನ್’ ಪ್ರಧಾನ ಕಾರ್ಯದರ್ಶಿ ಕೆ.ಮಹಾಂತೇಶ್ ಹಾಗೂ ಇತರೆ ಮೂವರು ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿ: ಕಾಯ್ದಿರಿಸಿದ್ದ ತೀರ್ಪನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ಪ್ರಕಟಿಸಿತು.

‘ವಿದ್ಯಾರ್ಥಿಗಳು 2020-21, 2021-22 ಹಾಗೂ 2022-23ನೇ ಸಾಲಿನಲ್ಲಿ ಕೋರಿರುವ ಶೈಕ್ಷಣಿಕ ಸಹಾಯಧನವನ್ನು 2021ರ ಅಧಿಸೂಚನೆ ಅನ್ವಯವೇ ವಿಚಾರಣೆ ಮಾಡಬೇಕು. ಅಂತೆಯೇ, ಈ ಆದೇಶವನ್ನು ಜಾರಿಗೊಳಿಸಲು ಅಗತ್ಯ ಕ್ರಮವಹಿಸಬೇಕು’ ಎಂದು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ನಿರ್ದೇಶಿಸಿದೆ. ಅಲ್ಲದೆ, 2023ರ ಸರ್ಕಾರದ ಅಧಿಸೂಚನೆಯನ್ನು ರದ್ದುಗೊಳಿಸಿರುವ ನ್ಯಾಯಪೀಠ, ಈ ಹಿಂದಿನ 2021ರ ಅಧಿಸೂಚನೆ ಪ್ರಕಾರವೇ ವಿದ್ಯಾರ್ಥಿ ವೇತನ ಪಾವತಿಸುವಂತೆ ಆದೇಶಿಸಿದೆ.

‘ಶೈಕ್ಷಣಿಕ ಸಹಾಯಧನದ ಮೊತ್ತವನ್ನು ಪರಿಷ್ಕರಿಸುವಾಗ ಕಲ್ಯಾಣ ಮಂಡಳಿಯೊಳಗಿನ ಅಥವಾ ಸರ್ಕಾರವಾಗಲೀ ಹೈಕೋರ್ಟ್‌ನ ಈ ಆದೇಶಕ್ಕೆ ಅನುಗುಣವಾಗಿ ಸೂಕ್ತ ಬದಲಾವಣೆ ಮಾಡಿಕೊಳ್ಳಬಹುದು’ ಎಂದು ಸೂಚಿಸಿರುವ ನ್ಯಾಯಪೀಠ, ‘ಶೈಕ್ಷಣಿಕ ನೆರವಿನ ಪರಿಷ್ಕರಣೆಯು ಕಟ್ಟಡ ಕಾರ್ಮಿಕರ ಮತ್ತು ಅವರ ಕುಟುಂಬಗಳ ಕಲ್ಯಾಣವೇ ಅತ್ಯಂತ ಆದ್ಯತೆ ಆಗಿರುತ್ತದೆ ಎಂಬುದನ್ನು ನೆನಪಿನಲ್ಲಿ ಇಟ್ಟುಕೊಳ್ಳಬೇಕು ಮತ್ತು ಪ್ರತಿಯೊಬ್ಬ ವಿದ್ಯಾರ್ಥಿಯ ನ್ಯಾಯಯುತವಾದ ಭವಿಷ್ಯದಲ್ಲಿ ನೋಡಿಕೊಳ್ಳಬೇಕು’ ಎಂದು ಎಚ್ಚರಿಸಿದೆ.

‘ಮಹಾಲೇಖಪಾಲರು (ಸಿಎಜಿ) ಕಲ್ಯಾಣ ಮಂಡಳಿಯ ಲೆಕ್ಕಪರಿಶೋಧನೆ ಮಾಡಿ ಅದರ ವರದಿಯನ್ನು ಮೂರು ತಿಂಗಳ ಒಳಗಾಗಿ ಹೈಕೋರ್ಟ್‌ಗೆ ಸಲ್ಲಿಸಬೇಕು’ ಎಂದು ಸಿಎಜಿಗೆ ಸೂಚಿಸಿದೆ. ಈ ಕುರಿತಂತೆ ಭಾರತದ ಹೆಚ್ಚುವರಿ ಸಾಲಿಸಿಟರ್ ಜನರಲ್ ಅವರು ಸಿಎಜಿಯಿಂದ ವರದಿ ಸಂಗ್ರಹಿಸಬೇಕು. ಈ ವರದಿ ಬಂದ ಕೂಡಲೇ ವಿಳಂಬ ಮಾಡದೆ ಪ್ರಕರಣವನ್ನು ವಿಚಾರಣೆಗೆ ಮರು ನಿಗದಿಗೊಳಿಸಬೇಕು’ ಎಂದು ಹೈಕೋರ್ಟ್ ರಿಜಿಸ್ಟ್ರಾರ್ ಜನರಲ್ ಅವರಿಗೆ ತಾಕೀತು ಮಾಡಿದೆ. ಅರ್ಜಿದಾರರ ಪರ ಹೈಕೋರ್ಟ್ ವಕೀಲ ಆದಿತ್ಯ ಚಟರ್ಜಿ ವಾದ ಮಂಡಿಸಿದ್ದರು.

ಪ್ರಕರಣವೇನು?

ಕಾರ್ಮಿಕರ ಮಕ್ಕಳ ಶೈಕ್ಷಣಿಕ ಸಹಾಯಧನದ ಮೊತ್ತವನ್ನು 2023ರಿಂದ ಶೇ70ರಿಂದ ಶೇ 80ರಷ್ಟು ಕಡಿತಗೊಳಿಸಲಾಗಿತ್ತು. ಕಲ್ಯಾಣ ಮಂಡಳಿಯ ಈ ನಿರ್ಧಾರವನ್ನು ಪ್ರಶ್ನಿಸಿ ‘ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಫೆಡರೇಷನ್’ (ಸಿಐಟಿಯು-ಎಐಸಿಸಿಟಿಯು) ಹೈಕೋರ್ಟ್ ಮೆಟ್ಟಿಲೇರಿತ್ತು. ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ 2024ರ ಏಪ್ರಿಲ್‌ನಲ್ಲಿ ಮಧ್ಯಂತರ ಆದೇಶ ನೀಡಿ, ಅರ್ಜಿ ಸಲ್ಲಿಸಿರುವ ಇಬ್ಬರು ವಿದ್ಯಾರ್ಥಿನಿಯರಿಗೆ ದಂಡ ಸಹಿತ ಶೈಕ್ಷಣಿಕ ಸಹಾಯಧನ ಪಾವತಿಸುವಂತೆ ಆದೇಶಿಸಿತ್ತು.

ಸರ್ಕಾರದ ಪ್ರತಿ ಸಹಿಯೂ ಮಾರಾಟಕ್ಕಿದೆ: ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ ಎಲ್ಲ ಸರ್ಕಾರಿ ಕೆಲಸಗಳಿಗೂ ರೇಟ್ ಫಿಕ್ಸ್ ಆಗಿದೆ. ಸರ್ಕಾರದ ಪ್ರತಿ ಸಹಿಯೂ ಮಾರಾಟಕ್ಕೆ ಇದೆ’ ಎಂದು ಕೇಂದ್ರ ಸಚಿವ ಎ ಚ್ . ಡಿ . ಕು ಮಾ ರ ಸ್ವಾ ಮಿ ಆರೋಪಿಸಿದರು.

ನಗರದಲ್ಲಿ ಶುಕ್ರವಾರ ಸುದ್ದಿಗಾರರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ‘ಎಲ್ಲ ಕಾಮಗಾರಿಗಳಲ್ಲೂ ಶೇ 60ರಷ್ಟು ಪಾಲು ಕೇಳುತ್ತಿದ್ದಾರೆ. ಭ್ರಷ್ಟಾಚಾರ ಮಿತಿ ಮೀರಿದೆ. ಈ ಬಗ್ಗೆ ಕಾಂಗ್ರೆಸ್ ಮುಖಂಡರು, ಗುತ್ತಿಗೆದಾರರೇ ಆರೋಪ ಮಾಡುತ್ತಿದ್ದಾರೆ. ಆದರೆ ಈ ಆರೋಪಕ್ಕೆ ದಾಖಲೆ ಕೊಡಿ ಎಂದು ನನ್ನನ್ನು ಕೇಳುತ್ತಿದ್ದಾರೆ. ಸರ್ಕಾರದವರು ತಮ್ಮವರನ್ನೇ ಕೇಳಿ ದಾಖಲೆ ಪಡೆದುಕೊಳ್ಳಲಿ’ ಎಂದರು.

‘ಸಿದ್ದ ರಾಮಯ್ಯ ಮಹಾನ್ ನಾಯಕರು. ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಶೇ 40 ರಷ್ಟು ಕಮಿಷನ್ ಆರೋಪ ಮಾಡಿದ್ದರು. ಪೇಸಿಎಂ ಅಂತ ಪೋಸ್ಟರ್ ಅಂಟಿಸಿದ್ದರು. ಅವರು ಆ ಆರೋಪಕ್ಕೆ ಸಂಬಂಧಿಸಿದಂತೆ ಈವರೆಗೆ ಜನರ ಮುಂದೆ ಯಾವ ದಾಖಲೆ ಇಟ್ಟಿದ್ದಾರೆ? ಕೆಂಪಣ್ಣ ಮಾಡಿದ ಆರೋಪ ಎಂದು ಅವರತ್ತ ಬೊಟ್ಟು ಮಾಡುತ್ತಾರೆ. ಅದು ನಿಜವೇ ಆಗಿದ್ದರೆ, ಅವರಿಂದ ಸಿದ್ದರಾಮಯ್ಯ ಅವರು ದಾಖಲೆ ಪಡೆದುಕೊಳ್ಳಬೇಕಿತ್ತಲ್ಲವೇ’ ಎಂದು ಪ್ರಶ್ನಿಸಿದರು.

ಬಗರ್‌ಹುಕುಂ: ಸಕ್ರಮ ಕೋರಿ ಅರ್ಜಿ ಸಲ್ಲಿಸಿದ ಕುಟುಂಬದ ಸದಸ್ಯರಿಗೆ ಮಂಜೂರು

ಅರ್ಜಿದಾರ ಮೃತಪಟ್ಟರೆ ಕುಟುಂಬಕ್ಕೆ ಜಮೀನು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಗರ್‌ಹುಕುಂ ಜಮೀನಿನ ಸಕ್ರಮ ಕೋರಿ ಅರ್ಜಿ ಸಲ್ಲಿಸಿರುವ ಅರ್ಹ ಫಲಾನುಭವಿಗಳು ಮೃತಪಟ್ಟರೆ ಅವರ ಕುಟುಂಬದ ಸದಸ್ಯರಿಗೆ ಜಮೀನು ಮಂಜೂರು ಮಾಡಬೇಕು, ಡಿಜಿಟಲ್ ಸಾಗುವಳಿ ಚೀಟಿ ನೀಡಬೇಕು ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಸೂಚನೆ ನೀಡಿದರು.

ವಿಡಿಯೊ ಕಾನ್ಫರೆನ್ಸ್‌ನಲ್ಲಿ ತಹಶೀಲ್ದಾರ್ ಹಾಗೂ ಭೂ ದಾಖಲೆಯ ಸಹಾಯ ನಿರ್ದೇಶಕರ ಜತೆ ಶುಕ್ರವಾರ ನಡೆಸಿದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ‘ಅಕ್ರಮ-ಸಕ್ರಮ, ಬಗರ್‌ಹುಕುಂ ಯೋಜನೆಯ ಅಡಿಯಲ್ಲಿ ಅರ್ಜಿ ಸಲ್ಲಿಸಿದ



ಕೃಷ್ಣ ಬೈರೇಗೌಡ

ಅರ್ಹ ಫಲಾನುಭವಿಗಳಿಗೆ ಸಾಗುವಳಿ ಚೀಟಿ ನೀಡುವುದು ಸರ್ಕಾರದ ಕರ್ತವ್ಯ. ಅನುಕೂಲಸ್ಥರಿಗೆ ಎಲ್ಲಾ ಮಾಹಿತಿ ಇರುತ್ತದೆ. ತಮಗೆ ಬೇಕಾದ ಸರ್ಕಾರಿ ಸವಲತ್ತನ್ನು ಪಡೆದುಕೊಳ್ಳುತ್ತಾರೆ. ಆದರೆ, ಬಡವರಿಗೆ, ತಳಸಮುದಾಯದವರಿಗೆ ಮಾಹಿತಿ ಕೊರತೆ ಇರುತ್ತದೆ. ಅಂಥವರ ಮನೆಗೇ ಸವಲತ್ತು ತಲುಪಿಸಬೇಕು’ ಎಂದರು.

‘ಜನವರಿ 15ರ ಒಳಗೆ 15 ಸಾವಿರ ಫಲಾನುಭವಿಗಳಿಗೆ ಬಗರ್‌ಹುಕುಂ ಸಾಗುವಳಿ ಚೀಟಿ ನೀಡುವ ಗುರಿ ನೀಡಲಾಗಿತ್ತು. ಈ ಅವಧಿಯಲ್ಲಿ ಕನಿಷ್ಠ 5,600 ಫಲಾನುಭವಿಗಳನ್ನು ಗುರುತಿಸಲಾಗಿದೆ. ಶಾಸಕರ ನೇತೃತ್ವದಲ್ಲಿ ಸಮಿತಿ ಸಭೆ ನಡೆಸಿ, ಅವರಿಗೆ ಜಮೀನು ಮಂಜೂರು ಮಾಡಬೇಕು’ ಎಂದು ಹೇಳಿದರು.

ತಹಶೀಲ್ದಾರ್‌ಗಳಿಗೆ ತರಾಟೆ: ರೈತರ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ನೀಡಲು 1-5 ನಮೂನೆ ಪೋಡಿ ದುರಸ್ತಿ ಕೆಲಸಕ್ಕೆ ಚಾಲನೆ ನೀಡಲಾಗಿತ್ತು. ಆದರೆ, ಹಲವಾರು ತಾಲ್ಲೂಕುಗಳಲ್ಲಿ 1-5 ನಮೂನೆ ಪೋಡಿ ದುರಸ್ತಿ ಕಾರ್ಯ ಮುಗಿದರೂ, 6-10 ನಮೂನೆ ಸರ್ವೆ ಕೆಲಸಕ್ಕಾಗಿ ಭೂ ದಾಖಲೆಯ ಸಹಾಯ ನಿರ್ದೇಶಕರಿಗೆ ಕಳುಹಿಸಲು ಮೀನಮೇಷ ಎಣಿಸುತ್ತಿರುವುದು ಏಕೆ ಎಂದು ತಹಶೀಲ್ದಾರ್‌ಗಳನ್ನು ತರಾಟೆಗೆ ತೆಗೆದುಕೊಂಡರು.

ತಹಶೀಲ್ದಾರ್ ನ್ಯಾಯಾಲಯಗಳಲ್ಲಿ ವರ್ಷಗಳಿಗಿಂತ ಹೆಚ್ಚುಕಾಲ ಬಾಕಿ ಉಳಿದಿರುವ ತಕರಾರು ಅರ್ಜಿಗಳನ್ನು ವಿಲೇವಾರಿ ಮಾಡದ ತಹಶೀಲ್ದಾರರ ವಿರುದ್ಧವೂ ಅಸಮಾಧಾನ ವ್ಯಕ್ತಪಡಿಸಿದ ಅವರು, 90 ದಿನಗಳಿಗಿಂತ ಹೆಚ್ಚು ಕಾಲ ಯಾವುದೇ ತಕರಾರು ಅರ್ಜಿಗಳನ್ನು ಉಳಿಸಿಕೊಳ್ಳುವಂತಿಲ್ಲ ಎಂದು ತಾಕೀತು ಮಾಡಿದರು.

ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ರಾಜೇಂದ್ರಕುಮಾರ್ ಕಟಾರಿಯಾ, ಕಂದಾಯ ಆಯುಕ್ತ ಸುನೀಲ್‌ಕುಮಾರ್, ಸರ್ವೆ ಇಲಾಖೆ ಆಯುಕ್ತ ಮಂಜುನಾಥ್ ಉಪಸ್ಥಿತರಿದ್ದರು.

ಮಹಾ ರಥೋತ್ಸವ....

ಪವಾಡಪುರುಷ ಬಳ್ಳಾರಿಯ ಅಲ್ಲೀಪುರ ಮಹಾದೇವ ತಾತನವರ ಮಹಾರಥೋತ್ಸವ ಶುಕ್ರವಾರ ಸಂಜೆ ಸಾವಿರಾರು ಭಕ್ತರ ಸಮ್ಮುಖದಲ್ಲಿ ಶ್ರದ್ಧಾಭಕ್ತಿಯಿಂದ ನೆರವೇರಿತು

ಪ್ರಜಾವಾಣಿ ಚಿತ್ರ: ಮುರುಳಿಕಾಂತ ರಾವ್

ಮೈಸೂರಿನ ಮೂರು ಪಕ್ಷಗಳ ಶಾಸಕರಿಗೆ ಸಿ.ಎಂ ಪ್ರಶ್ನೆ

ಮುಡಾದಲ್ಲಿ ಅವ್ಯವಸ್ಥೆ ಯಾಕಿದೆ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಳೆದ 20 ವರ್ಷಗಳಿಂದ ನೀವೇ ಮುಡಾ ಸದಸ್ಯರಾಗಿದ್ದೀರಿ. ಆದರೂ ಬಡಾವಣೆಗಳಲ್ಲಿ ಅವ್ಯವಸ್ಥೆ ಯಾಕಿದೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿಎಸ್ ಶಾಸಕರನ್ನು ಪ್ರಶ್ನಿಸಿದರು.

ಮುಖ್ಯಮಂತ್ರಿ ಗೃಹ ಕಚೇರಿ ‘ಕೃಷ್ಣಾ’ದಲ್ಲಿ ಮೈಸೂರು ಅಭಿವೃದ್ಧಿ ಸಂಬಂಧ ಜಿಲ್ಲೆಯ ಶಾಸಕರು, ಸಂಸದರು ಮತ್ತು ವಿಧಾನಪರಿಷತ್ ಸದಸ್ಯರ ಜತೆ ನಡೆದ ಸಭೆಯಲ್ಲಿ ಮೇಲಿನಂತೆ ಪ್ರಶ್ನಿಸಿದರು.

ಮೈಸೂರಿನ ಖಾಸಗಿ ಬಡಾವಣೆಗಳಲ್ಲಿ ಮೂಲಭೂತ ಸವಲತ್ತುಗಳ ಕೊರತೆ, ಕಳಪೆ ನಿರ್ವಹಣೆ, ನೀರು ಮತ್ತು ಒಳಚರಂಡಿ ವ್ಯವಸ್ಥೆ ಸರಿ ಇಲ್ಲದಿರುವ ಬಗ್ಗೆ ಶಾಸಕರು ಸಭೆಯಲ್ಲಿ ಪ್ರಸ್ತಾಪಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, ‘ಅಲ್ರೀ ನೀವೇ (ಮೂರು ಪಕ್ಷಗಳ ಶಾಸಕರು) ಸುಮಾರು 20 ವರ್ಷಗಳಿಂದ ಮುಡಾ ಸದಸ್ಯರಾಗಿದ್ದೀರಿ. ನೀವುಗಳು ಸದಸ್ಯರಾಗಿದ್ದೂ ಏಕೆ ಹೀಗಾಗಿದೆ. ಅವ್ಯವಸ್ಥೆ ಆಗಲು ಏಕೆ ಬಿಟ್ಟಿದ್ದೀರಿ’ ಎಂದು ಪ್ರಶ್ನಿಸಿದರು.

ನನ್ನ ಮೇಲೆ ವೃಥಾ ಆರೋಪ: ‘ನಾನು ಯಾವತ್ತೂ ಮುಡಾ ಸದಸ್ಯನಾಗಿರಲಿಲ್ಲ. ಯಾವುದೇ ಕೆಲಸವನ್ನು ಮಾಡಿಸಿ ಕೊಂಡಿಲ್ಲ. ಅದರಲ್ಲಿ ಹಸ್ತಕ್ಷೇಪವನ್ನೂ ಮಾಡಿಲ್ಲ. ನೀವು ಸದಸ್ಯರಾಗಿದ್ದೀರಿ. ಅಲ್ಲಿನ ಎಲ್ಲ ಆಗು ಹೋಗುಗಳೂ ಗೊತ್ತಿವೆ. ಆದರೆ ಯಾವುದೇ ತಪ್ಪು ಮಾಡದಿದ್ದರೂ ನನ್ನ ಮೇಲೆ ವೃಥಾ ಆರೋಪ ಮಾಡಲಾಗುತ್ತಿದೆ. ಹಾಗಿದ್ದರೂ ನೀವ್ಯಾರೂ ನನ್ನ ರಕ್ಷಣೆಗೆ ಬರಲಿಲ್ಲ’ ಎಂದು ಅವರು ಶಾಸಕರನ್ನು ಉದ್ದೇಶಿಸಿ ಸಿದ್ದರಾಮಯ್ಯ ನೋವಿನಿಂದ ನುಡಿದರು ಎಂದು ಮೂಲಗಳು ತಿಳಿಸಿವೆ.

ಸಮಸ್ಯೆಗೆ ಕಾರಣವೇನು?: ಹೊಸ ಬಡಾವಣೆ ಮಾಡುವಾಗ ವಿದ್ಯುತ್ ಸಂಪರ್ಕ, ರಸ್ತೆ, ಒಳಚರಂಡಿ ಇತ್ಯಾದಿ ಸೌಲಭ್ಯಗಳನ್ನು ಕಲ್ಪಿಸುವುದು ಬಡಾವಣೆ ಅಭಿವೃದ್ಧಿ ಮಾಡುವವರ ಜವಾಬ್ದಾರಿ. ಬಳಿಕ ಅದನ್ನು ನಗರ ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರಿಸಬೇಕು. ಆದರೆ, ಸುಮಾರು 950 ಬಡಾವಣೆಗಳನ್ನು ಹಸ್ತಾಂತರಿಸದೇ ಇರುವುದರಿಂದ ಸಮಸ್ಯೆ ಮುಂದುವರೆದಿದೆ ಎಂದು ಸಭೆಯಲ್ಲಿ ಅಧಿಕಾರಿಗಳು ಮಾಹಿತಿ ನೀಡಿದರು.

‘13ರಂದು ರಾಜ್ಯಕ್ಕೆ ಸುರ್ಜೇವಾಲಾ ಭೇಟಿ’

ಪ್ರಜಾವಾಣಿ ವಾರ್ತೆ

ಮಡಿಕೇರಿ: ‘ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು ಜ. 13ರಂದು ರಾಜ್ಯಕ್ಕೆ ಬರುವ ಸಾಧ್ಯತೆ ಇರುವುದರಿಂದ, ಗೃಹ ಸಚಿವ ಡಾ.ಜಿ.ಪರಮೇಶ್ವರ ಕರೆದಿದ್ದ ಔತಣಕೂಟವನ್ನು ಮುಂದೂಡಲಾಗಿದೆ’ ಎಂದು ಲೋಕೋಪಯೋಗಿ ಖಾತೆ ಸಚಿವ ಸತೀಶ್ ಜಾರಕಿಹೊಳಿ ತಿಳಿಸಿದರು.

ಕೊಡಗು ಜಿಲ್ಲೆಯ ವಿರಾಜಪೇಟೆ ತಾಲ್ಲೂಕಿನ ಮಾಕುಟ್ಟದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ‘ಸುರ್ಜೆವಾಲ ಸಭೆಯ ಕಾರ್ಯಸೂಚಿ ಬಗ್ಗೆ ಗೊತ್ತಿಲ್ಲ. ಅವರು ಬಂದ ನಂತರ ಗೊತ್ತಾಗಬಹುದು. ಔತಣಕೂಟವನ್ನು ಡಿಸಿಎಂ ಡಿ.ಕೆ.ಶಿವಕುಮಾರ್ ವಿರೋಧಿಸಿಲ್ಲ. ಅವರ ವಿರೋಧದಿಂದ ಔತಣಕೂಟ ರದ್ದಾಯಿತೆನ್ನುವುದು ಸರಿಯಲ್ಲ. ಮುಂದೂಡಲಾಗಿದೆ ಅಷ್ಟೇ’ ಎಂದರು.

‘ಪರಸ್ಪರ ಹೊಡೆದಾಡುವುದಕ್ಕೆ ರಾಜಕೀಯವೆನ್ನುತ್ತಾರೆ. ಬಿಜೆಪಿ, ಜೆಡಿಎಸ್ ಸೇರಿ ಎಲ್ಲ ಪಕ್ಷದಲ್ಲೂ ಹೊಡೆದಾಟವಿದೆ. ಅಧಿಕಾರದಲ್ಲಿರುವ ಪಕ್ಷದಲ್ಲಿ ಭಿನ್ನಮತವಿದ್ದೇ ಇರುತ್ತದೆ. ಅದನ್ನು ಕಾಲಕಾಲಕ್ಕೆ ಸರಿಪಡಿಸಲು ವರಿಷ್ಠರು ಪ್ರಯತ್ನಿಸುತ್ತಿರುತ್ತಾರೆ’ ಎಂದರು.

‘ಬಿಜೆಪಿಯವರು ಬೂತ್ ಮಟ್ಟದಲ್ಲಿ ಸಂವಿಧಾನದ ತತ್ವಗಳ ಬಗ್ಗೆ ಜಾಗೃತಿ ಮೂಡಿಸಲು ಮುಂದಾಗಿರುವುದು ಸ್ವಾಗತಾರ್ಹ. ಅದು ನಾಟಕವಾದರೂ ಸರಿ, ಹೇಗಾದರಾಗಲಿ, ತತ್ವಗಳು ಮನೆಗಳಿಗೆ ಮುಟ್ಟುತ್ತವೆಂಬುದೇ ಮುಖ್ಯ’ ಎಂದರು.

‘ತೊಂದರೆ ಕೊಡುವ ವ್ಯಕ್ತಿಗಳಿಂದ ರಕ್ಷಣೆಗೆ ಹೋಮ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮನಸ್ಸಿನ ನೆಮ್ಮದಿಗೆ, ತೊಂದರೆ ಕೊಡುವ ವ್ಯಕ್ತಿಗಳಿಂದ ರಕ್ಷಣೆಗೆ ನಿತ್ಯವೂ ಪೂಜೆ, ಹೋಮ, ದೇವರ ದರ್ಶನ ಮಾಡುತ್ತಿರುತ್ತೇನೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಶಿವಕುಮಾರ್

ಮಲ್ಲೇಶ್ವರದ ವೆಂಕಟೇಶ್ವರ ದೇಗುಲದಲ್ಲಿ ದೇವರ ದರ್ಶನದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ತಮಿಳುನಾಡಿನ ದೇವಸ್ಥಾನಗಳಲ್ಲಿ ಗುರುವಾರ ಹೋಮ ಮಾಡಿಸಿದೆ. ನಾನು ದೇವರ ಮೇಲೆ ನಂಬಿಕೆಯಿಟ್ಟಿರುವ ವ್ಯಕ್ತಿ. ನನಗೆ ಧರ್ಮ, ದೇವರು, ನಮ್ಮ ಆಚರಣೆಗಳ ಮೇಲೆ ನಂಬಿಕೆ ಇದೆ. ಪ್ರತಿದಿನ ದೇವರಿಗೆ ನಮಸ್ಕಾರ ಮಾಡದೆ ಮನೆಯಿಂದ ಹೊರಗೆ ಬರುವುದಿಲ್ಲ’ ಎಂದರು.

‘ಶತ್ರುಗಳ ನಾಶಕ್ಕೆ ಶಿವಕುಮಾರ್ ಹೋಮ ಮಾಡಿಸಿದ್ದಾರೆ’ ಎಂಬ ಹೇಳಿಕೆ ತಳ್ಳಿಹಾಕುವುದಿಲ್ಲ, ನನಗೆ ಯಾರು ತೊಂದರೆ ಕೊಡುತ್ತಾರೆಯೋ ಅವರಿಂದ ರಕ್ಷಣೆ ಸಿಗಲಿ ಎಂದು ಪ್ರಾರ್ಥನೆ ಮಾಡುತ್ತೇನೆ. ಅದರಲ್ಲಿ ಯಾವುದೇ ಮುಚ್ಚುಮರೆ ಇಲ್ಲ’ ಎಂದು ಪ್ರತಿಕ್ರಿಯಿಸಿದರು.

‘ನೀವು (ಮಾಧ್ಯಮ) ಸಹ ನನಗೆ ಬೇಕಾದಷ್ಟು ತೊಂದರೆ ಕೊಡುತ್ತಿರುತ್ತೀರಿ. ಇಲ್ಲದೇ ಇರುವ ಹೊಸ ಸುದ್ದಿಗಳನ್ನು ಸೃಷ್ಟಿ ಮಾಡುತ್ತಾ ಇರುತ್ತೀರಿ. ಅದಕ್ಕಾಗಿ ನಿಮ್ಮಿಂದಲೂ ನಮಗೆ ರಕ್ಷಣೆ ಸಿಗಲಿ ಎಂದು ಪ್ರಾರ್ಥನೆ ಮಾಡುತ್ತಿರುತ್ತೇನೆ’ ಎಂದು ಹೇಳಿದರು.

> **ನನ್ನ ಮೇಲೂ ವಾಮಾಚಾರ ನಡೆದಿದೆ. ಆದರೆ, ನಾನು ವಾಮಾಚಾರ ನಂಬಲ್ಲ. ಕೆಲವರು ನಂಬುತ್ತಾರೆ**
> **ಕೆ.ಎನ್. ರಾಜಣ್ಣ,** ಸಹಕಾರ ಸಚಿವ

> **ಅಧಿಕಾರ ಬೇಕು ಎಂದು ದೇವರ ಮೊರೆ ಹೋಗುವುದು ಸಾಮಾನ್ಯ. ಆದರೆ, ಶತ್ರುನಾಶಕ್ಕೆ ಹೋಗುವುದು ನನಗೆ ಗೊತ್ತಿಲ್ಲ**
> **ಎಚ್‌.ಡಿ. ಕುಮಾರಸ್ವಾಮಿ,** ಕೇಂದ್ರ ಸಚಿವ

ಅಧಿಕಾರಕ್ಕಾಗಿ ಔತಣಕೂಟ: ಆರೋಪ

ಪ್ರಜಾವಾಣಿ ವಾರ್ತೆ

ಹಾವೇರಿ: ‘ರಾಜ್ಯದಲ್ಲಿ ಅಧಿಕಾರಕ್ಕಾಗಿ ಔತಣಕೂಟಗಳು ನಡೆದಿವೆಯೇ ಹೊರತು ಜನರ ಸಂಕಷ್ಟ ನಿವಾರಣೆಯತ್ತ ಯಾವ ಪಕ್ಷವೂ ಗಮನ ಹರಿಸುತ್ತಿಲ್ಲ. ಸಿದ್ದರಾಮಯ್ಯ ಅವರೇ ಔತಣಕೂಟಗಳ ಸೃಷ್ಟಿಕರ್ತರು’ ಎಂದು ವಿಧಾನಪರಿಷತ್ ಸದಸ್ಯ ಎಚ್. ವಿಶ್ವನಾಥ್ ಆರೋಪಿಸಿದರು.



ಎಚ್‌.ವಿಶ್ವನಾಥ್

ಇಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು,‘ಈ ಔತಣಕೂಟಗಳು ಸಿದ್ದರಾಮಯ್ಯ ಅವರ ರಾಜಕೀಯದ ಭಾಗ. ಹಿಂದುಳಿದ ವರ್ಗ ಮತ್ತು ಪರಿಶಿಷ್ಟ ಜಾತಿ, ಪಂಗಡದವರನ್ನು ಒಟ್ಟುಗೂಡಿಸಿ ಔತಣಕೂಟಗಳನ್ನು ನಡೆಸಿದ್ದಾರೆ’ ಎಂದರು.

‘ಕಾಂಗ್ರೆಸ್ ಅಧಿಕಾರಕ್ಕೆ ಬರುವ ಸಂದರ್ಭದಲ್ಲಿ 50:50 ಮಾತುಕತೆ ಆಗಿರುವುದಾಗಿ ಎಐಸಿಸಿ ಹೇಳಿದೆ. ಡಿ.ಕೆ. ಶಿವಕುಮಾರ್ ಅವರು ಪಕ್ಷಕ್ಕೆ ಕೊಡುಗೆ ನೀಡಿದ್ದಾರೆ. ಅವರ ಶ್ರಮಕ್ಕೆ ಬೆಲೆ ಇಲ್ಲವೇ?’ ಎಂದು ಅವರು ಪ್ರಶ್ನಿಸಿದರು.

‘ಕಾಂಗ್ರೆಸ್‌ನವರಿಗೆ ಸಿದ್ದರಾಮಯ್ಯ ಪ್ರಿಯರಲ್ಲ. ಕಾಂಗ್ರೆಸ್‌ನ್ನು ಸಿದ್ದರಾಮಯ್ಯ ಅವರೇ ಮುಗಿಸುವರು. ಬಸ್ ಪ್ರಯಾಣ ದರ, ಮದ್ಯದ ದರವೂ ಏರಿಕೆಯಾಗಿದೆ. ಗಂಡನಿಗೆ ಹೆಂಡ ಕುಡಿಸಿ, ಹೆಂಡತಿಗೆ ₹ 2 ಸಾವಿರ ಕೊಡುತ್ತಿದ್ದಾರೆ’ ಎಂದು ಟೀಕಿಸಿದರು..

ಇತಿಹಾಸದ ಅರಿವಿಲ್ಲ: ‘ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಮತ್ತು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಅವರಿಗೆ ರಾಜ್ಯದ ರಾಜಕೀಯ ಇತಿಹಾಸ ತಿಳಿದುಕೊಳ್ಳುತ್ತಿಲ್ಲ. ಅವರಿಂದ ಸರ್ಕಾರ ಕಟ್ಟಿ ಹಾಕುವ ಕೆಲಸವಾಗುತ್ತಿಲ್ಲ’ ಎಂದು ವಿಶ್ವನಾಥ್ ಹೇಳಿದರು.

> **ಔತಣಕೂಟ ಮಾಡುವುದರಲ್ಲಿ ತಪ್ಪೇನಿಲ್ಲ. ಅದಕ್ಕೆ ಬೇರೆ ಅರ್ಥ ಕಲ್ಪಿಸುವ ಅಗತ್ಯವೂ ಇಲ್ಲ**
> **ಎಂ.ಬಿ.ಪಾಟೀಲ,** ಸಚಿವ

> **ರಾಜ್ಯದಲ್ಲಿ ಅಧಿಕಾರಿಗಳು, ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆದರೆ, ಕಾಂಗ್ರೆಸ್ ಸರ್ಕಾರ ಔತಣಕೂಟ ರಾಜಕೀಯದಲ್ಲಿ ಮುಳುಗಿದೆ**
> **ಸಿ.ಟಿ.ರವಿ,** ವಿಧಾನ ಪರಿಷತ್ ಸದಸ್ಯ

‘ವಿಶೇಷ ಅರ್ಥ ಕಲ್ಪಿಸಬೇಕಿಲ್ಲ’

ಕಾರವಾರ: ‘ರಾಜಕೀಯ ನಿರ್ಧಾರಗಳಿಗೆ ಔತಣಕೂಟ ನಡೆಸಬೇಕೆಂದಿಲ್ಲ. ಗೃಹ ಸಚಿವ ಜಿ.ಪರಮೇಶ್ವರ ಕರೆದಿದ್ದ ಔತಣಕೂಟಕ್ಕೆ ವಿಶೇಷ ಅರ್ಥ ಕಲ್ಪಿಸಬೇಕಿಲ್ಲ’ ಎಂದು ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್. ಎಸ್.ಭೋಸರಾಜು ಹೇಳಿದರು.

‘ಜಿ.ಪರಮೇಶ್ವರ ಅವರು ಪರಿಶಿಷ್ಟ ಸಮುದಾಯದ ಶಾಸಕರು, ಸಂಸದರೊಂದಿಗೆ ಸೇರಿ ಪರಿಶಿಷ್ಟರಿಗೆ ಸಂಬಂಧಿಸಿದ ಪ್ರಕರಣಗಳ ಕುರಿತು ಚರ್ಚಿಸಿದ್ದಾರೆಯೇ ಹೊರತು ಅದಕ್ಕೆ ಬೇರೆ ಬಣ್ಣ ಕಟ್ಟಬೇಕಿಲ್ಲ’ ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

ಮಹಾನಗರ ಪಾಲಿಕೆ, ವಿಜಯಪುರ

ಸಂ:ಮನಪಾ/ಲೋ.ವಿ/ಕಾಅ/ಡಿಎಮ್‌ಎ/ಟಿಎನ್‌ಡಿ/ಇಪ್ರೋ–2024–25

ದಿನಾಂಕ:09.01.2025

ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ

ವಿಜಯಪುರ ಮಹಾನಗರ ಪಾಲಿಕೆ ಬಿಡುಗಡೆಯಾದ ಸನ್ 2024–25 ನೇ ಸಾಲಿನ ಮಹಾನಗರ ಪಾಲಿಕೆಯ ಸಾಮಾನ್ಯ ಅನುದಾನದಲ್ಲಿನ 04 ಕಾಮಗಾರಿಗಳು ಕೆ.ಪಿ.ಡಬ್ಲ್ಯೂಡಿ ಇವರಿಂದ ನೋಂದಾಯಿತ ಗುತ್ತಿಗೆದಾರರಿಂದ ಇ–ಪ್ರೋಕ್ಯೂರಮೆಂಟ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಮುಖಾಂತರ ಐಟಂವಾರು ಟೆಂಡರನ್ನು ಅಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಆನ್‌ಲೈನ ಮೂಲಕ ವೆಬ್‌ಸೈಟ್ (https://kppp.karnataka.gov.in) ನಲ್ಲಿ ಪ್ರಕಟಿಸಲಾಗಿದೆ.

ಸೂಚನೆ: 1) ಟೆಂಡರ್ ತಿದ್ದುಪಡಿ ಹಾಗೂ ದಿನಾಂಕ ವಿಸ್ತರಣೆ kppp.karnataka.gov.in ಪೋರ್ಟಲ್‌ನಲ್ಲಿ ನಮೂದಿಸಲಾಗುವುದು.
2) ಆನ್‌ಲೈನ್ ಮೂಲಕ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 23–01–2025

ಸಹಿ/– ಕಾರ್ಯಪಾಲಕ ಅಭಿಯಂತರರು, ಮಹಾನಗರ ಪಾಲಿಕೆ, ವಿಜಯಪುರ

ವಾಸಾಸಂಇ/ವಿಜಯಪುರ/608/ಕೆಎಸ್‌ಎಂಸಿಎ/2024–25

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ಶಿರಸಿ ವಿಭಾಗ, ಶಿರಸಿ

ಕ್ರಸಂ: ಪಿಬಿ/5054ಪ್ರಜ.ರ.ಸೇ/ಅಧಿಸೂಚನೆ: 2024–25/2343 ದಿನಾಂಕ: 07.01.2025

ಇ–ಟೆಂಡರ್ ಅಧಿಸೂಚನೆ IFT-KW-3

ಇ–ಪ್ರೋಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ (ಸ್ಟ್ಯಾಂಡರ್ಡ್ ಡಾಕ್ಯುಮೆಂಟ್ ದ್ವಿ ಲಕೋಟೆ ಪದ್ಧತಿಯಲ್ಲಿ)(ಅಲ್ಪಾವಧಿ)

ಕರ್ನಾಟಕ ರಾಜ್ಯಪಾಲರ ಪರವಾಗಿ ಲೋಕೋಪಯೋಗಿ, ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ಕಾಮಗಾರಿಗಳಿಗಾಗಿ ಇ–ಪ್ರೋಕ್ ಸ್ಟ್ಯಾಂಡರ್ಡ್ ಡಾಕ್ಯುಮೆಂಟ್ ಮುಖಾಂತರ ಟೆಂಡರನ್ನು ದ್ವಿ ಲಕೋಟೆ ಪದ್ಧತಿಯಲ್ಲಿ ಈ ಕೆಳಕಾಣಿಸಿದಂತೆ ಇ–ಪ್ರೋಕ್‌ನಲ್ಲಿ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಇ–ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ kppp.karnataka.gov.in ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ಈ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದು. ಕಾಮಗಾರಿಗಳ ಇನ್ನುಳಿದ ವಿವರಗಳು ಈ ಕೆಳಗಿನಂತಿವೆ.

ಒಟ್ಟು 1 ಕಾಮಗಾರಿ

(1) ಟೆಂಡರ್ ಮಾಹಿತಿ ವಿಚಾರಣೆಗೆ ಕೊನೆಯ ದಿನಾಂಕ: 16–01–2025 (16.00 ಗಂಟೆಗೆ) (2) ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: 17–01–2025 (16.00 ಗಂಟೆವರೆಗೆ) (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 18–01–2025 (16.30 ಗಂಟೆವರೆಗೆ) (4) ಆರ್ಥಿಕ ಬಿಡ್ ತೆರೆಯುವ ದಿನಾಂಕ: 20–01–2025 (16.00 ಗಂಟೆವರೆಗೆ)

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು, ಹಾಗೂ ರಾಜ್ಯ ಹೆದ್ದಾರಿ ಪ್ರಾಧಿಕಾರ ಅಧಿಕಾರಿ, ಲೋಕೋಪಯೋಗಿ ಇಲಾಖೆ ವಿಭಾಗ, ಶಿರಸಿ (ಉತ್ತರ ಕನ್ನಡ ಜಿಲ್ಲೆ)

DIPR/ADK/KSMCA/727/ 24-25 dt.10.01.2025

ಸರ್ಕಾರಕ್ಕೆ ರಾಜ್ಯ ಒಕ್ಕಲಿಗರ ಸಂಘ ಆಗ್ರಹ

‘ಜಾತಿವಾರು ಜನಗಣತಿ ವರದಿ ತಿರಸ್ಕರಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದುಳಿದ ವರ್ಗಗಳ ಆಯೋಗ ನಡೆಸಿರುವ ‘ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ’ಯ (ಜಾತಿವಾರು ಜನಗಣತಿ) ವರದಿ ಅವೈಜ್ಞಾನಿಕವಾಗಿದ್ದು, ಸರ್ಕಾರ ತಿರಸ್ಕರಿಸಬೇಕು ಎಂದು ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷ ಕೆಂಚಪ್ಪಗೌಡ ಆಗ್ರಹಿಸಿದರು.

ಕೆಂಚಪ್ಪಗೌಡ

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘2014–15ರಲ್ಲಿ ಆಯೋಗ ಸಮೀಕ್ಷೆ ನಡೆಸಿತ್ತು. ಮನೆ ಮನೆಗೆ ಹೋಗಿ ಸರಿಯಾದ ಮಾಹಿತಿ ಪಡೆದಿಲ್ಲ ಎಂಬ ಆರೋಪವಿದೆ. ಹಾಗಾಗಿ ಸರ್ಕಾರ ವರದಿಯನ್ನು ಅನುಷ್ಠಾನಕ್ಕೆ ತರಬಾರದು. ಮುಂದಿನ ಹೋರಾಟದ ರೂಪುರೇಷೆಗಳನ್ನು ನಿರ್ಧರಿಸಲು ಜನವರಿ 12 ರಂದು ಕಿಮ್ಸ್ ಆವರಣದಲ್ಲಿ ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿಯವರ ನೇತೃತ್ವದಲ್ಲಿ ಸಭೆ ನಡೆಯಲಿದೆ. ಪಟ್ಟನಾಯಕನಹಳ್ಳಿ ಮಠದ ನಂಜಾವಧೂತ ಸ್ವಾಮೀಜಿ, ವಿಶ್ವ ಒಕ್ಕಲಿಗರ ಮಠದ ನಿಶ್ಚಲಾನಂದನಾಥ ಸ್ವಾಮೀಜಿ ಹಾಗೂ ಸಮುದಾಯದ ಸಚಿವರು, ಶಾಸಕರ ಭಾಗವಹಿಸುವರು’ ಎಂದು ತಿಳಿಸಿದರು.

ವರದಿ ಪ್ರಕಾರ ರಾಜ್ಯದ ಜನಸಂಖ್ಯೆ 5.98 ಕೋಟಿ. ಆದರೆ, ಈಗ ರಾಜ್ಯದ ಜನಸಂಖ್ಯೆ 7 ಕೋಟಿ. ಇನ್ನೂ ಒಂದು ಕೋಟಿ ಜನರು ಸಮೀಕ್ಷೆಯಿಂದ ಹೊರಗುಳಿದಂತಾಗಿದೆ. ಹತ್ತು ವರ್ಷಗಳಷ್ಟು ಹಳೆಯದಾಗಿರುವ ಸಮೀಕ್ಷಾ ವರದಿ ಅನುಷ್ಠಾನ ಮಾಡಿದರೆ ಒಕ್ಕಲಿಗ ಸೇರಿದಂತೆ ಹಲವು ಸಮುದಾಯಗಳಿಗೆ ಅನ್ಯಾಯವಾಗುತ್ತದೆ ಎಂದು ಹೇಳಿದರು.

ವಿರೋಧದ ಮಧ್ಯೆಯೂ ಸರ್ಕಾರ ವರದಿ ಅನುಷ್ಠಾನ ಮಾಡಿದರೆ ವೀರಶೈವ ಮಹಾಸಭಾ ಹಾಗೂ ಇತರೆ ಸಮುದಾಯಗಳ ಜತೆಗೂಡಿ ಹೋರಾಟ ಮಾಡಲಾಗುವುದು. ಕಾನೂನು ಹೋರಾಟ ಸಹ ನಡೆಸಲಾಗುವುದು ಎಂದು ಎಚ್ಚರಿಸಿದರು.

ರಾಜ್ಯ ಒಕ್ಕಲಿಗರ ಮೀಸಲಾತಿ ಹೋರಾಟ ಸಮಿತಿಯ ಅಧ್ಯಕ್ಷ ಗಾ.ನಂ. ಶ್ರೀಕಂಠಯ್ಯ ಮಾತನಾಡಿ, ‘ಹತ್ತು ವರ್ಷಗಳ ಹಳೆಯದಾದ ವರದಿ ಅನುಷ್ಠಾನ ಮಾಡುವುದರಲ್ಲಿ ಅರ್ಥವಿಲ್ಲ. ಹತ್ತು ವರ್ಷದಲ್ಲಿ ಹಲವು ಬದಲಾವಣೆಗಳಾಗಿವೆ. ಜಾತಿವಾರು ಜನಗಣತಿ ನಡೆಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವಿಲ್ಲ. ಕೇಂದ್ರ ಸರ್ಕಾರದ ಮೂಲಕವೇ ನಡೆಸಬೇಕು’ ಎಂದು ಒತ್ತಾಯಿಸಿದರು.

ಒಕ್ಕಲಿಗರ ಸಂಘದ ಪ್ರಧಾನ ಕಾರ್ಯದರ್ಶಿ ಟಿ.ಕೋನಪ್ಪರೆಡ್ಡಿ ಮಾತನಾಡಿ, ‘ಸಮೀಕ್ಷೆಯಲ್ಲಿ ಶೇಕಡ 40ರಷ್ಟು ಮನೆಗಳಿಗೆ ಭೇಟಿಯನ್ನೇ ನೀಡಿಲ್ಲ. ಹಾಗಾಗಿ ಇದು ಅವೈಜ್ಞಾನಿಕ ವರದಿಯಾಗಿದೆ’ ಎಂದರು.

ಗೋಷ್ಠಿಯಲ್ಲಿ ಸಂಘದ ಉಪಾಧ್ಯಕ್ಷರಾದ ರೇಣುಕಪ್ರಸಾದ್, ಎಲ್.ಶ್ರೀನಿವಾಸ್, ಸಹಾಯಕ ಕಾರ್ಯದರ್ಶಿ ಆರ್. ಹನುಮಂತರಾಯಪ್ಪ ಇದ್ದರು.

ಸುದ್ದಿ 2 ನಿಮಿಷ

‘ಗ್ರಾ.ಪಂ: ಸಹಭಾಗಿತ್ವ ಕ್ರಿಯಾ ಯೋಜನೆಗೆ ಒತ್ತು’

ಬೆಂಗಳೂರು: ದೂರದೃಷ್ಟಿ ಯೋಜನೆ ಆಧರಿಸಿ 2025-26ನೇ ಸಾಲಿನ ಸಮಗ್ರ, ಸಹಭಾಗಿತ್ವ ವಾರ್ಷಿಕ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸುವಂತೆ ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಎಲ್ಲ ಗ್ರಾಮ ಪಂಚಾಯತಿಗಳಿಗೂ ಸೂಚನೆ ನೀಡಿದ್ದಾರೆ.

ಗ್ರಾಮ ಯೋಜನಾ ಸಮಿತಿ ಮತ್ತು ಗ್ರಾಮ ಪಂಚಾಯಿತಿ ಯೋಜನಾ ಸಮಿತಿಗಳ ಸಹಕಾರದೊಂದಿಗೆ 2023-24ರಿಂದ 2028-29ನೇ ಸಾಲಿನವರೆಗೆ ದೂರದೃಷ್ಟಿ ಯೋಜನೆಯನ್ನು ಸಿದ್ಧಪಡಿಸಲಾಗಿದೆ. ಗುರುತಿಸಲಾದ ಒಂಬತ್ತು ಆದ್ಯತಾ ವಲಯಗಳನ್ನು ಆಧಾರವಾಗಿ ಇಟ್ಟುಕೊಂಡು, ಸಮಗ್ರ ಭಾಗವಹಿಸುವಿಕೆಯನ್ನು ಒಳಗೊಂಡ ವಾರ್ಷಿಕ ಕ್ರಿಯಾ ಯೋಜನೆಗಳನ್ನು ಸಿದ್ಧಪಡಿಸಬೇಕು. ಅದಕ್ಕೂ ಮುನ್ನ ಸರಣಿ ಚಟುವಟಿಕೆಗಳನ್ನು ಅಭಿಯಾನದ ರೂಪದಲ್ಲಿ ಹಮ್ಮಿಕೊಳ್ಳಬೇಕು ಎಂದು ಹೇಳಿದ್ದಾರೆ.

ಸಮುದಾಯದ ಸಹಭಾಗಿತ್ವದೊಂದಿಗೆ, ಗ್ರಾಮ ಪಂಚಾಯಿತಿಯ ಎಲ್ಲಾ ಅನುದಾನದ ಮೂಲಗಳು ಒಳಗೊಂಡಂತೆ ಯೋಜನೆ ಇರಬೇಕು. ಗ್ರಾಮ ಪಂಚಾಯಿತಿ ಹಂತದ ಇತರೆ ಅಭಿವೃದ್ಧಿ ಇಲಾಖೆಗಳ ಅನುದಾನ, ಯೋಜನೆಗಳು, ಕಾರ್ಯಕ್ರಮಗಳನ್ನು ಕಡ್ಡಾಯವಾಗಿ ವಾರ್ಷಿಕ ಕ್ರಿಯಾ ಯೋಜನೆಯಲ್ಲಿ ಅಳವಡಿಸಿಕೊಳ್ಳಬೇಕು. ಕಡಿಮೆ ಖರ್ಚಿನಲ್ಲಿ ನಿರ್ವಹಿಸುವ ಚಟುವಟಿಕೆಗಳು ಹಾಗೂ ವೆಚ್ಚಗಳನ್ನು ಭರಿಸದೆ ಕೈಗೊಳ್ಳಬಹುದಾದ ಚಟುವಟಿಕೆಗಳನ್ನು ಗುರುತಿಸಬೇಕು ಎಂದಿದ್ದಾರೆ.

ಸಾಂಕ್ರಾಮಿಕ ರೋಗ ಸಂಶೋಧನೆಗೆ ಬೆಂಗಳೂರಿನಲ್ಲಿ ಪ್ರಯೋಗಾಲಯ

ಬೆಂಗಳೂರು: ಭಾರತೀಯ ವೈದ್ಯಕೀಯ ಸಂಶೋಧನಾ ಸಂಸ್ಥೆಯು (ಐಸಿಎಂಆರ್) ದಕ್ಷಿಣ ಭಾರತದಲ್ಲಿ ಪ್ರಥಮ ಸಾಂಕ್ರಾಮಿಕ ರೋಗ ಸಂಶೋಧನೆ ಮತ್ತು ರೋಗ ನಿರ್ಣಯ ಪ್ರಯೋಗಾಲಯ ಸ್ಥಾಪಿಸಲು ನಿರ್ಧರಿಸಿದ್ದು, ಇದಕ್ಕೆ ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯನ್ನು (ಬಿಎಂಸಿಆರ್‌ಐ) ಆಯ್ಕೆ ಮಾಡಿದೆ.

ಬಿಎಂಸಿಆರ್‌ಐ ನಗರದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಈ ಬಗ್ಗೆ ಮಾಹಿತಿ ಹಂಚಿಕೊಂಡ ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ ಪಾಟೀಲ, ‘ಈ ಪ್ರಯೋಗಾಲಯ ಸ್ಥಾಪನೆಯಿಂದ ರಾಜ್ಯದಲ್ಲಿ ಸಂಶೋಧನೆ ಹೆಚ್ಚಲಿದೆ. ವೈರಾಣುಗಳಿಗೆ ಸಂಬಂಧಿಸಿದಂತೆ ಸಂಶೋಧನೆ ಹಾಗೂ ರೋಗ ನಿರ್ಣಯಕ್ಕೆ ಪ್ರಯೋಗಾಲಯವು ಸಹಕಾರಿಯಾಗಿದೆ’ ಎಂದು ಹೇಳಿದರು.

‘ಶಿಲೀಂದ್ರ ಸೋಂಕಿನ ಗುರುತಿಸುವಿಕೆ ಮತ್ತು ಚಿಕಿತ್ಸೆ ಸುಧಾರಣೆ ಸಾಧ್ಯವಾಗುತ್ತದೆ. ಪರಾವಲಂಬಿ ಜೀವಿಗಳ ಅಧ್ಯಯನವನ್ನೂ ಈ ಪ್ರಯೋಗಾಲಯದಲ್ಲಿ ನಡೆಸಲಾಗುತ್ತದೆ’ ಎಂದರು.

ಗೌರಿ ಲಂಕೇಶ್ ಹತ್ಯೆ ಪ್ರಕರಣ ಆರೋಪಿಗೆ ಜಾಮೀನು

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ₹2 ಲಕ್ಷ ಮೊತ್ತದ ಬಾಂಡ್ ಮತ್ತು ಎರಡು ಶ್ಯೂರಿಟಿಗಳನ್ನು ನೀಡಲು ಸೂಚನೆ
- ಪ್ರಕರಣದಲ್ಲಿ ಎಲ್ಲ ಆರೋಪಿಗಳಿಗೂ ಸಿಕ್ಕಿದ ಜಾಮೀನು

ಬೆಂಗಳೂರು: ಪತ್ರಕರ್ತೆ ಗೌರಿ ಲಂಕೇಶ್ ಹತ್ಯೆ ಪ್ರಕರಣದ ಮತ್ತೊಬ್ಬ ಆರೋಪಿ ಶರದ್ ಬಾಹು ಸಾಹೇಬ್ ಕಲಾಸ್ಕರ್‌ಗೆ ಪ್ರಧಾನ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯ ಜಾಮೀನು ಮಂಜೂರು ಮಾಡಿದೆ. ಇದರೊಂದಿಗೆ ಗೌರಿ ಲಂಕೇಶ್ ಹತ್ಯೆ ಪ್ರಕರಣದಲ್ಲಿ ಬಂಧಿತರಾಗಿದ್ದ ಎಲ್ಲ ಆರೋಪಿಗಳಿಗೂ ಜಾಮೀನು ಸಿಕ್ಕಂತಾಗಿದೆ.

ಗೌರಿ ಲಂಕೇಶ್

ಆರೋಪಿ ಕಲಾಸ್ಕರ್ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಾಧೀಶ ಮುರುಳೀಧರ್ ಪೈ ಜಾಮೀನು ಮಂಜೂರು ಮಾಡಿದರು.

‘ಜಾಮೀನು ಮಂಜೂರು ಮಾಡಿದರೆ ಆರೋಪಿ ಇದೇ ರೀತಿಯ ಕೃತ್ಯಗಳಲ್ಲಿ ಭಾಗಿಯಾಗುವ ಸಾಧ್ಯತೆಯಿದೆ. ಅಲ್ಲದೇ ಸಾಕ್ಷಿಗಳಿಗೆ ಬೆದರಿಕೆ ಹಾಕುವ ಸಾಧ್ಯತೆಯಿದೆ. ಜಾಮೀನು ನೀಡಬಾರದು. ಜಾಮೀನು ಅರ್ಜಿಯನ್ನು ವಜಾ ಮಾಡಬೇಕು’ ಎಂದು ಪ್ರಾಸಿಕ್ಯೂಷನ್ ಪರ ವಕೀಲರು ಕೋರಿದರು.

‘ಆರೋಪಿಗಳ ವಿರುದ್ಧ ವಿಚಾರಣೆ ಬಾಕಿಯಿರುವ ಸಂದರ್ಭದಲ್ಲಿ ಅವರ ವೈಯಕ್ತಿಕ ಹಕ್ಕು ಕಸಿದುಕೊಳ್ಳಲು ಆಗುವುದಿಲ್ಲ. ಅನಗತ್ಯ ವಿಳಂಬವು ಬದುಕುವ ಹಕ್ಕನ್ನು ಮೊಟಕುಗೊಳಿಸಿದಂತೆ ಆಗುತ್ತದೆ ಎಂದು ಇತ್ತೀಚೆಗೆ ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿದೆ. ಅರ್ಜಿದಾರರು 2018ರ ಸೆಪ್ಟೆಂಬರ್ 4ರಿಂದ ಬಂಧನದಲ್ಲಿದ್ದು, ಜಾಮೀನು ಮಂಜೂರು ಮಾಡಬಹುದಾಗಿದೆ’ ಎಂದು ನ್ಯಾಯಾಧೀಶರು ಹೇಳಿದರು.

₹2 ಲಕ್ಷ ಮೊತ್ತದ ಬಾಂಡ್ ಮತ್ತು ಎರಡು ಶ್ಯೂರಿಟಿಗಳನ್ನು ನೀಡಬೇಕು ಎಂಬ ಷರತ್ತಿನೊಂದಿಗೆ ನ್ಯಾಯಾಧೀಶರು ಜಾಮೀನು ಮಂಜೂರು ಮಾಡಿದರು.

ಹತ್ಯೆ ಪ್ರಕರಣದಲ್ಲಿ ಆರೋಪಿಗಳ ವಿರುದ್ಧ ಐಪಿಸಿ 302(ಕೊಲೆ), 120ಬಿ(ಕ್ರಿಮಿನಲ್ ಪಿತೂರಿಗೆ ಶಿಕ್ಷೆ), 118 (ಜೀವಾವಧಿ ಶಿಕ್ಷೆ ಆಗುವಂತಹ ಕೃತ್ಯಕ್ಕೆ ಸಹಕಾರ), 304 (ಕೊಲೆ ಆರೋಪಕ್ಕೆ ಶಿಕ್ಷೆ), ಭಾರತೀಯ ಶಸ್ತ್ರಾಸ್ತ್ರ ಕಾಯ್ದೆ, ಕರ್ನಾಟಕ ಸಂಘಟಿತ ಅಪರಾಧಗಳ ನಿಯಂತ್ರಣಾ ಕಾಯ್ದೆಯ ವಿವಿಧ ಸೆಕ್ಷನ್‌ಗಳ ಅಡಿ ಪ್ರಕರಣ ದಾಖಲಿಸಿಕೊಂಡು ಪೊಲೀಸರು ತನಿಖೆ ನಡೆಸಿದ್ದರು.

ಹಣ ವರ್ಗಾಯಿಸುವ ಆದೇಶಕ್ಕೆ ತಡೆ

ಅರಣ್ಯಕ್ಕೆ ₹300 ಕೋಟಿ ಅನುದಾನ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಅರಣ್ಯ ಇಲಾಖೆಗೆ ₹300 ಕೋಟಿ ಅನುದಾನ ವರ್ಗಾಯಿಸುವ ಆದೇಶವನ್ನು ರದ್ದು ಮಾಡಲಾಗಿದೆ.

ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಅರಣ್ಯೀಕರಣ ಮತ್ತು ಆನೆ ಹಾವಳಿ ತಡೆಗಟ್ಟಲು ‘ಆನೆ ಬ್ಯಾರಿಕೇಡ್’ ನಿರ್ಮಾಣಕ್ಕೆ ₹300 ಕೋಟಿ ಅನುದಾನವನ್ನು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಅನುದಾನವಾಗಿ ಪಡೆಯಲು ಅರಣ್ಯ ಇಲಾಖೆಗೆ ಆರ್ಥಿಕ ಇಲಾಖೆ 2024ರ ನವೆಂಬರ್ 27ರಂದು ಅನುಮತಿ ನೀಡಿತ್ತು. ಇದಕ್ಕೆ ಮಾಲಿನ್ಯ ನಿಯಂತ್ರಣ ಮಂಡಳಿಯ ಸಮ್ಮತಿ ಇರಲಿಲ್ಲ. ಆದರೂ, ಅರಣ್ಯ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರಿಗೆ ಹಣ ವರ್ಗಾಯಿಸಿಕೊಳ್ಳಲು ಲೆಕ್ಕ ಶೀರ್ಷಿಕೆಯನ್ನು ನಿಗದಿ ಮಾಡಿ ಆರ್ಥಿಕ ಇಲಾಖೆ ಅನಧಿಕೃತ ಟಿಪ್ಪಣಿ ಹೊರಡಿಸಿತ್ತು.

ಈ ಬಗ್ಗೆ ‘ಪ್ರಜಾವಾಣಿ’ಯ 2024ರ ಡಿಸೆಂಬರ್ 3ರ ಸಂಚಿಕೆಯಲ್ಲಿ ‘ಅರಣ್ಯಕ್ಕೆ ₹426 ಕೋಟಿ: ಮಂಡಳಿ ತಡೆ’ ಶೀರ್ಷಿಕೆಯಡಿ ವಿಶೇಷ ವರದಿ ಪ್ರಕಟವಾಗಿತ್ತು. ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಸಭೆಯಲ್ಲಿ ವಿಷಯ ಚರ್ಚೆಯಾಗಿ, ಸದಸ್ಯರು ಅನುದಾನ ನೀಡುವುದಕ್ಕೆ ವಿರೋಧ ವ್ಯಕ್ತಪಡಿಸಿದ್ದರು.

ಅರಣ್ಯಕ್ಕೆ ₹426 ಕೋಟಿ: ಮಂಡಳಿ ತಡೆ

ವರದಿ ಪರಿಣಾಮ

‘ಅರಣ್ಯೀಕರಣ ಕಾಮಗಾರಿಗೆ ₹150 ಕೋಟಿ, ಆನೆ ಬ್ಯಾರಿಕೇಡ್ ನಿರ್ಮಾಣಕ್ಕೆ ₹150 ಕೋಟಿಯನ್ನು ವರ್ಗಾಯಿಸಲು ಸೂಚಿಸಲಾಗಿತ್ತು. ಈ ಕಾಮಗಾರಿಗಳಿಗೆ ಅನುದಾನದ ರೂಪದಲ್ಲಿ ಅರಣ್ಯ ಇಲಾಖೆಗೆ ಹಣ ನೀಡುವ ಅವಶ್ಯ ಇರುವುದಿಲ್ಲ’ ಎಂದು ರಾಜ್ಯ ಮಾಲಿನ್ಯ ಮಂಡಳಿಯ ಸದಸ್ಯ ಕಾರ್ಯದರ್ಶಿ ಅವರಿಗೆ ಅರಣ್ಯ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರು 2025ರ ಜನವರಿ 7ರಂದು ಪತ್ರ ಬರೆದು ತಿಳಿಸಿದ್ದಾರೆ.

ಜೆರೋಧಾದ ಕಾಮತ್ ಜೊತೆ ನಡೆದ ಪಾಡ್‌ಕಾಸ್ಟ್‌ನಲ್ಲಿ ಮೋದಿ ಮಾತು

‘ನಾನೂ ಮನುಷ್ಯ; ತಪ್ಪಾಗಬಹುದು’

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ‘ನಾನು ಕೂಡ ಮನುಷ್ಯ. ನಾನು ತಪ್ಪುಗಳನ್ನು ಮಾಡಬಹುದು. ಆದರೆ, ಕೆಟ್ಟ ಉದ್ದೇಶದಿಂದ ನಾನು ತಪ್ಪುಗಳನ್ನು ಮಾಡುವುದಿಲ್ಲ...’

ಜೆರೋಧಾ ಸಂಸ್ಥೆಯ ಸಹಸಂಸ್ಥಾಪಕ ನಿಖಿಲ್ ಕಾಮತ್ ಅವರು ನಡೆಸಿಕೊಡುವ ‘ಪೀಪಲ್ ಬೈ ಡಬ್ಲ್ಯುಟಿಎಫ್’ ಪಾಡ್‌ಕಾಸ್ಟ್ ಸರಣಿಯಲ್ಲಿ ಪಾಲ್ಗೊಂಡಿದ್ದ ಮೋದಿ, ಈ ಮಾತು ಹೇಳಿದ್ದಾರೆ.

ಇದು ಮೋದಿ ಅವರು ಪಾಲ್ಗೊಂಡಿದ್ದ ಮೊದಲ ಪಾಡ್‌ಕಾಸ್ಟ್ ಆಗಿದ್ದು, ಶುಕ್ರವಾರ ಬಿಡುಗಡೆ ಮಾಡಲಾಗಿದೆ.

ಕಳೆದ ವರ್ಷ ಲೋಕಸಭೆ ಚುನಾವಣೆ ವೇಳೆ,‘ನಾನು ಅತಿ ಮಾನುಷ ವ್ಯಕ್ತಿಯಲ್ಲ, ದೇವರೇ ನನ್ನನ್ನು ಕಳಿಸಿದ್ದಾನೆ’ ಎಂಬುದಾಗಿ ಸುದ್ದಿವಾಹಿನಿಯೊಂದ-ಕ್ಕೆ ನೀಡಿದ ಸಂದರ್ಶನದಲ್ಲಿ ಮೋದಿ ಹೇಳಿದ್ದರು. ಈ ಮಾತಿಗೆ ಟೀಕೆಗಳು ವ್ಯಕ್ತವಾಗಿದ್ದವು. ಪಾಡ್‌ಕಾಸ್ಟ್‌ನಲ್ಲಿ ಈಗ ಈ ರೀತಿ ಹೇಳಿದ್ದಾರೆ. ಇದಕ್ಕೂ ಟೀಕೆಗಳು ವ್ಯಕ್ತವಾಗಿವೆ.

ತಮ್ಮ ಬಾಲ್ಯ, ಗುಜರಾತ್ ಮುಖ್ಯಮಂತ್ರಿ ಆದಾಗಿನಿಂದ ಹಿಡಿದು ಈಗಿನ ರಾಜಕಾರಣ, ಸಾಮಾಜಿಕ ಮಾಧ್ಯಮಗಳು, ಉದ್ಯಮಶೀಲತೆ ಸೇರಿ ಹಲವಾರು ವಿಷಯಗಳ ಬಗ್ಗೆ ಮೋದಿ ಅಭಿಪ್ರಾಯ ಹಂಚಿಕೊಂಡಿದ್ದಾರೆ. ‘ಗುಜರಾತ್ ಮುಖ್ಯಮಂತ್ರಿ-ಯಾಗಿ ಅಧಿಕಾರ ವಹಿಸಿಕೊಂಡ ನಂತರ ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ್ದೆ. ಜನರು ತಪ್ಪುಗಳನ್ನು ಮಾಡುತ್ತಾರೆ. ನಾನೂ ಮನುಷ್ಯ, ದೇವರಲ್ಲ. ಹೀಗಾಗಿ ನಾನು ಕೂಡ ತಪ್ಪುಗಳನ್ನು ಮಾಡಬಹುದು ಎಂದು ಹೇಳಿದ್ದೆ’ ಎಂಬುದಾಗಿ ಮೋದಿ ಹೇಳಿದ್ದಾರೆ.

‘ನನ್ನ ಮಾತೃಭಾಷೆ ಹಿಂದಿಯಲ್ಲ. ನನ್ನಿಂದ ತಪ್ಪು-ಗಳಾಗಬಹುದು’ ಎಂದು ನಿಖಿಲ್ ಪಾಡ್‌ಕಾಸ್ಟ್ ಆರಂಭಿಸಿದ್ದರು.

‘ನಾನು ಸಹ ಹಿಂದಿ ಭಾಷಿಕನಲ್ಲ. ನಾವಿಬ್ಬರೂ ಹೀಗೇ ನಮ್ಮ ಮಾತುಕತೆ ಮುಂದುವರಿಸೋಣ’ ಎಂದು ಮುಗುಳ್ನಗುತ್ತಾ ಮೋದಿ ಹೇಳಿದ್ದಾರೆ.

‘ದೇಶ ಮೊದಲು’ ಎಂಬುದು ನನ್ನ ಸಿದ್ಧಾಂತ. ಹೊಸ ವಿಚಾರಗಳು ಈ ನನ್ನ ಸಿದ್ಧಾಂತಕ್ಕೆ ಹೊಂದಿಕೊಳ್ಳುವಂತೆ ಇರುವವರೆಗೆ ಅವುಗಳನ್ನು ನಾನು ಒಪ್ಪಿಕೊಳ್ಳುವೆ ಹಾಗೂ ಹಳೆಯ ವಿಚಾರಗಳನ್ನು ತ್ಯಜಿಸುವೆ’ ಎಂದು ಮೋದಿ ಹೇಳಿದ್ದಾರೆ.

ರಾಜಕಾರಣ ಕುರಿತು ಮಾತನಾಡಿದ ಮೋದಿ, ‘ಉತ್ತಮ ಜನರು ನಿರಂತರವಾಗಿ ರಾಜಕೀಯಕ್ಕೆ ಬರುವುದು ಅಗತ್ಯ. ಅದರಲ್ಲೂ, ತಮ್ಮ ಮಹತ್ವಾ-ಕಾಂಕ್ಷೆಗಿಂತ ಜನಪರ ಕೆಲಸ ಮಾಡುವವರು ಬೇಕು. ಇದನ್ನೇ ನಾನು ನನ್ನ ‘ದೇಶ ಮೊದಲು’ ಸಿದ್ಧಾಂತ ಎಂದು ಕರೆಯುತ್ತೇನೆ’ ಎಂದಿದ್ದಾರೆ.

‘ನಿಮ್ಮ ದೃಷ್ಟಿಯಲ್ಲಿ, ಇಂತಹ ಸಾಮರ್ಥ್ಯವುಳ್ಳ ಯುವ ರಾಜಕಾರಣಿಗಳು ಇದ್ದಾರೆಯೇ’ ಎಂಬ ನಿಖಿಲ್ ಕಾಮತ್ ಪ್ರಶ್ನೆಗೆ, ‘ನನ್ನ ಬಳಿ ಅಂಥವರ ದೊಡ್ಡ ಪಟ್ಟಿಯೇ ಇದೆ. ಕೆಲವರ ಹೆಸರು ಹೇಳಿದರೆ, ಇತರರಿಗೆ ಅನ್ಯಾಯ ಮಾಡಿದಂತಾಗಲಿದೆ. ಹೀಗೆ ಮಾಡಬಾರದು. ಇದು ನನ್ನ ಜವಾಬ್ದಾರಿ’ ಎಂದು ಉತ್ತರಿಸಿದ್ದಾರೆ.

ಪ್ರಧಾನಿ ಮೋದಿ ಹೇಳಿದ್ದು

- ಉತ್ತಮ ರಾಜಕಾರಣಿ ಜನರಿಗಾಗಿ ಬದುಕಬೇಕು. ನಿಷ್ಠೆ, ಬದ್ಧತೆ ಹೊಂದಿರಬೇಕು. ತಂಡದ ನಾಯಕನಾಗಿರ-ಬೇಕು ಹಾಗೂ ಉತ್ತಮ ಸಂವಹನ ಕಲೆ ಮೈಗೂಡಿಸಿಕೊಂಡಿರಬೇಕು
- ಸ್ಥಳೀಯ ಶಾಲೆಯಲ್ಲಿಯೇ ಓದಿದ ಸಾಮಾನ್ಯ ವಿದ್ಯಾರ್ಥಿ ನಾನು. ಪಠ್ಯೇತರ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದು, ಈಜು ಇಷ್ಟವಾಗುತ್ತಿದ್ದವು. ಕುಟುಂಬದ ಸದಸ್ಯರ ಬಟ್ಟೆಗಳನ್ನೆಲ್ಲಾ ಒಗೆಯುತ್ತಿದ್ದೆ
- ಸಾಮಾಜಿಕ ಮಾಧ್ಯಮಗಳಲ್ಲಿ ‘ಟ್ರೋಲ್’ಗೆ ಒಳಗಾಗುವುದು ಪ್ರತಿಯೊಬ್ಬರ ಜೀವನದ ಭಾಗವೇ ಆಗಿದೆ ಪ್ರಜಾಪ್ರಭುತ್ವ ಗಟ್ಟಿಗೊಳಿಸುವಲ್ಲಿ ಸಾಮಾಜಿಕ ಮಾಧ್ಯಮದ ಪಾತ್ರ ಮಹತ್ವದ್ದು
- ಒಬ್ಬ ವ್ಯಕ್ತಿಯಾಗಿ ಅಮೆರಿಕ್ಕೆ ಭೇಟಿ ನೀಡುವುದು ದೊಡ್ಡ ವಿಷಯವಲ್ಲ. ಅಮೆರಿಕ ವೀಸಾ ನಿರಾಕರಿಸಿದಾಗ ಒಂದು ಚುನಾಯಿತ ಸರ್ಕಾರ ಮತ್ತು ದೇಶಕ್ಕೆ ಅಗೌರವ ತೋರಲಾಗಿತ್ತು ಎಂಬ ಭಾವನೆ ಮೂಡಿತ್ತು
- ಚುನಾವಣೆಗಳ ಸಮಯದಲ್ಲಿ ರಾಜಕೀಯ ಭಾಷಣಗಳನ್ನು ಮಾಡಬೇಕು. ನನಗೆ ಇಷ್ಟವಿಲ್ಲದಿದ್ದರೂ ಇದನ್ನು ಮಾಡುವುದು ಕಡ್ಡಾಯ. ಚುನಾವಣೆಗಳು ಇಲ್ಲದಿದ್ದಾಗ ಆಡಳಿತದಲ್ಲಿ ಸಮಯ ಕಳೆಯುತ್ತೇನೆ. ಅಧಿಕಾರದಲ್ಲಿ ಇಲ್ಲದಿರುವಾಗ ಪಕ್ಷದ ಸಂಘಟನೆಗೆ ಗಮನ ಹರಿಸುತ್ತೇನೆ
- ಎಂದಿಗೂ ‘ಕಂಫರ್ಟ್ ಜೋನ್’ಗೆ ನನ್ನನ್ನು ಸೀಮಿತ ಮಾಡಿಕೊಂಡಿಲ್ಲ. ಅಪಾಯ ಎದುರಿಸಿ ಮುನ್ನುಗ್ಗುವ ನನ್ನ ಸಾಮರ್ಥ್ಯ ಕೂಡ ಪೂರ್ಣಪ್ರಮಾಣದಲ್ಲಿ ಬಳಕೆಯಾಗಿಲ್ಲ
- 2047ರ ವೇಳೆಗೆ ‘ವಿಕಸಿತ ಭಾರತ’ ಸಾಕಾರಗೊಳ್ಳಬೇಕು ಎಂಬುದೇ ನನ್ನ ಧ್ಯೇಯ

‘ಡ್ಯಾಮೇಜ್ ಕಂಟ್ರೋಲ್’ ಯತ್ನ: ಕಾಂಗ್ರೆಸ್ ಟೀಕೆ

ನಿಖಿಲ್ ಕಾಮತ್ ಅವರ ಪಾಡ್‌ಕಾಸ್ಟ್‌ನಲ್ಲಿ ಮಾತನಾಡಿರುವ ಪ್ರಧಾನಿ ಮೋದಿ ‘ನಾನು ಮನುಷ್ಯ; ನನ್ನಿಂದಲೂ ಪ್ರಮಾದಗಳಾಗುತ್ತವೆ’ ಎಂದಿದ್ದಾರೆ. ‘ಡ್ಯಾಮೇಜ್ ಕಂಟ್ರೋಲ್’ಗೆ ಹೀಗೆ ಹೇಳಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ ಎಂದು ಕಾಂಗ್ರೆಸ್ ಶುಕ್ರವಾರ ಟೀಕಿಸಿದೆ.

‘ಎಂಟು ತಿಂಗಳ ಹಿಂದೆ, ‘ನನ್ನನ್ನು ದೇವರೇ ಕಳುಹಿಸಿದ್ದಾನೆ’ ಎಂಬುದಾಗಿ ಹೇಳಿದ್ದ ವ್ಯಕ್ತಿಯಿಂದ ಇಂತಹ ಮಾತು ಬಂದಿದೆ. ಇದು ‘ಡ್ಯಾಮೇಜ್ ಕಂಟ್ರೋಲ್’ ಎಂಬುದು ಸ್ಪಷ್ಟ’ ಎಂದು ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಹೇಳಿದ್ದಾರೆ.

ಸಂಭಲ್: ಯಥಾಸ್ಥಿತಿಗೆ ‘ಸುಪ್ರೀಂ’ ಆದೇಶ

ಬಾವಿ ವಿವಾದ– ಜಾಮಾ ಮಸೀದಿ ವ್ಯವಸ್ಥಾಪನಾ ಸಮಿತಿ ಸಲ್ಲಿಸಿರುವ ಅರ್ಜಿ

ನವದೆಹಲಿ (ಪಿಟಿಐ): ಉತ್ತರ ಪ್ರದೇಶದ ಸಂಭಲ್‌ನ ಜಾಮಾ ಮಸೀದಿ ವ್ಯವಸ್ಥಾಪನಾ ಸಮಿತಿಯು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್, ಮಸೀದಿ ಪ್ರವೇಶ ದ್ವಾರದ-ಲ್ಲಿರುವ ಬಾವಿಗೆ ಸಂಬಂಧಿಸಿ ಯಥಾಸ್ಥಿತಿ ಕಾಪಾಡುವಂತೆ ಶುಕ್ರವಾರ ಸೂಚಿಸಿದೆ.

ಅಲ್ಲದೇ, ತನ್ನ ಅನುಮತಿ ಇಲ್ಲದೆಯೇ ಬಾವಿ ಕುರಿತಂತೆ ಯಾವುದೇ ಕ್ರಮ ಕೈಗೊಳ್ಳಬಾರದು ಹಾಗೂ ಎರಡು ವಾರಗಳ ಒಳಗಾಗಿ ಯಥಾಸ್ಥಿತಿ ವರದಿ ಸಲ್ಲಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡಿದೆ.

ಮುಖ್ಯನ್ಯಾಯಮೂರ್ತಿ ಸಂಜೀವ್ ಖನ್ನಾ ಹಾಗೂ ನ್ಯಾಯಮೂರ್ತಿ ಸಂಜಯ್ ಕುಮಾರ್ ಅವರು ಇದ್ದ ನ್ಯಾಯಪೀಠ ಅರ್ಜಿ ವಿಚಾರಣೆ ನಡೆಸಿತು.

‘ಬಹಳ ವರ್ಷಗಳಿಂದಲೂ ಇದೇ ಬಾವಿಯ ನೀರು ಬಳಸಲಾಗುತ್ತಿದೆ. ಈ ಸ್ಥಳವನ್ನು ‘ಹರಿ ಮಂದಿರ’ ಎಂಬುದಾಗಿ ಉಲ್ಲೇಖಿಸುವ ಹಾಗೂ ಅಲ್ಲಿ ಧಾರ್ಮಿಕ ಚಟುವಟಿಕೆ ಆರಂಭಿಸುವ ಯೋಜನೆ ರೂಪಿಸಲಾಗುತ್ತಿದೆ’ ಎಂದು ಮಸೀದಿ ಪರ ವಕೀಲ ಹುಜೇಫಾ ಅಹ್ಮದಿ, ಪೀಠದ ಗಮನಕ್ಕೆ ತಂದರು. ಇದಕ್ಕೆ ಪ್ರತಿಕ್ರಿಯಿ-ಸಿದ ಸಿಜೆಐ, ‘ಇಂತಹ ಚಟುವಟಿಕೆಗಳಿಗೆ ಅನುಮತಿ ನೀಡುವುದಿಲ್ಲ’ ಎಂದರು.

ಹಿಂದೂ ಪರ ವಕೀಲ ವಿಷ್ಣುಶಂಕರ ಜೈನ್, ‘ಬಾವಿಯು ಮಸೀದಿ ವ್ಯಾಪ್ತಿಯಿಂದ ಹೊರಗಿದ್ದು, ಇಲ್ಲಿ ಪೂಜೆ ಮಾಡಿರುವುದಕ್ಕೆ ಇತಿಹಾಸ ಇದೆ’ ಎಂದು ವಾದಿಸಿದರು. ಎರಡೂ ಕಡೆಯವರ ವಾದ ಆಲಿಸಿದ ಪೀಠ, ಯಥಾಸ್ಥಿತಿಗೆ ಆದೇಶಿಸಿತು.

ಅರ್ಜಿಗಳ ವಿಲೀನ: ಮಧ್ಯಪ್ರವೇಶಕ್ಕೆ ನಕಾರ

ಮಥುರಾ ಶ್ರೀಕೃಷ್ಣ ಜನ್ಮಭೂಮಿ–ಶಾಹಿ ಈದ್ಗಾ ಮಸೀದಿ ವಿವಾದ ಕುರಿತು ಹಿಂದೂಗಳಿಂದ ಸಲ್ಲಿಕೆಯಾಗಿರುವ 15 ಅರ್ಜಿಗಳನ್ನು ಒಟ್ಟುಗೂಡಿಸುವಂತೆ ಅಲಹಾಬಾದ್ ಹೈಕೋರ್ಟ್ ಆದೇಶ ವಿಚಾರದಲ್ಲಿ ಮಧ್ಯಪ್ರವೇಶಿಸುವುದಿಲ್ಲ. ಇದನ್ನು ನಂತರ ಪ್ರಸ್ತಾಪಿಸಬಹುದು ಎಂದು ಸುಪ್ರೀಂ ಕೋರ್ಟ್ ಶುಕ್ರವಾರ ಹೇಳಿದೆ.

ಈ ವಿಚಾರವಾಗಿ, ಮೇಲ್ನೋಟಕ್ಕೆ ಅಲಹಾಬಾದ್ ಹೈಕೋರ್ಟ್ ಆದೇಶ ಪರ ಅಭಿಪ್ರಾಯ ವ್ಯಕ್ತಪಡಿಸಿದ ಸುಪ್ರೀಂ ಕೋರ್ಟ್, ಈ ರೀತಿ ಮಾಡುವುದರಿಂದ ಎರಡೂ ಕಡೆಯವರಿಗೆ ಅನುಕೂಲವಾಗಲಿದೆ ಎಂದು ಹೇಳಿದೆ.

ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ಹಾಗೂ ನ್ಯಾಯಮೂರ್ತಿ ಸಂಜಯ್ ಕುಮಾರ್ ಅವರು ಇದ್ದ ನ್ಯಾಯಪೀಠ ಅರ್ಜಿ ವಿಚಾರಣೆ ನಡೆಸಿತು.

‘1991ರ ಪೂಜಾ ಸ್ಥಳಗಳ ಕಾಯ್ದೆ ಕುರಿತು ಈಗಾಗಲೇ ನಿರ್ಧಾರ ಪ್ರಕಟ-ಸಲಾಗಿದೆ. ಈಗ, ಅರ್ಜಿಗಳನ್ನು ಒಟ್ಟುಗೂಡಿಸುವ ವಿಷಯವಾಗಿ ನ್ಯಾಯಾಲಯ ಏಕೆ ಮಧ್ಯಪ್ರವೇಶಿಸಬೇಕು’ ಎಂದು ಪೀಠ ಪ್ರಶ್ನಿಸಿತು.

ಮಹಿಳಾ ಮೀಸಲು: ವಿಚಾರಣೆಗೆ ನಿರಾಕರಣೆ

ನವದೆಹಲಿ (ಪಿಟಿಐ): 2023ರ ‘ನಾರಿ ಶಕ್ತಿ ವಂದನ ಕಾಯ್ದೆ’ಯಲ್ಲಿ ಉಲ್ಲೇಖವಾಗಿರುವ ಕ್ಷೇತ್ರಗಳ ಪುನರ್‌ವಿಂಗಡಣೆಗೆ ಸಂಬಂಧಿಸಿದ ಅಂಶವನ್ನು ಪರಿಶೀಲನೆಗೆ ಒಳಪಡಿಸಲು ಸುಪ್ರೀಂ ಕೋರ್ಟ್ ಶುಕ್ರವಾರ ನಿರಾಕರಿಸಿತು. ಈ ಕಾಯ್ದೆಯು ಲೋಕಸಭೆ ಹಾಗೂ ವಿಧಾನಸಭಾ ಕ್ಷೇತ್ರಗಳಲ್ಲಿ ಶೇಕಡ 33ರಷ್ಟನ್ನು ಮಹಿಳೆಯರಿಗೆ ಮೀಸಲಾಗಿ ಇರಿಸುತ್ತದೆ.

ಜಯಾ ಠಾಕೂರ್ ಮತ್ತು ಭಾರತೀಯ ಮಹಿಳೆಯರ ರಾಷ್ಟ್ರೀಯ ಒಕ್ಕೂಟ (ಎನ್‌ಎಫ್‌ಐಡಬ್ಲ್ಯು) ಸಲ್ಲಿಸಿದ್ದ ಅರ್ಜಿಗಳು ನ್ಯಾಯಮೂರ್ತಿಗಳಾದ ಬೇಲಾ ಎಂ. ತ್ರಿವೇದಿ ಮತ್ತು ಪಿ.ಬಿ. ವರಾಳೆ ಅವರು ಇರುವ ವಿಭಾಗೀಯ ಪೀಠದ ಮುಂದೆ ವಿಚಾರಣೆಗೆ ಬಂದಿದ್ದವು.

ಜಯಾ ಅವರು ಸಲ್ಲಿಸಿರುವ ಅರ್ಜಿಯು ಮಸೂದೆಯನ್ನು ಪ್ರಶ್ನಿಸಿತ್ತು. ಮಸೂದೆಯು ಈಗ ಕಾಯ್ದೆಯಾಗಿದೆ. ಎನ್‌ಎಫ್‌ಐಡಬ್ಲ್ಯು ಸಲ್ಲಿಸಿರುವ ಅರ್ಜಿಯು ಕಾಯ್ದೆಯಲ್ಲಿ ಇರುವ ಕ್ಷೇತ್ರಗಳ ಮರುವಿಂಗಡಣೆ ಅಂಶವನ್ನು ಪ್ರಶ್ನಿಸಿತ್ತು. ಜಯಾ ಅವರ ಅರ್ಜಿಯು ಈಗ ಮಹತ್ವ ಕಳೆದುಕೊಂಡಿದೆ. ಎನ್‌ಎಫ್‌ಐಡಬ್ಲ್ಯು ಸಲ್ಲಿಸಿರುವ ಅರ್ಜಿಯನ್ನು ಸಂವಿಧಾನದ 32ನೆಯ ವಿಧಿಯ ಅಡಿಯಲ್ಲಿ ಪರಿಶೀಲಿಸಬೇಕಾಗಿಲ್ಲ, ಎನ್‌ಎಫ್‌ಐಡಬ್ಲ್ಯು ತನ್ನ ತಕರಾರನ್ನು ಹೈಕೋರ್ಟ್ ಅಥವಾ ಇತರ ಯಾವುದೇ ಸೂಕ್ತ ವೇದಿಕೆಯಲ್ಲಿ ಪ್ರಸ್ತಾಪಿಸಬಹುದು ಎಂದು ಪೀಠವು ಹೇಳಿದೆ.

‘ಒಂದು ಕಣ್ಣು ಕಳೆದುಕೊಂಡರೂ ಶೇ 100ರಷ್ಟು ಅಂಗವೈಕಲ್ಯ’

ವಜ್ರ ಕತ್ತರಿಸುವುದಕ್ಕೆ ಅಗಾಧ ಕುಶಲತೆ, ಭಾರಿ ನಿಖರತೆಯ ಅಗತ್ಯವಿದೆ. ಈ ಕಾರ್ಯದಲ್ಲಿ ತೊಡಗಿರುವ ವ್ಯಕ್ತಿ ಒಂದು ಕಣ್ಣು ಕಳೆದುಕೊಂಡಿದ್ದರೂ ಆತನದು ಶೇ 100ರಷ್ಟು ಅಂಗವೈಕಲ್ಯವೇ ಎಂದು ಹೇಳಿರುವ ಸುಪ್ರೀಂ ಕೋರ್ಟ್, ವ್ಯಕ್ತಿಗೆ ನೀಡಬೇಕಾದ ಪರಿಹಾರ ಮೊತ್ತ ಹೆಚ್ಚಿಸಿ ಆದೇಶಿಸಿದೆ.

ಕೇರಳದ ಜಯನಂದನ್ ಎಂಬುವವರು ಸಲ್ಲಿಸಿದ್ದ ಅರ್ಜಿ ವಿಚಾರಣೆ ವೇಳೆ ಈ ಮಾತು ಹೇಳಿರುವ ಸುಪ್ರೀಂ ಕೋರ್ಟ್, ಅರ್ಜಿದಾರರಿಗೆ ಶೇ8ರ ಬಡ್ಡಿಯೊಂದಿಗೆ ಒಟ್ಟು ₹15,98,000 ಪರಿಹಾರ ನೀಡಲು ನಿರ್ದೇಶಿಸಿದೆ.

2005ರಲ್ಲಿ ನಡೆದಿದ್ದ ಅಪಘಾತದಲ್ಲಿ ಜಯನಂದನ್ ಒಂದು ಕಣ್ಣಿನ ದೃಷ್ಟಿ ಕಳೆದುಕೊಂಡಿದ್ದರು. ತ್ರಿಶ್ಶೂರಿನ ಮೋಟಾರ್ ಅಪಘಾತ ಕ್ಲೇಮುಗಳ ನ್ಯಾಯಮಂಡಳಿಯು ಜಯನಂದನ್ ಅವರ ಅಂಗವೈಕಲ್ಯ ಶೇ 49ರಷ್ಟು ಎಂದು ತೀರ್ಮಾನಿಸಿ, ಅವರಿಗೆ ಶೇ8ರ ಬಡ್ಡಿಯೊಂದಿಗೆ ₹8.70 ಲಕ್ಷ ಪರಿಹಾರ ನೀಡುವಂತೆ ಆದೇಶಿಸಿತ್ತು. ಇದನ್ನು ಪ್ರಶ್ನಿಸಿ ಅವರು ಹೈಕೋರ್ಟ್ ಮೆಟ್ಟಿಲೇರಿದ್ದರು. ಅಂಗವೈಕಲ್ಯ ಪ್ರಮಾಣ ಶೇ 65ರಷ್ಟು ತೀರ್ಪು ನೀಡಿದ್ದ ಹೈಕೋರ್ಟ್, ₹10,57,500 ಪರಿಹಾರ ನೀಡುವಂತೆ ಆದೇಶಿಸಿತ್ತು. ಈ ತೀರ್ಪು ಪ್ರಶ್ನಿಸಿ, ಜಯನಂದನ್ ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಸಿದ, ನ್ಯಾಯಮೂರ್ತಿಗಳಾದ ಸಂಜಯ ಕರೋಲ್ ಹಾಗೂ ಮನಮೋಹನ ಅವರು ಇದ್ದ ನ್ಯಾಯಪೀಠ, ಪರಿಹಾರ ಮೊತ್ತ ಹೆಚ್ಚಿಸಿ ಆದೇಶಿಸಿದೆ.

ಬಾಲಕನಿಗೆ ಎಚ್‌ಎಂಪಿವಿ ಸೋಂಕು ದೃಢ

ಹಿಮ್ಮತ್‌ನಗರ (ಪಿಟಿಐ): ಗುಜರಾತ್‌ನ ಸಬರಕಾಂತ ಜಿಲ್ಲೆಯ ಎಂಟು ವರ್ಷದ ಬಾಲಕನಿಗೆ ಎಚ್‌ಎಂಪಿವಿ ಸೋಂಕು ದೃಢಪಟ್ಟಿದೆ. ರಾಜ್ಯದಲ್ಲಿ ಎಚ್‌ಎಂಪಿವಿ ಪ್ರಕರಣಗಳ ಸಂಖ್ಯೆ ಸದ್ಯ ಮೂರಕ್ಕೆ ಏರಿದೆ ಎಂದು ಅಧಿಕಾರಿಯೊಬ್ಬರು ಶುಕ್ರವಾರ ತಿಳಿಸಿದ್ದಾರೆ.

ಪ್ರಂತಿಜ್ ತಾಲ್ಲೂಕಿನ ಕೃಷಿ ಕಾರ್ಮಿಕರ ಕುಟುಂಬಕ್ಕೆ ಸೇರಿದ ಬಾಲಕನಲ್ಲಿ ಎಚ್‌ಎಂಪಿವಿ ಸೋಂಕು ಇರುವುದು ಖಾಸಗಿ ಪ್ರಯೋಗಾಲಯ-ದಲ್ಲಿ ನಡೆಸಿದ ಪರೀಕ್ಷೆಯಲ್ಲಿ ದೃಢಪಟ್ಟಿತ್ತು. ಆದರೆ ಆರೋಗ್ಯ ಅಧಿಕಾರಿಗಳು, ಇದರ ದೃಢೀಕರಣಕ್ಕಾಗಿ ಬಾಲಕನ ರಕ್ತದ ಮಾದರಿಗಳನ್ನು ಸಂಗ್ರಹಿಸಿ, ಸರ್ಕಾರಿ ಪ್ರಯೋಗಾಲಯಕ್ಕೆ ಕಳುಹಿಸಿದ್ದರು. ಅಲ್ಲಿ ನಡೆಸಿದ ಪರೀಕ್ಷೆಯಲ್ಲೂ ಸೋಂಕು ಇರುವುದು ಶುಕ್ರವಾರ ದೃಢಪಟ್ಟಿದೆ ಎಂದು ಅವರು ಹೇಳಿದರು.

ಎನ್‌ಕೌಂಟರ್‌ನಲ್ಲಿ ಮೂವರು ನಕ್ಸಲರ ಹತ್ಯೆ

ರಾಯಪುರ (ಪಿಟಿಐ): ಛತ್ತೀಸಗಢದ ಸುಕ್ಮಾ ಜಿಲ್ಲೆಯಲ್ಲಿ ನಡೆದ ಎನ್‌ಕೌಂಟರ್‌ನಲ್ಲಿ ಮೂವರು ನಕ್ಸಲರು ಹತರಾಗಿದ್ದಾರೆ. ಅವರನ್ನು ಹುಡುಕಿಕೊಟ್ಟ-ವರಿಗೆ ₹18 ಲಕ್ಷ ಬಹುಮಾನ ನೀಡುವುದಾಗಿ ಒಂದು ದಿನದ ಹಿಂದೆಯಷ್ಟೆ ಪೊಲೀಸರು ಘೋಷಿಸಿದ್ದರು.

‘ಭದ್ರತಾ ಪಡೆಗಳ ಜಂಟಿ ತಂಡಗಳು ಗುರುವಾರ ಬೆಳಿಗ್ಗೆಯಿಂದ ಕಾರ್ಯಾಚರಣೆ ನಡೆಸುತ್ತಿದ್ದವು. ಈ ವೇಳೆ ಪಾಲಿಗುಡ-ಗುಂಡ್‌ರಾಜ್‌ಗುಡೆಂ ಬೆಟ್ಟದಲ್ಲಿ ಎನ್‌ಕೌಂಟರ್ ನಡೆದಿದೆ. ಹತರಾದ ಮೂವರು ನಕ್ಸಲರ ಮೃತದೇಹವನ್ನು ವಶಕ್ಕೆ ಪಡೆಯಲಾಗಿದೆ’ ಎಂದು ಪೊಲೀಸರು ಶುಕ್ರವಾರ ಹೇಳಿದ್ದಾರೆ.

‘ಮೃತ ನಕ್ಸಲ್ ಕೋರ್ಸ ಮಹೇಶ್ ಹಲವು ನಕ್ಸಲ್ ದಾಳಿಗಳ ಹಿಂದಿನ ಪ್ರಮುಖ ಸಂಚುಕೋರನಾಗಿದ್ದ, ಆತನನ್ನು ಹುಡುಕಿಕೊಟ್ಟವರಿಗೆ ₹8 ಲಕ್ಷ ಬಹುಮಾನ ಘೋಷಣೆಯಾಗಿತ್ತು. ಇನ್ನಿಬ್ಬರು ನಕ್ಸಲರಾದ ನವೀನ್ ಮತ್ತು ಅವಲಂ ಭೀಮ ಅವರನ್ನು ಹುಡುಕಿಕೊಟ್ಟ-ವರಿಗೆ ತಲಾ ಐದು ಲಕ್ಷ ಘೋಷಣೆಯಾಗಿತ್ತು’ ಎಂದು ಅಧಿಕಾರಿಗಳು ಎಂದು ಮಾಹಿತಿ ನೀಡಿದ್ದಾರೆ.

ಬಲೂನ್ ಹಬ್ಬ... ಮಾಮಲ್ಲಪುರದಲ್ಲಿ ಶುಕ್ರವಾರ ನಡೆದ 10ನೇ ತಮಿಳುನಾಡು ಬಲೂನ್ ಉತ್ಸವದಲ್ಲಿ ವಿವಿಧ ಬಗೆಯ ಬಲೂನ್‌ಗಳನ್ನು ಜನರು ಕುತೂಹಲದಿಂದ ವೀಕ್ಷಿಸಿದರು –ಪಿಟಿಐ ಚಿತ್ರ

ಸಂಕ್ಷಿಪ್ತ ಸುದ್ದಿ

‘ಹಿಂದಿ ರಾಷ್ಟ್ರಭಾಷೆಯಲ್ಲ, ಅಧಿಕೃತ ಭಾಷೆಯಷ್ಟೆ’

ಚೆನ್ನೈ (ಪಿಟಿಐ): ಹಿಂದಿ ರಾಷ್ಟ್ರ ಭಾಷೆಯಲ್ಲ, ಅದು ಅಧಿಕೃತ ಭಾಷೆಯಷ್ಟೆ ಎಂದು ಭಾರತ ಕ್ರಿಕೆಟ್ ತಂಡದ ಮಾಜಿ ಆಟಗಾರ ಆರ್. ಅಶ್ವಿನ್ ಹೇಳಿದ್ದಾರೆ.

ಆರ್. ಅಶ್ವಿನ್

ಖಾಸಗಿ ಕಾಲೇಜೊಂದರ ಘಟಿಕೋತ್ಸವ-ದಲ್ಲಿ ಗುರುವಾರ ಮಾತನಾಡಿದ ಅವರು, ‘ನೀವು ಯಾವ ಭಾಷೆಯಲ್ಲಿ ಸಂವಾದ ನಡೆಸಲು ಬಯಸುತ್ತೀರಿ’ ಎಂದು ಪ್ರಶ್ನಿಸಿದರು.

ಇಂಗ್ಲಿಷ್‌ನಲ್ಲಿ ಮಾತನಾಡುವಂತೆ ಹಲವರು ಹೇಳಿದರು. ತಮಿಳು ಭಾಷೆಯ ಆಯ್ಕೆ ನೀಡಿದಾಗಲೂ ಬಹುತೇಕ ವಿದ್ಯಾರ್ಥಿಗಳು ಬೆಂಬಲಿಸಿದರು. ಹಿಂದಿ ಆಯ್ಕೆ ನೀಡಿದಾಗ ಯಾರೂ ಪ್ರತಿಕ್ರಿಯಿಸಲಿಲ್ಲ. ಈ ವೇಳೆ ಅಶ್ವಿನ್ ‘ಹಿಂದಿ ರಾಷ್ಟ್ರ ಭಾಷೆಯಲ್ಲ, ಅದು ಅಧಿಕೃತ ಭಾಷೆಯಷ್ಟೆ ಎಂದು ನಾನು ಭಾವಿಸುತ್ತೇನೆ’ ಎಂದರು.

ಅಲಿಗಢ ವಿ.ವಿಗೆ ಬಾಂಬ್ ಬೆದರಿಕೆ

ಅಲಿಗಢ (ಪಿಟಿಐ): ಅಲಿಗಢ ಮುಸ್ಲಿಂ ವಿಶ್ವವಿದ್ಯಾಲಯಕ್ಕೆ ಇ–ಮೇಲ್ ಮೂಲಕ ಬಾಂಬ್ ಬೆದರಿಕೆಯ ಸಂದೇಶ ಬಂದಿರುವುದರಿಂದ ವಿ.ವಿ ಆವರಣದಲ್ಲಿ ಭದ್ರತೆಯನ್ನು ಹೆಚ್ಚಿಸಲಾಗಿದೆ ಎಂದು ಪೊಲೀಸರು ಶುಕ್ರವಾರ ತಿಳಿಸಿದರು.

‘ಕ್ಯಾಂಪಸ್’ ಅನ್ನು ಸ್ಫೋಟಿಸುವುದಾಗಿ ಕುಲಪತಿ ಸೇರಿದಂತೆ ವಿ.ವಿಯ ಎಲ್ಲಾ ಅಧಿಕಾರಿಗಳಿಗೆ ಬಾಂಬ್ ಬೆದರಿಕೆ ಸಂದೇಶವನ್ನು ಕಳುಹಿಸಲಾಗಿದೆ. ಈ ಕುರಿತು ತನಿಖೆ ಆರಂಭಿಸಲಾಗಿದೆ.

23 ಶಾಲೆಗೆ ಬೆದರಿಕೆ ವಿದ್ಯಾರ್ಥಿ ವಶಕ್ಕೆ

ನವದೆಹಲಿ (ಪಿಟಿಐ): ಕಳೆದ ಕೆಲವು ದಿನಗಳಿಂದ ದೆಹಲಿಯ 23ಕ್ಕೂ ಹೆಚ್ಚು ಶಾಲೆಗಳಿಗೆ ಹುಸಿ ಬಾಂಬ್ ಬೆದರಿಕೆ ಸಂದೇಶ ಕಳುಹಿಸಿದ ಆರೋಪದ ಮೇಲೆ 12ನೇ ತರಗತಿಯ ವಿದ್ಯಾರ್ಥಿಯೊಬ್ಬನನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ತನಗೆ ಪರೀಕ್ಷೆ ಬರೆಯಲು ಇಷ್ಟವಿಲ್ಲದ ಕಾರಣ, ಶಾಲೆಗೆ ರಜೆ ನೀಡಲಿ ಎಂಬ ಉದ್ದೇಶದಿಂದ ವಿದ್ಯಾರ್ಥಿ ಈ ರೀತಿ ಮಾಡಿದ್ದಾನೆ ಎನ್ನಲಾಗಿದೆ.

ವಿವಾಹ ನೋಂದಣಿ ಯಾಕೆ? ಹೇಗೆ?

ಸರ್ಕಾರವು ಕೌಟುಂಬಿಕ ಕಲ್ಯಾಣ ಯೋಜನೆಗಳನ್ನು ರೂಪಿಸಿ, ಅದಕ್ಕಾಗಿ ನಿಧಿಯನ್ನು ನಿಗದಿಪಡಿಸಲು ವಿವಾಹಿತ ದಂಪತಿಗಳ ಅಂಕಿ–ಅಂಶ ಬೇಕಿರುತ್ತದೆ. ಅದು ದೊರೆಯುವುದು ವಿವಾಹಗಳು ನೋಂದಣಿಯಾಗಿದ್ದಾಗ ಮಾತ್ರ. ಬಾಲ್ಯ ವಿವಾಹವನ್ನು ತಡೆಗಟ್ಟಲು ವಿವಾಹ ನೋಂದಣಿ ಒಂದು ಮುಖ್ಯವಾದ ಸಾಧನ. ಇಷ್ಟೆ ಅಲ್ಲದೇ ಹಲವು ಸಂದರ್ಭಗಳಲ್ಲಿ ವಿವಾಹ ನೋಂದಣಿ ಆಪತ್ಬಾಂಧವನಂತೆ ಕೆಲಸ ಮಾಡುತ್ತದೆ

ಸುಶೀಲಾ ಡೋಣೂರು

ಭಾರತದಂತಹ ಸಾಂಪ್ರದಾಯಿಕ ನೆಲೆಯಲ್ಲಿ ನಿಂತು ನೋಡಿದಾಗ ವಿವಾಹ ನೋಂದಣಿಯ ಅಗತ್ಯವಿದೆಯೇ ಎನ್ನುವ ಪ್ರಶ್ನೆ ಅನೇಕರನ್ನು ಕಾಡುವುದುಂಟು. ಸಾವಿರಾರು ಜನರ ಸಮ್ಮುಖದಲ್ಲಿ ವಿವಾಹವಾಗುತ್ತದೆ. ಬಂಧು–ಮಿತ್ರರನ್ನೆಲ್ಲಾ ಆಹ್ವಾನಿಸಲಾಗುತ್ತದೆ. ಹೀಗಿದ್ದ ಮೇಲೆ ವಿವಾಹದ ನೋಂದಣಿ ಯಾಕೆ ಬೇಕು ಎನ್ನುವ ಪ್ರಶ್ನೆ ಸಾಮಾನ್ಯ.

ಎಲ್ಲವೂ ಸರಿ ಇದ್ದಾಗ ವಿವಾಹ ನೋಂದಣಿಯ ಪ್ರಶ್ನೆಯೇ ಬರುವುದಿಲ್ಲ ನಿಜ. ಆದರೆ, ಕೆಲವೊಮ್ಮೆ ಎಲ್ಲೋ ಏನೊ ಸಮಸ್ಯೆ ತಲೆದೋರಿದಾಗ ವಿವಾಹ ನೋಂದಣಿ ಬಹಳ ಮುಖ್ಯ ಪಾತ್ರ ವಹಿಸುತ್ತದೆ. ಮದುವೆಗಳು ಹಳಿ ತಪ್ಪುವ ಪ್ರಕರಣಗಳು ಹೆಚ್ಚಾಗಿ ಘಟಿಸುತ್ತಿರುವ ಈ ಕಾಲದಲ್ಲಿ ಸುರಕ್ಷತೆಗಾಗಿ, ಅದರಲ್ಲೂ ಹೆಣ್ಣುಮಕ್ಕಳ ರಕ್ಷಣೆಗಾಗಿ ವಿವಾಹ ನೋಂದಣಿ ಬಹಳ ಸಹಾಯಕಾರಿ. ವಿವಾಹ ನೋಂದಣಿ ಎಂದರೇನು? ಅದು ಯಾಕೆ ಬೇಕು? ಯಾವ ಪ್ರಕಾರದ ವಿವಾಹಗಳನ್ನು ನೋಂದಣಿ ಮಾಡಿಸಬಹುದು? ಅರ್ಹತೆಗಳೇನು? ನಿಯಮಗಳೇನು? ಯಾವ ದಾಖಲೆಗಳು ಬೇಕು? ಮದುವೆಯಾಗಿ ವರ್ಷಗಳ ನಂತರವೂ ನೋಂದಣಿ ಮಾಡಿಸಬಹುದೇ? ಎನ್ನುವ ಕುರಿತು ವಕೀಲೆ ಅಂಜಲಿ ರಾಮಣ್ಣ ಇಲ್ಲಿ ಮಾತನಾಡಿದ್ದಾರೆ.



ಯಾಕೆ ಬೇಕು ವಿವಾಹ ನೋಂದಣಿ

ಮದುವೆ ಪ್ರಮಾಣ ಪತ್ರ ಒಂದು ಸರ್ಕಾರಿ ದಾಖಲೆಯಾಗಿದ್ದು, ವಿಶೇಷವಾಗಿ ಮಹಿಳೆಯರಿಗೆ ಸಾಮಾಜಿಕ ರಕ್ಷಣೆ, ಸಾಮಾಜಿಕ ಭದ್ರತೆ ಹಾಗೂ ಇತರ ಸವಲತ್ತುಗಳನ್ನು ಪಡೆಯಲು ಅಗತ್ಯವಾಗಿದೆ. ವಿದೇಶಗಳಿಗೆ ಪತಿ/ಪತ್ನಿಯನ್ನು ಕರೆದೊಯ್ಯಬೇಕಾದ ಸಂದರ್ಭದಲ್ಲಿ ವೀಸಾ ಪಡೆಯುವ ಸಲುವಾಗಿ ಮದುವೆ ನೋಂದಣಿ ಪ್ರಮಾಣ ಪತ್ರ ಸಹಾಯಕವಾಗುತ್ತದೆ.

ಪತಿ/ಪತ್ನಿ ಇವರ ಪೈಕಿ ಯಾರಾದರೊಬ್ಬರು ಬ್ಯಾಂಕ್ ಡಿಪಾಸಿಟ್ ಅಥವಾ ವಿಮಾ ಪಾಲಿಸಿಯಲ್ಲಿ ನಾಮ ನಿರ್ದೇಶನ ಮಾಡಿಯೂ ಮರಣ ಹೊಂದಿದರೆ ಅವರ ಹೆಸರಿನಲ್ಲಿದ್ದ ಬ್ಯಾಂಕ್ ಡಿಪಾಸಿಟ್ ಅಥವಾ ವಿಮಾ ಪಾಲಿಸಿಯ ಹಣ ಪಡೆಯಲು, ಅನುಕಂಪದ ನೌಕರಿ ಪಡೆಯಲು ಕಡ್ಡಾಯವಾಗಿ ವಿವಾಹ ನೋಂದಣಿ ಪ್ರಮಾಣಪತ್ರವನ್ನು ಸಲ್ಲಿಸಲೇಬೇಕು.

ಸರ್ಕಾರೀ ಕೆಲಸಕ್ಕೆ ಸೇರುವಾಗ ವಿವಾಹಿತ ಹೆಂಗಸು ಅಥವಾ ಗಂಡಸು ತಮ್ಮ ತಮ್ಮ ಪತಿ ಅಥವಾ ಪತ್ನಿಯ ಹೆಸರನ್ನು ಪಿಂಚಣಿ ದಾಖಲೆಗೆ ಮೊದಲೇ ನೀಡಬೇಕಿರುತ್ತದೆ. ಆಗಲೂ ಸಹ ವಿವಾಹ ನೋಂದಣಿ ಸರ್ಟಿಫಿಕೇಟ್ ಬೇಕಿರುತ್ತದೆ.

ಸರ್ಕಾರವು ಕೌಟುಂಬಿಕ ಕಲ್ಯಾಣ ಯೋಜನೆಗಳನ್ನು ರೂಪಿಸಿ ಅದಕ್ಕಾಗಿ ನಿಧಿಯನ್ನು ನಿಗದಿಪಡಿಸಲು ವಿವಾಹಿತ ದಂಪತಿಗಳ ಅಂಕಿ–ಅಂಶ ಬೇಕಿರುತ್ತದೆ. ಅದು ದೊರೆಯುವುದು ವಿವಾಹಗಳು ನೋಂದಣಿಯಾಗಿದ್ದಾಗ ಮಾತ್ರ. ಬಾಲ್ಯ ವಿವಾಹವನ್ನು ತಡೆಗಟ್ಟಲು ವಿವಾಹ ನೋಂದಣಿ ಒಂದು ಮುಖ್ಯವಾದ ಸಾಧನ.

ಎಲ್ಲಿ ಮತ್ತು ಹೇಗೆ ನೋಂದಾಯಿಸಿಕೊಳ್ಳಬಹುದು: ಮದುವೆ ನಡೆದ ಸ್ಥಳದ ವ್ಯಾಪ್ತಿ ಅಥವಾ ವಧು-ವರರು ವಾಸಿಸುವ ಪ್ರದೇಶದ ನೋಂದಣಿ ಅಧಿಕಾರಿಗಳ ಕಚೇರಿಯಲ್ಲಿ ನೋಂದಾಯಿಸಬಹುದು. ಅಲ್ಲದೇ ಇದೀಗ ಆನ್‌ಲೈನ್‌ನಲ್ಲಿಯೂ ವಿವಾಹ ನೋಂದಣಿ ಮಾಡಬಹುದಾಗಿದ್ದು, ಅದಕ್ಕಾಗಿ https://kaveri. karnataka.gov. in/landing-page ವೆಬ್‌ಸೈಟ್‌ಗೆ ಭೇಟಿ ನೀಡಬಹುದು.

ಎರಡು ವಿಧದಲ್ಲಿ ವಿವಾಹ ನೋಂದಣಿ ಮಾಡಲಾಗುತ್ತದೆ: ಆಯಾ ಧರ್ಮದ ಪದ್ಧತಿಯ ಪ್ರಕಾರ ಮದುವೆಯಾದ ನಂತರ ನಿಗದಿತ ಮದುವೆ ನೋಂದಣಿ ಫಾರಮ್‌ನಲ್ಲಿ ವರ, ವಧು ಮತ್ತು ವಧುವಿನ ತಂದೆ ಅಥವಾ ತಾಯಿ ಅಥವಾ ಮೂರು ಜನರ ಸಾಕ್ಷಿಗಳು ತಮ್ಮ ಹೆಸರು, ಪೂರ್ತಿ ವಿಳಾಸ ನೀಡಿ ಸಹಿ ಮಾಡಿ, ವಧೂ ವರರ ಜೋಡಿ ಫೋಟೊ ಹಾಗೂ ವಿಳಾಸ ಮತ್ತು ವಯೋಮಾನ ದೃಢೀಕರಣ ದಾಖಲೆಗಳ ಸಹಿತ ನಿಗದಿತ ನಮೂನೆಯ ಅರ್ಜಿಯೊಂದಿಗೆ ವಿವಾಹ ನೋಂದಣಾಧಿಕಾರಿಗೆ ದ್ವಿ ಪ್ರತಿಯಲ್ಲಿ ಖುದ್ದಾಗಿ ಇಲ್ಲವೆ ರಿಜಿಸ್ಟರ್ಡ್ ಅಂಚೆ ಮೂಲಕ ಸಲ್ಲಿಸಬೇಕು.

ವಿಶೇಷ ವಿವಾಹ ಅಧಿನಿಯಮದ ಅಡಿಯಲ್ಲಿ ನೋಂದಣಿ ಮಾಡುವವರು ನಿಗದಿತ ಅರ್ಜಿ ಫಾರಮ್ ಭರ್ತಿ ಮಾಡಿ , ವಯಸ್ಸಿನ ದಾಖಲೆಯ ಜೊತೆಗೆ ನೋಂದಣಿ ಅಧಿಕಾರಿಗೆ ಸಲ್ಲಿಸಬೇಕು. ಮದುವೆ ನೋಟಿಸ್‌ಅನ್ನು ಅವರ ಕಚೇರಿಯ ನೋಟಿಸ್ ಬೋರ್ಡಿನಲ್ಲಿ 30 ದಿನಗಳ ಕಾಲ ಪ್ರಕಟಿಸಲಾಗುತ್ತದೆ. ಯಾವುದೇ ಆಕ್ಷೇಪಣೆಗಳು ಬಾರದ್ದಿದ್ದಲ್ಲಿ ನಂತರದ 30 ದಿನಗಳ ಒಳಗಾಗಿ ವಧು ವರರಿಬ್ಬರೂ ಮೂರು ಜನ ಸಾಕ್ಷಿಗಳೊಂದಿಗೆ ಮದುವೆ ಅಧಿಕಾರಿಯ ಮುಂದೆ ಹಾಜರಾಗಿ ಅಧಿಕಾರಿಯ ಸಮಕ್ಷಮದಲ್ಲಿ ಸಹಿ ಮಾಡಬೇಕು.

ಆಧಾರ್ ಕಾರ್ಡ್ ಅನ್ನು ವಯಸ್ಸಿನ ದಾಖಲೆ ಎಂದು ಪರಿಗಣಿಸುವುದಿಲ್ಲ. ಅದು ಈ ನಾಡಿನಲ್ಲಿ ನಮ್ಮ ವಾಸದ ನೆಲೆಯನ್ನು ಮಾತ್ರ ಖಚಿತ ಪಡಿಸುವ ದಾಖಲೆ. ಹಾಗಾಗಿ ವಿವಾಹ ನೋಂದಣಿಗೆ ಜನನ ಪ್ರಮಾಣ ಪತ್ರ ಅಥವಾ ಹತ್ತನೆಯ ತರಗತಿಯ ಅಂಕಪಟ್ಟಿ ಅಥವಾ ಪಾಸ್‌ಪೋರ್ಟ್‌ಗಳನ್ನು ನೀಡಬೇಕಿರುತ್ತದೆ. ಇವುಗಳು ಇಲ್ಲವಾದಲ್ಲಿ ಮ್ಯಾಜಿಸ್ಟ್ರೇಟ್ ನ್ಯಾಯಾಲಯದಲ್ಲಿ ಅರ್ಜಿ ಹಾಕಿ ಅಲ್ಲಿಂದ ಘೋಷಣಾ ತೀರ್ಪು ಪಾತ್ರವನ್ನು ತರಬೇಕಿರುತ್ತದೆ.

ಯಾರೆಲ್ಲಾ ವಿವಾಹ ನೋಂದಣಿ ಮಾಡಿಸಬಹುದು: ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್, ಇತ್ಯಾದಿ ಯಾವುದೇ ಧರ್ಮೀಯರು, ತಮ್ಮ ಧರ್ಮದ ಸಂಪ್ರದಾಯದಂತೆ ವಿವಾಹವಾದ ದಂಪತಿಗಳು, ಈಗಾಗಲೇ ಮದುವೆಯಾಗಿ ಕೆಲವು ವರ್ಷಗಳು ಕಳೆದಿದ್ದರೂ ಕಾನೂನಿನ ಪ್ರಕಾರ ಮದುವೆಗಳನ್ನು ನೋಂದಾಯಿಸ ಬೇಕಿರುತ್ತದೆ. ಹೆಂಗಸು ಅಥವಾ ಗಂಡಸರಲ್ಲಿ ಇಬ್ಬರಲ್ಲಿ ಒಬ್ಬರಾದರೂ ಕಡ್ಡಾಯವಾಗಿ ಭಾರತೀಯ ಪ್ರಜೆ ಆಗಿರಬೇಕಿರುತ್ತದೆ. ಮಸೀದಿ ಹಾಗೂ ಚರ್ಚ್‌ಗಳಲ್ಲಿ ನೋಂದಣಿ ಮಾಡಿದ್ದರೂ ವಿವಾಹ ನೋಂದಣಾಧಿಕಾರಿ ಅವರ ಬಳಿ ನೋಂದಾಯಿಸಿ ಕೊಳ್ಳುವುದು ಅವಶ್ಯಕವಿರುತ್ತದೆ.

ಹಿಂದೂ ವಿವಾಹ ಕಾಯ್ದೆ 1955 ಮತ್ತು ವಿಶೇಷ ವಿವಾಹ ಕಾಯ್ದೆ 1954ರ ಅಡಿ ವಿವಾಹವಾಗಲು ಬಯಸುವ ವರ ಅಥವಾ ವಧುವಿಗೆ ಈ ಮುಂಚೆಯೇ ಮದುವೆ ಆಗಿರುವ ಜೀವಿತ ಪತಿ ಅಥವಾ ಪತ್ನಿ ಇದ್ದಲ್ಲಿ ಅವರು ವಿವಾಹಕ್ಕೆ ಅರ್ಹರಲ್ಲ. ಸ್ವ ಇಚ್ಛೆಯಿಂದ ಮದುವೆಗೆ ಒಪ್ಪಿಗೆ ಕೊಡಲು ಅಸಮರ್ಥರಾದ ಮಾನಸಿಕ ಅಸ್ವಸ್ಥರು, ಬುದ್ಧಿಭ್ರಮಣೆಗೆ ಒಳಗಾದವರು ವಿವಾಹಕ್ಕೆ ಅರ್ಹರಲ್ಲ. 18 ವರ್ಷ ತುಂಬದ ಹೆಣ್ಣು, 21 ವರ್ಷ ವಯಸ್ಸು ತುಂಬದ ಗಂಡು ವಿವಾಹ ಮಾಡಿಕೊಳ್ಳುವಂತಿಲ್ಲ. 2006ರಲ್ಲಿ ಸೀಮಾ ಅಶ್ವಿನ್‌ಕುಮಾರ್ ಎನ್ನುವ ದಂಪತಿಯ ಪ್ರಕರಣದಲ್ಲಿ ಸರ್ವೋಚ್ಛ ನ್ಯಾಯಾಲಯ ಯಾವುದೇ ಧರ್ಮದ ಮದುವೆಗಳನ್ನು ಕಡ್ಡಾಯವಾಗಿ ನೋಂದಣಿ ಮಾಡಬೇಕು ಎಂದು ತೀರ್ಪು ನೀಡಿತು. ಈ ತೀರ್ಪನ್ನು ಅನುಸರಿಸಿ 2008ರಲ್ಲಿ ಕರ್ನಾಟಕದಲ್ಲಿ ಕರ್ನಾಟಕ ರೆಜಿಸ್ಟ್ರೇಶನ್ ಆ್ಯಕ್ಟ್ ಪರಿಚಯಿಸಿದ್ದು, ಯಾರೆಲ್ಲಾ ಸಾಂಪ್ರದಾಯಿಕವಾಗಿ ವಿವಾಹವಾಗಿ, ಈವರೆಗೂ ನೋಂದಣಿ ಮಾಡಿಲ್ಲವೋ ಅವರು ಅಗತ್ಯ ದಾಖಲೆಗಳೊಂದಿಗೆ ಮದುವೆ ನೋಂದಣಿ ಮಾಡಿಕೊಳ್ಳಲು ಸಾಧ್ಯವಿರುತ್ತದೆ.

ಗಂಡ–ಹೆಂಡಿರ ನಡುವಿನ ಸಂಬಂಧ ತೊಡರಿದಾಗ ವಿವಾಹವನ್ನೇ ಅಲ್ಲಗಳೆಯುವ, ಮಕ್ಕಳನ್ನೂ ತನ್ನವಲ್ಲ ಎಂದು ಹೇಳುವ ಗಂಡಸರಿದ್ದಾರೆ. ಜೀವನಾಂಶ ಅಥವಾ ಆಸ್ತಿಯ ಪಾಲನ್ನು ಉಳಿಸಿಕೊಳ್ಳಲು ಕೆಲವರು ಈ ಕುತಂತ್ರ ಅನುಸರಿಸುವುದೂ ಇದೆ. ಇನ್ನೂ ಕೆಲವು ಸಂದರ್ಭಗಳಲ್ಲಿ ಗಂಡ ಮರಣ ಹೊಂದಿದಾಗ ಆತನ ಮನೆಯವರು ಸೊಸೆಯನ್ನು ತಮ್ಮ ಸೊಸೆ ಎಂದು ಒಪ್ಪಿಕೊಳ್ಳದ ಸಂದರ್ಭವೂ ಎದುರಾಗುತ್ತದೆ. ತಮ್ಮ ಮಗಳನ್ನು ವಂಚಿಸಿ ಕದ್ದೊಯ್ದಿದ್ದಾನೆ ಎಂದು ಗಂಡಸಿನ ಮೇಲೆ ದೂರು ದಾಖಲಿಸುವ ತಂದೆ–ತಾಯಿಯರು ಇದ್ದಾರೆ. ಇಂತಹ ಸಂದರ್ಭಗಳಲ್ಲೆಲ್ಲಾ ವಿವಾಹ ನೋಂದಣಿ ಆಪತ್ಬಾಂಧವನಂತೆ ಕೆಲಸ ಮಾಡುತ್ತದೆ. ಹೀಗಾಗಿ, ಪ್ರತಿಯೊಬ್ಬರೂ ವಿವಾಹವನ್ನು ನೋಂದಣಿ ಮಾಡಿಸುವುದು ಅಗತ್ಯ.

ಫ್ಯಾಷನ್

ಸಂಕ್ರಾಂತಿ ಕರಿಗಿರಲಿ ಕರಿಬಟ್ಟೆ

ಸಂಕ್ರಾಂತಿ ಸಂಭ್ರಮದೊಳಗ ಸುಗ್ಗಿಯ ಜೊತಿಗೆ ಕರಿಹರಿಯೂ ಸಂಭ್ರಮನೂ ಇರ್ತದ. ಎತ್ತುಗಳಿಗೆ ಕಿಚ್ಚು ಹಾಯಿಸಿದ್ರ, ಸಂಕ್ರಾಂತಿ ಕರಿಗೆ ಕರಿ ಅರವಿ ಹಾಕ್ಕೋಬೇಕು ಅನ್ನೋದೊಂದು ನಂಬಿಕೆ.

ಸೂರ್ಯದೇವನನ್ನು ಒಲಿಸಿಕೊಳ್ಳಲು ಆಚರಿಸುವ ಈ ಹಬ್ಬದಲ್ಲಿ ಸೂರ್ಯ ಸಂತಾನ ಶನಿಯನ್ನು ಆರಾಧಿಸುವ ಆಚರಣೆಯೂ ಇದೆ. ಪ್ರತ್ಯಕ್ಷವಾಗಿ ಪೂಜೆ ಪುನಸ್ಕಾರಗಳು ನಡೆಯದಿದ್ದರೂ, ಜನಪದರಲ್ಲಿ ಸಂಕ್ರಾಂತಿ ಕರಿಗೆ ಕಾಡಿಗೆ ಕಪ್ಪು ಕಣ್ಣಿಗಿರಬೇಕು. ಉಡಲು ಕರಿಚಂದ್ರಕಾಳಿ ಸೀರೆ ಇರಬೇಕು. ಇಲ್ಲವೇ ಕರಿ ಬಣ್ಣದ ಉಡುಪುಗಳನ್ನು ತೊಡಬೇಕು ಎಂಬ ಪ್ರತೀತಿ ಬೆಳೆದು ಬಂದಿದೆ.

ಎಳ್ಳುಬೆಲ್ಲ ಹಂಚುವುದರೊಂದಿಗೆ ಎಳ್ಳಿನ ಚಿಗಳಿ (ಎಳ್ಳುಬೆಲ್ಲ ತುಸು ಮಾತ್ರ ಜೀರಿಗೆ ಬೆರೆಸಿದ ಉಂಡೆ) ಹಂಚುವಾಗಲೆಲ್ಲ ಕಣ್ಣಿಗೆ ಕಾಡಗಿ ಇರಬೇಕು ಅನ್ನುವ ನಂಬಿಕೆ ಇದೆ.

ಮದುವೆಯಾಗಿ ಮೊದಲ ಸಲ ಮನೆಗೆ ಬಂದ ಮಗಳಿಗೆ, ಅಥವಾ ಮೊದಲ ಸಂಕ್ರಮಣ ಆಚರಿಸುವ ಸೊಸೆಗೆ ಕರಿಚಂದ್ರಕಾಳಿ ಸೀರೆಯನ್ನುಡಿವುದು, ಕೊಡಿಸುವುದು ಸಹ ಸಂಪ್ರದಾಯವಾಗಿದೆ. ಕಪ್ಪು ಒಡಲಿನ ಸೀರೆಯ ಮೇಲೆ ಬಿಳಿ ರೇಷ್ಮೆದಾರದ ಕಸೂತಿ ಮಾಡಿರಲಾಗುತ್ತದೆ. ಕಪ್ಪು ಬಾನಂಗಳದಲ್ಲಿ ಮಿನುಗುವ ತಾರೆಗಳಂಥ ಲುಕ್ ಈ ಸೀರೆ ನೀಡುತ್ತದೆ. ಸೆರಗಲ್ಲಿ ತೆನೆ, ನವಿಲು, ತೇರು, ಆನೆಗಳ ಕಸೂತಿ ಮಾಡಿರಲಾಗುತ್ತದೆ. ಸೆರಗು ಹೊದ್ದಾಗ ಭುಜಗಳಿಂದ ಬೆನ್ನ ಮೇಲೆ ಹರಡುವ ಸೆರಗಿನಲ್ಲಿ ಈ ಚಿತ್ತಾಕರ್ಷಕ ಕಸೂತಿಗಳು ಹೃನ್ಮನ ಸೆಳೆಯುತ್ತವೆ.

ಇದೀಗ ಕರಿಚಂದ್ರಕಾಳಿ ಸೀರೆಯ ಸಂಭ್ರಮ ಕಾಣದಿದ್ದರೂ ಕಪ್ಪು ಬಟ್ಟೆಗಳ ಫ್ಯಾಶನ್ ಅತಿ ಹೆಚ್ಚಾಗಿದೆ. ಬನಾರಸಿ ಕಪ್ಪು ಸಲ್ವಾರ್‌ಗಳು, ಅನಾರ್‌ಕಲಿ ಸೀರೆಗಳು, ಶಿಫಾನ್ ಸೀರೆಯ ಮೇಲೆ ಸ್ವರೋಸ್ಕಿ ಹರಳು ಅಂಟಿಸಿ ತನ್ಮೈರಾದವರು ಹೊಸ ಸಂಗ್ರಹವನ್ನೇ ಪರಿಚಯಿಸಿದ್ದಾರೆ. ಶಿಫಾನ್ ಹಾಗೂ ಜಾರ್ಜೆಟ್ ಸೀರೆಗಳ ಮೇಲೆ ಅದೇ ಬಣ್ಣದ ಹರಳುಗಳನ್ನು ಅಂಟಿಸಿರುವ ಟ್ರೆಂಡ್ ಇದೀಗ ಜನಪ್ರಿಯವಾಗುತ್ತಿದೆ.

ಕಪ್ಪು ಬಣ್ಣವನ್ನೂ ಉಟ್ಟು, ತೊಟ್ಟು, ಸಂಭ್ರಮಿಸುವ ಹಬ್ಬ ಒಂದಿದ್ದರೆ ಅದು ಸಂಕ್ರಾಂತಿ ಮಾತ್ರ. ಈ ಋತುಮಾನವನ್ನೇ ಸಂಕ್ರಮಣದ ಋತುಮಾನವೆಂದು ಕರೆಯಲಾಗುತ್ತದೆ.

ಈ ಸಂಕ್ರಾಂತಿಯಿಂದ ಶಿವರಾತ್ರಿಯವರೆಗೂ ಕುದಿಸಿ ತಿನ್ನುವ ಸಂಪ್ರದಾಯವೂ ಇದೆ. ಹಸಿ ಅವರೆಕಾಯಿ, ಬಟಾಣಿ ಕಾಳು, ಗೆಣಸು, ಕಡಲೆಕಾಯಿಗಳನ್ನು ಮಡಕೆಯಲ್ಲಿ ಉಪ್ಪಿನೊಂದಿಗೆ ಕುದಿಸಿ, ತಿನ್ನಲು ನೀಡಲಾಗುತ್ತದೆ. ಅರೆ ಬಲಿತ ಈ ಕಾಯಿಗಳನ್ನು ತಿನ್ನುವುದನ್ನೇ ಹಾಡಿನಲ್ಲಿಯೂ ಹೇಳಲಾಗಿದೆ.

‘ಯವ್ವಾ ಯವ್ವಾ ಗೆಣಸ
ಗಡಗ್ಯಾಗ ಹಾಕಿ ಕುದುಸ
ಕರಿ ಸೀರಿ ಉಡುಸ
ಗಂಡನ ಮನೀಗೆ ಕಳಸ’

ಎಂದು ಹೇಳುವ ಜನಪದೀಯ ಹಾಡುಗಳು ಈಗಲೂ ಜನಜನಿತವಾಗಿವೆ. ಎಳ್ಳುಬೆಲ್ಲದ ಸಂಭ್ರಮವನ್ನು ಕರಿಯಾಕಾಶದ ಬಣ್ಣದೊಳಗೆ ಮಿಂದೆದ್ದು ಸಂಭ್ರಮಿಸಿ.

ಗರ್ಭನಾಳ ತೆಗೆದರೆ ತೊಂದರೆಯೇ?

ಸ್ಪಂದನ

ಡಾ. ವೀಣಾ ಎಸ್. ಭಟ್

• ನನ್ನ ಹೆಂಡತಿಗೆ 31, ನನಗೆ 46 ವಯಸ್ಸು. ಸಂಬಂಧದಲ್ಲಿಯೇ ಮದುವೆಯಾಗಿದ್ದೇವೆ. ಋತುಸ್ರಾವದ ಸಂದರ್ಭದಲ್ಲಿ ನನ್ನ ಹೆಂಡತಿಗೆ ವಿಪರೀತ ಹೊಟ್ಟೆ ನೋವು ಬರುತ್ತದೆ. 2013ರಲ್ಲಿ ಮದುವೆಯಾಗಿ ಆರು ತಿಂಗಳಿಗೆ ಗರ್ಭಿಣಿಯಾದಳು. ಮೂರು ತಿಂಗಳಿಗೆ ಗರ್ಭಪಾತವಾಯಿತು. ಆದಾಗಿ 10 ವರ್ಷಗಳಾದರೂ ಮಕ್ಕಳಾಗಿಲ್ಲ. ಐಯುಐ ಮೂಲಕ ಮಗು ಪಡೆಯಲು ಚಿಕಿತ್ಸೆ ಆರಂಭಿಸಿದ್ದೀವಿ. ಚಿಕಿತ್ಸೆ ಪಡೆಯುವಾಗ ವಿಪರೀತ ರಕ್ತಸ್ರಾವ ಉಂಟಾಯಿತು. ಹಾಗಾಗಿ ಗರ್ಭಾಶಯ ನಾಳದಲ್ಲಿದ್ದ ತೊಂದರೆಯನ್ನು ನಿವಾರಿಸಿ, ಗರ್ಭಾಶಯದ ಎಡಭಾಗದಲ್ಲಿದ್ದ ನಾಳವನ್ನು ತೆಗೆಯಲಾಯಿತು. ಈಗ ಮತ್ತೆ ರಕ್ತಸ್ರಾವ ಉಂಟಾಗಿದೆ. ಏನು ಮಾಡಬೇಕು ತೋಚುತ್ತಿಲ್ಲ.

ಹತ್ತು ಹನ್ನೊಂದು ವರ್ಷಗಳಿಂದ ಮಕ್ಕಳಾಗಬೇಕೆಂಬ ಚಿಕಿತ್ಸೆಗಾಗಿ ಬಹಳಷ್ಟು ಪ್ರಯತ್ನಿಸಿ ದುಃಖದಲ್ಲಿ ಇರುವಿರೆಂದು ತಿಳಿದು ವಿಷಾದವಿದೆ. ನಿಮ್ಮ ಹೆಂಡತಿಗೆ ಒಂದು ಟ್ಯೂಬ್ ತೆಗೆದದ್ದು ಬಹುಶಃ ಗರ್ಭನಾಳದಲ್ಲಿ ಭ್ರೂಣ ಬೆಳೆದು (ಎಕ್ಟೋಪಿಕ್ ಪ್ರೆಗ್ನೆನ್ಸಿ) ಆಗಿದ್ದಿರಬಹುದು. ಆದರೆ ಇನ್ನೊಂದು ಟ್ಯೂಬ್ ಅಥವಾ ಗರ್ಭನಾಳ ಇದೆಯಲ್ಲವೇ?. ಈಗ ರಕ್ತಸ್ರಾವವಾಗುತ್ತಿರುವುದು ಕೂಡ ಹಾರ್ಮೋನುಗಳ ಏರಿಳಿತದಿಂದ. ನಿಮ್ಮ ಪತ್ನಿಗಿನ್ನೂ 31 ವರ್ಷಗಳಷ್ಟೆ. ಪ್ರಯತ್ನ ಬಿಡಬೇಡಿ. ಆಧುನಿಕ ಚಿಕಿತ್ಸಾ ವಿಧಾನಗಳು ಬಂಜೆತನದ ಚಿಕಿತ್ಸೆಯಲ್ಲಿ ಹೊಸ ಭರವಸೆ ಮೂಡಿಸುತ್ತಲಿವೆ. ನಿರಾಸೆಗೊಳ್ಳದೇ ಚಿಕಿತ್ಸೆಯನ್ನು ಮುಂದುವರಿಸಿ.

ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳ ಬಗ್ಗೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗತಜ್ಞೆ ಡಾ.ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು

ಮಹಿಳೆಯರಲ್ಲಿ ಮೂಳೆ ಸವಕಳಿಯ ಅಪಾಯ

ಮಹಿಳೆಯರು ಮನೆಗೆಲಸ, ಅಡುಗೆ ಕೆಲಸ, ಕುಟುಂಬ ನಿರ್ವಹಣೆಯಲ್ಲಿಯೇ ತಮ್ಮ ಸಮಯ ಕಳೆಯುತ್ತಾರೆ. ಇದರಿಂದ ದೇಹಕ್ಕೆ ವ್ಯಾಯಾಮ ಸಿಗುತ್ತದೆಯೆಂದು ತಪ್ಪಾಗಿ ಭಾವಿಸುತ್ತಾರೆ

ತಡೆಗಟ್ಟುವಿಕೆ ಹೇಗೆ?

ದೃಢವಾದ ಮೂಳೆ ಮತ್ತು ಸ್ನಾಯುಗಳನ್ನು ಕಾಪಾಡಿಕೊಳ್ಳಲು ನಡಿಗೆ ಸೇರಿದಂತೆ ಹಲವು ರೀತಿಯ ನಿಯಮಿತ ವ್ಯಾಯಾಮದಲ್ಲಿ ತೊಡಗಿಸಿಕೊಳ್ಳಬೇಕು. ಡೈರಿ ಉತ್ಪನ್ನಗಳು, ಸೊಪ್ಪು, ತರಕಾರಿ, ಹಣ್ಣು, ಧಾನ್ಯಗಳಂತಹ ಆಹಾರಗಳು ಸೇರಿದಂತೆ ಕ್ಯಾಲ್ಸಿಯಂ ಮತ್ತು ವಿಟಮಿನ್ ಡಿ ಸಮೃದ್ಧವಾಗಿರುವ ಸಮತೋಲಿತ ಆಹಾರವನ್ನು ಸೇವಿಸಿ. ಕೀಲುಗಳ ಮೇಲಿನ ಒತ್ತಡವನ್ನು ಕಡಿಮೆ ಮಾಡಲು ನಿಂತಿರುವಾಗ ಅಥವಾ ಕುಳಿತುಕೊಳ್ಳುವಾಗ ಉತ್ತಮ ಭಂಗಿಯನ್ನು ಕಾಪಾಡಿಕೊಳ್ಳಿ. ಕೆಲಸದ ಮಧ್ಯೆ ನಿಯಮಿತ ವಿರಾಮಗಳನ್ನು ತೆಗೆದುಕೊಳ್ಳಿ. ಮೂಳೆಯ ಸಮಸ್ಯೆಗಳನ್ನು ಮೊದಲೇ ಪತ್ತೆಹಚ್ಚಲು ನಿಯಮಿತ ಮೂಳೆ ಸಾಂದ್ರತೆಯ ಸ್ಕ್ಯಾನ್ ಮಾಡಿಸುವುದು ಒಳಿತು.

ಡಾ. ಜಯತೀರ್ಥ ಡಬ್ಲ್ಯು. ಕುಲಕರ್ಣಿ

ಮನೆ, ಹೊರಗೆ ಎರಡೂ ಕಡೆಗಳಲ್ಲಿ ದುಡಿಯುವ ಹೆಣ್ಣುಮಕ್ಕಳಲ್ಲಿ ಆಗಾಗ್ಗೆ ಮೂಳೆ ಸಂಬಂಧಿತ ಸಮಸ್ಯೆಗಳು ಕಾಣಿಸಿಕೊಳ್ಳುವುದು ಸಹಜ. ಅದರಲ್ಲಿಯೂ ಗಂಟೆಗಟ್ಟಲೇ ಅಡುಗೆಮನೆಯಲ್ಲಿ ನಿಂತು ಕೆಲಸ ಮಾಡುವ ಗೃಹಿಣಿಯರು, ಆಫೀಸಿನಲ್ಲಿ ಕುಳಿತು ಕೆಲಸ ಮಾಡುವ ಮಹಿಳೆಯರಲ್ಲಿ ಮೂಳೆ ಸವಕಳಿಯ ಸಮಸ್ಯೆ ಹೆಚ್ಚು ಕಂಡುಬರುತ್ತದೆ. 40 ನಂತರ ಈ ಬಗ್ಗೆ ಎಚ್ಚರಿಕೆ ವಹಿಸಬೇಕು.

ಏನಿದು ಆಸ್ಟಿಯೊ ಪೊರೋಸಿಸ್?

ಆಸ್ಟಿಯೊ’ ಎಂದರೆ ಮೂಳೆಗಳಿಗೆ ಸಂಬಂಧಿಸಿದ ಮತ್ತು ‘ಪೊರೋಸಿಸ್’ ಎಂದರೆ ರಂಧ್ರಗಳು ಎಂದರ್ಥ. ಹೀಗಾಗಿ ‘ಆಸ್ಟಿಯೊಪೊರೋಸಿಸ್’ ಎಂದರೆ ರಂಧ್ರವಿರುವ ಮೂಳೆಗಳು.

ನಮ್ಮ ಮೂಳೆಯೊಳಗೆ ಸ್ಪಂಜಿನಂಥ ವಸ್ತುವಿರುತ್ತದೆ. ಈ ಸ್ಪಾಂಜ್, ರಂಧ್ರಗಳನ್ನು ಹೊಂದಿರುತ್ತದೆ, ಇವುಗಳು ದೊಡ್ಡದಾಗಬಹುದು ಅಥವಾ ರಂಧ್ರಗಳ ಸಂಖ್ಯೆಯು ಹೆಚ್ಚಾಗಬಹುದು. ಇದರ ಪರಿಣಾಮವಾಗಿ ಮೂಳೆಗಳು ದುರ್ಬಲವಾಗುತ್ತವೆ ಮತ್ತು ಮೂಳೆ ಮುರಿತದ ಅಪಾಯ ಹೆಚ್ಚುತ್ತದೆ. ಆಸ್ಟಿಯೊಪೊರೋಸಿಸ್ ಬಾಧಿತರು ದೈನಂದಿನ ಚಟುವಟಿಕೆಗಳಲ್ಲಿ ತೊಡಗಿದಾಗ, ಕಡಿಮೆ ಎತ್ತರದಿಂದ ಬಿದ್ದರೂ ಅಥವಾ ನಿಂತ ಸ್ಥಳದಿಂದ ಜಾರಿದರೂ, ಮೂಳೆ ಮುರಿತಕ್ಕೆ ಒಳಗಾಗುವ ಸಂಭವವಿರುತ್ತದೆ.

ಈ ಮೂಳೆಮುರಿತ ಯಾವುದೇ ರೋಗಲಕ್ಷಣಗಳನ್ನು ತೋರಗೊಡದೇ ಇರುವುದು ವಿಶೇಷ. ಮೂಳೆ ಸವಕಳಿಯಿಂದಾಗಿ ಸಾಮಾನ್ಯವಾಗಿ ಮಣಿಕಟ್ಟು, ಕೈ, ಸೊಂಟ ಮತ್ತು ಬೆನ್ನುಮೂಳೆ ಮುರಿಯುವ ಅಪಾಯವಿರುತ್ತದೆ. ತೀವ್ರ ನೋವು, ಅಂಗವೈಕಲ್ಯ ಮತ್ತು ಸಾವಿಗೂ ಕಾರಣವಾಗಬಹುದು. ಬೆನ್ನುಮೂಳೆಯ ವಿರೂಪತೆ, ಆತಂಕ, ಖಿನ್ನತೆ ಹೆಚ್ಚಬಹುದು.

ಕಾರಣವೇನು?

ಅಡುಗೆ ತಯಾರಿಗೆಂದು ಬಹಳ ಹೊತ್ತು ನಿಂತೇ ಇರುವ ಮಹಿಳೆಯರಲ್ಲಿ ಮಸ್ಕ್ಯುಲೋಸ್ಕೆಲಿಟಲ್ ಅಸ್ವಸ್ಥತೆ, ಹೃದಯರಕ್ತನಾಳದ ಕಾಯಿಲೆ ಮತ್ತು ಆಸ್ಟಿಯೊಪೊರೋಸಿಸ್ ಆರೋಗ್ಯ ಸಮಸ್ಯೆಗಳು ಕಂಡುಬರಬಹುದು. ಆಧುನಿಕ ಅಡುಗೆ ಮನೆಯಾಗಿರುವುದರಿಂದ ನಿಂತೆ ಅಡುಗೆ ಮಾಡುವ ವ್ಯವಸ್ಥೆಯಿಂದಾಗಿ ಬೆನ್ನುನೋವು, ಕೀಲುಗಳ ಮೇಲೆ ಹೆಚ್ಚು ಒತ್ತಡ ಬೀರಲಿದೆ.

ಮಹಿಳೆಯರು ಮನೆಗೆಲಸ, ಅಡುಗೆ ಕೆಲಸ, ಕುಟುಂಬ ನಿರ್ವಹಣೆಯಲ್ಲಿಯೇ ತಮ್ಮ ಸಮಯ ಕಳೆಯುತ್ತಾರೆ. ಇದರಿಂದಲೇ ದೇಹಕ್ಕೆ ವ್ಯಾಯಾಮ ಸಿಗುತ್ತದೆಯೆಂದು ತಪ್ಪಾಗಿ ಭಾವಿಸುತ್ತಾರೆ. ವ್ಯಾಯಾಮ ಮಾಡದೇ ಮೂಳೆಗಳು ಕಾಲಕ್ರಮೇಣ ತನ್ನ ಸಾಂದ್ರತೆ ಕಳೆದುಕೊಳ್ಳುತ್ತದೆ.

ಕ್ಯಾಲ್ಸಿಯಂ ಹಾಗೂ ವಿಟಮಿನ್ ಡಿ ಸೇರಿದಂತೆ ಅಗತ್ಯವಿರುವ ಪೋಷಕಾಂಶಗಳ ಆಹಾರದ ಕೊರತೆಯಿಂದಲೂ ಈ ಸಮಸ್ಯೆ ಕಾಣಿಸಿಕೊಳ್ಳಬಹುದು.

ರಾಜ್ಯದಲ್ಲಿ ನಕ್ಸಲ್‌ವಾದ ಇರಬಾರದೆಂಬುದು ನಮ್ಮ ಉದ್ದೇಶ: ಸಿದ್ದರಾಮಯ್ಯ

'ಶಸ್ತ್ರಾಸ್ತ್ರ ಎಲ್ಲಿವೆಯೆಂದು ಗೊತ್ತಿದೆ'

ಪ್ರಜಾವಾಣಿ ವಾರ್ತೆ

ಮೈಸೂರು: 'ನಕ್ಸಲರ ಶಸ್ತ್ರಾಸ್ತ್ರಗಳು ಎಲ್ಲಿವೆಯೆಂದು ಗೊತ್ತಿದೆ. ಪೊಲೀಸರು ಮಹಜರು ನಡೆಸಿ ತರಲಿದ್ದಾರೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ರಾಜ್ಯದಲ್ಲಿ ನಕ್ಸಲ್‌ವಾದ ಇರಬಾರದೆಂಬುದು ನಮ್ಮ ಉದ್ದೇಶ. ಅನ್ಯಾಯ, ಶೋಷಣೆಗಳ ವಿರುದ್ಧ ಪ್ರತಿಭಟಿಸುವ ಹಕ್ಕು ಎಲ್ಲರಿಗೂ ಇದೆ. ಹೋರಾಟ ಶಾಂತಿಯುತವಾಗಿರಬೇಕು' ಎಂದು ಹೇಳಿದರು.

'ಶೃಂಗೇರಿಯಲ್ಲಿ ಮತ್ತೊಬ್ಬ ನಕ್ಸಲ್ 'ಇದ್ದಾರೆಂಬುದು ಗೊತ್ತಿಲ್ಲ. ಇದ್ದರೆ, ಶರಣಾಗಿ ಮುಖ್ಯವಾಹಿನಿಗೆ ಬರುವಂತೆ ಮನವಿ ಮಾಡುವೆ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ದೆಹಲಿಯಲ್ಲಿ ಎಂಎಸ್‌ಪಿ ಕಾನೂನು ಜಾರಿಗೆ ಆಗ್ರಹಿಸಿ ನಡೆಸುತ್ತಿರುವ ಪ್ರತಿಭಟನೆಯಲ್ಲಿ ರೈತರು ಮೃತಪಟ್ಟರೂ ಸ್ಪಂದಿಸದ ಕೇಂದ್ರ ಸರ್ಕಾರಕ್ಕೆ ಮಾನವೀಯತೆ ಇಲ್ಲವಾಗಿದೆ' ಎಂದರು.

'ಅಂಬೇಡ್ಕರ್ ಬಗ್ಗೆ ಬಿಜೆಪಿ ಎಂಥ ಗೌರವವಿಟ್ಟಿದೆಯೆಂಬುದು ಅಮಿತ್ ಶಾ ಹೇಳಿಕೆಯಿಂದ ಗೊತ್ತಾಗಿದೆ. ಈಗ ಅಂಬೇಡ್ಕರ್ ಪರ ಅಭಿಯಾನ ಮಾಡುತ್ತಿರುವುದು ಹಾಸ್ಯಾಸ್ಪದ. ಸಂವಿಧಾನವನ್ನು ಕಾಂಗ್ರೆಸ್ ಬರೆಯಲಿಲ್ಲ ಅಂಬೇಡ್ಕರ್ ಕೈಯಲ್ಲಿ, ಆರ್‌ಎಸ್‌ಎಸ್ ಸಂವಿಧಾನ ವಿರೋಧಿಸಿತ್ತು. ಅಟಲ್ ಬಿಹಾರಿ ವಾಜಪೇಯಿ ಕಾಲದಲ್ಲಿ ಬದಲಾಯಿಸಲು ಮುಂದಾಗಿತ್ತು' ಎಂದು ಟೀಕಿಸಿದರು.

ರಸ್ತೆಗೆ ಹೆಸರಿಡಿ ಎಂದಿಲ್ಲ: ಮುಖ್ಯಮಂತ್ರಿ

'40 ವರ್ಷದಿಂದ ರಾಜಕಾರಣದಲ್ಲಿದ್ದು, ಯಾವುದೇ ರಸ್ತೆಗೆ ನನ್ನ ಹೆಸರಿಡಿ ಎಂದು ಯಾರಿಗೂ ಹೇಳಿಲ್ಲ, ಚರ್ಚಿಸಿಲ್ಲ. ಮೈಸೂರು ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ಕೊಡಲು ಬಂದಾಗ, ನನಗೆ ಯೋಗ್ಯತೆಯಿಲ್ಲ ಎಂದಿದ್ದೆ. ಆ ರಸ್ತೆಗೆ ಬೇರೆ ಹೆಸರಿದ್ದರೆ ಬದಲಾವಣೆ ಬೇಡ' ಎಂದು ಸಿದ್ದರಾಮಯ್ಯ ಸ್ಪಷ್ಟಪಡಿಸಿದರು.

'ಚಾಮರಾಜನಗರದಲ್ಲಿ ಫೆ.15ರಂದು ಸಚಿವ ಸಂಪುಟ ಸಭೆ ನಡೆಯಲಿದ್ದು, ಆ ಭಾಗದ ಸಮಸ್ಯೆಗಳಿಗೆ ಪರಿಹಾರ ನೀಡಲಾಗುತ್ತದೆ' ಎಂದರು. ಪ್ರಿಯಾಂಕ್ ಖರ್ಗೆ ಆಪ್ತ ರಾಜು ಕಪನೂರು ಶರಣಾಗತಿ ಕುರಿತ ಪ್ರಶ್ನೆಗೆ 'ಕಾನೂನಿನ ಮುಂದೆ ಎಲ್ಲರೂ ಸಮಾನರು' ಎಂದರು.

'ಪೊಲೀಸರೇ ಶಸ್ತ್ರಾಸ್ತ್ರ ಪತ್ತೆ ಮಾಡುತ್ತಾರೆ'

ಬೆಂಗಳೂರು: ಶರಣಾದ ನಕ್ಸಲರು ತಮ್ಮ ಶಸ್ತ್ರಾಸ್ತ್ರಗಳನ್ನು ಕಾಡಿನಲ್ಲಿ ಎಲ್ಲಿ ಬಿಸಾಕಿದ್ದಾರೆ ಎಂಬುದನ್ನು ಪೊಲೀಸರೇ ಪತ್ತೆ ಹಚ್ಚಲಿದ್ದಾರೆ ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು. ಸುದ್ದಿಗಾರರ ಜತೆ ಮಾತನಾಡಿದ ಅವರು, 'ನಾವು ಮಾಡುವ ಕೆಲಸ ಮಾಡುತ್ತೇವೆ. ಕಾಡಲ್ಲಿ ಎಲ್ಲಿ ಇಟ್ಟಿದ್ದಾರೆ ಎಂಬುದನ್ನು ನೆರವು ಪಡೆದು ಪೊಲೀಸರು ಹುಡುಕುತ್ತಾರೆ. ಇದಕ್ಕೆಲ್ಲ ಪ್ರಕ್ರಿಯೆ ಇದೆ. ಅದರ ಅನುಸಾರ ಕೆಲಸ ಮಾಡುತ್ತಾರೆ' ಎಂದು ಹೇಳಿದರು. ಇವೆಲ್ಲ ಬಿಜೆಪಿಯವರಿಗೆ ಗೊತ್ತಿಲ್ಲದ ಸಂಗತಿಯೇನಲ್ಲ. ಅವರೂ ಕೂಡ ಸರ್ಕಾರ ನಡೆಸಿದ್ದಾರೆ. ಆಗಲೂ ಇದೇ ಪೊಲೀಸ್ ಇಲಾಖೆ ಇತ್ತಲ್ಲವೇ ಎಂದರು.

ಶಾಸಕರ ಕಾರು ಚಾಲಕ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಲಕ್ಷ್ಮೇಶ್ವರ (ಗದಗ ಜಿಲ್ಲೆ): ಶಿರಹಟ್ಟಿ ಶಾಸಕ ಡಾ.ಚಂದ್ರು ಲಮಾಣಿ ಅವರ ಕಾರು ಚಾಲಕ ಸುನೀಲ ಚವ್ಹಾಣ (25) ಶುಕ್ರವಾರ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಸುನೀಲ ಚವ್ಹಾಣ

'ಲಕ್ಷ್ಮೇಶ್ವರದ ಮಲ್ಲಾಡದ ಕಾಲೊನಿಯಲ್ಲಿ ಇರುವ ಶಾಸಕ ಡಾ. ಚಂದ್ರು ಲಮಾಣಿ ಅವರ ಅವರಿಗೆ ಸೇರಿದ, ಅತಿಥಿಗೃಹಕ್ಕೆ ಮೀಸಲಿಟ್ಟ ಮನೆಯಲ್ಲಿ ಸುನೀಲ ನೇಣು ಹಾಕಿಕೊಂಡಿದ್ದಾರೆ. ಮೂರು ವರ್ಷಗಳಿಂದ ಶಾಸಕರಿಗೆ ಚಾಲಕರಾಗಿದ್ದ ಅವರ ಆತ್ಮಹತ್ಯೆಗೆ ನಿಖರ ಕಾರಣ ತಿಳಿದುಬಂದಿಲ್ಲ' ಎಂದು ಪೊಲೀಸರು ತಿಳಿಸಿದ್ದಾರೆ.

ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

AUCTION NOTICE

This is to inform public in general that Kotak Mahindra Bank Ltd has organized an auction in below mention respect of vehicles.

1) CB_MAHINDRA_BOLERO_MAXXCITY_PICKUP YOM – 2024 Reg No – KA15A8642
2) CB_EXCAVATOR_9027_F_LUIGONG YOM – 2024 Engine No: LGC9027FPPC325916
3) CB_BACKHOE_LOADER_BULL_HD76_BULL YOM – 2023 Reg No – KA20ME6584
4) CB_EICHER_PRO6031 YOM – 2014 Reg No – KA01AE0288
5) CB_AL_BADA_DOST YOM – 2023 Reg No – KA31A4619
6) CB_TATA LPT 810 YOM – 2016 Reg No – KA01AH9333
7) CB_Ashok Leyland Dost GOODS YOM – 2024 Reg No – KA55A3288
8) CB_ASHOK_LEYLAND_1915_HE_4200_CHASSIS YOM – 2024 Reg No – KA19AE6720
9) CB_BHARATBENZ 4228 TT YOM – 2023 Reg No – KA32AB3434
10) CB_AL_BADA_DOST YOM – 2024 Reg No – KA685647
11) CB_Ashok Leyland Dost GOODS YOM – 2024 Reg No – KA16AA8663
12) CB_TIPPER_SIGNA_4825_TATA_MOTORS YOM – 2023 Reg No – KA34C7641
13) CB_LPT_4223_COWL_CHASSIS_GOODS YOM – 2019 Reg No – KA35C3566
14) CB_AL_BADA_DOST YOM – 2024 Reg No – KA09AA8819
15) CB_MARUTI SUPER CARRY YOM – 2021 Reg No – KA04AC5193
16) CB_Ashok Leyland Dost GOODS YOM – 2023 Reg No – KA19AE3261
17) CB_EICHER6048 YOM – 2023 Reg No – KA19AE3611
18) CB_MARUTI SUPER CARRY YOM – 2020 Reg No – KA04AC4887
19) CB_AL_BADA_DOST YOM – 2023 Reg No – KA25AB7627
20) CB_EXCAVATOR_JCB225_LC_JCB YOM – 2022 Engine No H00319424 Chassis No: PUNJN22ALM2960663
21) CB_AL_BADA_DOST YOM – 2023 Reg No – KA25AB8674
22) CB_EXCAVATOR_JCB225_LC_JCB YOM – 2022 Chassis No: PUNJN22APN2960736 Engine No H00333154
23) CB_ROCK_BREAKER_HM_2180_JCB YOM – 2022 Engine No 2960663
24) CB_Ashok Leyland Dost GOODS YOM – 2024 Reg No – KA17AA9688
25) CB_AL1918_COWL_CHASSIS_GOODS YOM – 2023 Reg No – KA19AE1831
26) CB_SML_ _EXECUTIVE_LX_5100_39_SEATER_AC_BUS YOM – 2023 Reg No – KA52C0517
27) CB_AL_BADA_DOST YOM – 2024 Reg No – KA52C0981
28) CB_TIPPER_BB2828C_BHARAT_BENZ YOM – 2024 Reg No – KA32AB0105

UNDER HYPOTHECATION WITH M/S KOTAK MAHINDRA BANK IS UNDER SALE IN ITS "AS IS WHERE IS CONDITION"

INTERESTED PARTIES CAN GIVE THEIR QUOTATIONS (ONLINE/OFFLINE) WITHIN 15 DAYS FROM THIS PAPER PUBLICATION i.e. from 11.01.2025

(Please note that closing Auction date would not be a Weekly off / Holiday)

BRANCH ADDRESS: KOTAK MAHINDRA BANK LTD., 22, MG ROAD, BANGALORE KARNATAKA – 560001

OR

Contact: Arunlaxman Kokare Kotak Mahindra Bank Ltd. Contact / 080 - 61564249

ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತ

ಉಪ ಪ್ರಧಾನ ವ್ಯವಸ್ಥಾಪಕರು-3 (ಬೆಂಘತ್ಯಾನಿನಿ), ನಂ.30/1, 1ನೇ ಮಹಡಿ, ಯುಎನ್‌ಐ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತನಗರ, ಬೆಂಗಳೂರು-560 052.

ಸಂ: ಉಪ್ರವ್ಯ-3/(ಬೆಂಘತ್ಯಾನಿನಿ)/ಟೆಂಡರ್/ಪಿಪಿಪಿ/04/ತಿದ್ದುಪಡಿ-01/24-25 ದಿನಾಂಕ: 10.01.2025

ತಿದ್ದುಪಡಿ–1

ವಿಷಯ: ಟೆಂಡರ್ ಪ್ರಕಟಣೆಯ ವೇಳಾಪಟ್ಟಿ ವಿಸ್ತರಣೆ.

ಉಲ್ಲೇಖ: ಈ ಕಛೇರಿಯ ಟೆಂಡರ್ ಪ್ರಕಟಣೆ ಸಂ: DGM-3/(BSWML)/TEND/PPP/04/24-25, Dated: 26.12.2024.

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ ಟೆಂಡರ್ ಪ್ರಕಟಣೆಯ ವೇಳಾಪಟ್ಟಿಯನ್ನು ಆಡಳಿತಾತ್ಮಕ ಹಾಗೂ ತಾಂತ್ರಿಕ ಕಾರಣಗಳಿಂದ ವಿಸ್ತರಿಸಲಾಗಿದೆ.

ನಿಗದಿತ ಅವಧಿ / ವೇಳಾಪಟ್ಟಿ

ಕ್ರ ಸಂ.	ವಿವರ	ಟೆಂಡರ್ ಪ್ರಕಟಣೆಯ ಪ್ರಕಾರ	ವಿಸ್ತರಿಸಲಾದ ದಿನಾಂಕಗಳನ್ನು ದಯವಿಟ್ಟು ಓದಿಕೊಳ್ಳುವುದು
1	ಬಿಡ್ ಪೂರ್ವ ಪ್ರಶ್ನಾವಳಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	10.01.2025 ಸಂಜೆ 3.00 ಗಂಟೆವರೆಗೆ	17.01.2025 ಸಂಜೆ 5.30 ಗಂಟೆವರೆಗೆ

ಸಹಿ/–
ಉಪ ಪ್ರಧಾನ ವ್ಯವಸ್ಥಾಪಕರು–3, ಬೆಂಘತ್ಯಾನಿನಿ

ವಾಸಾಸಂಇ/ವಾ.ಪ್ರ/4303/ಎಂಎಎ/24–25

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನೀಯರ್ ಕನೀನಿನಿ ರವರ ಕಛೇರಿ, ಕೆ.ಪಿ.ಸಿ. ವಿಭಾಗ ನಂ.2, ಭಾಲ್ಕಿ–585328

NO: EE/KNNL/KPCD-2/Bhalki/PB/TND/2024-25/847 Date:06-01-2025

:: ಕೆಪಿಪಿ ಪ್ರೊಕ್ಯೂರಮೇಂಟ್ ಅಲ್ಪಾವಧಿ ಟೆಂಡರ ಪ್ರಕಟಣೆ ::

ವ್ಯವಸ್ಥಾಪಕ ನಿರ್ದೇಶಕರು ಕನೀನಿನಿ. ಬೆಂಗಳೂರು ಇವರ ಪರವಾಗಿ ಕೆಳಗೆ ಸಹಿ ಮಾಡಿರುವವರಿಂದ ಕಾರಂಜಾ ಯೋಜನೆ ನಿರ್ಮಾಣ ವಿಭಾಗ ನಂ–2 ಭಾಲ್ಕಿ ಅಡಿಯಲ್ಲಿ 4701 ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಕೆಪಿಪಿಪ್ರೊಕ್ಯೂರಮೇಂಟ್‌ನಲ್ಲಿ ಶೇಕಡವಾರು ಏಕ & ದ್ವಿ–ಲಕೋಟೆಯಲ್ಲಿ ಟೆಂಡರ ಕರೆಯಲಾಗಿದ್ದು, ವಿವರ ಈ ಕೆಳಗಿನಂತಿದೆ. ಈ ಕಾಮಗಾರಿಯ ಟೆಂಡರ್‌ಗಿಟ್ಟ ಮೊತ್ತ ರೂ.24,00,000/– ರಿಂದ 1.15,00,000/– (ರೂಪಾಯಿ ಇಪ್ಪತ್ನಾಲ್ಕು ಲಕ್ಷರಿಂದ ನೂರಹದಿನೈದು ಲಕ್ಷದ ವೆರೆಗೆ ಮಾತ್ರ ಇದ್ದು). ಇ.ಎಂ.ಡಿ. ಮೊತ್ತವು ಇ–ಪೋರ್ಟಲ್ ನಲ್ಲಿರುವಂತೆ.

1) ಕೆಪಿಪಿ ಪ್ರೊಕ್ಯೂರಮೇಂಟ್‌ನಲ್ಲಿ KPPP.Karnataka.gov.in ಖಾಲಿ ಟೆಂಡರ ಫಾರ್ಮಗೆ work Indent no's are 1) 2474, 2) 2475 ವಿನಂತಿ ಮತ್ತು ಪೇಪರಗಳನ್ನು ಡೌನಲೋಡ್ ಮಾಡಿಕೊಳ್ಳುವುದು ಮತ್ತು ಇ–ಪೋರ್ಟಲ್ ಮೂಲಕ ಭರ್ತಿ ಮಾಡಿ ಟೆಂಡರ ಸಲ್ಲಿಸುವ ದಿನಾಂಕ: **09/01/2025 ರಿಂದ 22/01/2025ರ ಸಾ: 04.30 ಘಂಟೆಯವರೆಗೆ.** 2) ದಿನಾಂಕ: **23–01–2025 ರಂದು ಸಾ:04.30 ಘಂಟೆಯ ನಂತರ** ತೆರೆಯಲಾಗುವುದು. (ತಾಂತ್ರಿಕ ಬಿಡ್ಡು), ದಿನಾಂಕ: **24–01–2025 ರಂದು ಸಾ: 05:01 ಘಂಟೆಯ ನಂತರ** ತೆರೆಯಲಾಗುವುದು. (ಆರ್ಥಿಕ ಬಿಡ್ಡು) ಹೆಚ್ಚಿನ ವಿವರಗಳಿಗಾಗಿ ಕೆಳಗೆ ಸಹಿ ಮಾಡಿದವರ ಕಛೇರಿಯಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು ದೂರವಾಣಿ ಸಂಖ್ಯೆ:–08484–262257

ಸಹಿ/– ಕಾರ್ಯಪಾಲಕ ಅಭಿಯಂತರರು ಕನೀನಿನಿ,
ಕೆ.ಪಿ.ಸಿ. ವಿಭಾಗ ನಂ.2, ಭಾಲ್ಕಿ.

ವಾ.ಸಾ.ಸಂ.ಇ/ಬೀದರ/351/ಕೆ.ಎಸ್.ಎಂ.ಸಿ.&ಎ/2024–25

ದೊಡ್ಡತೋಗೂರು ಪಟ್ಟಣ ಪಂಚಾಯಿತಿ ಕಾರ್ಯಾಲಯ

ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ – 560 100
ಫೋನ್: 080–22111177, e-Mail:ka.doddathoguru.tp@gmail.com

ಸಂ: ದೊಪಪಂ/ತಾ.ಶಾ/ಟೆಂ/08/2024–25 ದಿನಾಂಕ:10.01.2025

ಅಲ್ಪಾವಧಿ ಟೆಂಡರ್ ಪ್ರಕಟಣೆ

ದೊಡ್ಡತೋಗೂರು ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ 2024–25ನೇ ಸಾಲಿನ ಪಟ್ಟಣ ಪಂಚಾಯಿತಿ ನಿಧಿಯಡಿಯಲ್ಲಿ ದೊಡ್ಡತೋಗೂರು ಪಟ್ಟಣ ಪಂಚಾಯಿತಿಯ ದೈನಂದಿನ ಮತ್ತು ಆಡಳಿತಾತ್ಮಕ ಕಛೇರಿ ಉದ್ದೇಶಕ್ಕಾಗಿ ಹೊಸದಾಗಿ ನೂತನ ಕಛೇರಿ ಕಟ್ಟಡವನ್ನು ನಿರ್ಮಿಸಲು ಉದ್ದೇಶಿಸಲಾಗಿರುತ್ತದೆ. ಅದರಂತೆ ಕೆಡಬ್ಲ್ಯೂ–4 ನಿಯಮಾನುಸಾರ ಟೆಂಡರ್ ಕರೆಯಲಾಗಿದೆ. ಆಸ್ತಕಿಯುಳ್ಳ ನೊಂದಾಯಿತ ಅರ್ಹ ಗುತ್ತಿಗೆದಾರರು ಸದರಿ ಟೆಂಡರ್‌ನ್ನು ವೆಬ್‌ಸೈಟ್ : **www.kppp.karnataka.gov.in** ಮುಖಾಂತರ ಭಾಗವಹಿಸಬಹುದು ವಿವರ ಈ ಕೆಳಕಂಡಂತಿದೆ.

ಕ್ರ. ಸಂ	ಕಾಮಗಾರಿಯ ಹೆಸರು	ಇಂಡೆಂಟ್ ಸಂಖ್ಯೆ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಟೆಂಡರ್ ಮೊತ್ತ (ಲಕ್ಷಗಳಲ್ಲಿ)	ಇಎಂಡಿ ಮೊತ್ತ (ಲಕ್ಷಗಳಲ್ಲಿ)	ಕಾಲಾವಧಿ
01	ದೊಡ್ಡತೋಗೂರು ಪಟ್ಟಣ ಪಂಚಾಯಿತಿ ವ್ಯಾಪ್ತಿಯ ದೊಡ್ಡತೋಗೂರು ಪಟ್ಟಣ ಪಂಚಾಯಿತಿ ಕಛೇರಿ ಉದ್ದೇಶಕ್ಕಾಗಿ ನೂತನ ಕಛೇರಿ ಕಟ್ಟಡ ನಿರ್ಮಾಣ ಕಾಮಗಾರಿ	DMA/2024-25/BD/Work_Indent33894	498.00	410.66	6.16	12 ತಿಂಗಳು

(1) **www.kppp.karnataka.gov.in** ಮುಖಾಂತರ ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ 28.01.2025 ಸಮಯ 17:00 ಗಂಟೆಯವರೆಗೆ.** (2) ಟೆಂಡರ್ ತರೆಯುವ **ದಿನಾಂಕ 29.01.2025 ಸಮಯ 17:30 ಗಂಟೆಗೆ,** ಮೇಲ್ಕಂಡ ದಿನಾಂಕಗಳಂದು ಸರ್ಕಾರಿ ರಜೆ ಘೋಷಣೆಯಾದಲ್ಲಿ ಅದರ ಮುಂದಿನ ಕೆಲಸದ ದಿನಾಂಕವನ್ನು ಪರಿಗಣಿಸಲಾಗುವುದು. ಹೆಚ್ಚಿನ ವಿವರಗಳಿಗೆ ಪಟ್ಟಣ ಪಂಚಾಯಿತಿ ತಾಂತ್ರಿಕ ಶಾಖೆಯಲ್ಲಿ ಮಾಹಿತಿ ಪಡೆಯಬಹುದಾಗಿರುತ್ತದೆ.

ಸಹಿ/–
ಶ್ರೀನಿವಾಸ ಹೆಚ್. ಕೆ.ಎ.ಎಸ್
ಆಡಳಿತಾಧಿಕಾರಿಗಳು
ದೊಡ್ಡತೋಗೂರು ಪಟ್ಟಣ ಪಂಚಾಯಿತಿ
ಬೆಂಗಳೂರು ನಗರ ಜಿಲ್ಲೆ

ವಾಸಾಸಂಇ/ವಾಪ್ರ/ಜಿಎ/4278/2024–25

ಸಹಿ/–
ಟಿ.ಕೆ ನವೀನ್‌ಕುಮಾರ್ ಕೆ.ಎಂ.ಎ.ಎಸ್.
ಮುಖ್ಯಾಧಿಕಾರಿ ಶ್ರೇಣಿ–2
ದೊಡ್ಡತೋಗೂರು ಪಟ್ಟಣ ಪಂಚಾಯಿತಿ
ಬೆಂಗಳೂರು ನಗರ ಜಿಲ್ಲೆ

Bamul ಬೆಂಗಳೂರು ಸಹಕಾರ ಹಾಲು ಒಕ್ಕೂಟ ನಿಯಮಿತ (ಬೆಂಗಳೂರು ಡೇರಿ)

ಡಿ.ಆರ್.ಕಾಲೇಜು ಅಂಚೆ, ಡಾ: ಎಂ.ಹೆಚ್.ಮರೀಗೌಡ ರಸ್ತೆ, ಬೆಂಗಳೂರು–560029,
ಇ–ಮೇಲ್: bamulpurchase@gmail.com, ವೆಬ್‌ಸೈಟ್: www.bamulnandini.coop, ದೂರವಾಣಿ: 080–26096282

ಟೆಂಡರ್ ಉಲ್ಲೇಖ ಸಂಖ್ಯೆ: ಬಮೂಲ್/ಪಿಯುಆರ್/09/1809/ಟಿ–315/2024–25 ದಿನಾಂಕ: 06.01.2025

ತಾಂತ್ರಿಕ ಮತ್ತು ವಾಣಿಜ್ಯ ಟೆಂಡರ್ ಪ್ರಕಟಣೆಯನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್

ಬೆಂಗಳೂರು ಸಹಕಾರ ಹಾಲು ಒಕ್ಕೂಟ ನಿ.(ಬಮೂಲ್), ಬೆಂಗಳೂರು ರವರು ಆಸಕ್ತಿಯುಳ್ಳ ಅರ್ಹತೆಯಾರಕರು/ ಸರಬರಾಜುದಾರರಿಂದ ಈ ಕೆಳಕಂಡ ಸಾಮಗ್ರಿಗಳ ಸರಬರಾಜಿಗೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಇ–ಟೆಂಡರ್ ಕರೆಯಲಾಗಿದೆ.

ಕ್ರ.ಸ	ಸಾಮಗ್ರಿಯ ವಿವರ	ಪರಿಮಾಣ	ಅಂದಾಜು (ಲಕ್ಷಗಳಲ್ಲಿ)	ಟೆಂಡರ್ ಸಂಖ್ಯೆ
01	Liquid Petroleum Gas Supply, Operation and maintenance of LPG Bullets at Main Dairy-BAMUL for a period of one year	1400000 Kgs (1400MT)	1428.00	KMF/2024-25/IND1177
02	Supply of Emulsiging Salt for Process Cheese (JOHA S9, JOHA Pz7, JOHA T Nue, JOHA C Nue, JOHA C spl or individual equivalent salts) to Kanakapura Dairy for a period of one year.	10000 Kg's	98.56	KMF/2024-25/IND1178
03	Supply of Ghee pet jar with cap induction wad and printed alu foils 5 ply Corrugated Boxes to Bengaluru Dairy for a period of one year.			KMF/2024-25/IND1179
	i) 200ml Ghee pet jars with cap, Induction wad & printed alu. Foils, 5 ply corrugated boxes	600000 No's	44.48	
	ii) 500ml Ghee pet jars with cap, Induction wad & printed alu. Foils, 5 ply corrugated boxes	400000 No's	41.58	
	iii) 1 Litre Ghee pet jars with cap, Induction wad & printed alu. Foils, 5 ply corrugated boxes	200000 No's	37.64	
04	Supply of printed pet jars labels to Bengaluru Dairy for a period of one year.			KMF/2024-25/IND1180
	i) 200 ml printed pet jars labels	600000 No's	08.82	
	ii) 500ml printed pet jars labels	400000 No's	11.00	
	iii) 1 Litre printed pet jars labels	200000 No's	05.96	

1	ಇ–ಟೆಂಡರ್ ದಾಖಲೆಗಳು ಲಭಿಸುವ ದಿನಾಂಕ ಮತ್ತು ಸಮಯ	08.01.2025 ರಿಂದ 06.02.2025 ಅಪರಾಹ್ನ 02.00 ಗಂಟೆವರೆಗೆ
2	ಪ್ರೀ–ಬಿಡ್ ಮೀಟಿಂಗ್ ಮತ್ತು ಟೆಂಡರ್ ಬಗ್ಗೆ ಸ್ಪಷ್ಟನೆ ದಿನಾಂಕ ಮತ್ತು ಸಮಯ	20.01.2025 ಬೆಳಿಗ್ಗೆ 11.00 ಗಂಟೆಗೆ ವರೆಗೆ
3	ಟೆಂಡರ್ ಸಲ್ಲಿಸುವ/ನಮೂದಿಸುವ ಕೊನೆಯ ದಿನಾಂಕ ಮತ್ತು ಸಮಯ	06.02.2025 ಅಪರಾಹ್ನ 02.00 ಗಂಟೆವರೆಗೆ
4	ತಾಂತ್ರಿಕ ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ	07.02.2025 ಅಪರಾಹ್ನ 02.35 ಗಂಟೆಗೆ
5	ವಾಣಿಜ್ಯ ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ	12.02.2025 ಬೆಳಿಗ್ಗೆ 11.30 ಗಂಟೆಗೆ
6	ತಾಂತ್ರಿಕ ಮತ್ತು ವಾಣಿಜ್ಯ ಟೆಂಡರ್ ತೆರೆಯುವ ಸ್ಥಳ	ಬೆಂಗಳೂರು ಸಹಕಾರ ಹಾಲು ಒಕ್ಕೂಟ (ನಿ.) (ಬೆಂಗಳೂರು ಡೇರಿ) ಮಂಡಲಿ ಸಭಾಂಗಣ

ಟೆಂಡರ್‌ದಾರರು ಮೇಲೆ ತಿಳಿಸಿರುವ ಸೇವೆಗಳಿಗೆ ಪ್ರತ್ಯೇಕ ಟೆಂಡರ್ ಸಲ್ಲಿಸಬೇಕು. ಗುತ್ತಿಗೆ ನೀಡಿಕೆಗೆ ಅರ್ಹರಾಗಲು ಹೊಂದಿರ ಬೇಕಾದ ಅರ್ಹತಾ ಅಗತ್ಯತೆಯನ್ನು ವಿಭಾಗ VIIರಲ್ಲಿ ತಿಳಿಸಲಾಗಿದೆ.

ಇ.ಎಂ.ಡಿ. ಬಾಬ್ತಿನ ಹಣವು ಟೆಂಡರ್ ಅವಧಿಯ 45 ದಿನಗಳ ವಾಯ್ದೆ ಮೀರಿದ್ದು, ಅಂದರೆ ಒಟ್ಟು 135 ದಿನಗಳ ಸಿಂಧುತ್ವದ ಅವಧಿಗೆ ಅನ್ವಯವಾಗಿರುತ್ತದೆ. ಟೆಂಡರ್ ಪ್ರಕ್ರಿಯೆ ಶುಲ್ಕ ಇ–ಪಾವತಿಯ ವಿಧಾನಗಳು ಮತ್ತು ಟೆಂಡರ್ ದಾಖಲೆಗಳ ವಿವರವನ್ನು ವೆಬ್‌ಸೈಟ್ **https://kppp.karnataka.gov.in** ನಲ್ಲಿ ವೀಕ್ಷಿಸಬಹುದು. ಆಸಕ್ತಿಯುಳ್ಳ ಟೆಂಡರ್‌ದಾರರು ಹೆಚ್ಚಿನ ಮಾಹಿತಿಯನ್ನು ಮೇಲ್ಕಾಣಿಸಿದ ವಿಳಾಸದಲ್ಲಿ ಪಡೆಯಬಹುದಾಗಿರುತ್ತದೆ, **ಸಹಾಯವಾಣಿ ಸಂ.8046010000/8068948777.**

ಸಹಿ/– ವ್ಯವಸ್ಥಾಪಕ ನಿರ್ದೇಶಕರು
ಟೆಂಡರ್‌ಆಹ್ವಾನಿಸುವ ಪ್ರಾಧಿಕಾರ(ಬಮೂಲ್)

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ನಂ. 16–ಡಿ, 3ನೇ ಮಹಡಿ, ಡಿ. ದೇವರಾಜ ಅರಸು ಭವನ, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560 052. ಫೋನ್: 8050770004 ಇ–ಮೇಲ್: bcwd.training@gmail.com

ಸಂಖ್ಯೆ: BCWD/T-4/CLAT/CR-4A/2024-25 ದಿನಾಂಕ:09.01.2025

ಪ್ರಕಟಣೆ

ಕರ್ನಾಟಕ ಸರ್ಕಾರದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ನಿಯೋಜಿಸುವ ವಿದ್ಯಾರ್ಥಿಗಳಿಗೆ CLAT ಪರೀಕ್ಷಾ ಪೂರ್ವ ತರಬೇತಿ (class room coaching) ಯನ್ನು ನೀಡಲು ಅರ್ಹ ತರಬೇತಿ ಸಂಸ್ಥೆಗಳಿಂದ ಅಲ್ಪಾವಧಿ ಮರು ಟೆಂಡರ್ ಅನ್ನು ಆಹ್ವಾನಿಸಿದೆ.

ಹೆಚ್ಚಿನ ವಿವರಗಳಿಗೆ **https://kppp.karnataka.gov.in** ವೆಬ್‌ಸೈಟ್ ನೋಡಬಹುದಾಗಿದೆ.

ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : **17.01.2025 ರ ಅಪರಾಹ್ನ 3.30 ಗಂಟೆಯವರೆಗೆ.**

ಕೆಪಿಪಿಪಿ ಸಹಾಯವಾಣಿ : +91–8046010000, +91–8068948777.

ಸಹಿ/– ಆಯುಕ್ತರು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು

ವಾಸಾಸಂಇ/ವಾಪ್ರ/ಜಿಎ/4277/2024–25

ಕರ್ನಾಟಕ ರಾಜ್ಯ ಪೋಲಿಸ್ ವಸತಿ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)

#59, ರಿಚ್‌ಮಂಡ್ ರಸ್ತೆ, ಜನರಲ್ ಕೆ.ಎಸ್.ತಿಮ್ಮಯ್ಯ ರಸ್ತೆ, ಬೆಂಗಳೂರು – 560025.
ದೂರವಾಣಿ ಸಂಖ್ಯೆ: 080–25584102/25594893 ವೆಬ್‌ಸೈಟ್: www.ksphc.org
ಇ–ಮೇಲ್: eecontractksphc@gmail.com

ಸಂಖ್ಯೆ: ಇಇ/ಕೆಎಸ್‌ಪಿಹೆಚ್&ಐಡಿಸಿಎಲ್/ಸಿಎನ್‌ಟಿ/ಟಿಎನ್‌ಡಿ/07/2024–25/452
ದಿನಾಂಕ: 09.01.2025

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕೆಎಸ್‌ಪಿಹೆಚ್ & ಐಡಿಸಿಎಲ್ ಕೆಟಿಪಿಪಿ 2000 ಕಾಯ್ದೆಯ ಪ್ರಕಾರ ಮತ್ತು ಸ್ಟ್ಯಾಂಡರ್ಡ್ ಟೆಂಡರ್ ದಸ್ತಾವೇಜು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟ್‌ಲ್ **https://kppp.karnataka.gov.in** ಮೂಲಕ "ಶಿವಮೊಗ್ಗದಲ್ಲಿ ಅತ್ಯುನ್ನತ ಭದ್ರತಾ ಕಾರಾಗೃಹ ಮತ್ತು ವಸತಿ ಗೃಹಗಳ ನಿರ್ಮಾಣದ ಕಾಮಗಾರಿಗಳಿಗೆ ಯೋಜನಾ ನಿರ್ವಹಣಾ ಸಮಾಲೋಚಕರ (Project Management Consultancy Services) ಸೇವೆಗಳಿಗಾಗಿ" ಆನ್‌ಲೈನ್ ಟೆಂಡರ್‌ನ್ನು ಆಹ್ವಾನಿಸಿದೆ. (ಟೆಂಡರ್‌ಗಿಟ್ಟ ಮೊತ್ತ: ರೂ. 51.22 ಲಕ್ಷಗಳು. ಜಿಎಸ್‌ಟಿ ಒಳಗೊಂಡಂತೆ).

ಪ್ರಾಜೆಕ್ಟ್ ಮಾನಿಟರಿಂಗ್ ಸೇವೆಗಳಲ್ಲಿ ನಿರ್ದಿಷ್ಟ ಅನುಭವವನ್ನು ಹೊಂದಿರುವ ಮತ್ತು ಅಂತಹ ಸೇವೆಗಳನ್ನು ಕೈಗೊಳ್ಳಲು ಅಗತ್ಯವಿರುವ ಮೂಲಸೌಕರ್ಯ ಮತ್ತು ಹಣಕಾಸಿನ ಸಾಮರ್ಥ್ಯಗಳನ್ನು ಹೊಂದಿರುವ ಆಸಕ್ತ ಸಲಹೆಗಾರರು/ಸಂಸ್ಥೆಗಳು ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದು. ಟೆಂಡರ್ ಶುಲ್ಕ, ಇಎಂಡಿ, ಟೆಂಡರ್ ದಾಖಲೆಗಳು ಮತ್ತು ಇತ್ಯಾದಿ ವಿವರಗಳು ದಿನಾಂಕ: **13.01.2025** ರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ (ಕೆಪಿಪಿಪಿ) ನಲ್ಲಿ ಲಭ್ಯವಿರುತ್ತದೆ.

"ಕೆಎಸ್‌ಪಿಹೆಚ್ & ಐಡಿಸಿಎಲ್ ಯಾವುದೇ ಅಥವಾ ಎಲ್ಲಾ ಬಿಡ್‌ಗಳನ್ನು ಯಾವುದೇ ಕಾರಣ ನೀಡದೆ ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತದೆ".

ಸೂಚನೆ: ಯಾವುದೇ ಬದಲಾವಣೆ/ತಿದ್ದುಪಡಿಗಳಿದ್ದಲ್ಲಿ ಕೆ.ಪಿ.ಪಿ ಪೋರ್ಟಲ್‌ನಲ್ಲಿ ಮಾತ್ರ ಅಪ್‌ಡೇಟ್ ಮಾಡಲಾಗುವುದು.

DIPR/CP/SPAN/4294/2024-25 ಸಹಿ/– ಕಾರ್ಯಪಾಲಕ ಅಭಿಯಂತರರು–ಗುತ್ತಿಗೆ

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರರವರ ಕಛೇರಿ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮೈಸೂರು–570 022.

ಸಂ.ಕಾಅ/ಗ್ರಾಕುನೀ&ನೈವಿ/ಮೈ/ಇ–ಪ್ರಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ

ಇ–ಟೆಂಡರ್ ಪ್ರಕಟಣೆ ಸಂಖ್ಯೆ 16/2024–25 ದಿನಾಂಕ:07.01.2025

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮೈಸೂರುರವರು ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಬೆಂಗಳೂರುರವರ ಸಹಯೋಗದೊಂದಿಗೆ, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ನೊಂದಾಯಿತ/ಎನ್‌ರೋಲ್ ಮಾಡಿದ 3ನೇ ದರ್ಜೆ ಗುತ್ತಿಗೆದಾರರು ಮತ್ತು ಮೇಲ್ಪಟ್ಟು ಟೆಂಡರ್ ನಮೂನೆ KW-1 KW-2 & KW-3, KW-4 ರೀತ್ಯಾ (ದ್ವಿ ಲಕೋಟೆ ಪದ್ಧತಿಯಂತೆ) ಹೆ.ಚ್.ಡಿ.ಕೋಟೆ, ತಾಲ್ಲೂಕಿನ O &M 01 ಕಾಮಗಾರಿ & ಮೈಸೂರು, ತಾಲ್ಲೂಕಿನ GWM 01 ಕಾಮಗಾರಿ (KW-G) ಅಂದಾಜು ಮೊತ್ತ ರೂ.(116.29 ರಿಂದ 159.14 ಲಕ್ಷ) ಇ–ಪ್ರಕ್ಯೂರ್‌ಮೆಂಟ್ ಮೂಲಕ ಇ–ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಫಾರಂಗೆ ಅರ್ಜಿ ಸಲ್ಲಿಸಲು ಮತ್ತು ಭರ್ತಿ ಮಾಡಿದ ಫಾರಂಗಳನ್ನು ಆನ್‌ಲೈನ್ ನಲ್ಲಿ ಸಲ್ಲಿಸಲು ನಿಗಧಿತ ಅವಧಿ ದಿ: 08.01.2025 ರಿಂದ 15.01.2025 ರವರೆಗೆ, ಟೆಂಡರ್ ತೆರೆಯುವ ದಿ: 16.01.2025ರ ಸಂಜೆ 5.30 ಘಂಟೆಯ ನಂತರ. ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (e-procurement portal) ವೆಬ್ ಸೈಟ್‌ನಲ್ಲಿ ಪಡೆಯಬಹುದು. https://kppp.gov.in ಈ ಬಗ್ಗೆ ಇನ್ನೂ ಹೆಚ್ಚಿನ ವಿವರಗಳಿಗಾಗಿ ಕಾರ್ಯಪಾಲಕ ಅಭಿಯಂತರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮೈಸೂರು (ಪೋನ್ ನಂ.0821–2460495)ರವರ ಕಛೇರಿಯ ವೇಳೆಯಲ್ಲಿ ಪಡೆಯಬಹುದು.

DIPR/DDMYS/1085/KSMCA/733/2024-25 ಸಹಿ/– ಕಾರ್ಯಪಾಲಕ ಅಭಿಯಂತರು

ಆರ್ಥಿಕ ಇಲಾಖೆ
ವಿಧಾನಸೌಧ, ಬೆಂಗಳೂರು

ನಂ. ಆಇ 03 ಬಿಎಂಬಿ 2024 ಬೆಂಗಳೂರು, 10ನೇ ಜನವರಿ 2025

ಪತ್ರಿಕಾ ಪ್ರಕಟಣೆ

ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ಅಧಿಸೂಚನೆ ಸಂಖ್ಯೆ: ಎಫ್.ಡಿ. 01 ಬಿಎಂಬಿ 2014, ದಿನಾಂಕ: 06ನೇ ಫೆಬ್ರವರಿ 2015ರ ನಿಬಂಧನೆಯ ಮೇರೆಗೆ ಹೊರಡಿಸಲಾದ 8.06% ಕರ್ನಾಟಕ ಸರ್ಕಾರದ ಅಭಿವೃದ್ಧಿ ಸಾಲ 2025, (Karnataka SDL 2025) ದಿನಾಂಕ : 10ನೇ ಫೆಬ್ರವರಿ 2025 ದಿನಾಂಕವೂ ಸೇರಿ ಅವರೆಗೆ ಸಲ್ಲತಕ್ಕ ಎಲ್ಲ ಬಡ್ಡಿ ಸಮೇತ, ದಿನಾಂಕ: 11ನೇ ಫೆಬ್ರವರಿ 2025 ರಂದು ನಮೂದು ಬೆಲೆಯಲ್ಲಿ ಸಂದಾಯ ಮಾಡಲಾಗುವುದೆಂದು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗಿದೆ. ನೆಗೋಷಿಯೇಬಲ್ ಇನ್‌ಸ್ಟ್ರುಮೆಂಟ್ಸ್ ಆಕ್ಟ್ 1881ರ ರೀತ್ಯ ಮೇಲೆ ಹೇಳಲಾದ ದಿನಾಂಕದಂದು ರಾಜ್ಯ ಸರ್ಕಾರವು ರಜಾ ಘೋಷಿಸಿದ ಸಂದರ್ಭದಲ್ಲಿ, ರಾಜ್ಯದಲ್ಲಿ ಪಾವತಿ ಕಛೇರಿಗಳು ಹಿಂದಿನ ದಿನವೇ ಸಾಲಗಳನ್ನು ಮರುಪಾವತಿ ಮಾಡುತ್ತವೆ. 11ನೇ ಫೆಬ್ರವರಿ 2025ರಂದು ಮತ್ತು ಆ ತರುವಾಯ ಸದರಿ ಸಾಲದ ಮೇಲೆ ಯಾವುದೇ ಬಡ್ಡಿ ಪ್ರಾಪ್ತವಾಗುವುದಿಲ್ಲ.

2. ಸರ್ಕಾರದ ಸೆಕ್ಯೂರಿಟಿಗಳ ನಿಬಂಧನೆಗಳು, 2007ರ ಉಪ ನಿಬಂಧನೆ 24(2) ಮತ್ತು 24(3)ರನ್ವಯ ಸಬ್‌ಸಿಡರಿ ಜನರಲ್ ಲೆಡ್ಜರ್ ಅಥವಾ ಕನ್‌ಸ್ಟಿಟುಅಂಟ್ ಸಬ್‌ಸಿಡರಿ ಜನರಲ್ ಲೆಡ್ಜರ್ ಖಾತೆ ಅಥವಾ ಸ್ಟಾಕ್ ಸರ್ಟಿಫಿಕೇಟ್ ರೂಪದಲ್ಲಿ ಸರ್ಕಾರದ ಸೆಕ್ಯೂರಿಟಿಗಳನ್ನು ಹೊಂದಿದ ನೋಂದಾಯಿತ ಧಾರಕರುಗಳಿಗೆ, ಪರಿಪಕ್ವಗೊಂಡ ಉತ್ಪತ್ತಿಗಳನ್ನು ಅವರ ಬ್ಯಾಂಕ್ ಖಾತೆಯ ವಿವರಗಳನ್ನೊಳಗೊಂಡ ಪೇ ಆರ್ಡರ್ ಮೂಲಕ ಅಥವಾ ಅವರು ಇ– ಬ್ಯಾಂಕಿಂಗ್ ಖಾತೆಯನ್ನು ಹೊಂದಿದ್ದಲ್ಲಿ, ಆ ಬ್ಯಾಂಕ್ ಖಾತೆಗೆ ಜಮೆ ಮಾಡುವ ಮೂಲಕ ಪಾವತಿಸಲಾಗುವುದು. ಸೆಕ್ಯೂರಿಟಿ ಮೊತ್ತವನ್ನು ಪಾವತಿಸಲು ಮೂಲ ವಂತಿಗೆದಾರರು ಅಥವಾ ತದನಂತರದ ಧಾರಕರು ಬ್ಯಾಂಕ್ ಅಥವಾ ಖಜಾನೆ ಮತ್ತು ಉಪ ಖಜಾನೆ ಅಥವಾ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶಾಖೆ, ಬಡ್ಡಿಯ ಸಂದಾಯಕ್ಕಾಗಿ ಮೊಹರೊತ್ತಲಾಗಿದೆಯೋ / ನೋಂದಾಯಿತವಾಗಿವೆಯೋ ಅಂತಹ ಬ್ಯಾಂಕ್‌ಗಳಲ್ಲಿ, ಬ್ಯಾಂಕ್ ಖಾತೆಯ ವಿವರಗಳನ್ನು ಸಲ್ಲಿಸತಕ್ಕದ್ದು.

3. ಆದಾಗ್ಯೂ, ಬ್ಯಾಂಕ್ ಖಾತೆಯ ವಿವರಗಳು ಇಲ್ಲದ/ಎಲೆಕ್ಟ್ರಾನಿಕ್ ಬ್ಯಾಂಕಿಂಗ್ ಮೂಲಕ ವಂತಿಗೆಗಳ ಸ್ವೀಕೃತಿ ಸೌಲಭ್ಯವಿಲ್ಲದ ಸಂದರ್ಭಗಳಲ್ಲಿ ವಾಯಿದೆಯ ದಿನದಂದು ಮರುಸಂದಾಯವು ಅನುಕೂಲವಾಗುವಂತೆ, 8.06% ಕರ್ನಾಟಕ ಸರ್ಕಾರದ ಅಭಿವೃದ್ಧಿ ಸಾಲ 2025, (Karnataka SDL 2025) ಹೊಂದಿದ ಧಾರಕರು ತಮ್ಮ ಸೆಕ್ಯೂರಿಟಿಗಳನ್ನು 20 ದಿನಗಳಿಗೆ ಮುಂಚಿತವಾಗಿ ಪಬ್ಲಿಕ್ ಡೆಟ್ ಆಫೀಸ್‌ಗಳಲ್ಲಿ ಒಪ್ಪಿಸತಕ್ಕದ್ದು. ಸೆಕ್ಯೂರಿಟಿಗಳ ಹಿಂಭಾಗದಲ್ಲಿ ಕೆಳಕಂಡಂತೆ ಯಥಾರೀತಿ ಬರೆದು ಮರುಸಂದಾಯಕ್ಕಾಗಿ ಅವುಗಳನ್ನು ಒಪ್ಪಿಸಬೇಕು.

"ಸರ್ಟಿಫಿಕೇಟ್ ಮೇಲೆ ಬಾಕಿಯಿರುವ ಅಸಲನ್ನು ಪಡೆಯಲಾಗಿದೆ."

4. ಭಾರತೀಯ ಸ್ಟೇಟ್ ಬ್ಯಾಂಕಿನ ಶಾಖೆಯ ಪೈಕಿ ಯಾವುದೇ ಬ್ಯಾಂಕಿನ ಶಾಖೆಯು ಖಜಾನೆ ಕೆಲಸವನ್ನು ನಡೆಸುವ ಸ್ಥಳಗಳಲ್ಲಿ ಸಾಲಪತ್ರಗಳು ಸ್ಟಾಕ್ ಸರ್ಟಿಫಿಕೇಟ್‌ಗಳ ರೂಪದಲ್ಲಿದ್ದರೆ, ಅವುಗಳನ್ನು ಸಂಬಂಧಪಟ್ಟ ಬ್ಯಾಂಕಿನ ಶಾಖೆಗೆ ಒಪ್ಪಿಸಬೇಕೆ ಹೊರತು ಖಜಾನೆಗೆ ಅಥವಾ ಉಪಖಜಾನೆಗೆ ಒಪ್ಪಿಸಕೂಡದು. ಈ ವಿಷಯವನ್ನು ವಿಶೇಷವಾಗಿ ಯಾವಾಗಲೂ ಗಮನದಲ್ಲಿಡಬೇಕು.

5. ಸಂದಾಯದ ಬಗ್ಗೆ ಸೆಕ್ಯೂರಿಟಿಗಳಿಗೆ ಎಲ್ಲಿ ಮೊಹರೊತ್ತಲಾಗಿದೆಯೋ ಆ ಸ್ಥಳಗಳಲ್ಲಿ ಹೊರತು ಬೇರೆ ಸ್ಥಳಗಳಲ್ಲಿ ಸಂದಾಯವನ್ನು ಪಡೆಯಬಯಸುವ ಧಾರಕರು, ಸಂಬಂಧಪಟ್ಟ ಸಾರ್ವಜನಿಕ ಋಣ ಕಛೇರಿಗೆ ಪಾವತಿಯಾಗಿರುವುದಾಗಿ ಯಥಾರೀತಿ ಬರೆದು ರಿಜಿಸ್ಟರ್ಡ್ ಮತ್ತು ವಿಮೆ ಮಾಡಿದ ಅಂಚೆ ಮೂಲಕ ಕಳುಹಿಸತಕ್ಕದ್ದು. ಸಾರ್ವಜನಿಕ ಋಣ ಕಛೇರಿಯು ಡ್ರಾಫ್ಟ್ ಮೂಲಕ ಹಣ ಸಂದಾಯ ಮಾಡುತ್ತದೆ. ಅಂಥ ಡ್ರಾಫ್ಟ್‌ನ್ನು ಯಾವುದೇ ಖಜಾನೆ, ಉಪಖಜಾನೆ ಅಥವಾ ಕರ್ನಾಟಕ ರಾಜ್ಯದಲ್ಲಿ ಸರ್ಕಾರದ ಖಜಾನೆ ಕೆಲಸವನ್ನು ನಿರ್ವಹಿಸುವ ಭಾರತೀಯ ಸ್ಟೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಒಪ್ಪಿಸಿ ಹಣ ಪಡೆಯಬಹುದು.

ಸಹಿ/– (ಡಾ.ಪಿ.ಸಿ. ಜಾಫರ್)
ಸರ್ಕಾರದ ಕಾರ್ಯದರ್ಶಿ
(ಆಯವ್ಯಯ ಮತ್ತು ಸಂಪನ್ಮೂಲ) ಆರ್ಥಿಕ ಇಲಾಖೆ

DIPR/CP/4264/Zen/2024-25

ಕರ್ನಾಟಕ ಸರ್ಕಾರ
ತಾಲೂಕು ಪಂಚಾಯತಿ, ತಿಕೋಟಾ
ಕೊಟ್ಯಾಳ ರೋಡ, ಹಜಮಸ್ತಾನ ದರ್ಗಾ ಹತ್ತಿರ ತಿಕೋಟಾ–586130
ದೂರವಾಣಿ ಸಂ: 9480831712, 7760710639
ಇ–ಮೇಲ್: tikotatp@gmail.com

ಸಂಖ್ಯೆ:ತಾಪಂತಿ/ಡಿ.ಮೂ.ಶಿ/ಟೆಂಡರ್–2/ಆರ್/2024–25 ದಿನಾಂಕ:05.01.2025

ಇ–ಟೆಂಡರ್ ಪ್ರಕಟಣೆ

2024–25 ನೇ ಸಾಲಿನ ತಾಲೂಕ ಪಂಚಾಯತ ತಿಕೋಟಾ ಕಚೇರಿಗೆ ಹೊರಗುತ್ತಿಗೆ ಸಿಬ್ಬಂದಿ ಮಾನವ ಸಂಪನ್ಮೂಲ ಸೇವೆ ಹಾಗೂ ಬಾಡಿಗೆ ವಾಹನ ಸೇವೆಯನ್ನು ಒದಗಿಸಲು 'ಇ–ಪ್ರೊಕ್ಯೂರಮೆಂಟ್ ಪೋರ್ಟಲ್' ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಇ–ಪ್ರೊಕ್ಯೂರಮೆಂಟ್ ವೆಬ್‌ಸೈಟ್ https://kppp.karnataka.gov.in ನಲ್ಲಿ ದಿನಾಂಕ: 04.01.2025 ರಿಂದ ಪಡೆಯಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ಅಧಿಕಾರಿಗಳು,
ತಾಲೂಕು ಪಂಚಾಯತಿ, ತಿಕೋಟಾ

ವಾಸಾಸಂಇ/ವಿಜಯಪುರ/598/ಕೆಎಸ್‌ಎಂಸಿಎ/2024–25

ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತ

ಉಪ ಪ್ರಧಾನ ವ್ಯವಸ್ಥಾಪಕರು–3 (ಬೆಂಘತ್ಯಾನಿನಿ), ನಂ.30/1, 1ನೇ ಮಹಡಿ, ಯುಎನ್‌ಐ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತನಗರ, ಬೆಂಗಳೂರು–560 052.

ಸಂ: ಉಪ್ರವ್ಯ–3/(ಬೆಂಘತ್ಯಾನಿನಿ)/ಟೆಂಡರ್/ಪಿಪಿಪಿ/05/ತಿದ್ದುಪಡಿ–01/24–25 ದಿನಾಂಕ: 10.01.2025

ತಿದ್ದುಪಡಿ–1

ವಿಷಯ: ಟೆಂಡರ್ ಪ್ರಕಟಣೆಯ ವೇಳಾಪಟ್ಟಿ ವಿಸ್ತರಣೆ.

ಉಲ್ಲೇಖ: ಈ ಕಛೇರಿಯ ಟೆಂಡರ್ ಪ್ರಕಟಣೆ ಸಂ: DGM-3/(BSWML)/TEND/PPP/05/24-25, Dated: 26.12.2024.

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ ಟೆಂಡರ್ ಪ್ರಕಟಣೆಯ ವೇಳಾಪಟ್ಟಿಯನ್ನು ಆಡಳಿತಾತ್ಮಕ ಹಾಗೂ ತಾಂತ್ರಿಕ ಕಾರಣಗಳಿಂದ ವಿಸ್ತರಿಸಲಾಗಿದೆ.

ನಿಗದಿತ ಅವಧಿ / ವೇಳಾಪಟ್ಟಿ

ಕ್ರ ಸಂ.	ವಿವರ	ಟೆಂಡರ್ ಪ್ರಕಟಣೆಯ ಪ್ರಕಾರ	ವಿಸ್ತರಿಸಲಾದ ದಿನಾಂಕಗಳನ್ನು ದಯವಿಟ್ಟು ಓದಿಕೊಳ್ಳುವುದು
1	ಬಿಡ್ ಪೂರ್ವ ಪ್ರಶ್ನಾವಳಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	10.01.2025 ಸಂಜೆ 3.00 ಗಂಟೆವರೆಗೆ	17.01.2025 ಸಂಜೆ 5.30 ಗಂಟೆವರೆಗೆ

ಸಹಿ/–
ಉಪ ಪ್ರಧಾನ ವ್ಯವಸ್ಥಾಪಕರು–3, ಬೆಂಘತ್ಯಾನಿನಿ

ವಾಸಾಸಂಇ/ವಾ.ಪ್ರ/4302/ಎಂಎಎ/24–25

ಕರ್ನಾಟಕ ಸರ್ಕಾರ
ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ,
ಆಯುಕ್ತರವರ ಕಛೇರಿ, ಪಶುಪಾಲನಾ ಭವನ, ಮೊದಲನೇ ಮಹಡಿ,
ಸಿ.ಬಿ.ಐ ಕಛೇರಿ ಮುಂಭಾಗ, ಬಳ್ಳಾರಿ ಮುಖ್ಯರಸ್ತೆ, ಹೆಬ್ಬಾಳ, ಬೆಂಗಳೂರು–560024.
ಇ–ಮೇಲ್: jdfarmsahvs@gmail.com ಫೋನ್: 080–23412767

ಸಂಖ್ಯೆ: ಆಪಸಂ/ಆಹಾರ/ಅಲ್ಪಾವಧಿ ಮರುಟೆಂಡರ್/ವಿವ–2/2024–25 ದಿನಾಂಕ : 10.01.2025

ಅಲ್ಪಾವಧಿ ಮರುಟೆಂಡರ್ ಅಧಿಸೂಚನೆ
(ಕೆ.ಪಿ.ಪಿ ಪೋರ್ಟಲ್ ಮೂಲಕ ಮಾತ್ರ)

ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ಬೆಂಗಳೂರು, ಇವರು 2024–25ನೇ ಸಾಲಿಗೆ ಇಲಾಖೆಯ ಕುಕ್ಕುಟ/ ಹಂದಿ ಸಾಕಾಣಿಕಾ ಕ್ಷೇತ್ರಗಳಿಗೆ ಕುಕ್ಕುಟ/ ಹಂದಿ ಆಹಾರ ಪೂರೈಸಲು ಕೆಪಿಪಿ ಪೋರ್ಟಲ್ ಮೂಲಕ ಒಂದು ವರ್ಷದ ಅವಧಿಗೆ ಅಲ್ಪಾವಧಿ ಮರುಟೆಂಡರ್‌ನ್ನು ಕರೆಯಲಾಗಿದೆ. ಟೆಂಡರ್‌ನ ಅಂದಾಜು ಮೊತ್ತ ರೂ: 250 ಲಕ್ಷಗಳು.

ಪೂರ್ಣ ಟೆಂಡರ್ ದಾಖಲೆಗಳನ್ನು ಕೆಪಿಪಿ ಪೋರ್ಟಲ್ ಅಂತರ್ಜಾಲ ವಿಳಾಸದಲ್ಲಿ ದಿನಾಂಕ: 10–01–2025 ರಿಂದ ವೀಕ್ಷಿಸಬಹುದಾಗಿದ್ದು ಟೆಂಡರ್‌ದಾರರು ಕೆಪಿಪಿ ಪೋರ್ಟಲ್‌ನಲ್ಲಿ ದಿನಾಂಕ: 10–01–2025 ರಿಂದ ದಿನಾಂಕ: 24–01–2025 ರ ಸಾಯಂಕಾಲ 5.30 ಘಂಟೆಯೊಳಗೆ ಅಪ್‌ಲೋಡ್ ಮಾಡಬಹುದಾಗಿದೆ.

ಹೆಚ್ಚಿನ ವಿವರಗಳಿಗಾಗಿ ಕೆಪಿಪಿ ಪೋರ್ಟಲ್ ಹಾಗೂ ಕಛೇರಿ ವೇಳೆಯಲ್ಲಿ ಟೆಂಡರ್‌ಗೆ ಸಂಬಂಧಿಸಿದ ಅಧಿಕಾರಿಗಳನ್ನು ಸಂಪರ್ಕಿಸಬಹುದು.

ಸಹಿ/– ಉಪ ನಿರ್ದೇಶಕರು,
(ಮೇವು ಮತ್ತು ಕ್ಷೀರ) ಹಾಗೂ ಸದಸ್ಯ ಕಾರ್ಯದರ್ಶಿಗಳು,
ಟೆಂಡರ್ ಆಹ್ವಾನ ಸಮಿತಿ ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ

DIPR/CP/4280/Zen/2024-25

ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ (ಕೆಎಸ್‌ಐಐಡಿಸಿ)
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)

KSIIDC

'ಖನಿಜ ಭವನ', 4ನೇ ಮಹಡಿ, ಪೂರ್ವ ಭಾಗ, ನಂ.49, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–1
ದೂ: 080–22258131–33, ಇ–ಮೇಲ್: murthy.ksiidc@gmail.com / info@ksiidc.com ವೆಬ್‌ಸೈಟ್: http://ksiidc.karnataka.gov.in

ಟೆಂಡರ್ ಪ್ರಕಟಣೆ
(ಕೆಪಿಪಿಪಿ ಮೂಲಕ ಮಾತ್ರ)

" ವಿವರವಾದ ಯೋಜನಾ ವರದಿ ಸಿದ್ಧತೆಗಾಗಿ ಸಲಹೆಗಾರರ ಆಯ್ಕೆ"

ಕಾರ್ಯನಿಯೋಜನೆ: ಕೆಎಸ್‌ಐಐಡಿಸಿಯು , ಉತ್ತರ ಕನ್ನಡ ಜಿಲ್ಲೆ, ಅಂಕೋಲಾ ತಾಲ್ಲೂಕಿನ ಅಲ್ಗೇರಿ ಗ್ರಾಮದಲ್ಲಿರುವ ಸುಮಾರು 40 ಎಕರೆ ಜಮೀನಿನಲ್ಲಿ **"ಕಾರವಾರದಲ್ಲಿ ಸಿವಿಲ್ ಎನ್‌ಕ್ಲೇವ್"** ಅಭಿವೃದ್ಧಿ ಪಡಿಸುತ್ತಿದೆ. ಕಾರವಾರದಲ್ಲಿ ಸಿವಿಲ್ ಎನ್‌ಕ್ಲೇವ್‌ಗೆ ವಿವರವಾದ ಯೋಜನಾ ವರದಿ ಸಿದ್ಧತೆಗಾಗಿ ಸಲಹೆಗಾರರ ಆಯ್ಕೆಗೆ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಬಿಡ್ಡಿಂಗ್ ಪ್ರಕ್ರಿಯೆ: ಕ್ಯೂಸಿಬಿಸಿ ಆಯ್ಕೆ ಪ್ರಕ್ರಿಯೆಯ ಮೂಲಕ ಅರ್ಹ ಸಲಹೆಗಾರರ ಆಯ್ಕೆಗೆ ಏಕ ಹಂತದ (ದ್ವಿ ಲಕೋಟೆ) ಬಿಡ್ಡಿಂಗ್ ಪ್ರಕ್ರಿಯೆ ನಡೆಯಲಿದೆ. ಆರ್‌ಎಫ್‌ಪಿ ದಸ್ತಾವೇಜುಗಳು ಹಾಗೂ ಯಾವದೇ ಹೆಚ್ಚಿನ ಅಪ್‌ಡೇಟ್‌ಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **(https://kppp.karnataka.gov.in/#/portal/portal-home)** ಮೂಲಕ ಮಾತ್ರ ದಿನಾಂಕ: **10.01.2025** ರಿಂದ ಮಾತ್ರ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಪ್ರಮುಖ ದಿನಾಂಕಗಳು: ಬಿಡ್ ಪೂರ್ವ ಸಭೆ ದಿನಾಂಕ: **17.01.2025;** ಪ್ರಸ್ತಾವನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **10.02.2025.** ಆರ್‌ಎಫ್‌ಪಿ ನಿಯಮಗಳನ್ನು ಬದಲಾಯಿಸುವ ಅಥವಾ ಯಾವುದೇ ಕಾರಣವನ್ನೂ ನೀಡದೇ ಪ್ರಕ್ರಿಯೆಯನ್ನು ರದ್ದುಗೊಳಿಸುವ ಹಕ್ಕನ್ನು ಕೆಎಸ್‌ಐಐಡಿಸಿ ಕಾಯ್ದಿರಿಸಿದೆ.ಯಾವುದೇ ಸ್ಪಷ್ಟೀಕರಣಗಳಿಗೆ /ವಿಚಾರಣೆಗೆ ದಯವಿಟ್ಟು ಸಂಪರ್ಕಿಸಿ: ಶ್ರೀ ಹಾರ್ತಿ ಎಲ್ ಎಸ್, ಸಹಾಯಕ ಪ್ರಧಾನ ವ್ಯವಸ್ಥಾಪಕರು (ಐಪಿಡಿ–1), e-mail : bic3@ksiidc.com/ info@ksiidc.com Ph: 080–22258131

ಸಹಿ/– ಪ್ರಧಾನ ವ್ಯವಸ್ಥಾಪಕರು,
ಕೆಎಸ್‌ಐಐಡಿಸಿ ಮತ್ತು ಟೆಂಡರ್ ಆಹ್ವಾನಿಸುವ ಪ್ರಾಧಿಕಾರ

ಕರ್ನಾಟಕ ಸರಕಾರ
ಉಪ ಕೃಷಿ ನಿರ್ದೇಶಕರ ಕಾರ್ಯಾಲಯ, ಬಾಗಲಕೋಟೆ
ವಿಳಾಸ:ಜಿಲ್ಲಾಡಳಿತ ಭವನ ನವನಗರ, ಬಾಗಲಕೋಟೆ E-mail:dda1bgk@gmail.com

ಹೊರಗುತ್ತಿಗೆ ಆಧಾರದ ಮೇಲೆ ನೇಮಕಗೊಳ್ಳುವ ಸಿಬ್ಬಂದಿಯ ಸೇವೆಯನ್ನು ಹೊರ ಸಂಪನ್ಮೂಲದ ಏಜೆನ್ಸಿಯ ಮುಖಾಂತರ ಪಡೆಯಲು ಇ–ಟೆಂಡರ್ ಕರೆದಿರುವ ಬಗ್ಗೆ

ಇ–ಟೆಂಡರ್ ದಾಸ್ತಾವೇಜು

ಸಂ:ಉಕೃನಿ–1ಬಾ/ಹೊರಗುತ್ತಿಗೆ/ಸಿಬ್ಬಂದಿ /2024–25 ದಿನಾಂಕ:10/01/2025

2024–25 ನೇ ಸಾಲಿಗೆ ಈ ಕಛೇರಿಯ ಹಾಗೂ ಅಧೀನದ ಕಛೇರಿಗಳಿಗೆ ಅನುಬಂಧ–1ರಲ್ಲಿ ನಮೂದಿಸಿದಂತೆ ಹೊರಗುತ್ತಿಗೆ ಆಧಾರದ ಮೇಲೆ ಕೃಷಿ ನಿರ್ದೇಶನಾಲಯ ಯೋಜನೆಯಡಿ ಬೆರಳಚ್ಚುಗಾರರು, ಬಾಣಸಿಗ ಮತ್ತು ವಾಹನ ಚಾಲಕರ ಹುದ್ದೆಗಳ ಸೇವೆ ಅವಶ್ಯಕತೆಯಿದ್ದು ಮತ್ತು ಅನುಬಂಧ–2 ರಲ್ಲಿ ಸಿಬ್ಬಂದಿಗಳ ವಿದ್ಯಾರ್ಹತೆ ಮತ್ತು ಸೇವಾ ಅನುಭವಗಳ ಮಾಹಿತಿಯನ್ನು ನಮೂದಿಸಿದ್ದು, ಈ ಹುದ್ದೆಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿಗಳನ್ನು ಪೂರೈಸಲು ಆಸಕ್ತ ಸಂಸ್ಥೆಗಳಿಂದ ಟೆಂಡರನ್ನು ಕರೆಯಲಾಗಿದೆ. ಟೆಂಡರ ಅವಧಿಯು ಒಂದು ವರ್ಷಕ್ಕೆ ಅಥವಾ ಇಲಾಖೆಯು ನಿಗಧಿಪಡಿಸಿರುವ ಮುಂದಿನ ಆದೇಶದವರೆಗೆ ಇರುತ್ತದೆ.

ಟೆಂಡರಗೆ ಸಂಬಂಧಿಸಿದ ಇತರೆ ಷರತ್ತುಗಳು ಮತ್ತು ನಿಬಂಧನೆಗಳು ಟೆಂಡರ ದಾಸ್ತಾವೇಜಿನಲ್ಲಿ ನಮೂದಿಸಲಾಗಿದ್ದು, ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ದೂರವಾಣಿ ಸಂಖ್ಯೆ 8277927770 ಅಥವಾ ಮಿಂಚಂಚೆ E-mail:dda1bgk@gmail.comಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿದೆ.

ಟೆಂಡರ ಪ್ರಕ್ರಿಯೆಯ ವಿವಿಧ ಹಂತಗಳ ವಿವರಣೆ ಈ ಕೆಳಕಂಡಂತಿರುತ್ತದೆ.

ಬಿಡ್ ಅನ್ನು ಸಲ್ಲಿಸುವ ಕೊನೆಯ ದಿನಾಂಕ	23/01/2025
ತಾಂತ್ರಿಕ ಬಿಡ್ ಅನ್ನು ತೆರೆಯುವ ದಿನಾಂಕ	24/01/2025
ಆರ್ಥಿಕ ಬಿಡ್ ಅನ್ನು ತೆರೆಯುವ ದಿನಾಂಕ	ತಾಂತ್ರಿಕ ಬಿಡ್ ನ ವಿಶ್ಲೇಷಣೆಯ ನಂತರ ತೆರೆಯಲಾಗುವದು
ಟೆಂಡರ್ ಅನ್ನು ತೆರೆಯುವ ಸ್ಥಳ	ಉಪ ಕೃಷಿ ನಿರ್ದೇಶಕರ ಕಾರ್ಯಾಲಯ, ಜಿಲ್ಲಾಡಳಿತ ಭವನ, ಕೊಠಡಿ ಸಂಖ್ಯೆ 215 ನವನಗರ, ಬಾಗಲಕೋಟೆ E-mail: dda1bgk@gmail.com ದೂರವಾಣಿ ಸಂಖ್ಯೆ 8277927770

ಸಹಿ/–ಉಪ ಕೃಷಿ ನಿರ್ದೇಶಕರು–1
ಬಾಗಲಕೋಟೆ

DIPR/BGK/RO-NO-426/KSMCA/2024-25

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



❦ ಸುಭಾಷಿತ ❦

ಲೋಟ ಖಾಲಿ ಇದ್ದಾಗಷ್ಟೇ ಬಳಕೆಗೆ ಯೋಗ್ಯ. ಅಂತೆಯೇ ನಂಬಿಕೆಗಳು, ಸಿದ್ಧಾಂತಗಳು, ಪ್ರತಿಪಾದನೆಗಳು, ಉಲ್ಲೇಖಗಳಿಂದ ತುಂಬಿಹೋಗಿರುವ ಮನಸ್ಸಿನಲ್ಲಿ ಸೃಜನಶೀಲತೆಗೆ ಜಾಗ ಇರುವುದಿಲ್ಲ. -ಜಿಡ್ಡು ಕೃಷ್ಣಮೂರ್ತಿ

ಸುಸಜ್ಜಿತ ಆಸ್ಪತ್ರೆ ದೂಳು ಹಿಡಿಯದಿರಲಿ ಪೂರ್ಣ ಪ್ರಮಾಣದ ಸೇವೆಗೆ ಲಭ್ಯವಾಗಲಿ

ಜನರಿಗೆ ಗುಣಮಟ್ಟದ ಆರೋಗ್ಯ ಸೇವೆಯನ್ನು ಒದಗಿಸುವುದು ಸರ್ಕಾರದ ಮೂಲ ಕರ್ತವ್ಯಗಳಲ್ಲಿ ಒಂದು. ನುರಿತ ವೈದ್ಯರು ಮತ್ತು ಸಿಬ್ಬಂದಿ, ಗುಣಮಟ್ಟದ ಔಷಧಿಗಳು ಹಾಗೂ ಪ್ರಯೋಗಾಲಯಗಳನ್ನು ಒಳಗೊಂಡ ಸುಸಜ್ಜಿತ ಸರ್ಕಾರಿ ಆಸ್ಪತ್ರೆಗಳು ಲಭ್ಯವಿದ್ದರೆ, ಆರೋಗ್ಯ ರಕ್ಷಣೆಗಾಗಿ ನಾಗರಿಕರು ದುಬಾರಿ ವೆಚ್ಚದ ಖಾಸಗಿ ಆಸ್ಪತ್ರೆಗಳನ್ನು ಆಶ್ರಯಿಸಬೇಕಾದ ಅನಿವಾರ್ಯ ತಪ್ಪುತ್ತದೆ. ನಗರ ಪ್ರದೇಶಗಳಲ್ಲಂತೂ ದುಡಿಮೆಯ ಬಹುಪಾಲನ್ನು ದೈನಂದಿನ ಜೀವನ ನಿರ್ವಹಣೆಗೇ ವ್ಯಯಿಸಬೇಕಾಗಿರುವುದರಿಂದ ಬಡವರು ಮತ್ತು ಮಧ್ಯಮ ವರ್ಗದವರು ಖಾಸಗಿ ಆಸ್ಪತ್ರೆಗಳತ್ತ ಮುಖ ಮಾಡುವುದು ಕಷ್ಟ ಎಂಬ ಸ್ಥಿತಿ ಇದೆ. ರಾಜ್ಯದಲ್ಲಿ ಹೆಚ್ಚಿನ ಸಂಖ್ಯೆಯ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸಮುದಾಯ ಆರೋಗ್ಯ ಕೇಂದ್ರಗಳು, ಸಾರ್ವಜನಿಕ ಆಸ್ಪತ್ರೆಗಳು, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳು ಇದ್ದರೂ ಹಲವೆಡೆ ಮೂಲ ಸೌಕರ್ಯಗಳ ಕೊರತೆಯಿಂದ ಸಮರ್ಪಕವಾದ ಸೇವೆ ಲಭ್ಯವಾಗುತ್ತಿಲ್ಲ. ಇನ್ನೊಂದೆಡೆ, ನೂರಾರು ಕೋಟಿ ರೂಪಾಯಿ ವ್ಯಯಿಸಿ ನಿರ್ಮಿಸಲಾದ, ಅತ್ಯಾಧುನಿಕ ಯಂತ್ರೋಪಕರಣಗಳುಳ್ಳ ಆಸ್ಪತ್ರೆಗಳು ಸಮರ್ಪಕವಾಗಿ ಬಳಕೆಯಾಗುತ್ತಿಲ್ಲ. ವೈದ್ಯರು, ಸಿಬ್ಬಂದಿಯನ್ನು ಒದಗಿಸದ ಕಾರಣದಿಂದ ಜನ ಅವುಗಳ ಸೇವೆಯನ್ನು ಪಡೆಯಲು ಸಾಧ್ಯವಾಗದಂತಹ ಸ್ಥಿತಿ ಇದೆ. ₹ 228.36 ಕೋಟಿ ವೆಚ್ಚದಲ್ಲಿ ರಾಜ್ಯದ ವಿವಿಧೆಡೆ ನಿರ್ಮಿಸಲಾದ ಆರು ಆಸ್ಪತ್ರೆಗಳನ್ನು ಬಳಕೆ ಮಾಡದೇ ಇದ್ದುದಕ್ಕೆ ಮಹಾಲೇಖಪಾಲರು (ಸಿಎಜಿ) 2024ರಲ್ಲಿ ರಾಜ್ಯ ವಿಧಾನಮಂಡಲಕ್ಕೆ ಸಲ್ಲಿಸಿದ್ದ ಲೆಕ್ಕಪರಿಶೋಧನಾ ವರದಿಯಲ್ಲಿ ಆಕ್ಷೇಪ ವ್ಯಕ್ತಪಡಿಸಿದ್ದರು. ಆದರೆ, ಅಂತಹ ನಿದರ್ಶನಗಳು ಮತ್ತೆ ಮತ್ತೆ ಕಾಣಸಿಗುತ್ತಿವೆ.

ಆಸ್ಪತ್ರೆಯ ಕಟ್ಟಡ ನಿರ್ಮಾಣಕ್ಕೆ ಉತ್ಸಾಹ ತೋರಿ, ಅಲ್ಲಿ ವೈದ್ಯಕೀಯ ಸೇವೆ ಒದಗಿಸುವ ವಿಚಾರದಲ್ಲಿ ನಿರ್ಲಕ್ಷ್ಯ ವಹಿಸುವ ಧೋರಣೆಯು ಜನಹಿತಕ್ಕೆ ವಿರುದ್ಧವಾದುದು

ಬೆಂಗಳೂರಿನ ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಅಗ್ರಹಾರ ದಾಸರಹಳ್ಳಿಯಲ್ಲಿ ₹106 ಕೋಟಿ ವೆಚ್ಚದಲ್ಲಿ ನಿರ್ಮಿಸಿ 2023ರ ಮಾರ್ಚ್‌ನಲ್ಲಿ ಉದ್ಘಾಟಿಸಿದ್ದ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಅಗತ್ಯ ಸಂಖ್ಯೆಯ ವೈದ್ಯರು, ಸಿಬ್ಬಂದಿಯನ್ನು ಒದಗಿಸದೇ ಇರುವುದರಿಂದ ಪೂರ್ಣಪ್ರಮಾಣದಲ್ಲಿ ಅದು ಬಳಕೆಗೆ ಲಭ್ಯವಾಗಿಲ್ಲ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) ಆರೋಗ್ಯ ಇಲಾಖೆಯ ಅಧೀನದಲ್ಲಿರುವ ಈ ಆಸ್ಪತ್ರೆಯ ನಾಲ್ಕು ಅಂತಸ್ತಿನ ಬೃಹತ್ ಕಟ್ಟಡದಲ್ಲಿ ಎಲ್ಲ ಸೌಕರ್ಯಗಳು, ಅತ್ಯಾಧುನಿಕ ವೈದ್ಯಕೀಯ ಯಂತ್ರೋಪಕರಣಗಳಿವೆ. ಆದರೂ ಕನಿಷ್ಠ ತುರ್ತು ಚಿಕಿತ್ಸಾ ಘಟಕವೂ ಅಲ್ಲಿ ಕಾರ್ಯನಿರ್ವಹಿಸುತ್ತಿಲ್ಲ, 300 ಹಾಸಿಗೆಗಳ ಸಾಮರ್ಥ್ಯದ ಆಸ್ಪತ್ರೆಯಲ್ಲಿ ಏಳು ವೈದ್ಯರಷ್ಟೇ ಕಾರ್ಯನಿರ್ವಹಿಸುತ್ತಿದ್ದಾರೆ ಎಂಬುದು ಅಲ್ಲಿನ ದುರವಸ್ಥೆಗೆ ಕನ್ನಡಿ ಹಿಡಿಯುವಂತಿದೆ. ನಗರದ ಮಧ್ಯಭಾಗದಲ್ಲೇ ಇರುವ ಆಸ್ಪತ್ರೆಯಲ್ಲಿ ವೈದ್ಯಕೀಯ ಸೇವೆಗೆ ಹೆಚ್ಚಿನ ಬೇಡಿಕೆ ಇದ್ದರೂ ಅದನ್ನು ಜನಬಳಕೆಗೆ ಲಭ್ಯವಾಗದಂತಹ ದುಃಸ್ಥಿತಿಗೆ ತಳ್ಳಿರುವ ಬಿಬಿಎಂಪಿಯ ನಡೆ ಸಂಶಯಕ್ಕೆ ಎಡೆಮಾಡುವಂತಿದೆ. ಭಾರಿ ಮೌಲ್ಯದ ಯಂತ್ರೋಪಕರಣಗಳು, ಪ್ರಯೋಗಾಲಯಗಳಲ್ಲಿನ ಪರೀಕ್ಷಾ ಯಂತ್ರಗಳು ದೂಳು ತಿನ್ನುತ್ತಿವೆ.

ನಮ್ಮ ಸರ್ಕಾರಿ ಆಸ್ಪತ್ರೆಗಳು ಮತ್ತು ಆರೋಗ್ಯ ಕೇಂದ್ರಗಳಲ್ಲಿನ ಸಮಸ್ಯೆಗಳು, ಕೊರತೆಗಳು ಕೋವಿಡ್ ಸಾಂಕ್ರಾಮಿಕದ ಅವಧಿಯಲ್ಲಿ ಬಹಿರಂಗವಾಗಿದ್ದವು. ಹಾಸಿಗೆಗಳ ಕೊರತೆ, ಆಮ್ಲಜನಕ ಪೂರೈಕೆ ವ್ಯವಸ್ಥೆಯ ಅಲಭ್ಯತೆ, ಯಂತ್ರೋಪಕರಣ ಮತ್ತು ಔಷಧಿಗಳ ಕೊರತೆ, ವೈದ್ಯರು, ಸಿಬ್ಬಂದಿ ಇಲ್ಲದಿರುವುದು ಹಲವೆಡೆ ಸಾರ್ವಜನಿಕ ಆರೋಗ್ಯ ಸೇವೆಯಲ್ಲಿ ದೊಡ್ಡ ಪ್ರಮಾಣದ ವ್ಯತ್ಯಯಕ್ಕೆ ಕಾರಣವಾಗಿದ್ದವು. ಭವಿಷ್ಯದಲ್ಲಿ ಅಂತಹ ಸವಾಲುಗಳನ್ನು ಎದುರಿಸಲು ಸಾರ್ವಜನಿಕ ಆರೋಗ್ಯ ಸೇವೆಯಲ್ಲಿ ಸುಧಾರಣೆ ತರಬೇಕೆಂಬ ಬೇಡಿಕೆ ಆಗ ವ್ಯಕ್ತವಾಗಿತ್ತು. ಅದಕ್ಕೆ ಪೂರಕವಾಗಿ ಆಸ್ಪತ್ರೆಗಳಲ್ಲಿ ಇರುವ ಕೊರತೆಗಳನ್ನು ನಿವಾರಿಸಿ ಗುಣಮಟ್ಟದ ಸೇವೆ ಒದಗಿಸುವ ಭರವಸೆಯನ್ನು ರಾಜ್ಯ ಸರ್ಕಾರ ನೀಡಿತ್ತು. ಅಷ್ಟಾದರೂ ಸುಧಾರಣಾ ಕ್ರಮಗಳ ಅನುಷ್ಠಾನ ಪೂರ್ಣಗೊಳ್ಳದೇ ಇರುವುದರಿಂದ ಆಸ್ಪತ್ರೆಗಳು, ಆರೋಗ್ಯ ಕೇಂದ್ರಗಳಲ್ಲಿನ ಪರಿಸ್ಥಿತಿಯಲ್ಲಿ ಹೆಚ್ಚಿನ ಬದಲಾವಣೆಯೇನೂ ಆಗಿಲ್ಲ. ಆಸ್ಪತ್ರೆಯ ಕಟ್ಟಡ ನಿರ್ಮಾಣಕ್ಕೆ ಅತ್ಯುತ್ಸಾಹ ತೋರಿ, ಅಲ್ಲಿ ವೈದ್ಯಕೀಯ ಸೇವೆಯನ್ನು ಒದಗಿಸುವ ವಿಚಾರದಲ್ಲಿ ನಿರ್ಲಕ್ಷ್ಯ ವಹಿಸುವ ಧೋರಣೆಯು ಜನಹಿತಕ್ಕೆ ವಿರುದ್ಧವಾದುದು. ಅಗ್ರಹಾರ ದಾಸರಹಳ್ಳಿ ಆಸ್ಪತ್ರೆಯ ಪ್ರಕರಣದಲ್ಲಿ ರಾಜ್ಯ ಸರ್ಕಾರ ತುರ್ತಾಗಿ ಮಧ್ಯಪ್ರವೇಶಿಸಿ, ಅಗತ್ಯ ಸಂಖ್ಯೆಯ ವೈದ್ಯರು, ಸಿಬ್ಬಂದಿಯನ್ನು ನಿಯೋಜಿಸಬೇಕು. ಈ ಆಸ್ಪತ್ರೆಯನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಳ್ಳಲು ಅಗತ್ಯವಿರುವ ಎಲ್ಲ ಕ್ರಮಗಳನ್ನು ವಿಳಂಬವಿಲ್ಲದೆ ಕೈಗೊಳ್ಳಬೇಕು.

ದಿನದ ಟ್ವೀಟ್

ದುಃಖಕರ, ನಂಬಲು ಅಸಾಧ್ಯ...

ವ್ಯಕ್ತಿಯೊಬ್ಬ ಪತ್ನಿಯ ಮುಖ ನೋಡುತ್ತಾ ಕುಳಿತಿರಬಾರದೇಕೆ...?! ಅಂತಹ ಸುಶಿಕ್ಷಿತರು ಮತ್ತು ಬೃಹತ್ ಸಂಸ್ಥೆಗಳಲ್ಲಿ ಉನ್ನತ ಸ್ಥಾನಗಳಲ್ಲಿರುವ ವ್ಯಕ್ತಿಗಳು ಮಾನಸಿಕ ಆರೋಗ್ಯ ಹಾಗೂ ಮಾನಸಿಕ ವಿಶ್ರಾಂತಿಯನ್ನು ಗಂಭೀರವಾಗಿ ಪರಿಗಣಿಸದಿರುವುದು, ಸ್ತ್ರೀದ್ವೇಷದ ಹೇಳಿಕೆಗಳ ಮೂಲಕ ತಾವು ಎಂತಹವರೆಂಬುದನ್ನು ಇಷ್ಟೊಂದು ಬಹಿರಂಗವಾಗಿ ತೋರಿಸಿಕೊಳ್ಳುವುದು ದುಃಖಕರ, ಕೆಲವೊಮ್ಮೆ ನಂಬಲು ಅಸಾಧ್ಯ... ಇದು ನಿರಾಶಾದಾಯಕ ಮತ್ತು ಭಯಾನಕ.

(ಎಲ್ ಆ್ಯಂಡ್ ಟಿ ಮುಖ್ಯಸ್ಥರು ವೃತ್ತಿ ಸಮಯದ ಬಗ್ಗೆ ನೀಡಿರುವ ವಿವಾದಾತ್ಮಕ ಹೇಳಿಕೆಗೆ ಪ್ರತಿಕ್ರಿಯೆ)

ಜ್ವಾಲಾ ಗುಟ್ಟಾ, ಬ್ಯಾಡ್ಮಿಂಟನ್ ಆಟಗಾರ್ತಿ

ಕಿಡಿನುಡಿ

ಎಸ್.ಸಿ., ಎಸ್.ಟಿ. ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಕೊಟ್ಟಿಲ್ಲ. ಅದರ ಬಗ್ಗೆ ಚರ್ಚಿಸಲು ಸಭೆ ಮಾಡುತ್ತಿದ್ದೇವೆ ಎಂದು ಕೆಲವು ಸಚಿವರು ಹೇಳಿದ್ದಾರೆ. ಡಿನ್ನರ್ ಪಾರ್ಟಿಯಲ್ಲಿ ವಿದ್ಯಾರ್ಥಿಗಳ ಸ್ಕಾಲರ್‌ಶಿಪ್ ಬಗ್ಗೆ ಚರ್ಚೆ ಮಾಡುವುದಾದರೆ, ಕ್ಯಾಬಿನೆಟ್ ಇರುವುದು ಯಾಕೆ?

ಎಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

25 ವರ್ಷಗಳ ಹಿಂದೆ

ಮಂಗಳವಾರ, 11-1-2000

● **ಮುಂದಿನ ಚಿತ್ರೋತ್ಸವ ಬೆಂಗಳೂರಿನಲ್ಲಿ**

ನವದೆಹಲಿ, ಜ. 10– ಮುಂದಿನ ವರ್ಷದ 32ನೇ ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ಬೆಂಗಳೂರಿನಲ್ಲಿ ನಡೆಯಲಿದೆ.

ಇಂದು ಇಲ್ಲಿಯ ಸಿರಿಫೋರ್ಟ್ ಸಭಾಂಗಣದಲ್ಲಿ ನಡೆದ 31ನೇ ಅಂತರ ರಾಷ್ಟ್ರೀಯ ಚಲನಚಿತ್ರೋತ್ಸವದ ಉದ್ಘಾಟನಾ ಸಮಾರಂಭದಲ್ಲಿ ಈ ಪ್ರಕಟಣೆ ಹೊರಡಿಸಲಾಯಿತು. ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷ ಕೆ.ಸಿ.ಎನ್. ಚಂದ್ರಶೇಖರ್ ಹಾಗೂ ವಾರ್ತಾ ಇಲಾಖೆ ನಿರ್ದೇಶಕ ಡಿ.ವಿ ಗುರುಪ್ರಸಾದ್ ಅವರು ನೀಡಿದ ಮನವಿಯನ್ನು ಇಂದು ಬೆಳಿಗ್ಗೆ ಪರಿಶೀಲಿಸಿದ ಚಲನಚಿತ್ರೋತ್ಸವ ಸಮಿತಿ ಸಭೆ, ಬೆಂಗಳೂರಿನಲ್ಲೇ ಮುಂದಿನ ವರ್ಷದ ಚಿತ್ರೋತ್ಸವ ನಡೆಸಲು ತೀರ್ಮಾನಿಸಿತು ಎಂದು ಭಾರತೀಯ ಚಲನಚಿತ್ರ ಒಕ್ಕೂಟದ ಅಧ್ಯಕ್ಷ ಪಿ.ವಿ. ಗಂಗಾಧರನ್ 'ಪ್ರಜಾವಾಣಿ'ಗೆ ತಿಳಿಸಿದರು.

31ನೇ ಅಂತರರಾಷ್ಟ್ರೀಯ ಚಿತ್ರೋತ್ಸವವನ್ನು ಇಂದು ಸಂಜೆ ಕಿಕ್ಕಿರಿದ ರಸಿಕರ ನಡುವೆ ಬಂಗಾಳಿ ಚಲನಚಿತ್ರ ನಟ ಸೌಮಿತ್ರ ಚಟರ್ಜಿ ದೀಪ ಬೆಳಗುವ ಮೂಲಕ ಉದ್ಘಾಟಿಸಿದರು. ಹಿಂದಿ ಚಿತ್ರನಟಿ ಕರಿಷ್ಮಾ ಕಪೂರ್ ದೀಪ ಬೆಳಗಲು ನೆರವಾದರು.

ಕೇಂದ್ರ ವಾರ್ತಾ ಸಚಿವ ಅರುಣ್ ಜೇಟ್ಲಿ ಮಾತನಾಡಿ, ಸಿನಿಮಾರಂಗಕ್ಕೆ ಮಾರಕವಾಗಿರುವ ಪೈರಸಿ ಹಾವಳಿ ತಡೆಗೆ ಕಠಿಣ ಕಾನೂನೊಂದನ್ನು ತರಲು ಸರ್ಕಾರ ಆಲೋಚನೆ ನಡೆಸುತ್ತಿದೆ ಎಂದರು.

50 ವರ್ಷಗಳ ಹಿಂದೆ

ಶನಿವಾರ, 11-1-1975

● **ಭಾಷಾ ದುರಭಿಮಾನ ಹಿಂದಿ ಪ್ರಗತಿಗೆ ಅಡ್ಡಿ**

ನಾಗಪುರ, ಜ. 10– ಹಿಂದಿ ಭಾಷೆಯ ನಿಧಾನ ಬೆಳವಣಿಗೆಗೆ 'ಹಿಂದಿ ದುರಭಿಮಾನಿಗಳ ಮಿತಿಮೀರಿದ ಉತ್ಸಾಹ ಕಾರಣ' ಎಂದು ಪ್ರಧಾನಿ ಇಂದಿರಾ ಗಾಂಧಿ ದೂರಿದರು.

ಹಿಂದಿ ಭಾಷೆಯ ಹಿತದೃಷ್ಟಿಯಿಂದ ಹಿಂದಿಯೇತರರಲ್ಲಿ ಇರುವ ಸಂಶಯವನ್ನು ನಿವಾರಿಸಬೇಕೆಂದು ಹಿಂದಿ ದುರಭಿಮಾನಿಗಳಿಗೆ ಒತ್ತಾಯಪೂರ್ವಕ ಸಲಹೆ ಮಾಡಿದರು.

ಐದು ದಿನಗಳ ವಿಶ್ವ ಹಿಂದಿ ಸಮ್ಮೇಳನವನ್ನು ಉದ್ಘಾಟಿಸಿದ ಅವರು, ಹಿಂದಿ ಭಾಷೆಯು ತಮ್ಮ ಹಿತವನ್ನು ಬಲಿಗೊಟ್ಟು ಹರಡುವುದೆಂಬ ಭಾವನೆ ಹಿಂದಿಯೇತರ ಪ್ರದೇಶಗಳಲ್ಲಿದೆ. ಹಿಂದಿ ಮಾತನಾಡುವ ಜನರು ಈ ಭಾವನೆ ಹೋಗಲಾಡಿಸಿ ಇತರರ ಹೃದಯವನ್ನು ಗೆದ್ದರೆ ಮಾತ್ರ ಹಿಂದಿ ಭಾಷೆ ಬೆಳೆಯಬಲ್ಲದು ಎಂದು ಹೇಳಿದರು.

● **ಹಿಂದುಳಿದ ವರ್ಗಗಳ ಆಯೋಗದ ಸಭೆಯಲ್ಲಿ ಹಾವನೂರು ತರಾಟೆಗೆ**

ಬೆಂಗಳೂರು, ಜ. 10– ಪ್ರದೇಶ ಕಾಂಗ್ರೆಸ್ ಅಧ್ಯಕ್ಷರನ್ನು ಟೀಕಿಸಿ, ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಎಲ್.ಜಿ ಹಾವನೂರು ಅವರು ಹೇಳಿಕೆ ನೀಡಿರುವ ವಿಚಾರ ಇಂದು ಆಯೋಗದ ಸಭೆಯಲ್ಲಿ ಬಿಸಿ ಚರ್ಚೆಗೆ ಕಾರಣವಾಗಿ, ಹಲವು ಸದಸ್ಯರು ಹಾವನೂರು ಅವರನ್ನು ತರಾಟೆಗೆ ತೆಗೆದುಕೊಂಡರೆಂದು ಗೊತ್ತಾಗಿದೆ.

ಚರ್ಚೆಯ ಬಿಸಿ ಏರಿದಂತೆ ಮಾತಿಗೆ ಮಾತು ಬೆಳೆದು, ಹಾವನೂರು ಅವರು ಆಯೋಗದ ಅಧ್ಯಕ್ಷಗಿರಿಗೇ ರಾಜೀನಾಮೆ ನೀಡುವ ಬೆದರಿಕೆ ಹಾಕುವ ಘಟ್ಟಕ್ಕೆ ಹೋಯಿತೆಂದು ಹೇಳಲಾಗಿದೆ. ಸುಮಾರು ಮೂರು ಗಂಟೆ ಕಾಲ ಬಿಸಿ ಚರ್ಚೆ ಈ ವಿಚಾರಕ್ಕೆ ಸೀಮಿತವಾಗಿದ್ದರಿಂದ ಸಭೆ ಬೇರೆ ಕಾರ್ಯಕ್ಕೆ ಗಮನ ನೀಡಲು ಸಾಧ್ಯವಾಗಲಿಲ್ಲವೆಂದು ತಿಳಿದುಬಂದಿದೆ.

ಕೋಮುವಾದದ ಗುಮ್ಮನ ಜೊತೆಗೆ ಭ್ರಷ್ಟಾಚಾರದ ಬ್ರಹ್ಮರಾಕ್ಷಸನನ್ನೂ ಎದುರಿಸಬೇಕಿದೆ

ಭ್ರಷ್ಟಾಚಾರ: ತಿವಿದರಷ್ಟೇ ಸಾಕೆ?

ವಿಶ್ಲೇಷಣೆ

ಚಂದ್ರಕಾಂತ ವಡ್ಡು

ದೊಡ್ಡಬಳ್ಳಾಪುರದ ತಾಲ್ಲೂಕು ಕಚೇರಿ ಆವರಣವನ್ನು ಇತ್ತೀಚೆಗೆ ಪ್ರವೇಶಿಸಿದ ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರನ್ನು ನಿರ್ಜನ ಕೋಣೆಗಳು, ಮುಚ್ಚಿದ ಬಾಗಿಲುಗಳು, ಖಾಲಿ ಕುರ್ಚಿಗಳು ಸ್ವಾಗತಿಸುತ್ತವೆ. ಉಪ ವಿಭಾಗಾಧಿಕಾರಿ ಒಳಗೊಂಡಂತೆ ಸಕಲ ಸಿಬ್ಬಂದಿ ಸಮಯ ಮೀರಿ ಒಬ್ಬೊಬ್ಬರಾಗಿ ಕಚೇರಿಗೆ ಬರತೊಡಗಿರುತ್ತಾರೆ. 'ನೀವೇನಾದರೂ ಸರ್ಕಾರಿ ವ್ಯವಸ್ಥೆಯಲ್ಲಿ ಇದ್ದೀರೋ ಅಥವಾ ನಿಮ್ಮದೇ ವ್ಯವಸ್ಥೆ ಮಾಡಿಕೊಂಡಿದ್ದೀರೋ? ಈ ರಾಜ್ಯದಲ್ಲಿ ಯಾವುದೇ ಕಾನೂನು ಕಟ್ಟಲೆ ಇಲ್ವಲ್ಲ... ನೀವು ಹೇಳಿದ್ದೇ ಕಾನೂನು. ಜನ ಇರೋದು ನಿಮಗಾಗಿ, ನೀವಿರೋದು ಜನರಿಗಾಗಿ ಅಲ್ಲ, ಅಲ್ವಾ?' ಎಂಬಂತಹ ಸಚಿವರ ವ್ಯಂಗ್ಯಭರಿತ ತಿವಿತಕ್ಕೆ ಸಿಬ್ಬಂದಿ ತಡವರಿಸಿದಂತೆ ನಟಿಸುತ್ತಾರೆ.

'ಒಂದು ಕೆಲಸ ಮಾಡಿ. ಒಂದು ಬೋರ್ಡ್ ಹಾಕಿಬಿಡಿ. ಇಷ್ಟು ಕೊಡದೆ ಯಾವ ಕೆಲಸವೂ ಆಗೋದಿಲ್ಲ. ಇದರಲ್ಲಿ ಇಷ್ಟು ಪರ್ಸೆಂಟೇಜು ಮಂತ್ರಿಗೆ ಹೋಗುತ್ತೆ. ಅದೂ ಹಾಕಿ, ತಪ್ಪೇನಿಲ್ಲ...' ಇದು ಸ್ವತಃ ಕೃಷ್ಣ ಬೈರೇಗೌಡರು ವಿಡಿಯೊ ಮೂಲಕ ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಂಡ ಅನಿರೀಕ್ಷಿತ ಭೇಟಿಯ ಅನುಭವ!

ಮತ್ತೊಂದು ಸಂದರ್ಭದಲ್ಲಿ, ಉಪ ವಿಭಾಗಾಧಿಕಾರಿಗಳ ಸಭೆಯಲ್ಲಿ ಕಂದಾಯ ಸಚಿವರು ಗರಂ ಆಗಿ ಗುಡುಗುತ್ತಾರೆ: 'ಶೇಕಡ 66ರಷ್ಟು ಪ್ರಕರಣಗಳನ್ನು, ಅವು ನಿಮ್ಮ ಕಾರ್ಯವ್ಯಾಪ್ತಿಗೆ ಬಾರದಿದ್ದರೂ ಸ್ವೀಕರಿಸಿದ್ದೀರಿ. ಕೇಸ್ ಅಡ್ಮಿಟ್ ಮಾಡಿಕೊಳ್ಳಲು ಅವರಿಂದ ಎಷ್ಟು ದುಡ್ಡು ತೆಗೆದುಕೊಂಡಿದ್ದೀರಿ? ಬೆಂಗಳೂರಿನಲ್ಲಿ ಎ.ಸಿ. ಹುದ್ದೆಗೆ ಬರುವುದೇ ದುಡ್ಡು ಮಾಡುವುದಕ್ಕೆ ಅಂತ ತಿಳ್ಕೊಂಡಿದ್ದೀರಾ...' ಸಚಿವರ ಈ ಮಾತುಗಳು ಸರ್ಕಾರಿ ಕಚೇರಿಗಳ ಭ್ರಷ್ಟತನವನ್ನು ಅಧಿಕೃತವಾಗಿ ದಾಖಲಿಸುತ್ತವೆ.

ಮೇಲಿನ ಎರಡು ಪ್ರಸಂಗಗಳನ್ನಷ್ಟೇ ಬಿಡಿಸಿ ನೋಡುವುದಾದರೆ, ಪುಸ್ತಕದಲ್ಲಿರುವ ಸರ್ಕಾರದ ಆಡಳಿತ ವ್ಯವಸ್ಥೆಗೂ ಜಾರಿಯಲ್ಲಿರುವ ಆಡಳಿತ ವ್ಯವಸ್ಥೆಗೂ ಅಜಗಜಾಂತರ ಎಂಬುದು ಸ್ಪಷ್ಟವಾಗುತ್ತದೆ. ಸರ್ಕಾರಿ ಕಚೇರಿಗಳು ತಮ್ಮದೇ ಆದ ಕಾರ್ಯಶೈಲಿ ರೂಢಿಸಿಕೊಂಡಿವೆ. ಈ ವ್ಯವಸ್ಥೆ ಅದೆಷ್ಟರಮಟ್ಟಿಗೆ ಬೇರುಬಿಟ್ಟಿದೆ ಎಂದರೆ, ಪ್ರಜಾಪ್ರಭುಗಳು ಕೂಡ ಸರ್ಕಾರಿ ಕಚೇರಿಗಳ ನೈಜ ಕಾರ್ಯನಿರ್ವಹಣೆಯ ಅಗತ್ಯಗಳಾದ ಸಮಯಪಾಲನೆ, ದಕ್ಷತೆ, ಪ್ರಾಮಾಣಿಕತೆಯ ನಿರೀಕ್ಷೆಯನ್ನೇ ತ್ಯಜಿಸಿಬಿಟ್ಟಿದ್ದಾರೆ.

ಆಡಳಿತ ವ್ಯವಸ್ಥೆಯ ಈ ದುರವಸ್ಥೆಯು ಕೃಷ್ಣ ಬೈರೇಗೌಡರ ವಿನೂತನ ಸಂಶೋಧನೆಯಾಗಲೀ ಕಾಂಗ್ರೆಸ್ ನೇತೃತ್ವದ ಸರ್ಕಾರದಲ್ಲಿ ಉದ್ಭವಿಸಿದ ವಿಶೇಷ ವಿದ್ಯಮಾನವಾಗಲೀ ಅಲ್ಲ; ಸಾಮಾನ್ಯ ಜನ ದಿನಂಪ್ರತಿ ಎದುರಿಸುವ ಸಂಕಷ್ಟ ಎಂಬುದರಲ್ಲಿ ಅನುಮಾನವೂ ಇಲ್ಲ. ಯಾವ ಪಕ್ಷದ ನೇತೃತ್ವದ ಸರ್ಕಾರ, ಯಾರ ನಾಯಕತ್ವದ ಸರ್ಕಾರ ಆಡಳಿತದಲ್ಲಿದ್ದರೂ ಬಹುಶಃ ಅತೀವ ಅವಗಣನೆಗೆ ಒಳಗಾಗುವುದೆಂದರೆ ಅದು ಸರ್ಕಾರಿ ಕಚೇರಿಗಳ ನಿರ್ವಹಣೆಯೇ ಇರಬೇಕು. ಪೂರ್ಣ ಪ್ರಮಾಣದ ಬಹುಮತ, ಅನುಭವಸ್ಥ ಮಂತ್ರಿಮಂಡಲ, ಮಂತ್ರಿ ಸ್ಥಾನಮಾನದ ಸುಮಾರು ಎಂಬತ್ತರಷ್ಟು ಸಲಹೆಗಾರರ ತಂಡವನ್ನು ಹೊಂದಿರುವ ಸಿದ್ದರಾಮಯ್ಯ ನೇತೃತ್ವದ ಸರ್ಕಾರವೂ ಈ ಲೋಪಕ್ಕೆ ಹೊರತಾಗದಿರುವುದು ಹತಾಶೆ ತರಿಸುತ್ತದೆ.

ಜಂಗು ತಿಂದ ಆಡಳಿತ ವ್ಯವಸ್ಥೆಯನ್ನು ತಮ್ಮದೇ ಆದ ರೀತಿಯಲ್ಲಿ ಚುರುಕುಗೊಳಿಸುವ ಪ್ರಯತ್ನದ ಭಾಗವಾಗಿ ಕಂದಾಯ ಸಚಿವರು ಸರ್ಕಾರಿ ಕಚೇರಿಗಳಿಗೆ ಅನಿರೀಕ್ಷಿತವಾಗಿ ಭೇಟಿ ನೀಡುವ, ಅಧಿಕೃತ ಸಭೆಗಳಲ್ಲಿ ಅಧಿಕಾರಿಗಳಿಗೆ ಬಿಸಿ ಮುಟ್ಟಿಸುವ ಕ್ರಮ ಗಮನ ಸೆಳೆಯುತ್ತಿದೆ. ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ಸೇರಿದಂತೆ ಸಚಿವ ಸಂಪುಟದ ಬಹುಪಾಲು ಸದಸ್ಯರು ಜನಸಾಮಾನ್ಯರಿಗೆ ನೇರವಾಗಿ ಸಂಬಂಧಿಸಿದ ಆಡಳಿತ ಯಂತ್ರದ ಕಾರ್ಯಕ್ಷಮತೆ ಕಡೆ ಗಮನಹರಿಸುವುದಕ್ಕಿಂತಲೂ ಹೆಚ್ಚಾಗಿ ದೈನಂದಿನ 'ರಾಜಕಾರಣ'ಕ್ಕೆ ಆದ್ಯತೆ ನೀಡಿರುವಾಗ, ಕಂದಾಯ ಸಚಿವರ ಈ ನಡೆ ವಿಶೇಷವಾಗಿ ಕಾಣಿಸುವುದು ಸಹಜ. ಜೊತೆಗೆ ಸಂತೋಷ್ ಲಾಡ್, ಪ್ರಿಯಾಂಕ್ ಖರ್ಗೆ ಅವರಂತಹ ತುಸು ಸಣ್ಣ ವಯಸ್ಸಿನ ಮಂತ್ರಿಗಳಾದರೂ ನಾಯಕತ್ವದ ಓಲೈಕೆ, ಅತಿಯಾದ ಮಾತುಗಾರಿಕೆಯಲ್ಲಿ ಕಳೆದುಹೋಗುವ ಬದಲು ತಮ್ಮ ಇಲಾಖೆಯ ಕಚೇರಿಗಳನ್ನು ಜಾಗೃತಗೊಳಿಸುವ ಸಣ್ಣ ಪ್ರಯತ್ನವನ್ನು ಏಕೆ ಮಾಡಬಾರದು ಎಂಬ ಪ್ರಶ್ನೆ ಏಳುತ್ತದೆ.

ಅಷ್ಟಕ್ಕೂ ಮಂತ್ರಿಮಹೋದಯರಿಂದ ನಡೆಯುವ ಸರ್ಕಾರಿ ಕಚೇರಿಗಳ ಇಂತಹ 'ಸ್ವಚ್ಛತಾ ಕಾರ್ಯಕ್ರಮ' ಬಹುದೊಡ್ಡ ಬದಲಾವಣೆ ತರುತ್ತದೆ ಎಂದು ಭ್ರಮಿಸಬೇಕಿಲ್ಲ. ಇಂತಹ ನಡೆಗಳು ಸಚಿವರ ಬಹುಮುಖ್ಯ ಕರ್ತವ್ಯ ಆಗಿಯೂ ಮುಗಿಯಬೇಕಿಲ್ಲ. ಸಚಿವರು, ಹಿರಿಯ ಅಧಿಕಾರಿಗಳ ದಿಢೀರ್ ಭೇಟಿಗಳು ಕಚೇರಿಗಳಲ್ಲಿ ಒಂದು ಮಟ್ಟದ ಎಚ್ಚರಿಕೆಯ ವಾತಾವರಣ, ಸಾರ್ವಜನಿಕರಲ್ಲಿ ವಿಶ್ವಾಸದ ಭಾವನೆ ಮೂಡಿಸಲು ಅಷ್ಟೇ ಶಕ್ತವಾಗಿರುತ್ತವೆ. ಇದಕ್ಕೆ ಮಿಗಿಲಾಗಿ ಸರ್ಕಾರಿ ಕಚೇರಿಗಳಲ್ಲಿ ಪ್ರಸ್ತುತ ಜಾರಿಯಲ್ಲಿರುವ ಪ್ರಜಾಪೀಡಕ ವ್ಯವಸ್ಥೆಯನ್ನು ಸಮಗ್ರ ಬದಲಾವಣೆ ಮಾಡುವ ದಿಸೆಯಲ್ಲಿ ಚರ್ಚೆ ಏರ್ಪಡುವುದು ಅತ್ಯಗತ್ಯ. ಜನಸಾಮಾನ್ಯರ ದೃಷ್ಟಿಯಲ್ಲಿ ಇಂತಹ ನಡೆಯು ರಾಜಕೀಯ ದಾಳ ಉರುಳಿಸುವ ತಂತ್ರಗಾರಿಕೆಗಾಗಿ ಆಯೋಜಿಸುವ ಔತಣಕೂಟಗಳಿಗಿಂತ ಬಹಳ ಪ್ರಮುಖವಾದುದು!

ಸರ್ಕಾರಿ ಕಚೇರಿಗಳಿಗೆ ಕಾಯಕಲ್ಪ ಕಲ್ಪಿಸುವ ದಿಸೆಯಲ್ಲಿ ಖಾಸಗಿ ಕಚೇರಿಗಳ ನಿರ್ವಹಣೆಯ ಕೆಲವು ಕಾರ್ಯತಂತ್ರಗಳು ಮತ್ತು ತಂತ್ರಜ್ಞಾನಗಳ ಅಳವಡಿಕೆಯ ಸಾಧ್ಯತೆಗಳನ್ನು ಪರಿಶೀಲಿಸುವುದರಲ್ಲಿ ಪ್ರಯೋಜನವಿದೆ. ಆಡಳಿತವನ್ನು ಕೆಳಹಂತದಲ್ಲಿ ಕ್ಷಮತೆಯ ಹಳಿಗೆ ತರಲು, ಭ್ರಷ್ಟಾಚಾರ ನಿಗ್ರಹಿಸಲು ಸ್ಥಳೀಯವಾಗಿ ಜಾಗೃತ ನಾಗರಿಕರ ತಂಡಗಳನ್ನು ಸರ್ಕಾರವೇ ಅಧಿಕೃತವಾಗಿ ರಚಿಸುವುದು ಪರಿಣಾಮಕಾರಿ ಕ್ರಮ ಆಗಬಹುದು. ಗ್ಯಾರಂಟಿ ಯೋಜನೆಗಳ ಜಾರಿಗೆ ಸಂಬಂಧಿಸಿದಂತೆ ನಿಗಾ ವಹಿಸಲು ರಾಜ್ಯ ಮಟ್ಟದ ಪ್ರಾಧಿಕಾರ ರಚಿಸಿ, ಅದರ ಅಧ್ಯಕ್ಷರಿಗೆ ಸಂಪುಟ ದರ್ಜೆಯ ಸಚಿವರ ಸ್ಥಾನಮಾನ ನೀಡಲಾಗಿದೆ. ಜೊತೆಗೆ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಸಮಿತಿಗಳನ್ನೂ ರಚಿಸಿರುವ ಸರ್ಕಾರಕ್ಕೆ 'ಜಾಗೃತ ನಾಗರಿಕರ ತಂಡ' ರೂಪಿಸುವುದು ಖಂಡಿತ ಹೊರೆಯಾಗಲಾರದು.

ಈ ಮಧ್ಯೆ 'ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರದಲ್ಲಿ ಲಂಚದ ಪ್ರಮಾಣವು ಶೇ 60ಕ್ಕೆ ತಲುಪಿದ್ದು, ಪಕ್ಷದ ಕಾರ್ಯಕರ್ತರೇ ಇದನ್ನು ಒಪ್ಪಿಕೊಂಡಿದ್ದಾರೆ' ಎಂಬ ಗಂಭೀರ ಆರೋಪವನ್ನು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಮಾಡಿದ್ದಾರೆ. ಮುಂದುವರಿದು, '... ಈಗ ವಿಧಾನಸೌಧದಲ್ಲಿ ಸಚಿವರೇ ರಾಜಾರೋಷವಾಗಿ ಲಂಚ ಪಡೆಯುತ್ತಿದ್ದಾರೆ' ಎಂದೂ ಸೇರಿಸಿದ್ದಾರೆ. ಇದಕ್ಕೆ ಪ್ರತಿಯಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ, 'ವಿರೋಧ ಪಕ್ಷಗಳು ಆಧಾರರಹಿತ ಆರೋಪಗಳನ್ನು ಮಾಡದೆ ಸೂಕ್ತ ದಾಖಲೆಗಳನ್ನು ಬಿಡುಗಡೆ ಮಾಡಬೇಕು. ರಾಜ್ಯ ಸರ್ಕಾರದಲ್ಲಿ ಭ್ರಷ್ಟಾಚಾರ ನಡೆದಿರುವುದನ್ನು ಆಧಾರಸಹಿತವಾಗಿ ಸಾಬೀತುಪಡಿಸಲಿ' ಎಂಬ ಸವಾಲು ಎಸೆದಿದ್ದಾರೆ.

ನಿಕಟಪೂರ್ವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, 'ಶೇಕಡ 60ರಷ್ಟು ಕಮಿಷನ್ ಆರೋಪಕ್ಕೆ ದಾಖಲೆ ಕೇಳುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶೇ 40ರಷ್ಟು ಕಮಿಷನ್ ಸರ್ಕಾರ ಎಂದು ನಮ್ಮ ಸರ್ಕಾರದ ವಿರುದ್ಧ ಆರೋಪಿಸಿದಾಗ ಯಾವ ದಾಖಲೆ ಕೊಟ್ಟಿದ್ದರು?' ಎಂಬ ಒಣಪ್ರಶ್ನೆ ಒಗೆಯುತ್ತಾರೆ.

ಹೀಗೆ ಸಾರ್ವಜನಿಕ ಬದುಕಿನ ಒಳಿತು ಮತ್ತು ನೈತಿಕತೆಯನ್ನು ನೆಲಸಮ ಮಾಡುವ ಭ್ರಷ್ಟಾಚಾರದಂತಹ ಕಡು ಅನಿಷ್ಟ ಸಂಗತಿಯನ್ನು ಕೂಡ ರಾಜಕಾರಣಿಗಳು ತಮ್ಮ ನಡುವಿನ ಎರಚಾಟದ ಕೆಸರನ್ನಷ್ಟೇ ಆಗಿ ಬಳಸುತ್ತಿರುವುದು ಒಳ್ಳೆಯ ಲಕ್ಷಣವಲ್ಲ. ನಿಜಕ್ಕೂ ಆಡಳಿತಶಾಹಿ ಮತ್ತು ರಾಜಕಾರಣದ ಭ್ರಷ್ಟಾಚಾರದ ಮೂಲ ನೆಲೆಗಳ ಮೇಲೆ ದಾಳಿ ಮಾಡದೆ ಹುಸಿಗುಂಡು ಹಾರಿಸುವುದರಿಂದ ಹೆಚ್ಚಿನ ಪ್ರಯೋಜನವಿಲ್ಲ. ಸರ್ಕಾರಿ ಹುದ್ದೆಗಳ ನೇಮಕಾತಿ ಮತ್ತು ವರ್ಗಾವಣೆ ಪ್ರಕ್ರಿಯೆಯಲ್ಲಿ ನೌಕರಶಾಹಿಯ ಲಂಚಬಾಕತನದ ರಹಸ್ಯ ಅಡಗಿರುತ್ತದೆ. ಹಾಗೆಯೇ ರಾಜಕಾರಣಿಗಳನ್ನು ಅಧಿಕಾರದ ಗದ್ದುಗೇರಿಸುವ ಚುನಾವಣೆಗಳ ಸ್ವರೂಪದಲ್ಲಿ ಭ್ರಷ್ಟಾಚಾರದ ಪ್ರಾಣಪಕ್ಷಿ ನೆಲಸಿರುತ್ತದೆ. ಹಾಗಾಗಿ, ಕೋಮುವಾದದ ಗುಮ್ಮನ ಜೊತೆಗೆ ಭ್ರಷ್ಟಾಚಾರದ ಬ್ರಹ್ಮರಾಕ್ಷಸನನ್ನೂ ಎದುರಿಸುವ ಸಿದ್ಧಾಂತದ ಅಳವಡಿಕೆಯು ಸರ್ಕಾರ ಮತ್ತು ಸಲಹೆಗಾರರ ಆದ್ಯತೆಯಾಗಬೇಕಿದೆ.

ಚುರುಮುರಿ

...ಗ್ರೇಟರ್ ಅಮೆರಿಕ

● ಆನಂದ

'ಯುಎಸ್ಎ ಅಂದರೆ ಏನು?' ಎಂದು ಮಡದಿ ಕೇಳಿದಾಗ ಆಶ್ಚರ್ಯ ಆಯಿತು. 'ಮೂರು ಸಲ ಅಲ್ಲಿಗೆ ಯಾತ್ರೆ ಮಾಡಿ ಬಂದಿದ್ದೀಯ. ಆದರೂ ಕೇಳ್ತಿದ್ದೀಯಲ್ಲಾ? ಯುಎಸ್ಎ ಅಂದರೆ ಯುನೈಟೆಡ್ ಸ್ಟೇಟ್ಸ್ ಆಫ್ ಅಮೆರಿಕ' ಎಂದೆ.

'ಅದು ಯುಎಸ್‌ಜಿಎ ಆಗಲಿದೆ' ಎಂದಾಗ ನನಗೆ ಮತ್ತೊಮ್ಮೆ ಆಶ್ಚರ್ಯ.

ಅರೆ! ಈ ಯುಎಸ್ಎನಲ್ಲಿ 'ಜಿ' ಹೇಗೆ ಬಂದು ಸೇರಲಿದೆ? ಯಾವಾಗ? ಅಸಲಿಗೆ 'ಜಿ' ಎಂದರೆ ಏನು? ನನಗೆ ಈ ಸೀರಿಯಲ್ ಪ್ರಶ್ನೆಗಳು ಕಾಡತೊಡಗಿದವು.

'ಯುಎಸ್‌ಜಿಎ ಅಂದರೆ ಯುನೈಟೆಡ್ ಸ್ಟೇಟ್ಸ್ ಆಫ್ ಗ್ರೇಟರ್ ಅಮೆರಿಕ, ತಿಳ್ಕೊ' ಎಂದು ನಗೆ ಬೀರಿದಾಗ ನನಗೆ ಇನ್ನೊಮ್ಮೆ ಆಶ್ಚರ್ಯ. 'ನಿನ್ನ ಹೊಸ ಭೂಗೋಳವನ್ನು ವಿವರಿಸುವಂತಹ ವಳಾಗು' ಎಂದು ಅಹವಾಲು ಮಂಡಿಸಿದೆ.

'ಅಯ್ಯೋ! ಇದು ನನ್ನ ಭೂಗೋಳವಲ್ಲ, ಟ್ರಂಪ್ ಸಾಹೇಬರದ್ದು. ಅವರು ಈಗಾಗಲೇ ನೆರೆಯ ಕೆನಡಾ ದೇಶಕ್ಕೆ ಕರೆ ನೀಡಿ, ಅಮೆರಿಕದ 51ನೇ ರಾಜ್ಯವಾಗಿ ನಮ್ಮಲ್ಲಿ ಸೇರಿ ಎಂದು ಆಹ್ವಾನಿಸಿದ್ದಾರೆ'.

'ವಿಸ್ತೀರ್ಣದಲ್ಲಿ ಮೂರು ಭಾರತದಷ್ಟು ದೊಡ್ಡದಿದೆ ಅಮೆರಿಕ ಈಗಾಗಲೇ. ಇನ್ನೂ ಬೆಳೆಯಬೇಕೆ?'

'ಟ್ರಂಪ್ ರಿಯಲ್ ಎಸ್ಟೇಟ್ ಕುಳ. ಯಾವಾಗಲೂ ಭೂಮಿ ಮೇಲೆ ಕಣ್ಣು, ನಮ್ಮ ರಾಜಕಾರಣಿಗಳು ಸರ್ಕಾರಿ ಭೂಮಿ, ಇತರರ ಜಮೀನಿನ ಮೇಲೆ ಕಣ್ಣು ಹಾಕಿದರೆ ಟ್ರಂಪ್ ಇಡೀ ಒಂದು ದೇಶದ ಮೇಲೇ ಕಣ್ಣು ಹಾಕಿದ್ದಾರೆ'.

'ವಿಸ್ತೀರ್ಣದಲ್ಲಿ ಕೆನಡಾ ವಿಶ್ವದ ಎರಡನೇ ದೊಡ್ಡ ದೇಶ, ಅಮೆರಿಕ ನಾಲ್ಕನೆಯದು. ಇವೆರಡೂ ಒಂದಾದರೆ ಅಮೆರಿಕೆನಡಾ ವಿಶ್ವದ ಅತಿ ದೊಡ್ಡ ದೇಶ ಆಗುತ್ತದೆ. ಆದಕ್ಕೇ ಯುಎಸ್ಎ ಯುಎಸ್‌ಜಿಎ ಆಗುತ್ತೆ ಎಂದು ಹೇಳಿದ್ದು. ಈ ಯುಎಸ್‌ಜಿಎ ದೇಶದ 51ನೇ ರಾಜ್ಯದ ಗವರ್ನರ್ ಅನ್ನು ಸಹ ಟ್ರಂಪ್ ನೇಮಕ ಮಾಡಿದ್ದಾರೆ'.

'ಯಾರು?'

'ಅದೇ ಕೆನಡಾ ದೇಶದ ಈಗಿನ ಪ್ರಧಾನಿ. ಇಲ್ಲದಿದ್ದರೆ ಅವರು ನಿರುದ್ಯೋಗಿ ಆಗ್ತಾರಲ್ಲ?'

'ಆ ದೇಶದ ಪ್ರಧಾನಿಯನ್ನು ಅಮೆರಿಕದ 51ನೇ ರಾಜ್ಯದ ಗವರ್ನರ್ ಆಗಿ ಎಂದು ಸಲಹೆ ಮಾಡಿದ್ದಾರೆ'.

ಸಂಗತ

ಮೇಲರಿಮೆಯ ವ್ಯಾಧಿಗೆ ಮದ್ದುಂಟೇ?

ದಿನೇದಿನೇ ನಾವು ಹೆಚ್ಚು ಜಾತಿವಾದಿಗಳಾಗುತ್ತಿರುವುದು ಒಂದು ವ್ಯಂಗ್ಯ

● ದೀಪಾ ಹಿರೇಗುತ್ತಿ

ಹಲಸಿನ ಕಾಯಿ ಕೀಳಲು ತೋಟದ ಅಂಚಿನಲ್ಲಿದ್ದ ಮರ ಹತ್ತಿದ್ದ ಪರಿಶಿಷ್ಟ ಪಂಗಡದ ಯುವಕನೊಬ್ಬನನ್ನು ತೋಟದ ಮಾಲೀಕ ಗುಂಡಿಕ್ಕಿ ಕೊಲೆ ಮಾಡಿದ ಸುದ್ದಿಯನ್ನು ಇತ್ತೀಚೆಗೆ ಪತ್ರಿಕೆಗಳಲ್ಲಿ ಓದಿ ಆಘಾತವಾಯಿತು. ಕೊಡಗಿನಲ್ಲಿ ಕೊಲೆಯಾದ ಈ ಇಪ್ಪತ್ಮೂರು ವರ್ಷದ ಹುಡುಗ, ಕೊಲೆ ಮಾಡಿದ ವ್ಯಕ್ತಿಗೆ ಅಪರಿಚಿತನೇನಲ್ಲ. ಆ ವ್ಯಕ್ತಿಯ ಸಂಬಂಧಿಕರ ತೋಟದಲ್ಲೇ ಯುವಕ ಕೆಲಸ ಮಾಡುತ್ತಿದ್ದುದು. ಹಾಗಿರುವಾಗ, ಸಾಂಬಾರು ಮಾಡಲು ಒಂದು ಕಾಯಿ ಕಿತ್ತಿದ್ದಕ್ಕೆ ಜೀವವನ್ನೇ ತೆಗೆಯುವ ಧಾರ್ಷ್ಟ್ಯ ಈ ಮಾಲೀಕನಿಗೆ ಬಂದಿದ್ದಾದರೂ ಹೇಗೆ?

ಉತ್ತರ ಭಾರತದ ಕಡೆಯಿಂದ ಕೇಳಿಬರುತ್ತಿದ್ದ ಇಂತಹ ನೀಚ ಕೃತ್ಯಗಳ ಸುದ್ದಿ ಇತ್ತೀಚಿನ ವರ್ಷಗಳಲ್ಲಿ ಕರ್ನಾಟಕದಲ್ಲಿ ಕೂಡ ಸಾಮಾನ್ಯ ಆಗುತ್ತಿರುವುದು ತಲೆತಗ್ಗಿಸುವ ಸಂಗತಿ. ಅತ್ಯಂತ ಕ್ಷುಲ್ಲಕ ಎನ್ನುವ ಕಾರಣಗಳಿಗಾಗಿ ದಲಿತರನ್ನು ಸಾಯಿಸಿರುವ ಉದಾಹರಣೆಗಳು ಉತ್ತರ ಭಾರತದಲ್ಲಿ ಹೇರಳವಾಗಿ ಸಿಗುತ್ತವೆ. 2019ರಲ್ಲಿ ಮದುವೆಯೊಂದರಲ್ಲಿ ತಮ್ಮೆದುರು ಕುರ್ಚಿಯಲ್ಲಿ ಕುಳಿತು ಊಟ ಮಾಡಿದ ಎನ್ನುವ ಕಾರಣಕ್ಕೆ ಜಿತೇಂದ್ರ ಎಂಬ ಪರಿಶಿಷ್ಟ ಯುವಕನನ್ನು ಪ್ರಬಲ ಜಾತಿಯ ಗಂಡಸರು ಚೆನ್ನಾಗಿ ಹೊಡೆದರು. ಒಂಬತ್ತು ದಿನಗಳ ಕಾಲ ಆಸ್ಪತ್ರೆಯಲ್ಲಿ ನರಳಿ ಆ ಯುವಕ ತೀರಿಕೊಂಡ. ಸಾರ್ವಜನಿಕ ಕೆರೆಯಲ್ಲಿ ಸ್ನಾನ ಮಾಡಿದ್ದಕ್ಕೆ ಒಡಿಶಾದಲ್ಲಿ, ಅಂಬೇಡ್ಕರ್ ಜಯಂತಿ ಆಚರಿಸಿದ್ದಕ್ಕೆ ಮಹಾರಾಷ್ಟ್ರದಲ್ಲಿ, ಒಳ್ಳೆಯ ಬಟ್ಟೆ ಧರಿಸಿದ್ದಕ್ಕೆ ಗುಜರಾತಿನಲ್ಲಿ, ಪ್ರಬಲ ಜಾತಿಯ ಯುವತಿಯನ್ನು ಪ್ರೀತಿಸಿದ್ದಕ್ಕೆ ಉತ್ತರಾಖಂಡದಲ್ಲಿ... ಬರೆಯುತ್ತಾ ಹೋದರೆ ಇಂತಹ ಕಾರಣಗಳಿಗೆ ಬಲಿಯಾದ ಬಡಪಾಯಿಗಳ ಉದಾಹರಣೆಗಳನ್ನು ಪುಟಗಟ್ಟಲೆ ಕೊಡಬಹುದು.

ಜಿತೇಂದ್ರನ ಪ್ರಕರಣದಲ್ಲಂತೂ ಮದುವೆಗೆ ಸೇರಿದ್ದ ನೂರಾರು ಜನರಲ್ಲಿ ಯಾರೊಬ್ಬರೂ ಅಂದು ಏನಾಯಿತೆಂದು ಹೇಳಲು ತಯಾರಿರಲಿಲ್ಲ! ಮದುವೆ ದಲಿತ ಯುವಕನದ್ದೇ ಆಗಿತ್ತು. ಸೇರಿದ್ದ ಜನರಲ್ಲಿ ಎಲ್ಲ ಜಾತಿಯವರೂ ಇದ್ದರು. ಬೇರೆಯವರು ದಲಿತರು ಮಾಡಿದ ಅಡುಗೆ ಮುಟ್ಟದ ಕಾರಣ ಪ್ರಬಲ ಜಾತಿಯವರಿಂದಲೇ ಅಡುಗೆ ಮಾಡಿಸಲಾಗಿತ್ತು ಎಂಬುದನ್ನು ಕೂಡ ಇಲ್ಲಿ ಗಮನಿಸಬೇಕು. ನಮ್ಮ ಊರುಗಳಲ್ಲಿ ಸಹ ಮದುವೆಗೆ ಕರೆಯಲು ಬರುವವರು, ಅಡುಗೆಯನ್ನು ಇಂಥವರಿಂದ ಮಾಡಿಸಲಾಗುತ್ತದೆ ಎಂದು ಪ್ರಬಲ ಜಾತಿಗೆ ಸೇರಿದ ಅಡುಗೆಯವರ ಹೆಸರನ್ನೇ ಹೇಳಿ ಮದುವೆಗೆ ಕರೆಯುವ ಪರಿಪಾಟ ಇದೆ. ಇದರಿಂದ ಈ ಜಾತಿಯ ಶ್ರೇಣಿ ವ್ಯವಸ್ಥೆ ಪ್ರತಿಯೊಬ್ಬರ ಮನಸ್ಸಿನಲ್ಲಿ ಆಳವಾಗಿ ಬೇರೂರಿಬಿಟ್ಟಿದೆ ಎಂಬುದು ಅರಿವಾಗುತ್ತದೆ.

ಸ್ವಾತಂತ್ರ್ಯ ಬಂದು ಏಳೂವರೆ ದಶಕಗಳೇ ಕಳೆದರೂ ಎಂಥೆಂಥ ಮಹಾನುಭಾವರು ಜಾತಿವಿನಾಶಕ್ಕೆ ಶ್ರಮಿಸಿದರೂ ಜಾತಿ ನಾಶವಾಗುವುದು ಒತ್ತಟ್ಟಿಗಿರಲಿ, ದಿನಗಳೆದಂತೆ ನಾವು ಹೆಚ್ಚುಹೆಚ್ಚು ಜಾತಿವಾದಿಗಳಾಗುತ್ತಿರುವುದು ಒಂದು ವ್ಯಂಗ್ಯ. ಮತ್ತೂ ಭಯಾನಕವಾದ ವ್ಯಂಗ್ಯವೆಂದರೆ, ಯಾವ ಸಂವಿಧಾನವು ಸಮಾನವಾಗಿ ಬದುಕುವ ಹಕ್ಕುಗಳನ್ನು ಪರಿಶಿಷ್ಟರಿಗೆ ಕೊಟ್ಟಿದೆಯೋ ಅದೇ ಸಂವಿಧಾನದ ತತ್ವಗಳ ಪ್ರಕಾರ ಬದುಕಲು ಮುಂದಾಗುವ ಪರಿಶಿಷ್ಟರನ್ನು ಸಮಾಜ ಕೆಂಗಣ್ಣಿನಿಂದ ನೋಡುತ್ತದೆ. ಅಷ್ಟೇ ಅಲ್ಲ, ಇತರರ ಜತೆ ಸಮಾನವಾಗಿ ಗುರುತಿಸಿಕೊಳ್ಳುವ ಆಸೆಯಿಂದ ಪರಿಶಿಷ್ಟರು ಕಾನೂನುಬದ್ಧವಾಗಿಯೇ ಮಾಡುವ ಕೆಲಸಗಳೂ ಅವರ ಪ್ರಾಣವನ್ನೇ ತೆಗೆಯುತ್ತವೆಂದರೆ ಅದಕ್ಕಿಂತ ದುರದೃಷ್ಟ ಮತ್ತೊಂದಿಲ್ಲ.

ತಮ್ಮ ತಮ್ಮ ಹಕ್ಕುಗಳ ಸ್ಥಾಪನೆಗೆ ಸದಾ ಮುಂದಾಗುವ ಜನ, ಸಾಮಾಜಿಕವಾಗಿ ತಮಗಿಂತ ಕೆಳಗಿನ ಶ್ರೇಣಿಯಲ್ಲಿ ಇರುವವರು ಆ ಕೆಲಸ ಮಾಡಿದ ಕೂಡಲೇ ಸಿಟ್ಟಿಗೇಳುತ್ತಾರೆ. ಕೊಡಗಿನಲ್ಲಿ ಆಗಿದ್ದು ಅದೇ! ಬಡವನಾದ ಈ ಕೂಲಿ ಕೆಲಸದವನೇನು ತನ್ನ ಮರ ಹತ್ತುವುದು ಎಂಬ ಕೋಪ. ಅದೇ ತನ್ನ ಸಂಬಂಧಿಯಾಗಿದ್ದರೆ ಗುಂಡಿಕ್ಕುತ್ತಿದ್ದನೇ? ಖಂಡಿತ ಇಲ್ಲ.

ಬೇರೆಯವರನ್ನು ಕೀಳಾಗಿಸಿ ತಾವು ದೊಡ್ಡವರೆನಿಸಿಕೊಳ್ಳುವ ಸುಲಭ ಮಾರ್ಗ ಕೈತಪ್ಪಿ ಹೋಗುತ್ತಿರುವುದೇ ಈ ಎಲ್ಲ ಅಸಹನೆಗೆ ಕಾರಣ. ಹೆಣ್ಣನ್ನು ಕೀಳಾಗಿಸಿ ಗಂಡು, ಕೆಲವು ಜಾತಿಯವರನ್ನು ಕೀಳಾಗಿಸಿ ಮತ್ತೆ ಕೆಲವು ಜಾತಿಯವರು ಸುಲಭವಾಗಿ 'ಶ್ರೇಷ್ಠ'ರಾಗಿಬಿಡುತ್ತಿದ್ದರು. ಆದರೀಗ ಸಂವಿಧಾನ ತಂದಿತ್ತ ಅವಕಾಶಗಳಿಂದ, ಸಾಧನೆ ಮಾಡುವವರೆಲ್ಲರೂ ಶ್ರೇಷ್ಠರಾಗಬಹುದು. ಆದರೆ ತಲೆತಲಾಂತರಗಳಿಂದ ಮೆದುಳಿನ ಆಳದಲ್ಲಿದ್ದ ಶ್ರೇಷ್ಠತೆಯ ಅಹಂಕಾರ ಗಾಸಿಗೊಂಡಾಗ ಈ ರೀತಿಯ ಅಪರಾಧಗಳು ಘಟಿಸುತ್ತವೆ.



ಸಾಂಸ್ಕೃತಿಕ ಆಚರಣೆ ಎಂದೆಲ್ಲ ದೊಡ್ಡ ದೊಡ್ಡ ಪದಗಳಿಂದ ಕರೆಸಿಕೊಳ್ಳುವ ಈ ಜಾತಿ ಪದ್ಧತಿಯು ನಿಜವಾಗಿ ನೋಡಿದರೆ ಒಂದು ದುಷ್ಟ ವ್ಯವಸ್ಥೆ. ವೇದವನ್ನು ಕೇಳುವ ಶೂದ್ರನ ಕಿವಿಗೆ ಕಾದ ಸೀಸ ಸುರಿಯಬೇಕೆಂಬ ಮತ್ತು ವೇದ ಪಠಣ ಮಾಡುವ ಶೂದ್ರನ ನಾಲಿಗೆಯನ್ನು ಕತ್ತರಿಸಬೇಕೆಂದು ಹೇಳಿದ ಮನುಸ್ಮೃತಿಯ ಆಶಯ ಇಂದು ಬೇರೆಬೇರೆ ರೂಪದಲ್ಲಿ ಆಚರಣೆಗೆ ಬರುತ್ತಿದೆ. ಕುದುರೆ ಮೇಲೆ ಕೂತ ದಲಿತನ ಕೊಲೆ, ಮೀಸೆ ಬಿಟ್ಟ ದಲಿತನ ಕೊಲೆ ಇವೆಲ್ಲ ಆ ಆಚರಣೆಯ ಮುಂದುವರಿದ ಭಾಗಗಳಷ್ಟೇ. ಅಷ್ಟೇ ಅಲ್ಲ, ಜಾತಿಯ ಅವಮಾನವನ್ನು ಎದುರಿಸಲಾಗದೇ ಆತ್ಮಹತ್ಯೆಗೆ ಶರಣಾಗುವ ವೇಮುಲರಂತಹ ವಿದ್ಯಾರ್ಥಿಗಳ ಸಾವು ಕೂಡ ಜಾತಿಯಿಂದಾದ ಕೊಲೆಯೆ!

ಉಸಿರಾಡಲಾಗುತ್ತಿಲ್ಲ ಎಂದು ಅಂಗಲಾಚಿದರೂ ಬಿಡದೇ ಉಸಿರುಗಟ್ಟಿಸಿ, ಕಪ್ಪುವರ್ಣೀಯನಾದ ಜಾರ್ಜ್ ಫ್ಲಾಯ್ಡ್‌ನನ್ನು ಕೊಂದ ಅಮೆರಿಕದ ಪೊಲೀಸ್ ಕೂಡ ಈ ಅಹಂಕಾರಿ ಮೇಲರಿಮೆಗೆ ಉದಾಹರಣೆ. ಈ ಮೇಲರಿಮೆಯನ್ನು ಕಾಪಿಡಲು ಕ್ರೌರ್ಯವನ್ನು ಬಳಸುತ್ತಿರುವುದು ಶತಶತಮಾನಗಳಿಂದ ನಡೆದುಕೊಂಡು ಬಂದಿರುವ ಅನಿಷ್ಟ ಪದ್ಧತಿ. ಈ ನೀಚ ಪ್ರವೃತ್ತಿ ಕೊನೆಯಾಗಲು ಇನ್ನೆಷ್ಟು ಮುಗ್ಧ ಜೀವಗಳು ಬಲಿಯಾಗಬೇಕೋ!

ವಾಚಕರ ವಾಣಿ

ಸಿಬ್ಬಂದಿಯ ಯೋಗಕ್ಷೇಮ ಲೆಕ್ಕಕ್ಕಿಲ್ಲವೇ?

ಎಲ್ ಆ್ಯಂಡ್ ಟಿ ಕಂಪನಿಯ ಮುಖ್ಯಸ್ಥ ಎಸ್.ಎನ್.ಸುಬ್ರಹ್ಮಣ್ಯನ್ ತಮ್ಮ ಕಂಪನಿಯ ಉದ್ಯೋಗಿಗಳನ್ನು ಉದ್ದೇಶಿಸಿ 'ಮನೆಯಲ್ಲಿ ಕುಳಿತು ಎಷ್ಟು ಹೊತ್ತು ಹೆಂಡತಿಯ ಮುಖ ನೋಡಿಕೊಂಡು ಇರುತ್ತೀರಿ? ವಾರದಲ್ಲಿ 90 ಗಂಟೆ ಕೆಲಸ ಮಾಡಿ ಹಾಗೂ ಶ್ರಮವಹಿಸಿ ದುಡಿಯಲು ಭಾನುವಾರದ ರಜೆಯನ್ನೂ ತ್ಯಜಿಸಿ' ಎಂದಿರುವುದಾಗಿ ವರದಿಯಾಗಿದೆ (ಪ್ರ.ವಾ., ಜ. 10). ಈ ಹಿಂದೆ, ಇನ್ಫೊಸಿಸ್ ಸಹ ಸಂಸ್ಥಾಪಕ ಎನ್.ಆರ್.ನಾರಾಯಣ ಮೂರ್ತಿ, ವಾರದಲ್ಲಿ 70 ಗಂಟೆ ಕೆಲಸ ಮಾಡಬೇಕೆಂದು ಅಭಿಪ್ರಾಯಪಟ್ಟಿದ್ದರು. ಸಿಬ್ಬಂದಿಯ ಯೋಗಕ್ಷೇಮವನ್ನು ಲೆಕ್ಕಕ್ಕೇ ಇರಿಸಿಕೊಳ್ಳದೆ ಈ ರೀತಿ ಮಾತನಾಡುವುದು ತರವಲ್ಲ.

ಕುಟುಂಬ ಎಂದರೆ ಬರೀ ಗಂಡ, ಹೆಂಡತಿ ಅಷ್ಟೇ ಅಲ್ಲ ಎಂಬುದು ಇವರಿಗೆ ಗೊತ್ತಿಲ್ಲವೇ? ಉದ್ಯೋಗಿಯ ಮಕ್ಕಳು, ತಂದೆ, ತಾಯಿ, ಅಜ್ಜ, ಅಜ್ಜಿ ಎಲ್ಲರೂ ಅವರ ಕುಟುಂಬದ ಸದಸ್ಯರೆ. ಅವರ ಯೋಗಕ್ಷೇಮವನ್ನು ನೋಡಿಕೊಳ್ಳುವುದು ಉದ್ಯೋಗಿಯ ಜವಾಬ್ದಾರಿ ಅಲ್ಲವೇ? ಕಂಪನಿಯ ಉದ್ಧಾರವಷ್ಟೇ ಉದ್ಯೋಗಿಯ ಹಿತವಾಗಬೇಕೆ? ಉದ್ಯೋಗಿ ಸುಖವಾಗಿದ್ದರೆ, ಆರೋಗ್ಯವಾಗಿದ್ದರೆ ಕಂಪನಿಯು ಸದೃಢವಾಗಿರುತ್ತದೆ. ಅದರ ಬೆಳವಣಿಗೆಯೂ ಚೆನ್ನಾಗಿರುತ್ತದೆ. ಉದ್ಯೋಗಿಗಳನ್ನು ಬರೀ ದುಡಿಯುವ ಎತ್ತುಗಳಂತೆ ಪರಿಗಣಿಸದೆ ಅವರ ಶ್ರೇಯಸ್ಸಿಗೂ ಕಂಪನಿಯು ಆದ್ಯತೆ ನೀಡಬೇಕಾದುದು ಅತಿ ಅವಶ್ಯ.

ಕೆ.ಪ್ರಭಾಕರ ರಾಜು, ಬೆಂಗಳೂರು

ವಿ.ವಿ. ಸಂಶೋಧನೆ: ಗಂಭೀರವಾಗಿ ಪರಿಗಣಿಸಿ

ಸರ್ಕಾರಿ ಉನ್ನತ ಶಿಕ್ಷಣ ಸಂಸ್ಥೆಗಳು ಹಾಗೂ ಸಂಶೋಧನಾ ಕೇಂದ್ರಗಳಿಗೆ ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದ ಸಂಶೋಧನಾ ಪತ್ರಿಕೆಗಳ ವಿದ್ಯುನ್ಮಾನ ಪ್ರತಿಗಳನ್ನು (ಇ-ಕಾಪಿ) ಲಭ್ಯವಾಗಿಸುವ ಗುರಿ ಹೊಂದಿರುವ ಕೇಂದ್ರದ ಉದ್ದೇಶಿತ 'ಒಂದು ದೇಶ ಒಂದು ಚಂದಾ' ಯೋಜನೆಯಿಂದ ಸಂಶೋಧನೆಗೆ ಬಲ ಬರಬಹುದು ಎಂದು ಎಚ್.ಕೆ.ಶರತ್ ಅಭಿಪ್ರಾಯಪಟ್ಟಿದ್ದಾರೆ (ಪ್ರ.ವಾ., ಜ. 7). ಸಾಮಾನ್ಯವಾಗಿ ವಿಶ್ವವಿದ್ಯಾಲಯ ಹಾಗೂ ಕಾಲೇಜುಗಳಲ್ಲಿ ಹೆಚ್ಚಿನ ಸಂಶೋಧನಾ ಪ್ರಕಟಣೆಗಳನ್ನು ವೈಯಕ್ತಿಕವಾಗಿ ವೃತ್ತಿ ಬದುಕಿನಲ್ಲಿ ಮೇಲೇರುವ ಉದ್ದೇಶವನ್ನು ಇಟ್ಟುಕೊಂಡು ಹೊರತರಲಾಗುತ್ತದೆ. ಇಂತಹ ಸಂಶೋಧನೆಗಳು ಸಮಾಜಕ್ಕೆ ಎಷ್ಟರಮಟ್ಟಿಗೆ ಕೊಡುಗೆ ನೀಡಿವೆ ಎಂಬುದು ಪ್ರಶ್ನಾರ್ಹ. ಅದಕ್ಕೆ ತಕ್ಕಂತೆ ಸಂಶೋಧನೆಗೆ ಸರ್ಕಾರದ ಬೆಂಬಲವೂ ಅತ್ಯಲ್ಪವಾಗಿದೆ. ಈ ಬಗ್ಗೆ ಗಮನಹರಿಸಿ, ವಿಶ್ವವಿದ್ಯಾಲಯಗಳ ಸಂಶೋಧನೆಯ ಫಲಶ್ರುತಿ ಸಮಾಜಕ್ಕೆ ದಕ್ಕುವಂತೆ ಮಾಡಬೇಕಿದೆ.

ಗಾನಶ್ರುತಿ ಎಂ.ಕೆ., ಹುಲಸೂರು, ಬೀದರ್

ಆನೆಗಳ ವರ್ತನೆ ಹೇಳುವುದೇನು?

ಕೇರಳದಲ್ಲಿ ನಡೆದ ಧಾರ್ಮಿಕ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಿದ್ದ ಆನೆಯೊಂದು ಗಾಬರಿಗೊಂಡು ದಾಳಿ ನಡೆಸಿದ್ದರಿಂದ ಹಲವು ಭಕ್ತರು ಗಾಯಗೊಂಡಿರುವುದು ದುಃಖದ ಸಂಗತಿ. ಆದರೆ ಆನೆಗಳ ಇಂತಹ ವರ್ತನೆ ಇದೇ ಮೊದಲೇನಲ್ಲ. ದೇಶದ ಹಲವು ಭಾಗಗಳಲ್ಲಿ ಹಲವು ಕಾರ್ಯಕ್ರಮಗಳಲ್ಲಿ ಆನೆ ಸೇರಿದಂತೆ ಇತರ ಸಾಕುಪ್ರಾಣಿಗಳೂ ಹೀಗೆ ಕೆರಳಿಯೋ ಇಲ್ಲ ಬೆದರಿಯೋ ದಾಂದಲೆ ನಡೆಸಿದ ನಿದರ್ಶನಗಳಿವೆ. ಪ್ರಾಣಿಗಳ ಇಂತಹ ವರ್ತನೆಯನ್ನು ಗಂಭೀರವಾಗಿ ಪರಿಗಣಿಸದ ನಮ್ಮ ಸಮಾಜ, ಅವುಗಳ ದಾಳಿ ಮತ್ತು ಅದರಿಂದ ಗಾಯಗೊಂಡವರನ್ನು ಕ್ರಮೇಣ ಮರೆತುಬಿಡುತ್ತದೆ.

ಮನುಷ್ಯನ ಆಚರಣೆ, ಸಂಸ್ಕೃತಿಗಳೇನೇ ಇರಲಿ ಅವುಗಳನ್ನು ಈ ಮುಗ್ಧಜೀವಿಗಳ ಮೇಲೆ ಹೇರುವುದು ಸರಿಯಲ್ಲ. ಅಲ್ಲದೆ ನಮಗಿಂತ ಅತ್ಯುತ್ತಮ ದೃಕ್-ಶ್ರವಣಶಕ್ತಿ ಹೊಂದಿರುವ ಜೀವಿಗಳಿಗೆ ಮನುಷ್ಯನಿರ್ಮಿತ ವಾತಾವರಣ ಹೆಚ್ಚು ಕಿರಿಕಿರಿ ಉಂಟುಮಾಡುತ್ತದೆ. ನಮ್ಮ ಸಡಗರ, ಸಂಭ್ರಮವು ಅವುಗಳಿಗೆ ಅತಿಯಾದ ಒತ್ತಡವನ್ನು ಉಂಟುಮಾಡಬಹುದು ಮತ್ತು ಅದರಿಂದ ಕೆರಳುವ ಈ ಮುಗ್ಧಜೀವಿಗಳು ಆಕ್ರಮಣಕಾರಿ ವರ್ತನೆಯನ್ನು ತೋರಿ ಪ್ರಾಣಹಾನಿ, ಆಸ್ತಿಹಾನಿಗೆ ಕಾರಣವಾಗಬಹುದು. ಇನ್ನಾದರೂ ನಮ್ಮ ಆಚರಣೆಗಳನ್ನು ಸರಳವಾಗಿ ಇರುವಂತೆ ರೂಪಿಸಿಕೊಳ್ಳಬೇಕು. ಜೊತೆಗೆ ಯಾವುದೇ ಜೀವಿಗಳನ್ನು ಇಂತಹ ಕಾರ್ಯಕ್ರಮಗಳಿಗೆ ಬಳಸಿಕೊಳ್ಳುವುದನ್ನು ಸಂಪೂರ್ಣವಾಗಿ ನಿಷೇಧಿಸಬೇಕು. ನೈಜಪ್ರಾಣಿಗಳ ಬದಲಾಗಿ ರೋಬಾಟಿಕ್ ಪ್ರಾಣಿಗಳನ್ನು ಬಳಸಿಕೊಳ್ಳಬಹುದು. ಬಾಳೆಹೊನ್ನೂರಿನ ರಂಭಾಪುರಿ ಪೀಠಕ್ಕೆ ಚಿತ್ರನಟಿ ಶಿಲ್ಪಾಶೆಟ್ಟಿ ಅವರು ಇತ್ತೀಚೆಗೆ ರೋಬಾಟಿಕ್ ಆನೆಯನ್ನು ಕೊಡುಗೆಯಾಗಿ ನೀಡಿರುವುದನ್ನು ಸ್ಮರಿಸಬಹುದು. ಒಬ್ಬರ ಆಚರಣೆ, ಸಂಸ್ಕೃತಿ ಮತ್ತೊಬ್ಬರಿಗೆ ರುಚಿಸದೇ ಇರಬಹುದು. ಅಂತಹುದರಲ್ಲಿ ನಮ್ಮ ಆಚರಣೆಗಳು ಮೂಕಜೀವಿಗಳಿಗೆ ರುಚಿಸಲು ಸಾಧ್ಯವೇ? ತಮಗಾಗುವ ಕಿರಿಕಿರಿಯನ್ನು ಅವು ತಡೆದುಕೊಳ್ಳಬಲ್ಲವೇ?

ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ತಿರುಪತಿ ಕಾಲ್ತುಳಿತ: ಹೊಣೆ ಯಾರು?

ತಿರುಪತಿ ವೆಂಕಟರಮಣಸ್ವಾಮಿ ದೇವಾಲಯದಲ್ಲಿ, 'ವೈಕುಂಠ ದ್ವಾರ ದರ್ಶನ'ದ ಟೋಕನ್ ಪಡೆದುಕೊಳ್ಳುವಾಗ ಉಂಟಾದ ಕಾಲ್ತುಳಿತದಲ್ಲಿ 6 ಮಂದಿ ಭಕ್ತರು ಮೃತಪಟ್ಟು, 12 ಮಂದಿ ಗಾಯಗೊಂಡಿರುವ ಸುದ್ದಿ ವರದಿಯಾಗಿದೆ (ಪ್ರ.ವಾ., ಜ. 9). ಈ ಗಡಿಬಿಡಿಯ ಹಿಂದೆ, ಜನಸಾಮಾನ್ಯರಲ್ಲಿ ಇಲ್ಲವಾಗಿರುವ ವಿಚಾರಪ್ರಜ್ಞೆ, ಆಡಳಿತದ ನೊಗ ಹೊತ್ತವರಲ್ಲೂ ಕಾಣದಾದ ವೈಚಾರಿಕತೆ, ದೇವಸ್ಥಾನದ ಆಡಳಿತ ಮಂಡಳಿಗೆ ಇರಬೇಕಾಗಿದ್ದ ಭಕ್ತರ ಬಗೆಗಿನ ಕಾಳಜಿ ಕಾಣೆಯಾಗಿದೆ ಎನಿಸುತ್ತದೆ.

ಕೊರೊನಾ ಕಾಲಘಟ್ಟದಲ್ಲಿ ಗುಡಿ, ಚರ್ಚು, ಮಸೀದಿ ಎಲ್ಲವುಗಳ ಬಾಗಿಲು ಮುಚ್ಚಿದ್ದ ಸತ್ಯ ನಮ್ಮ ಮುಂದಿದೆ. ಹೀಗಿರುವಾಗ, ಇಂತಹ ದಿನವೇ ವೈಕುಂಠದ ದ್ವಾರ ತೆರೆಯುತ್ತದೆ ಎಂಬ ನಂಬಿಕೆಯಲ್ಲಿ ಉಂಟಾಗುವ ಇಂತಹ ಸಾವುಗಳ ಹೊಣೆಯನ್ನು ಯಾರು ಹೊರಬೇಕು? ಪ್ರಪಂಚದಲ್ಲಿ ಆರ್ಥಿಕವಾಗಿ ಮುಂದುವರಿದ ರಾಷ್ಟ್ರಗಳ ಜೊತೆಗೆ ಬಡ ರಾಷ್ಟ್ರಗಳೂ ಇವೆ. ಭಾರತದಲ್ಲಿ ಆರ್ಥಿಕ ಶ್ರೀಮಂತಿಕೆ ಇಲ್ಲದಿದ್ದರೂ ದಾರ್ಶನಿಕ ಪ್ರಜ್ಞೆ ಇದೆ ಎನ್ನುತ್ತಾರೆ. ಇಂತಹ ಪ್ರಜ್ಞೆ ಕೆಲವರಲ್ಲಿ ಮಾತ್ರ ಇದ್ದರೆ ಸಾಲದು, ಅದು ಆಡಳಿತದ ಚುಕ್ಕಾಣಿ ಹಿಡಿದವರ ಮೂಲಕ ಜನಸಾಮಾನ್ಯರನ್ನೂ ಮುಟ್ಟಬೇಕು. ಮುಂದಾಲೋಚನೆ ಇಲ್ಲದೆ ಮುಗ್ಧರ ಸಾವಿಗೆ ಕಾರಣರಾದವರ ವಿರುದ್ಧ ಸರ್ಕಾರ ನಿರ್ದಾಕ್ಷಿಣ್ಯವಾಗಿ ಕಾನೂನು ಕ್ರಮ ಕೈಗೊಳ್ಳಬೇಕು.

ತಾ.ಸಿ.ತಿಮ್ಮಯ್ಯ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕುಲಪತಿ, ಬೋಧಕ ಸಿಬ್ಬಂದಿ ನೇಮಕಾತಿ, ಪದೋನ್ನತಿ ಸಂಬಂಧದ ಯುಜಿಸಿ ಕರಡು ನಿಯಮಾವಳಿ ಸರಿಯೇ?

ರಾಜ್ಯಗಳ ಹಕ್ಕು ಮೊಟಕು ಶಿಕ್ಷಣಕ್ಕೆ ಅಪಾಯಕಾರಿ

• ಕಿರಣ್ ಎಂ. ಗಾಜನೂರು

ಪ್ರತಿಯೊಂದು ರಾಜ್ಯವೂ ಅದರದ್ದೇ ಆದ ಭಾಷೆ ಮತ್ತು ವೈವಿಧ್ಯಮಯ ಸಂಸ್ಕೃತಿ ಹೊಂದಿದೆ. ಶಿಕ್ಷಣ ಎನ್ನುವುದು ಆಯಾ ಭಾಷೆ ಮತ್ತು ಸಂಸ್ಕೃತಿಯ ಹಿನ್ನೆಲೆಯಲ್ಲಿಯೇ ಒದಗಿಸಬೇಕಾದ ವಿವೇಕವಾಗಿರುವುದರಿಂದ ವಿಶ್ವವಿದ್ಯಾಲಯಗಳ ಶೈಕ್ಷಣಿಕ ನಾಯಕತ್ವಕ್ಕೆ ಸೂಕ್ತ ವ್ಯಕ್ತಿಯನ್ನು ಆಯ್ಕೆ ಮಾಡುವ ಅಧಿಕಾರ ರಾಜ್ಯಗಳಿಗೆ ಇರಬೇಕಿರುವುದು ತಾರ್ಕಿಕವಾಗಿ ಸರಿಯಾದ ನಡೆ

ಪ್ರಜಾವಾಣಿ ಚರ್ಚೆ

ಉನ್ನತ ಶಿಕ್ಷಣದಲ್ಲಿ ಪರಿವರ್ತನೆ ತರುವ ಮತ್ತು ಕನಿಷ್ಠ ಗುಣಮಟ್ಟವನ್ನು ಖಾತರಿಪಡಿಸುವ ಉದ್ದೇಶದಿಂದ ವಿಶ್ವವಿದ್ಯಾಲಯ ಅನುದಾನ ಆಯೋಗವು (ಯುಜಿಸಿ) ಹೊಸ ನಿಯಮಾವಳಿ ರೂಪಿಸಿ ಕರಡು ಪ್ರಕಟಿಸಿದೆ. ಈ ಕರಡಿನ ಮೊದಲ ಭಾಗದಲ್ಲಿ, ವಿಶ್ವವಿದ್ಯಾಲಯ ಮತ್ತು ಕಾಲೇಜುಗಳ ಭೋದಕ ಸಿಬ್ಬಂದಿ ನೇಮಕ ಹಾಗೂ ಬಡ್ತಿಯ ಕುರಿತ 2018ರ ನಿಯಮಗಳಲ್ಲಿ ಹಲವಾರು ಬದಲಾವಣೆಗಳನ್ನು ಸೂಚಿಸಿದೆ. ಅದರಲ್ಲಿಯೂ ಬಡ್ತಿಯ ಕುರಿತಂತೆ ಹೊಸ ನಿಯಮಗಳನ್ನು ಪರಿಚಯಿಸಲಾಗಿದೆ. ಭಾರತದಲ್ಲಿನ ಉನ್ನತ ಶಿಕ್ಷಣ ಹಂತದಲ್ಲಿನ ಬೋಧನೆ ಮತ್ತು ಸಂಶೋಧನೆಯ ಗುಣಮಟ್ಟ ಕುಸಿಯುತ್ತಿದೆ ಎಂಬ ನಿರಂತರ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಈಗ ತರಲು ಉದ್ದೇಶಿಸಿರುವ ಕೆಲವು ಹೊಸ ನಿಯಮಗಳು, ಆದರಲ್ಲಿಯೂ ಬಡ್ತಿಯ ಕುರಿತ ನಿಬಂಧನೆಗಳು ಸ್ವಾಗತಾರ್ಹವಾಗಿವೆ.

ಆದರೆ, ಈ ಕರಡಿನ 10ನೇ ನಿಯಮದಲ್ಲಿ ವಿವಿಗಳ ಕುಲಪತಿಗಳ ನೇಮಕಾತಿಗೆ ಸಂಬಂಧಿಸಿದಂತೆ ಹಲವು ಬದಲಾವಣೆಗಳನ್ನು ತರುವ ದಿಕ್ಕಿನಲ್ಲಿ ಕೆಲವು ಅಂಶಗಳನ್ನು ಒಕ್ಕೂಟ ಸರ್ಕಾರ ಪ್ರಸ್ತಾಪಿಸಿದೆ. ಆ ನಿಯಮಗಳ ಪ್ರಕಾರ, ಇನ್ನು ಮುಂದೆ ಕುಲಪತಿಗಳ ನೇಮಕದಲ್ಲಿ ರಾಜ್ಯಪಾಲರ ತಿರ್ಮಾನವೇ ನಿರ್ಣಾಯಕವಾಗಲಿದೆ ಮತ್ತು ಬೋಧನೆಯ ಅನುಭವ ಇಲ್ಲದ 'ಖಾಸಗಿ ಉದ್ದಿಮೆಯ ಅನುಭವಿ ವ್ಯಕ್ತಿಯೂ' ಕುಲಪತಿ ಹುದ್ದೆಗೆ ಅರ್ಜಿ ಸಲ್ಲಿಸುವ ಅವಕಾಶವೂ ಇದೆ.

ಯುಜಿಸಿ ರೂಪಿಸಿರುವ ಕರಡು ನಿಯಮಾವಳಿಯಲ್ಲಿರುವ ಈ ಅಂಶಗಳು ರಾಜಕೀಯ ಚರ್ಚೆಗೆ ನಾಂದಿ ಹಾಡಿವೆ. ತಮಿಳುನಾಡು, ಕೇರಳ ಮತ್ತು ಕರ್ನಾಟಕ ಸೇರಿದಂತೆ ಹಲವು ರಾಜ್ಯಗಳು, 'ಈ ಪ್ರಸ್ತಾವ ನಾವು ಒಪ್ಪಿಕೊಂಡಿರುವ 'ಸಾಂವಿಧಾನಿಕ ಒಕ್ಕೂಟ ವ್ಯವಸ್ಥೆಗೆ ಮಾರಕ' ಮತ್ತು 'ಉನ್ನತ ಶಿಕ್ಷಣದ ಸಂಪೂರ್ಣ ಖಾಸಗೀಕರಣಕ್ಕೆ ಇದು ಮೊದಲ ಹೆಜ್ಜೆಯಾಗಲಿದೆ' ಎಂಬ ವಿಮರ್ಶೆಗಳನ್ನು ಮುಂದಿಟ್ಟಿವೆ. ಈ ರಾಜ್ಯಗಳ ಮುಖ್ಯಮಂತ್ರಿಗಳೇ ಕರಡು ನಿಯಮಾವಳಿ ವಿರೋಧಿಸಿ ಹೇಳಿಕೆಗಳನ್ನು ನೀಡಿದ್ದಾರೆ.

ರಾಜ್ಯಗಳ ಈ ವಿಮರ್ಶೆಯಲ್ಲಿ ಅರ್ಥವಿದೆ. ಏಕೆಂದರೆ, ಆರಂಭದಲ್ಲಿ ಶಿಕ್ಷಣ ರಾಜ್ಯ ಪಟ್ಟಿಯಲ್ಲಿತ್ತು. ಅಂದರೆ, ಶಿಕ್ಷಣದ ಕುರಿತು ನೀತಿ ನಿಯಮಗಳನ್ನು ರೂಪಿಸುವ ಸಂಪೂರ್ಣ ಅಧಿಕಾರ ರಾಜ್ಯಗಳಿಗೆ ಇತ್ತು. ಅಭಿವೃದ್ಧಿ ಹೊಂದುತ್ತಿರುವ ದೇಶದಲ್ಲಿ ಇಡೀ ದೇಶಕ್ಕೆ ಮಾರ್ಗದರ್ಶನ ನೀಡುವ ಶೈಕ್ಷಣಿಕ ಚೌಕಟ್ಟಿನ ಅಗತ್ಯವಿದೆ ಎಂಬ ಚರ್ಚೆಗಳ ಕಾರಣ 1976ರಲ್ಲಿ ಸಂವಿಧಾನಕ್ಕೆ 42ನೇ ತಿದ್ದುಪಡಿಯನ್ನು ತರುವ ಮೂಲಕ ಶಿಕ್ಷಣವನ್ನು ಸಮವರ್ತಿ ಪಟ್ಟಿಗೆ ಸೇರಿಸಲಾಯಿತು. ಆ ಮೂಲಕ ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದಂತೆ ಮಾರ್ಗದರ್ಶಿ ಸೂತ್ರಗಳನ್ನು ರೂಪಿಸುವ ಹೊಣೆಗಾರಿಕೆ ಒಕ್ಕೂಟ ಸರ್ಕಾರಕ್ಕೆ ದಕ್ಕಿತು.

ಹೀಗೆ, ಸಾಂವಿಧಾನಿಕವಾಗಿಯೇ ದಕ್ಕಿದ ಮಾರ್ಗದರ್ಶಿ ಸೂತ್ರ ನೀಡುವ ಅವಕಾಶವನ್ನು ಒಕ್ಕೂಟ ಸರ್ಕಾರ ಹೇಗೆ ಚಲಾಯಿಸಬೇಕು ಎಂಬ ಕುರಿತು ಚರ್ಚೆ, ಸಂಕಥನಗಳು ನಡೆದು, ಹಲವಾರು ಸಮಿತಿಗಳು ತಮ್ಮ ಅಭಿಪ್ರಾಯ ನೀಡಿವೆ. ಆ ಎಲ್ಲಾ ಸಂಕಥನಗಳ ತಿರುಳನ್ನು ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು–2005ರಲ್ಲಿ ಪ್ರಸ್ತಾಪಿಸಲಾಗಿದೆ. ದೇಶದ ಶೈಕ್ಷಣಿಕ ವ್ಯವಸ್ಥೆಯ ಕುರಿತ ಒಕ್ಕೂಟ ಸರ್ಕಾರದ ಮಾರ್ಗದರ್ಶಿ ಸೂತ್ರ ಈ ದೇಶದ ವೈವಿಧ್ಯ, ಪ್ರಜಾಪ್ರಭುತ್ವ, ಜಾತ್ಯತೀತ ಮೌಲ್ಯಗಳು, ಸಾಮಾಜಿಕ ನ್ಯಾಯ ಮತ್ತು ಬಹಳ ಮುಖ್ಯವಾಗಿ ವೈಜ್ಞಾನಿಕ ಮನೋಧರ್ಮವನ್ನು ಉದ್ದೀಪಿಸುವ ಉದ್ದೇಶವನ್ನು ಹೊಂದಿರಬೇಕು ಎಂಬ ಸಂಗತಿಗಳನ್ನು ಈ ಚೌಕಟ್ಟು ಸ್ಪಷ್ಟವಾಗಿ ಸೂಚಿಸಿದೆ.

ಆದರೆ, ಯುಜಿಸಿ ರೂಪಿಸಿರುವ ಕುಲಪತಿಗಳ ನೇಮಕಾತಿ ಕರಡು ನಿಯಮಗಳು ಉನ್ನತ ಶಿಕ್ಷಣದ ಕುರಿತ ರಾಜ್ಯಗಳ ಮೂಲಭೂತ ಹಕ್ಕನ್ನು ಮೊಟಕುಗೊಳಿಸುವ ಗುಣ ಹೊಂದಿವೆ. ಏಕೆಂದರೆ, ಪ್ರತಿಯೊಂದು ರಾಜ್ಯವೂ ಅದರದ್ದೇ ಆದ ಭಾಷೆ ಮತ್ತು ವೈವಿಧ್ಯಮಯ ಸಂಸ್ಕೃತಿ ಹೊಂದಿದೆ ಮತ್ತು ಶಿಕ್ಷಣ ಎನ್ನುವುದು ಆಯಾ ಭಾಷೆ ಮತ್ತು ಸಂಸ್ಕೃತಿಯ ಹಿನ್ನೆಲೆಯಲ್ಲಿಯೇ ಒದಗಿಸಬೇಕಾದ ವಿವೇಕವಾಗಿರುವುದರಿಂದ ವಿಶ್ವವಿದ್ಯಾಲಯಗಳ ಶೈಕ್ಷಣಿಕ ನಾಯಕತ್ವಕ್ಕೆ ಸೂಕ್ತ ವ್ಯಕ್ತಿಯನ್ನು ಆಯ್ಕೆ ಮಾಡುವ ಅಧಿಕಾರ ರಾಜ್ಯಗಳಿಗೆ ಇರಬೇಕಿರುವುದು ತಾರ್ಕಿಕವಾಗಿ ಸರಿಯಾದ ನಡೆ. ಆಗ ಮಾತ್ರವೇ ಆಯಾ ರಾಜ್ಯಗಳ ವೈವಿಧ್ಯಗಳನ್ನು ಅರಿತ ಶಿಕ್ಷಣ ತಜ್ಞರು ಇಂದಿನ ಯುವಜನರಿಗೆ ಅಗತ್ಯವಾದ ಶೈಕ್ಷಣಿಕ ನಾಯಕತ್ವವನ್ನು ಒದಗಿಸಬಲ್ಲರು.

ಮೇಲಾಗಿ, ಭಾರತದಂತಹ ಸಾಂಪ್ರದಾಯಿಕ ದೇಶದಲ್ಲಿ ನಾವು ಸಾಂವಿಧಾನಿಕವಾಗಿ ಒಪ್ಪಿಕೊಂಡ ಪ್ರಜಾಪ್ರಭುತ್ವ ವ್ಯವಸ್ಥೆ ಜಾರಿಗೊಳಿಸಲು ಮತ್ತು ಅದನ್ನು ಸಾಮಾಜೀಕರಣಗೊಳಿಸಲು 'ಶಿಕ್ಷಣವೇ ಪ್ರಮುಖ ಸಾಧನ'. ನಾವು ಆ ಸಾಧನವನ್ನು ಪ್ರಜಾಪ್ರಭುತ್ವದ ಮೌಲ್ಯಗಳಿಗೆ ಅನುಗುಣವಾಗಿ ರೂಪಿಸದೇ ಒಕ್ಕೂಟ ಸರ್ಕಾರದ ಮರ್ಜಿಗೆ ಬಿಟ್ಟರೆ ಪ್ರಜಾಪ್ರಭುತ್ವ ಮತ್ತು ಶಿಕ್ಷಣ ಎರಡೂ ಪರಿಭಾಷೆಗಳು ಪರಸ್ಪರ ಸಂಬಂಧವಿಲ್ಲದ ಸ್ಥಿತಿಗೆ ಬಂದು ನಿಲ್ಲುತ್ತವೆ. ಈ ಅರ್ಥದಲ್ಲಿ ಒಕ್ಕೂಟ ಸರ್ಕಾರ ಮಾರ್ಗದರ್ಶಿ ಸೂತ್ರ ನೀಡುತ್ತದೆ. ಆದರೆ, ಉನ್ನತ ಶಿಕ್ಷಣದ ಕುರಿತ ಅಂತಿಮ ತಿರ್ಮಾನ ತೆಗೆದುಕೊಳ್ಳುವ ಅಧಿಕಾರ ರಾಜ್ಯಗಳಿಗೇ ಇರಬೇಕಿರುವುದು ಪ್ರಜಾತಾಂತ್ರಿಕ ನಡೆ. ಶಿಕ್ಷಣದ ಮೇಲಿನ ರಾಜ್ಯಗಳ ಹಕ್ಕನ್ನೇ ಮೊಟಕುಗೊಳಿಸುವ ಕ್ರಮ ಶಿಕ್ಷಣದ ಭವಿಷ್ಯದ ದೃಷ್ಟಿಯಿಂದ ತೀರಾ ಅಪಾಯಕಾರಿ ಅನ್ನಿಸುತ್ತಿದೆ.

ಇದರ ಜೊತೆಗೆ, ಶೈಕ್ಷಣಿಕ ಹಿನ್ನೆಲೆ ಇಲ್ಲದ ವ್ಯಕ್ತಿ ಕೂಡ ಕುಲಪತಿ ಹುದ್ದೆಗೆ ಅರ್ಹ ಎಂಬ ಅಂಶವೂ ಚರ್ಚಾರ್ಹವಾಗಿದೆ. ಏಕೆಂದರೆ, ಸಾಮಾನ್ಯ ಆಡಳಿತ ಮತ್ತು ಶೈಕ್ಷಣಿಕ ಆಡಳಿತ ಸ್ವರೂಪದಲ್ಲಿ ಬಹಳ ವ್ಯತ್ಯಾಸಗಳಿವೆ. ವಿಶ್ವವಿದ್ಯಾಲಯಕ್ಕೆ ಬೇಕಿರುವುದು ಶೈಕ್ಷಣಿಕ ಆಡಳಿತ. ಅದು ದಕ್ಕುವುದು ಶೈಕ್ಷಣಿಕ ಕ್ಷೇತ್ರದಲ್ಲಿನ ಹಲವಾರು ವರ್ಷಗಳ ಅನುಭವದಿಂದ ಮಾತ್ರ. ಅಂದರೆ, ಒಬ್ಬ ವ್ಯಕ್ತಿ ಸಹಾಯಕ ಪ್ರಾಧ್ಯಾಪಕನಿಂದ ಪ್ರಾಧ್ಯಾಪಕನಾಗುವ ತನಕ ವಿಭಾಗದ ಮುಖ್ಯಸ್ಥ, ಡೀನ್, ಪರೀಕ್ಷಾ ಮಂಡಳಿಯ ಸದಸ್ಯ, ಪಠ್ಯರಚನಾ ಸಮಿತಿಗಳ ಸದಸ್ಯ/ಅಧ್ಯಕ್ಷ, ಸಿಂಡಿಕೇಟ್ ಮತ್ತು ಅಕಾಡೆಮಿಕ್ ಕೌನ್ಸಿಲ್ ಸದಸ್ಯ ಇತ್ಯಾದಿ ಹಲವಾರು ಹುದ್ದೆಗಳನ್ನು ನಿರ್ವಹಿಸಿರುತ್ತಾನೆ. ಎಲ್ಲಕ್ಕಿಂತ ಹೆಚ್ಚಾಗಿ ಕನಿಷ್ಠ 25ರಿಂದ 30 ವರ್ಷಗಳ ಬೋಧನೆ ಮತ್ತು ಸಂಶೋಧನಾ ಅನುಭವ ಇರುತ್ತದೆ. ಈ ಅನುಭವ ಅವನಿಗೆ ಶೈಕ್ಷಣಿಕ ನಾಯಕತ್ವಕ್ಕೆ ಬೇಕಾದ ಪೂರಕ ವ್ಯಕ್ತಿತ್ವ ಒದಗಿಸುತ್ತದೆ. ಆ ಕಾರಣಕ್ಕೆ ಪ್ರಾಧ್ಯಾಪಕರಾಗಿ ಕನಿಷ್ಠ ಹತ್ತು ವರ್ಷಗಳ ಅನುಭವ ಇರುವವರಿಗೆ ಮಾತ್ರ ಕುಲಪತಿ ಹುದ್ದೆ ನೀಡಲಾಗುತ್ತಿದೆ.

ಈಗ, ಈ ಯಾವ ಅನುಭವವೂ ಇಲ್ಲದ ವ್ಯಕ್ತಿಯನ್ನು ವಿಶ್ವವಿದ್ಯಾಲಯದ ಕುಲಪತಿಯಾಗಿ ನೇಮಿಸಿದರೆ ಆ ವ್ಯಕ್ತಿಯಿಂದ ವಿಶ್ವವಿದ್ಯಾಲಯಕ್ಕೆ ಬೇಕಾದ ಶೈಕ್ಷಣಿಕ ನಾಯಕತ್ವ ಮತ್ತು ಶೈಕ್ಷಣಿಕ ಆಡಳಿತ ಎರಡನ್ನೂ ನೀಡಲು ಸಾಧ್ಯವಾಗುವುದಿಲ್ಲ. ಏಕೆಂದರೆ, ಆತನಿಗೆ ಆ ಹಿನ್ನೆಲೆಯೇ ಇರುವುದಿಲ್ಲ. ಒಕ್ಕೂಟ ಸರ್ಕಾರ ವಾದಿಸುತ್ತಿರುವಂತೆ ಕೈಗಾರಿಕಾ ಹಿನ್ನೆಲೆಯ ವ್ಯಕ್ತಿಗಳು ವಿಶ್ವವಿದ್ಯಾಲಯಕ್ಕೆ ಬೇಕು ಎನ್ನುವ ವಾದಕ್ಕೆ ಪೂರಕವಾಗಿ, ಆ ಕ್ಷೇತ್ರದಿಂದ ಪ್ರೊಫೆಸರ್‌ಗಳ ನೇಮಕಕ್ಕೆ ಈಗಾಗಲೇ ಒಕ್ಕೂಟ ಸರ್ಕಾರ ಅನುಮತಿಯನ್ನು ನೀಡಿದೆ. ಆ ಅವಕಾಶದ ಮೂಲಕ ಅಂಥವರ ಸೇವೆಯನ್ನು ಬಳಸಿಕೊಳ್ಳಬಹುದು. ಅದಕ್ಕೆ ಯಾವ ಅಡೆತಡೆಯೂ ಇಲ್ಲ. ಆದರೆ, ಶೈಕ್ಷಣಿಕ ಅನುಭವ ಇಲ್ಲದ ವ್ಯಕ್ತಿಗಳು ವಿಶ್ವವಿದ್ಯಾಲಯಗಳ ಶೈಕ್ಷಣಿಕ ನಾಯಕತ್ವಕ್ಕೆ ನೇಮಕವಾದರೆ ಅದೊಂದು ಅಪಕ್ವ ನಡೆಯಾಗುತ್ತದೆ.

ವ್ಯಕ್ತಿಗಳು ಲಾಬಿಗಳ ಮೂಲಕ, ಹಣ ಕೊಡುವ ಮೂಲಕ ನಕಲಿ ವಿವಿಗಳಿಂದ ಪಡೆಯುತ್ತಿರುವ ಗೌರವ ಡಾಕ್ಟರೇಟ್‌ಗಳು ಚರ್ಚೆಯಲ್ಲಿರುವಂತೆ, ಮುಂದೆ ಇದೇ ವ್ಯಕ್ತಿಗಳು ವಿಶ್ವವಿದ್ಯಾಲಯಗಳ ಕುಲಪತಿ ಹುದ್ದೆಗಳಿಗೆ ನಡೆಸುವ ಪೈಪೋಟಿ ಕೂಡ ಸಾರ್ವಜನಿಕ ಚರ್ಚೆಯಾದರೆ ಆಶ್ಚರ್ಯವಿಲ್ಲ.

ಲೇಖಕ: ಕರ್ನಾಟಕ ಕೇಂದ್ರೀಯ ವಿವಿಯಲ್ಲಿ ಸಹಾಯಕ ಪ್ರಾಧ್ಯಾಪಕ

ಅಧ್ಯಾಪಕರ ಅರ್ಹತೆ ಬದಲು ಸ್ವಾಗತಾರ್ಹ

• ರಾಜಾರಾಮ ಹೆಗಡೆ

ವಿಷಯ ಜ್ಞಾನವನ್ನೇ ಗಮನದಲ್ಲಿಟ್ಟುಕೊಂಡರೂ ಇಂದಿನ ವಾಸ್ತವದಲ್ಲಿ ಒಂದು ವಿಷಯದ ಕುರಿತು ಪರಿಣತಿ ಸಾಧಿಸುವ ಮತ್ತು ಸಮರ್ಥವಾಗಿ ಕಲಿಸುವ ಅರ್ಹತೆಗೂ, ಒಂದು ಘೋಷಿತ ಪದವಿಗೂ ಇರುವ ಸಂಬಂಧ ಸಡಿಲವಾಗಿದೆ ಎಂಬುದು ಸತ್ಯ. ಈ ದೃಷ್ಟಿಯಿಂದ ಉನ್ನತ ಶಿಕ್ಷಣ ಸಂಸ್ಥೆಗಳ ಅಧ್ಯಾಪಕರ ಅರ್ಹತೆಗೆ ಸಂಬಂಧಿಸಿದಂತೆ ಬದಲಾವಣೆಗಳನ್ನು ತರುವ ವಿಚಾರ ಸ್ವಾಗತಾರ್ಹ

ಜನವರಿ 7ರಂದು ಕೇಂದ್ರ ಶಿಕ್ಷಣ ಸಚಿವರು ಬಿಡುಗಡೆ ಮಾಡಿದ 2025ರ ವಿಶ್ವವಿದ್ಯಾಲಯ ಅನುದಾನ ಆಯೋಗದ ಕರಡು ನಿಯಮಾವಳಿಯನ್ನು 'ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳ ಶಿಕ್ಷಕರು ಮತ್ತು ಶೈಕ್ಷಣಿಕ ಸಿಬ್ಬಂದಿ ನೇಮಕಾತಿ ಹಾಗೂ ಪದೋನ್ನತಿಯ ಕನಿಷ್ಠ ಅರ್ಹತೆಗಳು ಮತ್ತು ಉನ್ನತ ಶಿಕ್ಷಣದ ಗುಣಮಟ್ಟವನ್ನು ಕಾಪಾಡಿಕೊಳ್ಳುವ ಕ್ರಮಗಳು' ಎಂಬುದಾಗಿ ಕರೆಯಲಾಗಿದೆ.

ಕರಡು ನಿಯಮಾವಳಿಯು ಈ ಮುಂದಿನ ವಿಷಯಗಳಿಗೆ ಸಂಬಂಧಿಸಿದಂತೆ ಬದಲಾವಣೆಗಳನ್ನು ಪ್ರಸ್ತಾಪಿಸುತ್ತದೆ: 1) ಅಧ್ಯಾಪಕ ಹುದ್ದೆಗೆ ಬೇಕಾದ ಶೈಕ್ಷಣಿಕ ಅರ್ಹತೆಗಳಲ್ಲಿ ಹೆಚ್ಚು ಸಾಧ್ಯತೆಗಳಿಗೆ ಅವಕಾಶ. 2) ನೇಮಕಾತಿ ಅಥವಾ ಪದೋನ್ನತಿಯ ಸಂದರ್ಭದಲ್ಲಿ ಶೈಕ್ಷಣಿಕ ಸಾಧನೆ ಸೂಚ್ಯಂಕದ (ಎಪಿಐ) ಭಾಗವಾಗಿ ಅಂಕಗಳನ್ನು ಪರಿಗಣಿಸುವುದು ಬಿಟ್ಟು ಅಭ್ಯರ್ಥಿಯ ಪಾಠಕ್ರಮ, ಸಂಶೋಧನೆ ಇತ್ಯಾದಿಗಳ ಸಮಗ್ರ ಮೌಲ್ಯಮಾಪನ ನಡೆಸುವುದು. 3) ಕ್ರೀಡೆ, ಕಲೆ/ ಸಾಂಪ್ರದಾಯಿಕ ಕ್ಷೇತ್ರಗಳ ಸಾಧಕರನ್ನು, ಪರಿಣತರನ್ನು, ಅಂಗವಿಕಲರನ್ನು ವಿವಿಗಳಲ್ಲಿ ನೇಮಕ ಮಾಡುವ ಹೆಚ್ಚಿನ ಸಾಧ್ಯತೆಗಳನ್ನು ಸೃಷ್ಟಿಸುವುದು. 4) ಕೈಗಾರಿಕೆ, ಸಾರ್ವಜನಿಕ ಆಡಳಿತ ಹಾಗೂ ನೀತಿ ನಿರೂಪಣೆ ಕ್ಷೇತ್ರಗಳ ಪರಿಣತರನ್ನು ಕೂಡ ಕುಲಪತಿಗಳನ್ನಾಗಿ ನೇಮಿಸುವ ಸಾಧ್ಯತೆ. 5) ನೇಮಕಾತಿಗಳ ಹಾಗೂ ಪದೋನ್ನತಿಗಳ ಪ್ರಕ್ರಿಯೆಯ ಕುರಿತು ಪಾರದರ್ಶಕತೆಯನ್ನು ಹೆಚ್ಚಿಸುವುದು. 6) ಶೈಕ್ಷಣಿಕ ಪ್ರಕಟಣೆಗಳು ಹಾಗೂ ಪದವಿ ಶಿಕ್ಷಣಗಳಲ್ಲಿ ಭಾರತೀಯ ಭಾಷೆಗಳ ಬಳಕೆಗೆ ಉತ್ತೇಜನ ನೀಡುವುದು.

ನೇಮಕಾತಿಯಲ್ಲಿ ಈಗ ಇರುವ ನಿಯಮದ ಪ್ರಕಾರ, ಅಧ್ಯಾಪಕ ಹುದ್ದೆಗೆ ಅರ್ಜಿ ಹಾಕುವ ಒಬ್ಬ ಅಭ್ಯರ್ಥಿಯು ಸಂಬಂಧಪಟ್ಟ ವಿಷಯದಲ್ಲಿ ಸ್ನಾತಕೋತ್ತರ ಪದವಿಯನ್ನು ಹೊಂದಿರಬೇಕು. ಆದರೆ, ಇದೇ ಯುಜಿಸಿ ನಿಯಮಾವಳಿಯೇ ಅಂತರ್‌ಶಿಸ್ತೀಯ ಅಧ್ಯಯನ ಹಾಗೂ ಸಂಶೋಧನೆಗಳನ್ನು ವಿಶ್ವವಿದ್ಯಾಲಯಗಳು ಪ್ರೋತ್ಸಾಹಿಸಬೇಕು ಎಂದು ಕೂಡ ನಿರ್ದೇಶಿಸುತ್ತದೆ. ಪದವಿ ಪಾಠಕ್ರಮದಲ್ಲಿ ಕೂಡ ಅಂತರ್‌ಶಿಸ್ತೀಯ ವಿಷಯಗಳನ್ನು ಒಳಗೊಳ್ಳುವುದನ್ನು ಇದೇ ಯುಜಿಸಿ ನಿಯಮಾವಳಿ ಹೆಚ್ಚು ಮೌಲಿಕ ಎಂಬುದಾಗಿ ನೋಡುತ್ತದೆ.

ಕಳೆದೆರಡು ದಶಕಗಳಿಂದೀಚೆಗೆ ಹೊಸ ಹೊಸ ಸೂಕ್ಷ್ಮ ಅಧ್ಯಯನ ಕ್ಷೇತ್ರಗಳು, ಅಂತರ್‌ಶಿಸ್ತೀಯ ಅಧ್ಯಯನ ಕ್ರೇತ್ರಗಳು ವಿವಿಗಳಲ್ಲಿ ಪದವಿ ವಿಷಯಗಳಾಗುತ್ತಿವೆ ಹಾಗೂ ಉದ್ಯೋಗದ ಪ್ರಸ್ತುತತೆಯನ್ನು ಹೆಚ್ಚಿಸಿಕೊಳ್ಳುತ್ತಿವೆ. ಇಂಥ ವಾಸ್ತವದಲ್ಲಿ ನೇಮಕಾತಿಗೆ ಪದವಿಯನ್ನೇ ಪ್ರಧಾನವಾಗಿ ತೆಗೆದುಕೊಳ್ಳುವುದು ವಿದ್ಯಾರ್ಥಿಗಳಿಗೂ, ಶಿಕ್ಷಕರಿಗೂ, ಸಂಶೋಧಕರಿಗೂ, ಆಡಳಿತಗಾರರಿಗೂ ಕಠಿಣ ಪ್ರಾಯೋಗಿಕ ಸಮಸ್ಯೆಗಳನ್ನೂ, ಸವಾಲುಗಳನ್ನೂ ಒಡ್ಡುತ್ತಿವೆ. ಇಂಥ ಸಮಸ್ಯೆಗಳಿಗೆ ಹೊರತಾಗಿ ವಿಷಯ ಜ್ಞಾನವನ್ನೇ ಗಮನದಲ್ಲಿಟ್ಟುಕೊಂಡರೂ ಇಂದಿನ ವಾಸ್ತವದಲ್ಲಿ ಒಂದು ವಿಷಯದ ಕುರಿತು ಪರಿಣತಿ ಸಾಧಿಸುವ ಮತ್ತು ಸಮರ್ಥವಾಗಿ ಕಲಿಸುವ ಅರ್ಹತೆಗೂ, ಒಂದು ಘೋಷಿತ ಪದವಿಗೂ ಇರುವ ಸಂಬಂಧ ಸಡಿಲವಾಗಿದೆ ಎಂಬುದು ಸತ್ಯ. ಈ ದೃಷ್ಟಿಯಿಂದ ಅಧ್ಯಾಪಕರ ಅರ್ಹತೆಗೆ ಸಂಬಂಧಿಸಿದಂತೆ ಬದಲಾವಣೆಗಳನ್ನು ತರುವ ವಿಚಾರ ಸ್ವಾಗತಾರ್ಹ.

ಶೈಕ್ಷಣಿಕ ಪ್ರಕಟಣೆ ಹಾಗೂ ಪದವಿ ಶಿಕ್ಷಣದಲ್ಲಿ ಭಾರತೀಯ ಭಾಷೆಗಳಿಗೆ ಉತ್ತೇಜನ ನೀಡುವ ವಿಚಾರವು ಬಹುಶಃ ಕರಡು ನಿಯಮಾವಳಿಯಲ್ಲೇ ಅತ್ಯಂತ ಪ್ರಸ್ತುತವಾದುದು. ಪ್ರಾದೇಶಿಕ ಭಾಷೆಯಲ್ಲಿ ಸಂಶೋಧನಾ ಪ್ರಕಟಣೆ ನಡೆಸುವುದನ್ನು ಈಗಿರುವ ನಿಯಮಾವಳಿ ಉತ್ತೇಜಿಸುವುದಿಲ್ಲ. ಯುಜಿಸಿ ನಿಯಮಗಳು ತಿಳಿಸುವ ಅಂತರರಾಷ್ಟ್ರೀಯ ಪ್ರಮಾಣ ಲಕ್ಷಣಗಳಿರುವ ಸಂಶೋಧನಾ ಪತ್ರಿಕೆಗಳ ವ್ಯವಸ್ಥೆಯು ಪ್ರಾದೇಶಿಕ ಭಾಷೆಯಲ್ಲಿ ಬೆಳೆದುಬಂದಿಲ್ಲ. ಪ್ರಾದೇಶಿಕ ಭಾಷೆಗಳಲ್ಲಿ ಅವು ಬೆಳೆಯುವ ಸಾಧ್ಯತೆಗಳು ಸದ್ಯದಲ್ಲಂತೂ ಕಾಣಿಸುವುದಿಲ್ಲ.

ಹಾಗಾಗಿ, ಭಾರತೀಯ ಸಂಶೋಧಕರಿಗೆ ಇಂಗ್ಲಿಷ್ ಭಾಷೆಯಲ್ಲೇ ಪ್ರಕಟಿಸುವ ಅನಿವಾರ್ಯವಿದೆ. ಆದರೆ, ಯುಜಿಸಿಯ ಈ ನಿಲುವು ಪ್ರಾಯೋಗಿಕವಾಗಿ ಸಫಲವಾಗಿಲ್ಲ. ಅದಕ್ಕೆ ಕಾರಣ ಎಂದರೆ, ಭಾರತದಲ್ಲಿನ ವಿವಿಧ ರಾಜ್ಯಗಳ ವಿವಿಗಳು ಅನಧಿಕೃತವಾಗಿ ಪ್ರಾದೇಶಿಕ ಭಾಷಾ ಮಾಧ್ಯಮಕ್ಕೆ ಹೊರಳಿಕೊಂಡು ಕೆಲವು ದಶಕಗಳೇ ಕಳೆದಿವೆ. ಎಷ್ಟರ ಮಟ್ಟಿಗೆ ಎಂದರೆ, ಇಂದು ಈ ವಿವಿಗಳ ಸಮಾಜ ವಿಜ್ಞಾನ ವಿಷಯಗಳ ಪದವಿಗಳಲ್ಲಿ ಹಾಗೂ ಪಿಎಚ್.ಡಿ ಸಂಶೋಧನೆಗಳಲ್ಲಿ ಇಂಗ್ಲಿಷ್ ಅನ್ನು ಆಯ್ಕೆ ಮಾಡಿಕೊಳ್ಳುವವರು ಬಹುತೇಕ ಕಾಣೆಯಾಗಿದ್ದಾರೆ. ಇಂಥವರಿಗೆ ಕಲಿಸುವವರು ಹಾಗೂ ಮಾರ್ಗದರ್ಶಕರೂ ಪ್ರಾದೇಶಿಕ ಭಾಷೆಯಲ್ಲಿ ಪರಿಣತರಿರಬೇಕಾಗುತ್ತದೆ. ಇಂಥ ವಾಸ್ತವದಲ್ಲಿ ಇಂಗ್ಲಿಷ್ ಪ್ರಕಟಣೆಗಳನ್ನು ಒತ್ತಾಯಿಸಿದ ಪರಿಣಾಮ ಖೊಟ್ಟಿ ಸಂಶೋಧನಾ ಪತ್ರಿಕೆಗಳೂ, ಪ್ರಕಟಣೆಗಳೂ ಜಾಲತಾಣಗಳಲ್ಲಿ ತುಂಬಿಹೋಗಿವೆ.

ಇದು ಪ್ರಾಯೋಗಿಕ ಸಮಸ್ಯೆಯಾದರೆ, ಇಲ್ಲಿ ಜ್ಞಾನಕ್ಕೆ ಸಂಬಂಧಿಸಿದ ಇನ್ನೊಂದು ಸಮಸ್ಯೆಯೂ ಇದೆ. ಭಾರತೀಯ ವಿಶ್ವವಿದ್ಯಾಲಯಗಳಲ್ಲಿ ಯುಜಿಸಿ ನಿಯಮಾವಳಿಗೂ ಹೊರತಾಗಿ ಪ್ರಾದೇಶಿಕ ಭಾಷೆಗಳಲ್ಲಿ ಏಕೆ ಶಿಕ್ಷಣವು ಚಾಲ್ತಿಯಲ್ಲಿ ಬಂದಿತೆಂದರೆ, ಸಂವಹನದ ಸಮಸ್ಯೆಯನ್ನು ಪರಿಹರಿಸುವುದಕ್ಕೆ. ಈಗಂತೂ ಪ್ರಾದೇಶಿಕ ಭಾಷೆಯಲ್ಲಿ ಶಿಕ್ಷಣ ನೀಡದಿದ್ದರೆ, ಸಂಶೋಧನೆಗೆ ಅವಕಾಶ ನೀಡದಿದ್ದರೆ ಪ್ರಾದೇಶಿಕ ಸಂದರ್ಭದಲ್ಲಿ ವಿಶ್ವವಿದ್ಯಾಲಯ ಶಿಕ್ಷಣವೇ ನಿಂತುಹೋಗುವ ಪರಿಸ್ಥಿತಿ ನಿರ್ಮಾಣವಾಗಿದೆ. ಹಾಗಾಗಿ, ಪ್ರಾದೇಶಿಕ ಭಾಷೆಯಲ್ಲಿ ಸಂಶೋಧನೆಯನ್ನು ಒಪ್ಪಿಕೊಳ್ಳಬಹುದಾದರೆ, ಇಂಗ್ಲಿಷ್‌ನಲ್ಲೇ ಅದರ ಪ್ರಕಟಣೆ ನಡೆಸಬೇಕೆಂದು ನಿರ್ಬಂಧಿಸುವುದು ಒಂದು ಪ್ರಾಯೋಗಿಕ ದೋಷವಾಗುತ್ತದೆ. ಹೀಗೆ, ಯುಜಿಸಿಯ ನಿಯಮಗಳು ಅರ್ಥ ಕಳೆದುಕೊಂಡು ಹಲವು ದಶಕಗಳೇ ಕಳೆದಿವೆ. ಮತ್ತೆ, ಇಂಗ್ಲಿಷ್ ಭಾಷೆಯಲ್ಲಿ ಬರೆದರೆ ಮಾತ್ರ ಉತ್ತಮ ಸಂಶೋಧನೆಯಾಗುತ್ತದೆ, ಪ್ರಾದೇಶಿಕ ಭಾಷೆಯಲ್ಲಿ ಬರೆದದ್ದು ಕಡಿಮೆ ಗುಣಮಟ್ಟದ್ದು ಎಂದು ಸಮೀಕರಿಸುವುದು ಮೂರ್ಖತನದ ಪರಮಾವಧಿ ಎನ್ನುವುದರಲ್ಲಿ ಸಂದೇಹವಿಲ್ಲ. ಈ ದಿಸೆಯಲ್ಲಿ 2025ರ ಕರಡು ನಿಯಮಾವಳಿಯು ಸ್ವಾಗತಾರ್ಹವಾಗಿದೆ.

ಇನ್ನುಳಿದಂತೆ, ನಿಯಮಾವಳಿಯಲ್ಲಿನ ಇತರೆ ಬದಲಾವಣೆಗಳು, ಅವುಗಳನ್ನು ಜಾರಿಗೊಳಿಸಬೇಕಾದ ಕ್ರಮಗಳನ್ನು ಹೇಗೆ ರಚಿಸಿ ಪ್ರಯೋಗಕ್ಕೆ ತರುತ್ತವೆ ಎಂಬುದರ ಮೇಲೆ ನಿಂತಿವೆ. ನೇಮಕಾತಿಯ ಪ್ರಕ್ರಿಯೆಯನ್ನು ಪಾರದರ್ಶಕಗೊಳಿಸುವುದು ಎಂದರೇನು? ಕೈಗಾರಿಕೆ ಮುಂತಾದ ಇತರ ಕ್ಷೇತ್ರಗಳಲ್ಲಿನ ಜನರು ನಮಗೆ ಬೇಕಾದ ಪರಿಣತರು ಎಂಬುದಾಗಿ ನಿಷ್ಕರ್ಷಿಸುವ ವಿಧಾನಗಳು ಯಾವುವು? ಶಿಕ್ಷಕರ ಸಮಗ್ರ ಮೌಲ್ಯಮಾಪನವನ್ನು ಮಾಡಲು ಸೂತ್ರಗಳು ಯಾವುವು? ಭಾರತೀಯ ಉನ್ನತ ಶಿಕ್ಷಣ ವ್ಯವಸ್ಥೆಯ ಸಂದರ್ಭದಲ್ಲಿ ನಾವು ಕಂಡುಕೊಂಡ ಸತ್ಯವೆಂದರೆ, ನಿಯಮಗಳು ಹೆಚ್ಚಾಗುವುದು ವ್ಯವಸ್ಥೆ ಹಳ್ಳ ಹಿಡಿಯುತ್ತಿರುವ ಸೂಚನೆ ಅಷ್ಟೆ. ಏಕೆಂದರೆ, ನಮ್ಮ ಅನುಭವ ತಿಳಿಸುವಂತೆ ನಿಯಮಗಳು ಹೆಚ್ಚಾದಷ್ಟೂ ಈ ವ್ಯವಸ್ಥೆ ಸುಧಾರಿಸುವ ಬದಲು ಇದರೊಳಗೆ ಕೆಲಸ ಮಾಡುವ ಸಾಧ್ಯತೆಗಳೇ ಮೊಟಕಾಗುತ್ತವೆ ಹಾಗೂ ಭ್ರಷ್ಟ ಆಚರಣೆಗಳು ಹೆಚ್ಚಾಗುತ್ತಿವೆ.

ಐವತ್ತು ವರ್ಷಗಳ ಹಿಂದೆ ಈ ನಿಯಮಗಳಲ್ಲಿ ಹೆಚ್ಚಿನವು ಇರಲೇ ಇಲ್ಲ. ಆದರೆ, ಅಂದಿನ ಶಿಕ್ಷಣ ಮತ್ತು ಸಂಶೋಧನೆಯ ಗುಣಮಟ್ಟವು ಈಗ ವಿಶ್ವವಿದ್ಯಾಲಯಗಳಿಂದಲೇ ಕಾಲ್ಕಿತ್ತಿರುವಂತಿದೆ. ಕುಲಪತಿಗಳನ್ನು ಹಾಗೂ ಅಧ್ಯಾಪಕರನ್ನು ಯಾರೇ ನೇಮಕ ಮಾಡಲಿ, ನೇಮಕಾತಿಗಳಲ್ಲಿ ಹಣದ ಥೈಲಿಯೇ ನಿರ್ಣಾಯಕವಾಗುವುದಾದರೆ ಅಥವಾ ಶೈಕ್ಷಣಿಕೇತರ ಹಿತಾಸಕ್ತಿಗಳೇ ನಿರ್ಣಾಯಕವಾಗುವುದಾದರೆ, ಎಷ್ಟು ನಿಯಮಗಳಿದ್ದರೂ ಏನೂ ವ್ಯತ್ಯಾಸವಾಗುವುದಿಲ್ಲ. ನಿಯಮಗಳ ಉದ್ದೇಶವನ್ನು ತಮ್ಮ ಸ್ವಾರ್ಥಕ್ಕಾಗಿ ಗಾಳಿಗೆ ತೂರುವವರೇ ತುಂಬಿದ ಲೋಕದಲ್ಲಿ ಕೇವಲ ನಿಯಮಗಳ ಬದಲಾವಣೆ ಯಾವ ರೋಮಾಂಚನವನ್ನೂ ಹುಟ್ಟಿಸಲಾರದು. ಇಂಥ ಸಂದರ್ಭದಲ್ಲಿ ಯುಜಿಸಿಯಂಥ ಸಂಸ್ಥೆಗಳು ನಿಯಮಾವಳಿಗಿಂತ ಅದರ ಅನುಷ್ಠಾನದ ಕ್ರಮಗಳು ಮತ್ತು ಅವುಗಳ ಪ್ರಾಯೋಗಿಕ ಸಮಸ್ಯೆಗಳ ಕುರಿತು ಹೆಚ್ಚು ಗಂಭೀರವಾಗಿ ಚಿಂತಿಸುವ ಅಗತ್ಯವಿದೆ.

ಲೇಖಕ: ಕುವೆಂಪು ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ

ಭಿನ್ನ ಕಳ್ಳರ ಲೋಕದಲ್ಲೊಂದು ಸುತ್ತು

ನಾವು ನೋಡಿದ ಸಿನಿಮಾ

ಕನ್ನಡ ಸಿನಿಮಾಗಳಲ್ಲಿ ಹೊಸ ರೀತಿಯ ಕಥೆಗಳು ಇರುವುದಿಲ್ಲ. ಭಿನ್ನ ಬಗೆಯ ಸಿನಿಮಾಗಳನ್ನು ಮಾಡಲು ನಿರ್ದೇಶಕರು ಯತ್ನಿಸುವುದಿಲ್ಲ ಎನ್ನುವ ಟೀಕೆಗಳು ಆಗಾಗ ಕೇಳಿಬರುತ್ತಲೇ ಇರುತ್ತವೆ. ಅದಕ್ಕೆ ಅಪವಾದ ಎನ್ನುವಂತೆ ಆಗೀಗ ಒಂದೊಂದು ಸಿನಿಮಾ ಬರುತ್ತದೆ. ಆ ಸಾಲಿಗೆ ಸೇರಿಸಬಹುದಾದ ಚಿತ್ರ 'ನಿಮ್ಮ ವಸ್ತುಗಳಿಗೆ ನೀವೇ ಜವಾಬ್ದಾರರು'. ಚಿತ್ರದ ಶೀರ್ಷಿಕೆಯೇ ಹೇಳುವಂತೆ ವಸ್ತುಗಳನ್ನು ಕದಿಯುವ, ಯಾಮಾರಿಸುವ ಕಳ್ಳರ ಕಥೆಯಿದು. ನಮ್ಮ ನಡುವೆ ನಿತ್ಯವೂ ನಡೆಯುವ ನೈಜ ಘಟನೆಗಳನ್ನೇ ಚಿತ್ರವಾಗಿಸಿದ್ದಾರೆ ನಿರ್ದೇಶಕ. ಆದರೆ ಸಿನಿಮಾ ಶಕ್ತಿ ಇರುವುದು ಚಿತ್ರಕಥೆಯಲ್ಲಿ.

ಕಥೆ ಹೇಳಿಕೊಂಡು ಹೋದ ರೀತಿ ಭಿನ್ನವಾಗಿದೆ. ದೃಶ್ಯಗಳನ್ನು ಕಟ್ಟಿಕೊಟ್ಟ ಬಗೆ ಹೊಸತಾಗಿದೆ.

ಚಿತ್ರದಲ್ಲಿ ಮೂರು ಬಗೆಯ ಕಳ್ಳರ ಕಥೆಯಿದೆ. ಮೂರು ಕಥೆಗಳೂ ಭಿನ್ನವಾಗಿವೆ. ಮೊದಲಾರ್ಧದಲ್ಲಿ ಎರಡು ಕಥೆಗಳಿದ್ದರೆ, ದ್ವಿತೀಯಾರ್ಧದಲ್ಲೊಂದು ಕಥೆ ನಡೆಯುತ್ತದೆ. ಕಳ್ಳತನದ ಹೊರತಾಗಿ ಈ ಮೂರು ಕಥೆಗಳಿಗೆ ಪರಸ್ಪರ ಸಂಬಂಧವಿಲ್ಲ. ಇನಾಯತ್ ವಾಟರ್ ಪ್ಯೂರಿಫೈಯರ್ ಕಂಪನಿಯಲ್ಲಿ ಕೆಲಸ ಮಾಡುವಾತ. ಕಷ್ಟದ ಜೀವನ ನಡೆಸುತ್ತಿರುವ ಆತನಿಗೆ ಅಚನಾಕ್ಕಾಗಿ ಒಂದು ಬೈಕ್ ಸಿಗುತ್ತದೆ. ಅಲ್ಲಿಂದ ಅವನಿಗೆ ಬೈಕ್ ಕದಿಯುವ ಗೀಳು ಶುರುವಾಗುತ್ತದೆ. ಇದೊಂದು ರೀತಿಯ ಕಾಯಿಲೆ. ಹಲವರಿಗೆ ಈ ರೀತಿಯ ಕಾಯಿಲೆ ಇರುತ್ತದೆ ಎಂಬ ಸ್ಪಷ್ಟನೆಯನ್ನು ನಿರ್ದೇಶಕ ಚಿತ್ರದಲ್ಲಿಯೇ ನೀಡುತ್ತಾರೆ. ಇನಾಯತ್ ಪಾತ್ರದಲ್ಲಿ ಪ್ರಸನ್ನ ವಿ.ಶೆಟ್ಟಿ ಸಹಜವಾದ ನಟನೆಯೊಂದಿಗೆ ಇಷ್ಟವಾಗುತ್ತಾರೆ. ಸಹಜ ಹಾಸ್ಯದೊಂದಿಗೆ ಈ ಕಥೆಯನ್ನು ಹೇಳಿಕೊಂಡು ಹೋದ ರೀತಿಯೂ ಚೆನ್ನಾಗಿದೆ.

ಮನೆಯಲ್ಲಿ ಬೇಕಾದಷ್ಟು ಶ್ರೀಮಂತಿಕೆ ಇರುತ್ತದೆ. ಆದರೂ ಕದಿಯುವ ಚಾಳಿ. ಅದರಲ್ಲಿಯೇ ಸುಖ ಕಾಣುವ ಖಯಾಲಿ. ಅಂಥ ಒಂದು ಜೋಡಿಯದ್ದು ಎರಡನೇ ಕಥೆ. ಇಡೀ ಸಿನಿಮಾದಲ್ಲಿ ಒಂದಷ್ಟು ಮನರಂಜನೆ ನೀಡುವ ಕಥೆಯಿದು. ಚಿತ್ರಕಥೆ, ದೃಶ್ಯಗಳನ್ನು ಕಟ್ಟಿಕೊಟ್ಟ ರೀತಿ ಸೊಗಸಾಗಿದೆ. ಮಧುಸೂದನ್ ಮತ್ತು ಅಪೂರ್ವ ಜೋಡಿಯಾಗಿ ಇಷ್ಟವಾಗುತ್ತಾರೆ. ಈ ಎರಡೂ ಕಥೆಗಳಲ್ಲಿ ಪಾತ್ರ ಪರಿಚಯಕ್ಕೆಂದು ಮಾಡಿದ ಹಾಡುಗಳು ಸಿನಿಮಾದ ವೇಗವನ್ನು ನಿಧಾನವಾಗಿಸುತ್ತವೆ. ಮೊದಲಾರ್ಧದಲ್ಲಿ 15 ನಿಮಿಷ ಅವಧಿ ತಗ್ಗಿಸುವ ಅವಕಾಶ ನಿರ್ದೇಶಕರಿಗಿತ್ತು.

ದ್ವಿತೀಯಾರ್ಧದಲ್ಲಿ ಹನಿಟ್ರ್ಯಾಪ್ ಮಾಡುವ ತಂಡದ ನಾಯಕನಾಗಿ ದಿಲೀಪ್ ರಾಜ್ ಪಾತ್ರಕ್ಕೆ ನ್ಯಾಯ ಒದಗಿಸಿದ್ದಾರೆ. ಆದರೆ ಈ ಕಥೆ ಬಹಳ ಗಂಭೀರವಾಗಿ, ಸಾಕಷ್ಟು ಕಡೆ ತಾಳ್ಮೆ ಪರೀಕ್ಷಿಸುತ್ತದೆ. ಮೊದಲಿಗೆ 'ಇಲ್ಲಿ ಏನೋ ನಡೆಯುತ್ತಿದೆ' ಎಂಬ ಕುತೂಹಲ ಮೂಡಿದರೂ ಚಿತ್ರ ಸಾಗಿದಂತೆ ಆ ಕುತೂಹಲ ಉಳಿದುಕೊಳ್ಳುವುದಿಲ್ಲ. ಕಂಟೆಂಟ್ ಸಿನಿಮಾಗಳಲ್ಲಿ ಲಾಜಿಕ್ ಬಹಳ ಮುಖ್ಯ. ಆದರೆ ನಿರ್ದೇಶಕ ಚಿತ್ರದುದ್ದಕ್ಕೂ ಲಾಜಿಕ್‌ಗೆ ಹೆಚ್ಚು ಮಹತ್ವ ನೀಡಿದಂತೆ ಕಾಣಿಸುವುದಿಲ್ಲ. 'ಸದಾ' ಎಂಬ ಒಂದು ಹಾಡು ಮಾತ್ರ ತುಸು ಕಾಲ ನೆನಪಿನಲ್ಲಿ ಉಳಿಯುತ್ತದೆ. ಕೆಲವೆಡೆ ಹಿನ್ನೆಲೆ ಸಂಗೀತದ ಅಬ್ಬರ ಹೆಚ್ಚಾದಂತೆ ಭಾಸವಾಗುತ್ತದೆ. ಒಟ್ಟಾರೆ ಚಿತ್ರದ ಅವಧಿಯನ್ನು 30 ನಿಮಿಷ ತಗ್ಗಿಸಿದ್ದರೆ ಅಥವಾ ದ್ವಿತೀಯಾರ್ಧದಲ್ಲಿಯೂ ಎರಡು ಭಿನ್ನ ಕಥೆಗಳನ್ನು ಆಯ್ದುಕೊಂಡಿದ್ದರೆ ಸಿನಿಮಾದ ವೇಗ ಇನ್ನಷ್ಟು ಹೆಚ್ಚುತ್ತಿತ್ತು.

ವಿನಾಯಕ ಕೆ.ಎಸ್.

ನಿಮ್ಮ ವಸ್ತುಗಳಿಗೆ ನೀವೇ ಜವಾಬ್ದಾರರು

- ನಿರ್ಮಾಣ: ಪಿಕ್ಚರ್ ಶಾಪ್
- ನಿರ್ದೇಶನ: ಕೇಶವ ಮೂರ್ತಿ
- ತಾರಾಗಣ: ದಿಲೀಪ್ ರಾಜ್, ಶಿಲ್ಪಾ ಮಂಜುನಾಥ್, ಪ್ರಸನ್ನ ವಿ.ಶೆಟ್ಟಿ ಮತ್ತಿತರರು



ಪದಬಂಧ 5919

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

3.ಈತ ಪರಿಚಯವೇ ಇಲ್ಲದವನು (5)
6.ನಡುವೆ ರಂಪವಿದ್ದಾಗ ಕಂಡದ್ದು ಈ ಸಂಪ್ರದಾಯ! (4)
7.ಪತಿಯ ಬಳಿ ಸರ ಕೇಳಿದ್ದು ಸ್ವಂತ ಹೆಂಡತಿಯಲ್ಲ! (4)
9.ಮರ ಅಥವಾ ಲೋಹದ ಪೀಠ (2)
10.ಪ್ರತಿಭೆಯಲ್ಲಿರುವ ಕಾಂತಿ (2)
11.ಈತ ಬುದ್ಧಿಯಿಲ್ಲದವನು (4)
14.ತರಂಗವನ್ನು ನೋಡುತ್ತಿರುವವನು ತುಂಬಾ ನಿಪುಣ! (4)
15.ಆಗ ತಾನೆ ಮದುವೆಯಾದ ಗಂಡ ಹೆಂಡತಿ (5)

ಮೇಲಿಂದ ಕೆಳಕ್ಕೆ

1.ಶಾಪವನ್ನು ಹೊಂದಿದವನು (4)
2.ಅಪ್ಪನ ಈ ರೂಪ ತುಸು ವಿರಳ (4)
4.ಪದವಿಯನ್ನು ಕಳೆದುಕೊಳ್ಳುವಿಕೆ (4)
5.ಬರಿದಾಗದ ಬತ್ತಳಿಕೆ (4)
8.ಸತಿಗೆ ಸಿಕ್ಕಿರುವ ಮೋಕ್ಷ (3)
10.ಜನ ಕೊನೆಗಿದ್ದಾಗಲೇ ಬಿರುಗಾಳಿ! (4)
11.ಮನದ ವಿಷಯ ಪ್ರಸ್ತಾಪ ಮಾಡಿದ್ದಕ್ಕೇ ಈ ದ್ವೇಷ (4)
12.ನವ ದೇವಾಲಯದ ಸಭಾಮಂಟಪವಿದು (4)
13.ಒಂದು ಗ್ರಂಥದ ಬೇರೆ ಬೇರೆ ಪ್ರತಿಗಳಲ್ಲಿ ಕಂಡು ಬರುವ ಬೇರೆ ಬೇರೆ ಪಾಠ (4)



5918ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:

2.ಕವಾಡಿಗ 4.ಪ್ರಹಾರ
5.ಜಾಡು 6.ಜಾಗ
7.ಭ್ರೂಣಹತ್ಯೆ 9.ಪ್ರತಿ
10.ಜ್ಞಾನ 11.ಪರಿಸರ
13.ತದಿ 14.ಯಿಬಾ
15.ಹಲಗೆ 16.ಹಜಾಮತಿ

ಮೇಲಿಂದ ಕೆಳಕ್ಕೆ:

1.ಸಹಾನುಭೂತಿ 2.ಕಡುದಾಹ
3.ಗಜಗಮನ 8.ಣದ್ದುಸ
9.ಪ್ರಸೂತಿಗೃಹ 10.ಜ್ಞಾತಿಕಲಹ
12.ರಿಯಾಯಿತಿ

ಸುಡೊಕು 6304

	7			6			5	
2					5		6	
		1	2			4		9
		2		5			4	
4					6			
	1		3		2		7	
	2			1		8		
1			8					4
	8			3	7		1	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6303 ಸುಡೊಕು

7	9	2	5	3	1	4	6	8
4	1	5	6	8	7	3	2	9
6	8	3	4	9	2	1	5	7
5	3	4	7	1	9	6	8	2
1	2	6	8	5	4	7	9	3
8	7	9	2	6	3	5	4	1
9	4	7	3	2	5	8	1	6
3	6	1	9	4	8	2	7	5
2	5	8	1	7	6	9	3	4

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

ಶನಿವಾರ ಜನವರಿ 11, 2025

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಪೌಷ ಶುಕ್ಲ ದ್ವಾದಶಿ ಗಂ. 08-22 ನಂತರ ತ್ರಯೋದಶಿ ಗಂ. 30-34 ನಕ್ಷತ್ರ: ರೋಹಿಣಿ ಗಂ. 12-29 ಯೋಗ: ಶುಕ್ಲ (ಶುಕ್ರ) ಗಂ. 11-48 ಕರಣ: ಬಾಲವ ಗಂ. 08-22, ಧನು ಮಾಸದ 26 ನೇ ದಿನ, ಮಳೆನಕ್ಷತ್ರ: ಉತ್ತರಾಷಾಢ 1.

ರಾಹುಕಾಲ: ಬೆಳಿಗ್ಗೆ 09-00 – 10-30

ಸೂರ್ಯೋದಯ: 07-00 **ಸೂರ್ಯಾಸ್ತ:** 06-17

ಮುಸ್ಲಿಂ ದಿನಾಂಕ: 10 ರಜಬ್, **ಅದೃಷ್ಟ ಸಂಖ್ಯೆ:** 3, 8

ಮೇಷ: ಕೆಲ ವಿಷಯ ಹಾಗೂ ಅದರಿಂದಾಗುವ ಲಾಭ ನಷ್ಟಗಳ ಬಗ್ಗೆ ಪುನರಾವಲೋಕನ ಅಗತ್ಯ. ದಾಂಪತ್ಯದಲ್ಲಿ ಅನ್ಯೋನ್ಯತೆಯು ವೃದ್ಧಿಯಾಗಲಿದೆ. ಆಹಾರ ಧಾನ್ಯಗಳ ಬೆಳೆಗಾರರಿಗೆ ಹೆಚ್ಚಿನ ಲಾಭವಿರುವುದು.

ವೃಷಭ: ಲೋಹದ ಕೈಗಾರಿಕೆ ಹೊಂದಿರುವವರಿಗೆ ಅಧಿಕ ಶ್ರಮದಿಂದ ಹೆಚ್ಚಿನ ಅಭಿವೃದ್ಧಿ ಮತ್ತು ಲಾಭ ದೊರೆಯಲಿದೆ. ಅನಾರೋಗ್ಯದ ಪರಿಸ್ಥಿತಿಯಲ್ಲಿ ಸ್ವಂತ ನಿರ್ಧಾರದಿಂದ ಔಷಧಿಯನ್ನು ತೆಗೆದುಕೊಳ್ಳಬೇಡಿ.

ಮಿಥುನ: ನಿಮ್ಮ ಮನೆಯವರ ವಿಚಾರದಲ್ಲಿ ಈ ದಿನ ದೃಢವಾದ ಮನೋಭಾವ ತಾಳಬೇಕಾಗುವುದು. ಖಾದಿ ಉದ್ಯಮದವರಿಗೆ ಸರಕಾರದಿಂದ ಸಹಾಯ – ಸೌಲಭ್ಯ ದೊರೆಯಲಿದೆ. ಗೋ ಸೇವೆಯಿಂದ ನೆಮ್ಮದಿ ಸಂಪಾದಿಸಬಹುದು.

ಕರ್ಕಾಟಕ: ನಿಮ್ಮ ಮಾತುಗಳಿಗೆ ವಿರುದ್ಧವಾದ ಮಾತನ್ನು ನಿಮ್ಮ ಮಕ್ಕಳಿಂದ ಕೇಳಬೇಕಾಗಲಿದೆ. ಆಧ್ಯಾತ್ಮಿಕ ಚಿಂತನೆಗಳಿಂದ ಮಾನಸಿಕ ನೆಮ್ಮದಿ ಪ್ರಾಪ್ತಿ. ನಾಯಕತ್ವ ಹೊಂದಿರುವ ನಿಮಗೆ ಜನಬಲ ಕಡಿಮೆಯಾಗಲಿದೆ.

ಸಿಂಹ: ಮನೆ ನವೀಕರಣಗೊಳಿಸಲು ಮುಂದಾದ ವ್ಯಕ್ತಿಗಳು ವಾಸ್ತುಶಾಸ್ತ್ರದ ಬಗ್ಗೆ ಗಮನಹರಿಸಿ. ಅನಿರೀಕ್ಷಿತವಾಗಿ ಸಂಘ-ಸಂಸ್ಥೆಗಳಲ್ಲಿ ಜವಾಬ್ದಾರಿಯುತ ಸ್ಥಾನ ವಹಿಸಿಕೊಳ್ಳಬೇಕಾಗುವುದು. ನಂಬಿಕೆಗಳನ್ನು ಪ್ರತಿಪಾದಿಸಲು ಅಂಜಿಕೆ ಬೇಡ.

ಕನ್ಯಾ: ಸ್ನೇಹಿತರಲ್ಲಿ ಕಳೆದುಕೊಂಡ ವಿಶ್ವಾಸವನ್ನು ಪುನಃ ಪಡೆದುಕೊಳ್ಳುವ ಅವಕಾಶವಿರಲಿದೆ. ಕಣ್ಣಿನ ದೃಷ್ಟಿ ಸರಿಪಡಿಸಿಕೊಳ್ಳಲು ಶಸ್ತ್ರ ಚಿಕಿತ್ಸೆಯನ್ನು ಮಾಡಿಸಿಕೊಳ್ಳಬೇಕಾಗುವುದು. ಅವಿವಾಹಿತರಿಗೆ ಕಂಕಣ ಯೋಗವಿದೆ.

ತುಲಾ: ಸಂಸ್ಥೆಯಲ್ಲಿ ಸಲಹೆಗಾರರಾಗಿ ಇರುವವರಿಗೆ ಕೆಲವು ಅನಿವಾರ್ಯಗಳು ಎದುರಾಗಲಿವೆ. ಸಹೋದರರ ಬಗೆಗಿನ ತಪ್ಪು ಕಲ್ಪನೆ ಹೋಗಲಾಡಿಸಿಕೊಳ್ಳುವ ಪ್ರಯತ್ನಮಾಡಿ. ಮಕ್ಕಳನ್ನು ದೂರಮಾಡಿಕೊಳ್ಳಬೇಡಿ.

ವೃಶ್ಚಿಕ: ಕೆಲಸದಲ್ಲಿ ದೈಹಿಕವಾಗಿ ಹಾಗೂ ಆರ್ಥಿಕವಾಗಿ ಸೋದರರು ಹೆಚ್ಚಿನ ನೆರವು ನೀಡಲಿದ್ದಾರೆ. ಗೃಹ ನಿರ್ಮಾಣದ ಚಿಂತನೆ ಕಾರ್ಯಗತವಾಗಲಿದೆ. ಮಕ್ಕಳ ಆರೋಗ್ಯದಲ್ಲಿ ವ್ಯತ್ಯಾಸ ಉಂಟಾಗುವುದು.

ಧನು: ಅತಿಯಾದ ಆಲಸ್ಯವು ನಿಮ್ಮ ಕೆಲಸಕ್ಕೆ ಅಡ್ಡಿಯನ್ನು ಮಾಡಲಿದೆ ಹಾಗೂ ಅದರ ಪರಿಣಾಮವಾಗಿ ಜನರ ಅಪಹಾಸ್ಯಕ್ಕೆ ಕಾರಣರಾಗುವಿರಿ. ಬಹಳ ದಿನಗಳಿಂದ ನಿರೀಕ್ಷಿಸುತ್ತಿದ್ದಂತಹ ಹಣ ಇಂದು ನಿಮ್ಮ ಕೈ ಸೇರಲಿದೆ.

ಮಕರ: ಅತಿಯಾಗಿ ಒತ್ತಡ ತರುವ ಕೆಲಸಗಳಿಂದ ದೂರ ಉಳಿಯುವ ಯೋಚನೆ ಒಳ್ಳೆಯದು. ಯಾವುದೇ ಕಟ್ಟುಪಾಡಿಗೆ, ಒತ್ತಡಗಳಿಗೆ ಸಿಲುಕಬೇಡಿ. ನ್ಯಾಯಾಲಯದ ಕೆಲಸಗಳಲ್ಲಿ ಮುನ್ನಡೆಗಾಗಿ ಓಡಾಟ ನಡೆಸಬೇಕಾಗುತ್ತದೆ.

ಕುಂಭ: ವಸ್ತುಗಳ ಖರೀದಿಯಲ್ಲಿ ವಿಶೇಷ ರಿಯಾಯಿತಿಗಳಿಂದ ಹೆಚ್ಚಿನ ಲಾಭ ಪಡೆಯುವಿರಿ. ಬಹುದಿನಗಳ ನಿರೀಕ್ಷೆಯ ವಿಚಾರಗಳನ್ನು ಕಾರ್ಯರೂಪಕ್ಕೆ ತರಲು ಪ್ರಯತ್ನಿಸಿದಲ್ಲಿ ಲಾಭ ಕಾಣುವಿರಿ.

ಮೀನ: ಸಾಹಸ ಕೃತ್ಯಗಳನ್ನು ಕೈಗೊಳ್ಳುವ ಮನೋಭಿಲಾಷೆ ಕಾಡಲಿದ್ದು, ಅದಕ್ಕೆ ಪ್ರಯತ್ನಿಸುವಿರಿ. ಸಂಜೆಯ ಸಮಯವನ್ನು ಪ್ರೀತಿ ಪಾತ್ರರೊಂದಿಗೆ ಕಳೆಯಲು ಬಯಸುವಿರಿ. ಮಾಟ-ಮಂತ್ರದ ಭೀತಿ ಎದುರಾಗಲಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	23,526
ಇಂದಿನ ಅಂತ್ಯ	23,431
▼	95
ದಿನದ ಕನಿಷ್ಠ	23,596

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹525
12 ಕ್ಕೆ	₹70
ಮೈಸೂರು	
100ಕ್ಕೆ	₹525

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹488-675
ದ್ವಿತಳಿ (ಬಿ.ವಿ)	₹333-763

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹185
ಆರ್‌ಎಸ್‌ಎಸ್-5	₹180
ಗುಡ್ ಲಾಟ್	₹174

(ಪ್ರತಿ ಕೆ.ಜಿಗೆ)

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹9000-14300
ದಾವಣಗೆರೆ	₹11162-11162
ತುರುವೇಕೆರೆ	₹13800-14000

ಮುಂಬೈ ಧಾರಣೆ

ಶೇಂಗಾ

10-01-2025

ಜಾವಾ 70/80(ಹೊಸ)	10500-10600
ಜಾವಾ 80/90(ಹೊಸ)	10000-10100
ದಪ್ಪ ಮಧ್ಯಪ್ರದೇಶ(ಹೊಸ)	8700-8800
ದಪ್ಪ ಗುಜರಾತ್(ಹೊಸ)	9500-9600

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1440 (1440)
ಒಂದು ವಾರದ ಡೆಲಿವರಿ	1435 (1435)
ಪಾಮ್ ವಾರದ ಡೆಲಿವರಿ	1348 (1338)
ಸೂರ್ಯಕಾಂತಿ ಎಣ್ಣೆ ಕಚ್ಚಾ	1275 (1260)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹77,500 (77,400)
ಬೆಳ್ಳಿ ಕೆ.ಜಿ ₹90,000 (89,600)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

16 ನೇ ವರ್ಷದ ಪುಣ್ಯಸ್ಮರಣೆ



ಶ್ರೀ. ವಿ.ಎಸ್. ಮುನಿರೆಡ್ಡಿ
ಸದಾ ನಿಮ್ಮ ಸ್ಮರಣೆಯಲ್ಲಿರುವ
ಪತ್ನಿ ಶ್ರೀಮತಿ ರತ್ನಮ್ಮ
ಮತ್ತು ಮಕ್ಕಳು
ಹಾಗೂ ಕುಟುಂಬ ವರ್ಗದವರು

ಹೂಡಿಕೆದಾರರಿಗೆ ₹12 ಲಕ್ಷ ಕೋಟಿ ನಷ್ಟ

ಮುಂಬೈ (ಪಿಟಿಐ): ಸತತ ಮೂರನೇ ದಿನವಾದ ಶುಕ್ರವಾರವೂ ದೇಶದ ಷೇರುಪೇಟೆಯಲ್ಲಿ ಕರಡಿ ಕುಣಿತ ಮುಂದುವರಿದಿದ್ದು, ಸೂಚ್ಯಂಕಗಳು ಇಳಿಕೆ ಕಂಡಿವೆ.

ಜಾಗತಿಕ ಷೇರುಪೇಟೆಗಳು ಕುಸಿತ ಕಂಡಿವೆ. ಪ್ರಸಕ್ತ ಆರ್ಥಿಕ ವರ್ಷದಲ್ಲಿ ದೇಶದ ಒಟ್ಟು ಆಂತರಿಕ ಉತ್ಪನ್ನದ (ಜಿಡಿಪಿ) ಬೆಳವಣಿಗೆಯು ಇಳಿಕೆಯಾಗಲಿದೆ ಎಂದು ಅಂದಾಜಿಸಲಾಗಿದೆ. ಡಿಸೆಂಬರ್ ತ್ರೈಮಾಸಿಕದಲ್ಲಿ ಕಂಪನಿಗಳ ನಿವ್ವಳ ಲಾಭದಲ್ಲಿ ಕಡಿಮೆಯಾಗಿದೆ. ಇದು ದೇಶೀಯ ಷೇರುಪೇಟೆಯ ಕುಸಿತಕ್ಕೆ ಕಾರಣವಾಗಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ. ಮೂರು ದಿನಗಳಲ್ಲಿ ಹೂಡಿಕೆದಾರರ ₹12 ಲಕ್ಷ ಕೋಟಿ ಸಂಪತ್ತು ಕರಗಿದೆ.

ಸೆನ್ಸೆಕ್ಸ್ 241 ಅಂಶ ಇಳಿಕೆ ಕಂಡು, 77,378 ಅಂಶಗಳಲ್ಲಿ ಸ್ಥಿರಗೊಂಡಿತು. ನಿಫ್ಟಿ 95 ಅಂಶ ಇಳಿಕೆ ಕಂಡು 23,431 ಅಂಶಗಳಲ್ಲಿ ವಹಿವಾಟು ಮುಕ್ತಾಯಗೊಂಡಿತು.

ಇಂಡಸ್ ಇಂಡ್ ಬ್ಯಾಂಕ್, ಎನ್‌ಟಿಪಿಸಿ, ಅಲ್ಟ್ರಾಟೆಕ್ ಸಿಮೆಂಟ್, ಸನ್ ಫಾರ್ಮಾ, ಎಕ್ಸಿಸ್ ಬ್ಯಾಂಕ್, ಎಸ್‌ಬಿಐ, ಟಾಟಾ ಸ್ಟೀಲ್, ಪವರ್ ಗ್ರಿಡ್, ಅದಾನಿ ಪೋರ್ಟ್ಸ್ ಷೇರುಗಳ ಮೌಲ್ಯ ಕಡಿಮೆಯಾಗಿದೆ.

ಟಿಸಿಎಸ್ ಷೇರಿನ ಮೌಲ್ಯದಲ್ಲಿ ಶೇ 6ರಷ್ಟು ಏರಿಕೆಯಾಗಿದೆ.

ಕಚ್ಚಾ ತೈಲದ ಬೆಲೆ ಏರಿಕೆ • ₹86ಕ್ಕೆ ಮುಟ್ಟಿದ ಪ್ರತೀ ಡಾಲರ್ ಮೌಲ್ಯ

ಮತ್ತೆ ಮಂಕಾದ ರೂಪಾಯಿ

ಮುಂಬೈ (ಪಿಟಿಐ): ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಶುಕ್ರವಾರ ನಡೆದ ವಹಿವಾಟಿನಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮತ್ತೆ ಮಂಕಾಯಿತು.

ರೂಪಾಯಿ ಮೌಲ್ಯ 18 ಪೈಸೆ ಕುಸಿದಿದ್ದು, ಮೊದಲ ಬಾರಿಗೆ ಪ್ರತೀ ಡಾಲರ್ ಮೌಲ್ಯವು ₹86.04ಕ್ಕೆ ಮುಟ್ಟಿದೆ.

ದೇಶದ ಈಕ್ವಿಟಿ ಮಾರುಕಟ್ಟೆಯಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರಿಂದ ಬಂಡವಾಳ ಹಿಂಪಡೆಯುವುದು ಮುಂದುವರಿದಿದೆ. ಗುರುವಾರದ ವಹಿವಾಟಿನಲ್ಲಿ ₹7,170 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ಇದರಿಂದ ಡಾಲರ್ ಮೌಲ್ಯ ಬಲಗೊಂಡಿದ್ದು, ಅದರ ಮುಂದೆ ರೂಪಾಯಿಯು ಮಂಡಿಯೂರುವಂತಾಗಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.



ಮತ್ತೊಂದೆಡೆ ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಯು ಏರಿಕೆಯ ಹಾದಿ ಹಿಡಿದಿದೆ. ಬ್ರೆಂಟ್ ಕಚ್ಚಾ ತೈಲದ ಬೆಲೆಯು ಶೇ 2ರಷ್ಟು ಹೆಚ್ಚಳವಾಗಿದ್ದು, ಪ್ರತಿ ಬ್ಯಾರಲ್‌ಗೆ ₹78.43 ಡಾಲರ್ ಆಗಿದೆ. ದೇಶೀಯ ಮಾರುಕಟ್ಟೆಯು ಇಳಿಕೆ ಕಂಡಿರುವುದರಿಂದ ರೂಪಾಯಿಯು ಒತ್ತಡಕ್ಕೆ ಸಿಲುಕಿದೆ ಎಂದು ಹೇಳಿದ್ದಾರೆ.

ಇದೇ 20ರಂದು ಅಮೆರಿಕದ ಅಧ್ಯಕ್ಷರಾಗಿ ಡೊನಾಲ್ಡ್ ಟ್ರಂಪ್ ಅಧಿಕಾರದ ಚುಕ್ಕಾಣಿ ಹಿಡಿಯಲಿದ್ದಾರೆ. ಈಗಾಗಲೇ ಭಾರತ, ಚೀನಾ ಸೇರಿ ವಿದೇಶಿ ಸರಕುಗಳ ಮೇಲೆ ಸುಂಕ ಹೆಚ್ಚಿಸುವುದಾಗಿ ಘೋಷಿಸಿದ್ದಾರೆ. ಇದು ಡಾಲರ್ ಮೌಲ್ಯ ಹೆಚ್ಚಳಕ್ಕೆ ನೆರವಾಗಿದೆ ಎಂದು ತಿಳಿಸಿದ್ದಾರೆ.

ವಹಿವಾಟಿನ ಆರಂಭದಲ್ಲಿ ₹85.88 ಇದ್ದ ರೂಪಾಯಿ ಮೌಲ್ಯವು ದಿನದ ವಹಿವಾಟಿನಲ್ಲಿ ₹85.85ಕ್ಕೆ ತಲುಪಿತ್ತು. ಬಳಿಕ ಅತಿ ಕನಿಷ್ಠ ಮಟ್ಟವಾದ ₹86.04ಕ್ಕೆ ಮುಟ್ಟಿತು.

ಗುರುವಾರದ ವಹಿವಾಟಿನಲ್ಲಿ ರೂಪಾಯಿ ಮೌಲ್ಯವು 5 ಪೈಸೆ ಏರಿಕೆ ಕಂಡಿತ್ತು.

'ಅಮೆರಿಕದ ಬಾಂಡ್ ಗಳಿಕೆಯಲ್ಲಿ ಶೇ 4.69ಕ್ಕೆ ಏರಿಕೆಯಾಗಿದೆ. ದೇಶೀಯ ಷೇರುಪೇಟೆಯಿಂದ ಬಂಡವಾಳ ಹಿಂಪಡೆಯುವ ಹೂಡಿಕೆದಾರರು ಈ ಬಾಂಡ್‌ಗಳಲ್ಲಿ ಹೂಡಿಕೆ ಮಾಡುತ್ತಿದ್ದಾರೆ. ದೇಶದ ಷೇರುಪೇಟೆಯಲ್ಲಿ ಕುಸಿತ ಮುಂದುವರಿದಿದೆ. ಇದರಿಂದ ರೂಪಾಯಿ ಮೌಲ್ಯ ಕುಸಿಯುತ್ತಿದೆ' ಎಂದು ಮಿರೇ ಅಸೆಟ್ ಶೇರ್ಖಾನ್ ಸಂಸ್ಥೆಯ ಸಂಶೋಧನಾ ವಿಶ್ಲೇಷಕ ಅನುಜ್ ಚೌಧರಿ ಹೇಳಿದ್ದಾರೆ.

ವಿನಿಮಯ ದರ

$	ಡಾಲರ್	86.04
£	ಪೌಂಡ್	105.75
€	ಯುರೊ	88.55
¥	ಯೆನ್ (100ಕ್ಕೆ)	54

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ	
ಕೋಕ	20000-27500
ಹೊಸತು	30000-34500
ಹಳತು	45000-49000
ಕಾರ್ಕಳ	
ಹೊಸತು	25000-35500
ಹಳತು	30000-45000
ಕುಮಟ	
ಚಾಲಿ	33099-37805
ಚಿಪ್ಪು	15089-27019
ಕೋಕ	6189-22269
ಫ್ಯಾಕ್ಟರಿ	3089-21669
ಹಳೆಚಾಲಿ	37089-39399
ಹೊಸಚಾಲಿ	26089-30599
ಪುತ್ತೂರು	
ಕೋಕ	20500-27500
ಹೊಸತು	26000-35500
ಹಳತು	32000-49000
ಶಿವಮೊಗ್ಗ	
ಬೆಟ್ಟೆ	44100-56600
ಗೊರಬಲು	18090-30000
ರಾಶಿ	30399-51299
ಸರಕು	40099-87740
ಸಿದ್ದಾಪುರ	
ಬಿಳಿಗೋಟು	24319-28409
ಚಾಲಿ	33199-38609
ಕೋಕ	18319-21019
ಹೊಸಚಾಲಿ	22699-33609
ಕೆಂಪುಗೋಟು	21319-21819
ರಾಶಿ	42029-48799
ತಟ್ಟಿಬೆಟ್ಟೆ	27009-36099
ಶಿರಸಿ	
ಬೆಟ್ಟೆ	27899-41909
ಬಿಳಿಗೋಟು	22709-30411
ಚಾಲಿ	34099-39609
ಕೆಂಪುಗೋಟು	13699-24218
ರಾಶಿ	41029-46298

ಸುಬ್ರಹ್ಮಣ್ಯನ್ ಹೇಳಿಕೆಗೆ ತರಾಟೆ

ಮುಖ್ಯಸ್ಥರಿಗೆ ಮಾನಸಿಕ ಆರೋಗ್ಯ ಸಮಸ್ಯೆ: ದೀಪಿಕಾ ವ್ಯಂಗ್ಯ

ದೀಪಿಕಾ ಪಡುಕೋಣೆ

ನವದೆಹಲಿ (ಪಿಟಿಐ): 'ಉದ್ಯೋಗಿಗಳು ವಾರದಲ್ಲಿ 90 ಗಂಟೆ ದುಡಿಯಬೇಕು' ಎಂದು ಹೇಳಿಕೆ ನೀಡಿರುವ ಎಲ್ ಆ್ಯಂಡ್ ಟಿ ಕಂಪನಿ ಮುಖ್ಯಸ್ಥ ಎಸ್.ಎನ್. ಸುಬ್ರಹ್ಮಣ್ಯನ್ ಅವರನ್ನು ಸಾಮಾಜಿಕ ಜಾಲತಾಣಿಗರು ತರಾಟೆಗೆ ತೆಗೆದುಕೊಂಡಿದ್ದಾರೆ.

ಇದಕ್ಕೆ ಬಾಲಿವುಡ್ ನಟಿ ದೀಪಿಕಾ ಪಡುಕೋಣೆ ಹಾಗೂ ಉದ್ಯಮಿ ಹರ್ಷ ಗೋಯೆಂಕಾ ಕೂಡ ಧ್ವನಿಗೂಡಿಸಿದ್ದಾರೆ.

'ಖಾಸಗಿ ಕಂಪನಿಗಳ ಉನ್ನತ ಸ್ತರದಲ್ಲಿ ಕೆಲಸ ನಿರ್ವಹಿಸುವ ವ್ಯಕ್ತಿಗಳಿಂದ ಇಂತಹ ಹೇಳಿಕೆಗಳು ಹೊರ ಬೀಳುತ್ತಿರುವುದು ನನಗೆ ಆಘಾತ ತಂದಿದೆ' ಎಂದು ದೀಪಿಕಾ ಪ್ರತಿಕ್ರಿಯಿಸಿದ್ದಾರೆ.

'ಸುಬ್ರಹ್ಮಣ್ಯನ್ ಅವರಿಗೆ ಮಾನಸಿಕ ಆರೋಗ್ಯದ ಸಮಸ್ಯೆ ಕಾಡುತ್ತಿದೆ. ಇದನ್ನು ಪರಿಹರಿಸುವ ಅಗತ್ಯವಿದೆ' ಎಂದು ಹೇಳಿದ್ದಾರೆ.

ದೀಪಿಕಾ ಅವರು ಸಾಮಾಜಿಕ ಮಾಧ್ಯಮಗಳ ಮೂಲಕ ಆಗಾಗ್ಗೆ ಉತ್ತಮ ಆರೋಗ್ಯ ಕಾಪಾಡಿಕೊಳ್ಳುವ ಬಗ್ಗೆ ಸಲಹೆ ನೀಡುತ್ತಾರೆ. ಅಲ್ಲದೆ, ಲಾಭರಹಿತ ಸಂಸ್ಥೆಯಾದ ಲೈವ್ ಲವ್ ಲಾಫ್ ಫೌಂಡೇಷನ್‌ನ ಸಂಸ್ಥಾಪಕಿ ಕೂಡ ಆಗಿದ್ದಾರೆ.

'ಕ್ಯಾಲೆಂಡರ್‌ನಲ್ಲಿ ಭಾನುವಾರವನ್ನು 'ಭಾನುವಾರ ಡ್ಯೂಟಿ' ಎಂದು ಮರು ಮುದ್ರಿಸಬೇಕಿದೆ. 'ದಿನದ ರಜೆ' ಎಂಬುದು ಉದ್ಯೋಗಿಗಳ ಪಾಲಿಗೆ ಪುರಾಣದ ಪರಿಕಲ್ಪನೆಯಾಗುತ್ತದೆ. ಉದ್ಯೋಗಿಗಳು ವಾಸ್ತವ್ಯವನ್ನು ಶಾಶ್ವತವಾಗಿ ಕಚೇರಿಗೆ ಬದಲಾಯಿಸಬೇಕಾಗುತ್ತದೆ. ಕೆಲಸ ಮತ್ತು ಬದುಕಿನ ಸಮತೋಲನವು ಆಯ್ಕೆಯಲ್ಲ; ಅಗತ್ಯವಾಗಿದೆ ಎಂದು ಹರ್ಷ ಗೋಯೆಂಕಾ ಪ್ರತಿಕ್ರಿಯಿಸಿದ್ದಾರೆ.

'ಸಿಇಒಗೆ ಅತಿಹೆಚ್ಚು ವೇತನ ಸಿಗುತ್ತದೆ. ಕೆಲಸದಲ್ಲಿನ ಒತ್ತಡ ಭಿನ್ನವಾಗಿರುತ್ತದೆ. ಆದರೆ, ತನಗಿಂತ ಕಡಿಮೆ ವೇತನ ಪಡೆಯುವ ಉದ್ಯೋಗಿಗಳು ಕೂಡ ತಾನು ಮಾಡುವಷ್ಟೇ ಕೆಲಸ ಮಾಡಬೇಕೆಂದು ಅಪೇಕ್ಷಿಸುವುದು ತಪ್ಪು' ಎಂದು ಜಾಲತಾಣಿಗರು ಟೀಕಿಸಿದ್ದಾರೆ.

'ದೇಶದ ಅಭಿವೃದ್ಧಿ ದೃಷ್ಟಿಯಿಂದ ಯುವಜನರು ದಿನಕ್ಕೆ 70 ಗಂಟೆ ಕೆಲಸ ಮಾಡಬೇಕು' ಎಂದು ಇನ್ಫೊಸಿಸ್ ಸಹ ಸಂಸ್ಥಾಪಕ ಎನ್.ಆರ್. ನಾರಾಯಣಮೂರ್ತಿ ನೀಡಿದ್ದ ಹೇಳಿಕೆ ಬಗ್ಗೆ ಪರ ಮತ್ತು ವಿರೋಧ ಚರ್ಚೆ ಆರಂಭವಾಗಿತ್ತು. ಹೇಳಿಕೆಯನ್ನು ಸಮರ್ಥಿಸಿಕೊಂಡಿದ್ದ ಅವರು, ಹಿಂದೆ ಸರಿಯುವುದಿಲ್ಲ ಎಂದು ಹೇಳಿದ್ದರು.

ವಾರ್ಷಿಕ ₹51 ಕೋಟಿ ಸಂಬಳ

2023–24ರಲ್ಲಿ ಸುಬ್ರಹ್ಮಣ್ಯನ್ ಅವರು ₹51 ಕೋಟಿ ವೇತನದ ಪ್ಯಾಕೇಜ್ ಪಡೆದಿದ್ದಾರೆ ಎಂದು ಕಂಪನಿಯ ವಾರ್ಷಿಕ ವರದಿಯಲ್ಲಿ ಹೇಳಲಾಗಿದೆ. ಇದು ಕಂಪನಿಯ ಉದ್ಯೋಗಿಗಳ ಸರಾಸರಿ ಸಂಬಳಕ್ಕಿಂತ 534 ಪಟ್ಟು ಹೆಚ್ಚಿದೆ.

ಈ ಪ್ಯಾಕೇಜ್‌ನಲ್ಲಿ ಮೂಲ ವೇತನ ₹3.6 ಕೋಟಿ ಇದ್ದರೆ, ಪೂರ್ವಾಗತ್ಯದ ರೂಪದಲ್ಲಿ ₹1.67 ಕೋಟಿ ನೀಡಲಾಗಿದೆ. ಕಮಿಶನ್ ಲೆಕ್ಕದಲ್ಲಿ ₹35.28 ಕೋಟಿ ಪಡೆದಿದ್ದಾರೆ. ನಿವೃತ್ತಿ ಸೌಲಭ್ಯದ ಹೆಸರಿನಲ್ಲಿ ₹10.5 ಕೋಟಿ ನೀಡಲಾಗಿದೆ. ಆಡಳಿತ ಮಂಡಳಿ ಸದಸ್ಯರು ಮತ್ತು ಪ್ರಮುಖ ಹುದ್ದೆಯಲ್ಲಿರುವ ಹಿರಿಯ ಅಧಿಕಾರಿಗಳನ್ನು ಹೊರತುಪಡಿಸಿ, ಎಲ್ ಆ್ಯಂಡ್ ಟಿ ಕಂಪನಿಯ ಪುರುಷ ಉದ್ಯೋಗಿಗಳ ಸರಾಸರಿ ಸಂಬಳ ₹9.77 ಲಕ್ಷ ಇದೆ. ಮಹಿಳಾ ಉದ್ಯೋಗಿಗಳ ಸರಾಸರಿ ಸಂಬಳ ₹6.76 ಲಕ್ಷವಿದೆ.

ಶೇಂಗಾ ಖರೀದಿ ಅವಧಿ ವಿಸ್ತರಣೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ರಾಜ್ಯದಲ್ಲಿ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಶೇಂಗಾ ಖರೀದಿಗೆ ರೈತರ ಹೆಸರು ನೋಂದಣಿ ಹಾಗೂ ಖರೀದಿ ಅವಧಿಯನ್ನು ವಿಸ್ತರಿಸಲಾಗಿದೆ ಎಂದು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ತಿಳಿಸಿದ್ದಾರೆ.

ನೋಂದಣಿ ಅವಧಿಯನ್ನು ಇದೇ 20ರ ವರೆಗೆ ಹಾಗೂ ಖರೀದಿ ಅವಧಿಯನ್ನು ಇದೇ 22ರ ವರೆಗೆ ವಿಸ್ತರಣೆ ಮಾಡಲಾಗಿದೆ. ಪ್ರತಿ ಕ್ವಿಂಟಲ್ ಶೇಂಗಾಕ್ಕೆ ₹6,783 ಬೆಲೆ ನಿಗದಿಪಡಿಸಲಾಗಿದೆ. ಖರೀದಿ ಅವಧಿ ವಿಸ್ತರಿಸುವಂತೆ ಬೇಡಿಕೆ ಬಂದಿದ್ದರಿಂದ ಈ ಕ್ರಮಕೈಗೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.

ಕೊಪ್ಪಳ, ಧಾರವಾಡ, ಹಾವೇರಿ, ಬಳ್ಳಾರಿ, ಚಿತ್ರದುರ್ಗ, ಗದಗ, ಬಾಗಲಕೋಟೆ, ದಾವಣಗೆರೆ, ರಾಯಚೂರು, ತುಮಕೂರು ಮತ್ತು ವಿಜಯನಗರ ಜಿಲ್ಲೆಯಲ್ಲಿ ಖರೀದಿ ಕೇಂದ್ರ ಆರಂಭಿಸಲಾಗಿದೆ ಎಂದು ತಿಳಿಸಿದ್ದಾರೆ.

ಜಿಎಸ್‌ಟಿ ಅಧಿಕಾರಿಗಳ ಷೋಕಾಸ್ ನೋಟಿಸ್‌ಗೆ 'ಸುಪ್ರೀಂ' ತಡೆ

ನವದೆಹಲಿ (ಪಿಟಿಐ): ಜಿಎಸ್‌ಟಿ ವಂಚಿಸಿರುವ ಸಂಬಂಧ ₹1 ಲಕ್ಷ ಕೋಟಿಗೂ ಹೆಚ್ಚು ಪಾವತಿಸುವಂತೆ ಆನ್‌ಲೈನ್ ಗೇಮಿಂಗ್ ಕಂಪನಿಗಳು ಮತ್ತು ಕ್ಯಾಸಿನೊಗಳಿಗೆ ಜಾರಿ ಮಾಡಿರುವ ಷೋಕಾಸ್ ನೋಟಿಸ್‌ಗೆ ಸುಪ್ರೀಂ ಕೋರ್ಟ್ ಶುಕ್ರವಾರ ತಡೆ ನೀಡಿದೆ.

ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಮತ್ತು ಆರ್. ಮಹದೇವನ್ ಅವರಿದ್ದ ಪೀಠವು, ಗೇಮಿಂಗ್ ಕಂಪನಿಗಳ ವಿರುದ್ಧದ ಜಿಎಸ್‌ಟಿಯ ಎಲ್ಲ ಪ್ರಕ್ರಿಯೆಗಳಿಗೆ ತಡೆ ನೀಡಿ, ವಿಚಾರಣೆಯನ್ನು ಮಾರ್ಚ್ 18ಕ್ಕೆ ಮುಂದೂಡಿತು.

ಆನ್‌ಲೈನ್ ಗೇಮಿಂಗ್ ಕಂಪನಿಗಳಿಗೆ 2023ರ ಅಕ್ಟೋಬರ್‌ನಲ್ಲಿ ಜಿಎಸ್‌ಟಿ ಅಧಿಕಾರಿಗಳು ಷೋಕಾಸ್ ನೋಟಿಸ್‌ಗಳನ್ನು ನೀಡಿದ್ದಾರೆ. ಕೆಲವು ಷೋಕಾಸ್ ನೋಟಿಸ್‌ಗಳ ಅವಧಿಯು ಫೆಬ್ರುವರಿಯಲ್ಲಿ ಅಂತ್ಯಗೊಳ್ಳಲಿದೆ ಎಂದು ಜಿಎಸ್‌ಟಿ ಇಲಾಖೆಯನ್ನು ಪ್ರತಿನಿಧಿಸಿದ ಹೆಚ್ಚುವರಿ ಸಾಲಿಸಿಟರ್ ಜನರಲ್ ಎನ್. ವೆಂಕಟರಾಮನ್ ಅವರು ಪೀಠಕ್ಕೆ ತಿಳಿಸಿದರು.

ಆರ್‌ಜೆಡಿ ಶಾಸಕ ಮೆಹ್ತಾ ಮನೆ ಮೇಲೆ ಇ.ಡಿ ದಾಳಿ

ಪಟ್ನಾ (ಪಿಟಿಐ): ಬಿಹಾರ ಸೇರಿ ಹಲವು ರಾಜ್ಯಗಳಲ್ಲಿ ಆರ್‌ಜೆಡಿ ಶಾಸಕ ಅಲೋಕ್ ಕುಮಾರ್ ಮೆಹ್ತಾ ಅವರ ಮನೆ ಮತ್ತು ಅವರಿಗೆ ಸಂಬಂಧಿಸಿದ ಸ್ಥಳಗಳಲ್ಲಿ ಜಾರಿ ನಿರ್ದೇಶನಾಲಯವು (ಇ.ಡಿ) ಶುಕ್ರವಾರ ಶೋಧ ನಡೆಸಿದೆ.

ರಾಜ್ಯ ಸಹಕಾರಿ ಬ್ಯಾಂಕ್‌ನಲ್ಲಿ ನಡೆದಿರುವ ಹಣ ದುರುಪಯೋಗಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದ ತನಿಖೆಯ ಭಾಗವಾಗಿ, ಬಿಹಾರ, ಪಶ್ಚಿಮ ಬಂಗಾಳ, ಉತ್ತರ ಪ್ರದೇಶ ಮತ್ತು ದೆಹಲಿಯಲ್ಲಿ ಸುಮಾರು 18 ಸ್ಥಳಗಳಲ್ಲಿ ಶೋಧ ನಡೆಸಲಾಗಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಆರ್‌ಜೆಡಿ ಶಾಸಕ ಮತ್ತು ಬಿಹಾರದ ಮಾಜಿ ಸಚಿವರೂ ಆದ ಅಲೋಕ್ ಕುಮಾರ್ ಮೆಹ್ತಾ (58) ಅವರು ಬಿಹಾರ ಮೂಲದ ವೈಶಾಲಿ ಶಾಹ್ರಿ ವಿಕಾಸ್ (ವಿಎಸ್‌ವಿ) ಸಹಕಾರಿ ಬ್ಯಾಂಕ್‌ನ ಪ್ರವರ್ತಕರಲ್ಲಿ ಒಬ್ಬರಾಗಿದ್ದಾರೆ.

ಸುಮಾರು ₹85 ಕೋಟಿ ದುರುಪಯೋಗ ಆರೋಪದ ಮೇಲೆ ಬ್ಯಾಂಕ್ ಮತ್ತು ಅದರ ಪದಾಧಿಕಾರಿಗಳ ವಿರುದ್ಧ ರಾಜ್ಯದ ಪೊಲೀಸರು ದಾಖಲಿಸಿರುವ ಎಫ್‌ಐಆರ್ ಆಧರಿಸಿ, ಹಣ ಅಕ್ರಮ ವರ್ಗಾವಣೆಯ ತನಿಖೆ ನಡೆಯುತ್ತಿದೆ.

ಕಾಗ್ನಿಜೆಂಟ್‌ನಿಂದ ಸ್ಪರ್ಧೆಗೆ ಅಡ್ಡಿ: ಇನ್ಫೊಸಿಸ್



ಬೆಂಗಳೂರು (ರಾಯಿಟರ್ಸ್): ಸಮಾನ ನೆಲೆಯಲ್ಲಿ ನಡೆಯಬೇಕಿರುವ ಸ್ಪರ್ಧೆಗೆ ಕಾಗ್ನಿಜೆಂಟ್ ಕಂಪನಿಯು ಧಕ್ಕೆ ತರುತ್ತಿದೆ. ನಮ್ಮಲ್ಲಿ ಕೆಲಸ ಮಾಡುತ್ತಿರುವ ಪ್ರಮುಖ ಉದ್ಯೋಗಿಗಳನ್ನು ಸೆಳೆಯುವ ಕೆಲಸದಲ್ಲಿ ನಿರತವಾಗಿದೆ ಎಂದು ಇನ್ಫೊಸಿಸ್ ಕಂಪನಿಯು, ಅಮೆರಿಕದ ಟೆಕ್ಸಾಸ್ ಫೆಡರಲ್ ಕೋರ್ಟ್‌ನಲ್ಲಿ ಪ್ರತಿವಾದ ಮಂಡಿಸಿದೆ.

ಇನ್ಫೊಸಿಸ್ ಕಂಪನಿಯು ಹೆಲ್ತ್‌ಕೇರ್ ಇನ್ಶೂರೆನ್ಸ್ ಸಾಫ್ಟ್‌ವೇರ್‌ಗೆ ಸಂಬಂಧಪಟ್ಟ ಮಾಹಿತಿ ಹಾಗೂ ವ್ಯಾಪಾರ ರಹಸ್ಯಗಳನ್ನು ಕಳವು ಮಾಡಿದೆ ಎಂದು ಆರೋಪಿಸಿದ್ದ ಕಾಗ್ನಿಜೆಂಟ್‌ನ ಅಂಗಸಂಸ್ಥೆಯಾದ ಟ್ರೈಝೆಟ್ಟೊ ಕಂಪನಿಯು, ಈ ಬಗ್ಗೆ ಕೋರ್ಟ್‌ನಲ್ಲಿ ಮೊಕದ್ದಮೆ ದಾಖಲಿಸಿದೆ.

ಇದಕ್ಕೆ ಇನ್ಫೊಸಿಸ್ ಪ್ರತಿವಾದ ಮಂಡಿಸಿದ್ದು, 'ತನಗೆ ಐ.ಟಿ ಸೇವೆಗಳ ಗುತ್ತಿಗೆ ಸಿಗದಂತೆ ಕಾಗ್ನಿಜೆಂಟ್ ತಡೆಯುತ್ತಿದೆ. ಗುತ್ತಿಗೆ ನೀಡುವ ಕಂಪನಿಗಳ ಉದ್ಯೋಗಿಗಳಿಗೆ ತರಬೇತಿ ನೀಡುತ್ತಿಲ್ಲ' ಎಂದು ಹೇಳಿದೆ.

'ಕಂಪನಿಯ ಪ್ರಮುಖ ಹುದ್ದೆಗಳಲ್ಲಿರುವ ಉದ್ಯೋಗಿಗಳನ್ನು ಸೆಳೆಯುತ್ತಿದೆ. ಇನ್ಫೊಸಿಸ್‌ನಲ್ಲಿದ್ದ ಎಸ್. ರವಿಕುಮಾರ್ ಅವರನ್ನು 2023ರಲ್ಲಿ ಕಾಗ್ನಿಜೆಂಟ್‌ನ ಸಿಇಒ ಆಗಿ ನೇಮಕ ಮಾಡಲಾಗಿದೆ' ಎಂದು ಹೇಳಿದೆ. ಈ ಕುರಿತು ಇನ್ಫೊಸಿಸ್ ಮತ್ತು ಕಾಗ್ನಿಜೆಂಟ್ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಸುದ್ದಿ 2 ನಿಮಿಷ

30 ದಶಲಕ್ಷ ಟನ್ ಗೋಧಿ ಖರೀದಿಗೆ ಗುರಿ ನಿಗದಿ

ನವದೆಹಲಿ (ಪಿಟಿಐ): 2025–26ನೇ ಹಿಂಗಾರು ಮಾರುಕಟ್ಟೆ ವರ್ಷದಲ್ಲಿ ಕೇಂದ್ರ ಸರ್ಕಾರವು 30 ದಶಲಕ್ಷ ಟನ್‌ನಷ್ಟು ಗೋಧಿ ಸಂಗ್ರಹಿಸುವ ಗುರಿ ಹೊಂದಿದೆ ಎಂದು ಮೂಲಗಳು ತಿಳಿಸಿವೆ.

2024–25ನೇ ಮಾರುಕಟ್ಟೆ ವರ್ಷದಲ್ಲಿ (ಜುಲೈ–ಜೂನ್) 115 ದಶಲಕ್ಷ ಟನ್‌ನಷ್ಟು ದಾಖಲೆ ಪ್ರಮಾಣದಲ್ಲಿ ಗೋಧಿ ಉತ್ಪಾದನೆಯಾಗಿದೆ. ಹಾಗಾಗಿ, ಕೇಂದ್ರ ಕೃಷಿ ಸಚಿವಾಲಯವು ಸಂಗ್ರಹಣೆಯ ಗುರಿಯನ್ನು ಮಿತಿಗೊಳಿಸಿದೆ ಎಂದು ಹೇಳಿವೆ.

ರಾಜ್ಯಗಳ ಆಹಾರ ಕಾರ್ಯದರ್ಶಿಗಳ ಜೊತೆಗೆ ಚರ್ಚಿಸಿದ ಬಳಿಕ ಈ ಗುರಿ ನಿಗದಿಪಡಿಸಲಾಗಿದೆ ಎಂದು ತಿಳಿಸಿವೆ.

ಹಿಂಗಾರು ಅವಧಿಯಲ್ಲಿ ಪ್ರತಿ ಕ್ವಿಂಟಲ್‌ಗೆ ₹2,425 ಕನಿಷ್ಠ ಬೆಂಬಲ ಬೆಲೆ ನಿಗದಿಪಡಿಸಿದೆ.

ಒಟ್ಟು 31.9 ದಶಲಕ್ಷ ಹೆಕ್ಟೇರ್‌ನಲ್ಲಿ ಗೋಧಿ ಬೆಳೆಯಲಾಗಿದ್ದು, ಈಗಾಗಲೇ ಕಟಾವು ಪೂರ್ಣಗೊಂಡಿದೆ. ಭಾರತೀಯ ಆಹಾರ ನಿಗಮ (ಎಫ್‌ಸಿಐ) ಹಾಗೂ ರಾಜ್ಯಗಳ ಖರೀದಿ ಏಜೆನ್ಸಿಗಳು ರೈತರಿಂದ ಗೋಧಿ ಖರೀದಿಸಲಿವೆ. ಈ ಗೋಧಿಯನ್ನು ಸರ್ಕಾರದ ವಿವಿಧ ಕಲ್ಯಾಣ ಕಾರ್ಯಕ್ರಮಗಳಿಗೆ ಹಂಚಿಕೆ ಮಾಡಲಾಗುತ್ತದೆ.

ಕೈಗಾರಿಕಾ ಉತ್ಪಾದನೆ ಏರಿಕೆ

ನವದೆಹಲಿ (ಪಿಟಿಐ): ದೇಶದ ಕೈಗಾರಿಕಾ ಉತ್ಪಾದನಾ ಬೆಳವಣಿಗೆಯು ನವೆಂಬರ್‌ನಲ್ಲಿ ಆರು ತಿಂಗಳ ಗರಿಷ್ಠ ಮಟ್ಟವಾದ ಶೇ 5.2ರಷ್ಟು ದಾಖಲಾಗಿದೆ ಎಂದು ಕೇಂದ್ರ ಸಾಂಖ್ಯಿಕ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯ ಶುಕ್ರವಾರ ತಿಳಿಸಿದೆ.

ಕೈಗಾರಿಕಾ ಉತ್ಪಾದನೆ ಸೂಚ್ಯಂಕ (ಐಐಪಿ) ಆಧಾರದ ಮೇಲೆ ಲೆಕ್ಕ ಹಾಕುವ ಈ ಬೆಳವಣಿಗೆಯು 2023ರ ನವೆಂಬರ್‌ನಲ್ಲಿ ಶೇ 2.5ರಷ್ಟಿತ್ತು. ಹಬ್ಬದ ಋತುವಿನಲ್ಲಿ ಸರಕುಗಳ ಉತ್ಪಾದನೆಗೆ ಬೇಡಿಕೆ ಹೆಚ್ಚಳವಾಗಿದೆ. ಜೊತೆಗೆ ತಯಾರಿಕಾ ವಲಯದ ಚಟುವಟಿಕೆಗಳು ಚೇತರಿಸಿಕೊಂಡಿವೆ. ಇದರಿಂದ ಸೂಚ್ಯಂಕವು ಏರಿಕೆಯಾಗಿದೆ ಎಂದು ತಿಳಿಸಿದೆ.

2023ರ ನವೆಂಬರ್‌ನಲ್ಲಿ ತಯಾರಿಕಾ ವಲಯದ ಉತ್ಪಾದನೆ ಶೇ 1.3ರಷ್ಟಿತ್ತು. ಅದು ಕಳೆದ ವರ್ಷದ ನವೆಂಬರ್‌ನಲ್ಲಿ ಶೇ 5.8ಕ್ಕೆ ಏರಿಕೆಯಾಗಿದೆ. ಗಣಿಗಾರಿಕೆ ಉತ್ಪಾದನೆ ಶೇ 1.9 ಮತ್ತು ವಿದ್ಯುತ್ ಉತ್ಪಾದನೆ ಶೇ 4.4ರಷ್ಟು ಆಗಿದೆ.

2024–25ನೇ ಆರ್ಥಿಕ ವರ್ಷದ ಏಪ್ರಿಲ್–ನವೆಂಬರ್ ಅವಧಿಯಲ್ಲಿ ಐಐಪಿ ಬೆಳವಣಿಗೆ ಶೇ 4.1ರಷ್ಟಾಗಿದೆ. ಹಿಂದಿನ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ಶೇ 6.5ರಷ್ಟಿತ್ತು ಎಂದು ತಿಳಿಸಿದೆ.

6 ನವೋದ್ಯಮಗಳಿಗೆ ನೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೇಮ್ಸ್ 24x7 ಸಂಸ್ಥೆಯು ತನ್ನ ಟೆಕ್‌ಎಕ್ಸ್‌ಪೆಡಿಟ್ ಆಕ್ಸಲರೇಟರ್ ಕಾರ್ಯಕ್ರಮಕ್ಕಾಗಿ ರಾಜ್ಯದ ಆರು ನವೋದ್ಯಮಗಳು ಸೇರಿ ಒಟ್ಟು 17 ನವೋದ್ಯಮಗಳನ್ನು ಆಯ್ಕೆ ಮಾಡಿದೆ. ಇವುಗಳಿಗೆ ಸಂಸ್ಥೆಯು ಅಗತ್ಯ ನೆರವು ಕಲ್ಪಿಸಲಿದೆ.

ಬೆಂಗಳೂರಿನಲ್ಲಿ ಕಳೆದ ವರ್ಷದ ಅಕ್ಟೋಬರ್‌ನಲ್ಲಿ ಟೆಕ್‌ಎಕ್ಸ್‌ಪೆಡಿಟ್ ಕಾರ್ಯಕ್ರಮ ಪ್ರಾರಂಭಿಸಲಾಗಿತ್ತು. ಇದಕ್ಕೆ ಉತ್ತಮ ಪ್ರತಿಕ್ರಿಯೆ ಸಿಕ್ಕಿದೆ. ಗೇಮಿಂಗ್, ಕೃತಕ ಬುದ್ಧಿಮತ್ತೆ ಮತ್ತು ಅಂತರ್ಗತ ತಂತ್ರಜ್ಞಾನ ಎಂಬ ಮೂರು ವಿಭಾಗದಲ್ಲಿ ಕಾರ್ಯ ನಿರ್ವಹಿಸುವ 330ಕ್ಕೂ ಹೆಚ್ಚು ನವೋದ್ಯಮಗಳು ಆರ್ಥಿಕ ನೆರವಿಗಾಗಿ ಈ ಕಾರ್ಯಕ್ರಮ ದಡಿ ಅರ್ಜಿ ಸಲ್ಲಿಸಿದ್ದವು.

ಎ.ಐ ವಿಭಾಗದಲ್ಲಿ ರಾಜ್ಯದ ಆರ್ಫಿಕಸ್, ಕೈರೋವಿಷನ್, ಚಿಟ್ಟೊ ಡಾಟ್ ಕಾಮ್, ನೋಹಾ ಡಾಟ್ ಎ.ಐ, ಸ್ಪೋಡಾ ಮತ್ತು ಝೀರೋನ್ ಡಾಟ್ ಎ.ಐ ಎಂಬ ನವೋದ್ಯಮಗಳು ಅಂತಿಮ ಸುತ್ತಿಗೆ ಆಯ್ಕೆಯಾಗಿವೆ. ಆಯ್ಕೆಯಾಗಿರುವ ಈ ನವೋದ್ಯಮಗಳಿಗೆ ಉದ್ಯಮದ ಮುಖ್ಯಸ್ಥರು, ವೆಂಚರ್ ಕ್ಯಾಪಿಟಲಿಸ್ಟ್ ಮತ್ತು ತಜ್ಞರೊಂದಿಗೆ ಮಾತುಕತೆ ನಡೆಸುವ ಅವಕಾಶ ದೊರೆಯಲಿದೆ.

'ಟೆಕ್‌ಎಕ್ಸ್‌ಪೆಡಿಟ್ ನಂತಹ ಮಹತ್ವದ ಕಾರ್ಯಕ್ರಮಕ್ಕೆ ರಾಜ್ಯದ ನವೋದ್ಯಮಗಳು ಆಯ್ಕೆ ಆಗಿರುವುದು ಸಂತಸ ತಂದಿದೆ. ನವೋದ್ಯಮ ವಲಯದಲ್ಲಿ ರಾಜ್ಯ ಹೊಂದಿರುವ ಸಾಮರ್ಥ್ಯಕ್ಕೆ ಇದು ಸಾಕ್ಷಿಯಾಗಿದೆ' ಎಂದು ಎಲೆಕ್ಟ್ರಾನಿಕ್ಸ್, ಐ.ಟಿ–ಬಿ.ಟಿ ಇಲಾಖೆಯ ಕಾರ್ಯದರ್ಶಿ ಏಕರೂಪ್ ಕೌರ್ ತಿಳಿಸಿದ್ದಾರೆ.

'ಜಿಡಿಪಿ ಶೇ 6.6ರಷ್ಟು ಪ್ರಗತಿ'

ವಿಶ್ವಸಂಸ್ಥೆ (ಪಿಟಿಐ): 2025ರಲ್ಲಿ ಭಾರತದ ಒಟ್ಟು ಆಂತರಿಕ ಉತ್ಪನ್ನವು (ಜಿಡಿಪಿ) ಶೇ 6.6ರಷ್ಟು ಬೆಳವಣಿಗೆ ಕಾಣಲಿದೆ ಎಂದು ವಿಶ್ವಸಂಸ್ಥೆ ಅಂದಾಜಿಸಿದೆ.

ಕುಟುಂಬಗಳಿಂದ ಸರಕುಗಳ ಖರೀದಿ ಮತ್ತು ಬಳಕೆಗೆ ಮಾಡುವ ವೆಚ್ಚದ ಪ್ರಮಾಣದಲ್ಲಿ ಏರಿಕೆಯಾಗಿದೆ. ಹೂಡಿಕೆಯು ಹೆಚ್ಚಳವಾಗಿದೆ. ಇದು ಆರ್ಥಿಕ ಬೆಳವಣಿಗೆ ದರ ಏರಿಕೆಗೆ ನೆರವಾಗಲಿದೆ ಎಂದು ವಿಶ್ವಸಂಸ್ಥೆಯ ಜಾಗತಿಕ ಆರ್ಥಿಕ ಸ್ಥಿತಿಗತಿ ಮತ್ತು ದೃಷ್ಟಿಕೋನ 2025ರ ವರದಿ ತಿಳಿಸಿದೆ.

ಭಾರತದ ಆರ್ಥಿಕ ಬೆಳವಣಿಗೆ ದರವು 2024ರಲ್ಲಿ ಶೇ 6.8 ಹಾಗೂ 2026ರಲ್ಲಿ ಶೇ 6.8ರಷ್ಟು ಪ್ರಗತಿ ದಾಖಲಿಸಲಿದೆ ಎಂದು ಅಂದಾಜಿಸಿದೆ.

ಆರದ ಬೆಂಕಿ: ಹೆಚ್ಚಿದ ಆತಂಕ

ಪೆಸಿಫಿಕ್ ಪ್ಯಾಲಿಸೈಡ್ಸ್‌ನ ಪ್ರದೇಶವೊಂದರ ವೈಮಾನಿಕ ನೋಟ



ಆಧಾರ: ಎಪಿ, ರಾಯಿಟರ್ಸ್, ಲಾಸ್ ಏಂಜಲೀಸ್ ಅಗ್ನಿಶಾಮಕ ಇಲಾಖೆ ವೆಬ್‌ಸೈಟ್

10
ಕಾಳ್ಗಿಚ್ಚಿನಿಂದ ಮೃತಪಟ್ಟ ಜನರ ಸಂಖ್ಯೆ (ಸಾವಿನ ಸಂಖ್ಯೆ ಏರಿಕೆಯಾಗಬಹುದು ಎಂದು ಲಾಸ್ ಏಂಜಲೀಸ್ ನಗರದ ಅಧಿಕಾರಿಗಳು ಹೇಳಿದ್ದಾರೆ)

'ದುರಂತ: ಟ್ರಂಪ್ ರಾಜಕೀಯ'

'ಹವಾಮಾನ ಬದಲಾವಣೆಯಿಂದಾಗಿ ಇಂಥದ್ದೊಂದು ಪ್ರಾಕೃತಿಕ ದುರಂತ ಸಂಭವಿಸುತ್ತಿದೆ' ಎಂದು ಹವಾಮಾನ ತಜ್ಞರು ಹೇಳುತ್ತಿದ್ದಾರೆ. ಕಾಳ್ಗಿಚ್ಚು ಆರಂಭಗೊಂಡದ್ದು ಹೇಗೆ ಎನ್ನುವ ಬಗ್ಗೆ ಅಮೆರಿಕದಲ್ಲಿ ತಜ್ಞರ ವಲಯದಲ್ಲಿ ದೊಡ್ಡ ಮಟ್ಟದ ಚರ್ಚೆ ನಡೆಯುತ್ತಿದೆ. 'ವೇಗವಾಗಿ ಗಾಳಿ ಬೀಸುತ್ತಿತ್ತು. ವಿದ್ಯುತ್ ತಂತಿಗಳು ತಾಗಿ ಕಿಡಿ ಹೊತ್ತಿಕೊಂಡಿರಬಹುದು' ಎಂದು ಅಗ್ನಿಶಾಮಕ ದಳದ ಹಿರಿಯ ಅಧಿಕಾರಿಗಳು ಅಂದಾಜಿಸುತ್ತಿದ್ದಾರೆ.

ಇನ್ನೊಂದು ಕಡೆ, ಅಮೆರಿಕದ ಚುನಾಯಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಗುರುವಾರ ಪೋಸ್ಟ್ ಹಂಚಿಕೊಂಡಿದ್ದು, 'ಅಸಮರ್ಥ ಗವರ್ನರ್‌ನಿಂದ ಸಬೂಬುಗಳನ್ನು ಕೇಳಲು ಸಾಧ್ಯವಿಲ್ಲ. ಇದಕ್ಕೆಲ್ಲಾ ಕಾಲ ಮಿಂಚಿ ಹೋಗಿದೆ' ಎಂದಿದ್ದಾರೆ. 'ದುರಂತದ ಸಂದರ್ಭದಲ್ಲಿ ಟ್ರಂಪ್ ಅವರು ಸಹಾನುಭೂತಿ ವ್ಯಕ್ತಪಡಿಸುವ ಬದಲು ಕ್ಯಾಲಿಫೋರ್ನಿಯಾದ ಗವರ್ನರ್ ಡೆಮಾಕ್ರಟಿಕ್ ಪಕ್ಷದ ಗ್ಯಾವಿನ್ ನ್ಯೂಸಂ ಅವರ ವಿರುದ್ಧ ರಾಜಕೀಯ ಹೇಳಿಕೆ ನೀಡುತ್ತಿದ್ದಾರೆ' ಎಂಬ ಚರ್ಚೆ ಆರಂಭವಾಗಿದೆ.

ಮಲಿಬು ನಗರದಲ್ಲಿರುವ ಸಮುದ್ರಕ್ಕೆ ಮುಖ ಮಾಡಿರುವ ಕೋಟಿಗಟ್ಟಲೆ ಬೆಲೆ ಬಾಳುವ ಬಂಗಲೆಗಳು ಕಾಳ್ಗಿಚ್ಚಿಗೆ ಭಸ್ಮವಾಗಿವೆ —ಎಎಫ್‌ಪಿ ಚಿತ್ರ

ಕ್ಯಾಲಿಫೋರ್ನಿಯಾ ರಾಜ್ಯದ ಲಾಸ್ ಏಂಜಲೀಸ್ ನಗರದ ಐದು ಕಡೆಗಳಲ್ಲಿ ಕಾಳ್ಗಿಚ್ಚು ಉರಿಯುತ್ತಿದೆ. 'ಸಂತಾ ಆನಾ' ಸುಂಟರ ಗಾಳಿಯು ತನ್ನ ವೇಗವನ್ನು ತಗ್ಗಿಸಿಕೊಳ್ಳುತ್ತಿಲ್ಲ. 'ಭಾನುವಾರದ ನಂತರ ಮುಂದಿನ ವಾರದಲ್ಲಿ ಗಾಳಿಯು ತನ್ನ ರೌದ್ರಾವತಾರವನ್ನು ಮತ್ತೊಮ್ಮೆ ಪ್ರದರ್ಶಿಸಲಿದೆ. ಮಳೆ ಬರುವ ಯಾವ ಮುನ್ಸೂಚನೆಯೂ ಇಲ್ಲ' ಎಂದು ಹವಾಮಾನ ಇಲಾಖೆಯ ತಜ್ಞರು ಹೇಳಿದ್ದಾರೆ.

ಹಾಲಿವುಡ್ ಹಿಲ್ಸ್‌ನಲ್ಲಿ ಎದ್ದಿದ್ದ ಕಾಳ್ಗಿಚ್ಚನ್ನು ಸಂಪೂರ್ಣವಾಗಿ ನಂದಿಸಲಾಗಿದೆ. ಆದರೆ, ಬಾಕಿ ಎಲ್ಲ ಕಡೆಗಳಲ್ಲಿಯೂ ಮೂರು–ನಾಲ್ಕು ದಿನಗಳಿಂದ ಬೆಂಕಿ ಉರಿಯುತ್ತಲೇ ಇದೆ. ರಿಯಲ್ ಎಸ್ಟೇಟ್‌ಗೆ, ಸಮುದ್ರದತ್ತ ಮುಖ ಮಾಡಿರುವ ಕೋಟಿಗಟ್ಟಲೆ ಬೆಲೆ ಬಾಳುವ ಬಂಗಲೆಗಳಿಗೆ ಪ್ರಸಿದ್ಧವಾಗಿರುವ ಪೆಸಿಫಿಕ್ ಪ್ಯಾಲಿಸೈಡ್ಸ್ ಹಾಗೂ ಇದರ ಪಕ್ಕದ ಮಲಿಬು ನಗರದ ಹಲವು ಪ್ರದೇಶಗಳಲ್ಲಿ ಈಗ ಉಳಿದಿರುವುದು ಭಸ್ಮ ಮಾತ್ರ.

ಸಾವಿರಾರು ಜನರನ್ನು ಸ್ಥಳಾಂತರಿಸಲಾಗಿದೆ. ಈ ಮನೆಗಳಿಗೆ ಈಗ ಕಳ್ಳರ ಕಾಟ ಆರಂಭವಾಗಿದೆ. ಮೂರು–ನಾಲ್ಕು ದಿನಗಳಲ್ಲಿ ಈ ಎಲ್ಲ ಪ್ರದೇಶಗಳಲ್ಲಿ ಒಟ್ಟು 20 ಕಳ್ಳರನ್ನು ಪೊಲೀಸರು ಬಂಧಿಸಿದ್ದಾರೆ. ದುರಂತದಿಂದ ಹಾನಿಯೊಳಗಾದ ಹಾಗೂ ಜನರಿಲ್ಲದೆ ಕೇವಲ ಮನೆಗಳಿರುವ ಪ್ರದೇಶದಲ್ಲಿ ಭದ್ರತೆ ಹೆಚ್ಚಿಸಲು ನ್ಯಾಷನಲ್ ಗಾರ್ಡ್ಸ್ ಸಹಾಯವನ್ನು ಪಡೆಯಲು ಕ್ಯಾಲಿಫೋರ್ನಿಯಾದ ಗವರ್ನರ್ ಒಪ್ಪಿಗೆ ನೀಡಿದ್ದಾರೆ.

'ಸರ್ಕಾರವು ಶ್ರೀಮಂತರಿಗೆ ಮಾತ್ರವೇ ಸಹಕಾರ ನೀಡಲಿದೆ' ಎಂದು ಬಡ ಅಮೆರಿಕನ್ನರು ಆರೋಪಿಸುತ್ತಿದ್ದಾರೆ. 'ಮಂಗಳವಾರ ಬೆಂಕಿ ಬಿದ್ದಾಗ ನಮ್ಮ ಮನೆಗಳ ಬಳಿ ಎಲ್ಲಿಯೂ ಅಗ್ನಿಶಾಮಕ ದಳದ ಸಿಬ್ಬಂದಿ ಕಾಣಸಿಲಿಲ್ಲ. ಶ್ರೀಮಂತರ ಮನೆಗಳ ಬಳಿಯೇ ಇದ್ದರು' ಎಂದು ಅಲ್ಟಡೀನಾ ನಗರ ನಿವಾಸಿಗಳು ಆರೋಪಿಸಿದ್ದಾರೆ. 'ಬೆಂಕಿಯಿಂದಲೇ ನಮ್ಮ ಮನೆಗೆ ಹಾನಿಯಾಗಿದೆ ಎಂಬ ಸಾಕ್ಷ್ಯವನ್ನು ವಿಮಾ ಕಂಪನಿಗಳಿಗೆ ತೋರಿಸುವುದು, ಅವರಿಗೆ ಮನವರಿಕೆ ಮಾಡಿಕೊಡುವುದು ಹೇಗೆ ಎಂದು ತೋಚುತ್ತಿಲ್ಲ' ಎಂದು ಬಡ ಅಮೆರಿಕನ್ನರು ಹೇಳುತ್ತಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ರಿಯಲ್ ಎಸ್ಟೇಟ್ ಬೈಯಿಂಗ್

Industrial & Factory

Hosur Road

TO BUY Industrial Lands 2 -10 acres/ Attibele/Chanadapura/Anekal, Hosur/Jigan/Sarjapur Road. 9900570439 Blumefield Industrial Realty and Projects Pvt Ltd

ಉದ್ಯೋಗಾವಕಾಶ

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ತಕ್ಷಣ ಬೇಕಾಗಿದ್ದಾರೆ. ಟಯೋಟಾ, ಬ್ರಿಟಾನಿಯಾ, TVSಕಂಪನಿಗಳಿಗೆ SSLC, PUC, Degree, Diploma, ITIನವರು 18,000/- 60,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 9036791033

ಪ್ರವಾಸ

Travel

ಭಾರತಪರಂಪರ ದರ್ಶನ: 10.2.25 7ದಿನ ನವಗ್ರಹಸಹಿತ ರಾಮೇಶ್ವರಂ. 8.3.25 7ದಿನ ಕಾಶಿ,ಅಯೋಧ್ಯ,ಗಯಾ. 17.3.25 11ದಿನ ಮುಕ್ತಿನಾಥ್ ಸಹಿತ ಕಾಶಿ,ಅಯೋಧ್ಯ. ಪ್ರಕಾಶ್ ಹೆಬ್ಬಾರ್ 9448792891.

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕ ಪ್ರಕಟಣೆ
ದೊಡ್ಡಹಾಗಡೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ
ದೊಡ್ಡಹಾಗಡೆ ಆನೇಕಲ್ ತಾಲೂಕು, ಬೆಂಗಳೂರು ನಗರ ಜಿಲ್ಲೆ – 562106
ದೊಡ್ಡಹಾಗಡೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತದ ಮುಂದಿನ ಐದು ವರ್ಷಗಳ ಅವಧಿಗೆ ಸಂಘದ ಆಡಳಿತ ಮಂಡಳಿಗೆ ನಿರ್ದೇಶಕರನ್ನು ಆಯ್ಕೆ ಮಾಡುವ ಸಲುವಾಗಿ ದಿನಾಂಕ 27.01.2025ರ ಸೋಮವಾರ ದಂದು ಬೆಳಗ್ಗೆ 9 ರಿಂದ ಸಂಜೆ 4:00 ವರೆಗೆ ಸಂಘದ ಆವರಣದಲ್ಲಿ ಚುನಾವಣೆ ನಡೆಯಲಿದ್ದು ಸದರಿ ಚುನಾವಣೆಯಲ್ಲಿ ಸಂಘದ ಸದಸ್ಯರು ಭಾಗವಹಿಸಲು ಕೋರಿದೆ.
ಸಂಘದ ಆಡಳಿತ ಮಂಡಳಿ ಪರವಾಗಿ
ಸಹಿ/–
ಜೆ. ಶ್ರೀನಿವಾಸ ರೆಡ್ಡಿ
ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು
ದೊಡ್ಡಹಾಗಡೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ
ಸೂಚನೆಗಳು :
1. ಸದಸ್ಯರು ಇತ್ತೀಚಿನ ಎರಡು ಭಾವಚಿತ್ರಗಳನ್ನು ನೀಡಿ ಗುರುತಿನ ಚೀಟಿ ಪಡೆಯತಕ್ಕದ್ದು.
2. ಮತ ಚಲಾಯಿಸುವಾಗ ಸಂಘದಿಂದ ಪಡೆದ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ಹಾಜರುಪಡಿಸತಕ್ಕದ್ದು.

ಭವಿಷ್ಯ

Astrology

★ಭಾರತದ ಪ್ರಖ್ಯಾತ★ ಬುಡಬುಡಿಕೆ ಜನಾಂಗದ ಲಕ್ಷಾಂತರ ಸಂತುಷ್ಟ ಗ್ರಾಹಕರ ಪರಮಶ್ರೇಷ್ಠ ಬಾಬಾ.ಶ್ರೀ.ದೇವಾನಂದನ ರವರಿಂದ ನಿಮ್ಮೆಲ್ಲಾ ಸರ್ವಸಂಕಷ್ಟಗಳಿಗೆ ಪರಿಹಾರ,ಮಹಮ್ಮಾಯಿ, ಮನ್ಮೋಹಿನಿಮೋಡಿ ವಶೀಕರಣಗಳಿಗೆ #100,ರಾಹೇಜಪಾರ್ಕ್ ಎದುರು,ಮಾಗಡಿ ರಸ್ತೆ ಬೆಂಗಳೂರು.9845005009

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
@50/-* PER WORDS
www.dhclassifieds.com
ಬುಕ್ ಮಾಡಿ
ಹೆಸರು ಬದಲಾವಣೆ
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 7795158424 | +91 9901641752
+91 9731810277 | +91 9900428036
*Conditions apply

ಪ್ರತೀಕಾ, ತೇಜಲ್ ಶತಕದ ಜೊತೆಯಾಟ; ಐರ್ಲೆಂಡ್‌ಗೆ ನಿರಾಸೆ

ಭಾರತ ವನಿತೆಯರ ಶುಭಾರಂಭ

ರಾಜಕೋಟ್(ಪಿಟಿಐ): ಪ್ರತೀಕಾ ರಾವಳ್ ಮತ್ತು ತೇಜಲ್ ಹಸಬ್ನಿಸ್ ಅವರ ಅಮೋಘ ಬ್ಯಾಟಿಂಗ್ ಬಲದಿಂದ ಭಾರತ ತಂಡವು ಶುಕ್ರವಾರ ನಡೆದ ಏಕದಿನ ಕ್ರಿಕೆಟ್ ಸರಣಿಯ ಮೊದಲ ಪಂದ್ಯದಲ್ಲಿ ಐರ್ಲೆಂಡ್ ಎದುರು ಜಯಿಸಿತು.

ಸೌರಾಷ್ಟ್ರ ಕ್ರಿಕೆಟ್ ಸಂಸ್ಥೆ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಭಾರತ ತಂಡವು 6 ವಿಕೆಟ್‌ಗಳಿಂದ ಗೆದ್ದಿತು. 3 ಪಂದ್ಯಗಳ ಸರಣಿಯಲ್ಲಿ 1-0 ಮುನ್ನಡೆ ಸಾಧಿಸಿತು. ಉಭಯ ತಂಡಗಳು ಇದೇ ಮೊದಲ ಸಲ ದ್ವಿಪಕ್ಷೀಯ ಸರಣಿಯಲ್ಲಿ ಮುಖಾಮುಖಿಯಾಗಿವೆ.

239 ರನ್‌ಗಳ ಗುರಿ ಬೆನ್ನಟ್ಟಿದ ಭಾರತ ತಂಡಕ್ಕೆ ನಾಯಕಿ ಸ್ಮೃತಿ ಮಂದಾನ (41;29ಎ, 4X6, 6X1) ಮತ್ತು ಪ್ರತೀಕಾ (89; 96ಎ, 4X10, 6X1) ಉತ್ತಮ ಆರಂಭ ನೀಡಿದರು. ಮೊದಲ ವಿಕೆಟ್ ಜತೆಯಾಟದಲ್ಲಿ 70 ರನ್ ಸೇರಿಸಿದರು. ಏಕದಿನ ಕ್ರಿಕೆಟ್‌ನಲ್ಲಿ ಸ್ಮೃತಿ 4 ಸಾವಿರ ರನ್ ಗಳಿಸಿದರು. ಈ ಸಾಧನೆ ಮಾಡಿದ ಭಾರತದ ಎರಡನೇ ಮತ್ತು ಒಟ್ಟಾರೆ 15ನೇ ಆಟಗಾರ್ತಿಯಾದರು.

10ನೇ ಓವರ್‌ನಲ್ಲಿಸ್ಮೃತಿ ಔಟಾದಾಗ ಪ್ರತೀಕಾ ಅವರು ಇನಿಂಗ್ಸ್ ಕಟ್ಟುವ ಹೊಣೆ ನಿಭಾಯಿಸಿದರು. ಹರ್ಲೀನ್ ಡಿಯೊಲ್ (20 ರನ್) ಮತ್ತು ಜೆಮಿಮಾ ರಾಡ್ರಿಗ್ಸ್ (9 ರನ್) ಅವರು ಹೆಚ್ಚು ಹೊತ್ತು ಕ್ರೀಸ್‌ನಲ್ಲಿರಲಿಲ್ಲ. 46 ರನ್‌ಗಳ ಅಂತರದಲ್ಲಿ 3 ವಿಕೆಟ್‌ಗಳು ಪತನವಾಗಿದ್ದರಿಂದ ಆತಂಕ ಎದುರಾಗಿತ್ತು. ಇನ್ನೊಂದೆಡೆ ಹೋರಾಟ ನಡೆಸಿದ್ದ ಪ್ರತೀಕಾ ಅವರನ್ನು ಸೇರಿಕೊಂಡ ತೇಜಲ್ (ಔಟಾಗದೇ 53; 46ಎ, 4X9) ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 116 ರನ್ ಸೇರಿಸಿದರು. ಇದರಿಂದಾಗಿ ತಂಡದ ಜಯ ಖಚಿತವಾಯಿತು.

ಭಾರತ ತಂಡದ ಬ್ಯಾಟರ್ ಪ್ರತೀಕಾ ರಾವಳ್ ಬ್ಯಾಟಿಂಗ್ ಶೈಲಿ –ಬಿಸಿಸಿಐ ಚಿತ್ರ

24 ವರ್ಷದ ಪ್ರತೀಕಾ ಅವರಿಗೆ ಇದು ನಾಲ್ಕನೇ ಅಂತರರಾಷ್ಟ್ರೀಯ ಪಂದ್ಯ. ಅವರು ಒತ್ತಡದ ಸಂದರ್ಭವನ್ನು ಅನುಭವಿ ಆಟಗಾರ್ತಿಯಂತೆಯೇ ನಿಭಾಯಿಸಿದರು. ಮಧ್ಯಮ ಕ್ರಮಾಂಕ ಕುಸಿದಾಗಲೂ ಅವರು ತಾಳ್ಮೆಗೆಡದೇ ಇನಿಂಗ್ಸ್‌ಗೆ ಬಲ ತುಂಬಿದರು.

ತೇಜಲ್ ಅವರು ರಾಷ್ಟ್ರೀಯ ತಂಡಕ್ಕೆ ತಾವು ಮರಳಿ ಬಂದಿರುವುದನ್ನು ಅರ್ಧಶತಕದ ಮೂಲಕ ಘೋಷಿಸಿದರು. ಹೋದ ವರ್ಷ ಅಕ್ಟೋಬರ್ ನಲ್ಲಿ ನ್ಯೂಜಿಲೆಂಡ್ ವಿರುದ್ಧ ಏಕದಿನ ಪಂದ್ಯದಲ್ಲಿ ಆಡಿದ ನಂತರ ಅವರಿಗೆ ಸ್ಥಾನ ಲಭಿಸಿರಲಿಲ್ಲ. ಈಗ ಮತ್ತೆ ಸಿಕ್ಕ ಅವಕಾಶವನ್ನು ಅವರು ಸಮರ್ಥವಾಗಿ ಬಳಸಿಕೊಂಡರು. ಭಾರತ ತಂಡವು 34.3 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 241 ರನ್ ಗಳಿಸಿತು.

ಪ್ರವಾಸಿ ತಂಡದ ನಾಯಕಿ ಗ್ಯಾಬಿ ಲೂಯಿಸ್ (92; 129ಎ) ಅವರು 8 ರನ್‌ಗಳ ಅಂತರದಿಂದ ಶತಕ ಕೈತಪ್ಪಿಸಿಕೊಂಡರು. ಮಧ್ಯಮ ಕ್ರಮಾಂಕದ ಬ್ಯಾಟರ್ ಲಿಹ್ ಪಾಲ್ ಅವರು (59 ರನ್) ಅರ್ಧಶತಕ ಗಳಿಸಿದರು.

ಸಂಕ್ಷಿಪ್ತ ಸ್ಕೋರು: ಐರ್ಲೆಂಡ್: 50 ಓವರ್‌ಗಳಲ್ಲಿ 7ಕ್ಕೆ238 (ಗ್ಯಾಬಿ ಲೂಯಿಸ್ 92, ಲೀಹ್ ಪಾಲ್ 59, ಅಲೆನ್ ಕೆಲ್ಲಿ 28, ಪ್ರಿಯಾ ಮಿಶ್ರಾ 56ಕ್ಕೆ2) ಭಾರತ: 34.3 ಓವರ್‌ಗಳಲ್ಲಿ 4ಕ್ಕೆ241 (ಸ್ಮೃತಿ ಮಂದಾನ 41, ಪ್ರತೀಕ್ ರಾವಳ್ 89, ಹರ್ಲೀನ್ ಡಿಯೊಲ್ 20, ತೇಜಲ್ ಹಸಬ್ನೀಸ್ ಔಟಾಗದೆ 53, ಅಐಮೀ ಮೆಗೈರ್ 57ಕ್ಕೆ3) ಫಲಿತಾಂಶ: ಭಾರತ ತಂಡಕ್ಕೆ 6 ವಿಕೆಟ್‌ಗಳ ಜಯ ಹಾಗೂ ಸರಣಿಯಲ್ಲಿ 1-0 ಮುನ್ನಡೆ.

ಸಂದರ್ಶನದ ವಿಷಯ ಕೆದಕಲು ನಕಾರ

2022ರಲ್ಲಿ ಮೆಲ್ಬರ್ನ್‌ನಲ್ಲಿ ನೀಡಿದ್ದ ಆಹಾರದ ಬಗ್ಗೆ ಸಂದೇಹಿಸಿದ್ದ ಜೊಕೊ

ಮೆಲ್ಬರ್ನ್ (ಎಪಿ): ಮೂರು ವರ್ಷಗಳ ಹಿಂದೆ (2022ರಲ್ಲಿ) ಆಸ್ಟ್ರೇಲಿಯಾದಲ್ಲಿ ತಮ್ಮನ್ನು ವಶಕ್ಕೆ ಪಡೆದ ಸಂದರ್ಭದಲ್ಲಿ ನೀಡಿದ್ದ ಆಹಾರ ಸೇವನೆಯ ಬಳಿಕ ತಮ್ಮ ರಕ್ತದಲ್ಲಿ ಲೋಹದ ಅಂಶ ಗಣನೀಯವಾಗಿ ಏರಿತ್ತು ಎಂದು ಈ ಹಿಂದೆ ನೀಡಿದ್ದ ಸಂದರ್ಶನದ ಬಗ್ಗೆ ಮಾತನಾಡಲು ಟೆನಿಸ್ ದಿಗ್ಗಜ ನೊವಾಕ್ ಜೊಕೊವಿಚ್ ಶುಕ್ರವಾರ ನಿರಾಕರಿಸಿದರು.

ಕೆಲವು ತಿಂಗಳ ಹಿಂದೆ ಜಿಕ್ಯೂ ಎಂಬ ನಿಯತಕಾಲಿಕಕ್ಕೆ ನೀಡಿದ್ದ ಸಂದರ್ಶನದಲ್ಲಿ ಸರ್ಬಿಯಾದ ತಾರೆ ಜೊಕೊವಿಚ್ ಮೇಲಿನಂತೆ ದೂರಿದ್ದರು.

‘ಈ ವಿಷಯವನ್ನು ಇನ್ನಷ್ಟು ವಿವರವಾಗಿ ಮಾತನಾಡಲು ಇಷ್ಟಪಡುವುದಿಲ್ಲ. ನಾನು ಈಗ ಬಂದಿರುವುದು ಆಡಲು. ಅದರ ಬಗ್ಗೆಯಷ್ಟೇ ಗಮನಹರಿಸುತ್ತೇನೆ’ ಎಂದು ಆಸ್ಟ್ರೇಲಿಯನ್ ಓಪನ್ ಚಾಂಪಿಯನ್‌ಷಿಪ್‌ಗೆ ಪೂರ್ವಭಾವಿಯಾಗಿ ನಡೆದ ಮಾಧ್ಯಮಗೋಷ್ಠಿಯಲ್ಲಿ ಅವರು ಪ್ರತಿಕ್ರಿಯಿಸಿದರು. ಆಸ್ಟ್ರೇಲಿಯನ್ ಓಪನ್ ಟೂರ್ನಿ ಭಾನುವಾರ ಆರಂಭವಾಗಲಿದೆ.

‘ಈ ಹಿಂದೆ ನಾನೇನು ಹೇಳಿದ್ದೆ ಮತ್ತು ಆ ಬಗ್ಗೆ ವಿವರಗಳು ಬೇಕಿದ್ದರೆ, ಆ ಲೇಖನದಿಂದ ಪಡೆಯಬಹುದು’ ಎಂದು 37 ವರ್ಷ ವಯಸ್ಸಿನ ಆಟಗಾರ ಹೇಳಿದರು. ಆ ಲೇಖನವನ್ನು ಈ ವಾರ ಆನ್‌ಲೈನ್‌ನಲ್ಲಿ ಪೋಸ್ಟ್ ಮಾಡಲಾಗಿದೆ.

ಜೊಕೊವಿಚ್

ಟೆನಿಸ್ ಇತಿಹಾಸದಲ್ಲೇ 25 ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಗೆದ್ದಿರುವ ಮೊದಲಿಗರೆಂಬ ಹಿರಿಮೆ ಪಡೆಯುವ ಪ್ರಯತ್ನದಲ್ಲಿರುವ ಜೊಕೊವಿಚ್ ಅವರು ಕೆಲ ಸಮಯದ ಹಿಂದೆ ಬ್ರಿಟನ್‌ನ ಆಟಗಾರ ಆ್ಯಂಡಿ ಮರ್ರೆ ಅವರನ್ನು ತಮ್ಮ ಕೋಚ್ ಆಗಿ ನೇಮಿಸಿಕೊಂಡಿದ್ದಾರೆ.

2022ರಲ್ಲಿ ಆಸ್ಟ್ರೇಲಿಯನ್ ಓಪನ್ ಆಡಲು ಬಂದಾಗ ಏನೇನು ನಡೆಯಿತು ಎಂಬುದನ್ನು ಜಿಕ್ಯೂಗೆ ನೀಡಿದ ಸಂದರ್ಶನದಲ್ಲಿ ಜೊಕೊವಿಚ್ ವಿವರವಾಗಿ ತಿಳಿಸಿದ್ದರು. ಪಾಲ್ಗೊಳ್ಳುವ ಆಟಗಾರರೆಲ್ಲ ಕೋವಿಡ್ ಲಸಿಕೆ ಪಡೆದು ಬರಬೇಕೆಂಬ ನಿಯಮ ಉಲ್ಲಂಘಿಸಿದ್ದಕ್ಕೆ ಜೊಕೊ ಅವರನ್ನು ಟೂರ್ನಿಯಿಂದ ಹೊರಹಾಕಲಾಗಿತ್ತು.

‘ನನಗೆ ಆರೋಗ್ಯ ಸಮಸ್ಯೆ ಕಾಡಿತು. ಮೆಲ್ಬರ್ನ್ ಹೋಟೆಲ್‌ನಲ್ಲಿದ್ದಾಗ ನನಗೆ ನೀಡಿದ ಆಹಾರದಲ್ಲಿ ಏನೊ ಹೆಚ್ಚುಕಮ್ಮಿ ಆಗಿರಬೇಕು ಎಂದು ಮನವರಿಕೆಯಾಯಿತು’ ಎಂದು ಜೊಕೊವಿಚ್ ಹೇಳಿದ್ದರು. ಸರ್ಬಿಯಾಕ್ಕೆ ಮರಳಿದ ನಂತರ ಈ ಬಗ್ಗೆ ಆರೋಗ್ಯ ತಪಾಸಣೆಗೆ ಒಳಗಾದೆ. ಈ ಬಗ್ಗೆ ಯಾರ ಬಳಿಯೂ ಬಹಿರಂಗವಾಗಿ ಮಾತನಾಡಿರಲಿಲ್ಲ. ಆದರೆ ನನ್ನ ದೇಹದಲ್ಲಿ ಲೋಹದ ಅಂಶ ಬಹಳ ಹೆಚ್ಚಿನ ಪ್ರಮಾಣದಲ್ಲಿ ಕಂಡುಬಂದಿತು. ಸೀಸ ಮತ್ತು ಪಾದರಸದ ಅಂಶಗಳು ತುಂಬಾ ಪ್ರಮಾಣದಲ್ಲಿದ್ದವು’ ಎಂದೂ ತಿಳಿಸಿದ್ದರು.

ಪೊಲೀಸ್ ವಶದಲ್ಲಿದ್ದಾಗ ನೀಡಿದ್ದ ಆಹಾರಕ್ಕೂ ಮತ್ತು ಜಿಕ್ಯೂ ಪತ್ರಿಕೆಯಲ್ಲಿ ಹೇಳಿದಂತೆ ರಕ್ತದ ಮಟ್ಟದಲ್ಲಿ ಲೋಹದ ಅಂಶ ಏರಿಕೆಗೆ ಸಂಬಂಧಿಸಿ ಏನಾದರೂ ಪುರಾವೆ ಇದೆಯೇ ಎಂಬ ಪ್ರಶ್ನೆಗೆ ಸರ್ಬಿಯಾದ ಆಟಗಾರ ಮಾಧ್ಯಮಗೋಷ್ಠಿಯಲ್ಲಿ ನೇರವಾಗಿ ಏನೂ ಹೇಳಲಿಲ್ಲ.

ಡೋಪಿಂಗ್: ಏಪ್ರಿಲ್‌ನಲ್ಲಿ ಸಿನ್ನರ್ ವಿಚಾರಣೆ

ಪ್ಯಾರಿಸ್ (ಎಎಫ್‌ಪಿ): ವಿಶ್ವದ ಅಗ್ರಮಾನ್ಯ ಟೆನಿಸ್ ಆಟಗಾರ ಯಾನಿಕ್ ಸಿನ್ನರ್ ಅವರ ವಿರುದ್ಧದ ಉದ್ದೀಪನ ಮದ್ದು ಸೇವನೆ ಪ್ರಕರಣದ ವಿಚಾರಣೆಯನ್ನು ಕ್ರೀಡಾ ಮಧ್ಯಸ್ಥಿಕೆ ನ್ಯಾಯಾಲಯ (ಕೋರ್ಟ್ ಆಫ್ ಆರ್ಬಿಟ್ರೇಷನ್ ಫಾರ್ ಸ್ಪೋರ್ಟ್ಸ್– ಸಿಎಎಸ್) ಏಪ್ರಿಲ್ 16 ಮತ್ತು 17ರಂದು ನಡೆಸಲಿದೆ.

ಇದನ್ನು ಲುಸಾನ್‌ನಲ್ಲಿ ಕೇಂದ್ರ ಕಚೇರಿ ಹೊಂದಿರುವ ಸಿಎಎಸ್ ಶುಕ್ರವಾರ ತಿಳಿಸಿದೆ. ಇಂಟರ್‌ನ್ಯಾಷನಲ್ ಟೆನಿಸ್ ಇಂಟೆಗ್ರಿಟಿ ಏಜನ್ಸಿ (ಐಟಿಐಎ)ಯು ಸಿನ್ನರ್ ಅವರನ್ನು ದೋಷಮುಕ್ತಗೊಳಿಸಿದ್ದನ್ನು ಪ್ರಶ್ನಿಸಿ ವಿಶ್ವ ಉದ್ದೀಪನ ಮದ್ದು ಸೇವನೆ ನಿಗ್ರಹ ಘಟಕವು ಸಿಎಎಸ್‌ಗೆ ಮೇಲ್ಮನವಿ ಸಲ್ಲಿಸಿತ್ತು.

ಹೋದ ವರ್ಷದ ಮಾರ್ಚ್‌ನಲ್ಲಿ ಸಿನ್ನರ್ ಅವರು ನಿಷೇಧಿತ ಮದ್ದು ಕ್ಲೊಸ್ಟೆಬಾಲ್ ಸೇವನೆ ಮಾಡಿದ್ದು ದೃಢಪಟ್ಟಿತ್ತು.

ಎಚ್‌ಐ ಫ್ಲೈಯರ್ಸ್ ತಂಡಕ್ಕೆ ಭರ್ಜರಿ ಗೆಲುವು

ಬೆಂಗಳೂರು: ಎಚ್‌ಐ ಫ್ಲೈಯರ್ಸ್ ತಂಡ 6ನೇ ಆವೃತ್ತಿಯ ಚೈರೋಸ್ ಭೀಮಯ್ಯ ಹಾಕಿ ಕಪ್‌ನಲ್ಲಿ ಎದುರಾಳಿ ವೈಕಿಂಗ್ಸ್ ತಂಡದ ವಿರುದ್ಧ ಗೆಲುವು ದಾಖಲಿಸಿತು.

ಎಫ್‌ಎಂಕೆಎಂಸಿ ಹಾಕಿ ಮೈದಾನದಲ್ಲಿ ಹಾಕಿ ಕರ್ನಾಟಕ ಆಶ್ರಯದಲ್ಲಿ ನಡೆದ ಟೂರ್ನಿಯಲ್ಲಿ ಎಚ್‌ಐ ಫ್ಲೈಯರ್ಸ್ ತಂಡ 9-1 ಗೋಲುಗಳಿಂದ ವೈಕಿಂಗ್ಸ್ ತಂಡವನ್ನು ಮಣಿಸಿತು.

ಇತರೆ ತಂಡಗಳ ಫಲಿತಾಂಶ:

ಭೀಮಾಸ್ 10–3ರಿಂದ ಡಿವೈಇಎಸ್ ಬಳ್ಳಾರಿ ವಿರುದ್ಧ; ಕೂರ್ಗ್ ಹಾವ್ಕ್ಸ್ ತಂಡ 8–1ರಿಂದ ಹಾಕಿ ಗದಗ್ ವಿರುದ್ಧ; ಎಸ್‌ಡಬ್ಲ್ಯುಆರ್ ಹುಬ್ಬಳ್ಳಿ ತಂಡ 7–3ರಿಂದ ಹಾಕಿ ಬಳ್ಳಾರಿ ವಿರುದ್ಧ;ಡಿವೈಇಎಸ್ ಬೆಂಗಳೂರು ಬಿ 5–3ರಿಂದ ಬಾಸಟೊರಾ ಬಾಯ್ಸ್ ಗೋವಾ ವಿರುದ್ಧ; ಬೆಂಗಳೂರು ಬ್ಲೂಸ್ ತಂಡ 3–2ರಿಂದ ಎಸ್‌ಎಎಸ್‌ಎ ಅಕಾಡೆಮಿ ವಿರುದ್ಧ; ಹೈಫ್ಲೈಯರ್ಸ್ ತಂಡ 4–3ರಿಂದ ಎಸ್‌ಟಿಸಿ ತಂಡದ ವಿರುದ್ಧ; ಎಜಿಒಆರ್‌ಸಿ ತಂಡ 13–0ರಿಂದ ವಿಕಿಂಗ್ಸ್ ವಿರುದ್ಧ; ಬಿಎಸ್‌ಸಿ ಎಂಇಜಿ ತಂಡ 11–0ರಿಂದ ಡಿವೈಇಎಸ್ ಬಳ್ಳಾರಿ ವಿರುದ್ಧ ಗೆದ್ದುಕೊಂಡಿತು.

ಐಎಸ್‌ಎಲ್: ಪ್ಲೇ ಆಫ್ ಸ್ಥಾನದತ್ತ ಚೆಟ್ರಿ ಪಡೆಯ ಚಿತ್ತ

ಬಿಎಫ್‌ಸಿಗೆ ಮೊಹಮ್ಮಡನ್ ಎದುರಾಳಿ

ಬೆಂಗಳೂರು: ತವರಿನಲ್ಲಿ ಅಜೇಯ ಓಟವನ್ನು ಮುಂದುವರಿಸುವ ಛಲದಲ್ಲಿರುವ ಬೆಂಗಳೂರು ಎಫ್‌ಸಿ ತಂಡವು ಇಂಡಿಯನ್ ಸೂಪರ್ ಲೀಗ್‌ನ ಪಂದ್ಯದಲ್ಲಿ ಶನಿವಾರ ಕೋಲ್ಕತ್ತದ ಮೊಹಮ್ಮಡನ್ ಸ್ಪೋರ್ಟಿಂಗ್ ಕ್ಲಬ್ ತಂಡವನ್ನು ಎದುರಿಸಲಿದೆ.

ಪಾಯಿಂಟ್ ಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿರುವ ಸುನಿಲ್ ಚೆಟ್ರಿ ಬಳಗವು ಇಲ್ಲಿನ ಕಂಠೀರವ ಕ್ರೀಡಾಂಗಣದಲ್ಲಿ ನಡೆಯುವ ಹಣಾಹಣಿಯಲ್ಲಿ ಪಾರಮ್ಯ ಮೆರೆದು, ಪ್ಲೇ ಆಫ್ ಸ್ಥಾನವನ್ನು ಭದ್ರಪಡಿಸಲು ಎದುರು ನೋಡುತ್ತಿದೆ. ತವರಿನಲ್ಲಿ ಆಡಿರುವ ಏಳು ಪಂದ್ಯಗಳ ಪೈಕಿ ಐದರಲ್ಲಿ ಗೆದ್ದಿದ್ದರೆ, ಉಳಿದ ಎರಡರಲ್ಲಿ ಡ್ರಾ ಸಾಧಿಸಿದೆ.

ಪ್ರಸ್ತುತ ಆವೃತ್ತಿಯ ಆರಂಭದಲ್ಲಿ 2–1 ಗೋಲುಗಳಿಂದ ಮೊಹಮ್ಮಡನ್ ತಂಡವನ್ನು ಮಣಿಸಿದ್ದ ಬಿಎಫ್‌ಸಿ ತಂಡ, 2018-19ರ ಋತುವಿನ ನಂತರ ಮೊದಲ ಬಾರಿ ಕೋಲ್ಕತ್ತದ ಕ್ಲಬ್ ಒಂದರ ವಿರುದ್ಧ ಎರಡನೇ ಜಯವನ್ನು ದಾಖಲಿಸುವ ಅವಕಾಶ ಹೊಂದಿದೆ.

ಮತ್ತೊಂದೆಡೆ ಮೊಹಮ್ಮಡನ್ ತಂಡವು ಸತತ ಐದು ಪಂದ್ಯಗಳ ಗೋಲುರಹಿತ ಸರಪಣಿಯನ್ನು ಕಳಚಿಕೊಳ್ಳುವ ಪ್ರಯತ್ನ ನಡೆಸಲಿದೆ.

ಬಿಎಫ್‌ಸಿ ನಾಯಕ ಸುನಿಲ್ ಚೆಟ್ರಿ

ಐಎಸ್‌ಎಲ್‌ನ ಇತಿಹಾಸದಲ್ಲಿ ಇದು ಜಂಟಿ ಮೂರನೇ ಅತಿ ದೀರ್ಘ ಗೋಲುರಹಿತ ಸರಪಣಿಯಾಗಿದೆ.

ಬಿಎಫ್‌ಸಿ ತಂಡ ಆಡಿರುವ 14 ಪಂದ್ಯಗಳಿಂದ (8 ಗೆಲುವು, 3 ಡ್ರಾ, 3 ಸೋಲು) 27 ಅಂಕ ಗಳಿಸಿದೆ. ಮೋಹನ್ ಬಾಗನ್ ಸೂಪರ್ ಜೈಂಟ್ಸ್ ತಂಡ (32) ಪಾಯಿಂಟ್ಸ್ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ. ಮೊಹಮ್ಮಡನ್ ತಂಡವೂ ಅಷ್ಟೇ ಪಂದ್ಯಗಳನ್ನು ಆಡಿದ್ದು ಕೇವಲ ಒಂದು ಪಂದ್ಯ ಗೆದ್ದಿದೆ. ನಾಲ್ಕರಲ್ಲಿ ಡ್ರಾ ಸಾಧಿಸಿದ್ದರೆ, ಉಳಿದ ಒಂಬತ್ತು ಪಂದ್ಯಗಳನ್ನು ಸೋತು ಏಳು ಅಂಕಗಳೊಂದಿಗೆ ಕೊನೆಯ ಮತ್ತು 13ನೇ ಸ್ಥಾನದಲ್ಲಿದೆ.

ಇಂದಿನ ಪಂದ್ಯಗಳು

ಬೆಂಗಳೂರು ಎಫ್‌ಸಿ– Vs ಮೊಹಮ್ಮಡನ್ ಎಸ್‌ಸಿ(ಸಂಜೆ 5)

ಮೋಹನ್ ಬಾಗನ್– Vs ಈಸ್ಟ್ ಬೆಂಗಾಲ್ (ರಾತ್ರಿ 7.30)

ಲೈವ್: ಸ್ಪೋರ್ಟ್ಸ್ 18, ಜಿಯೊ ಸಿನಿಮಾ

ಬೆಂಗಳೂರು ತಂಡವು ಕೊನೆಯ ಐದು ಪಂದ್ಯಗಳ ಪೈಕಿ ತಲಾ ಎರಡರಲ್ಲಿ ಗೆಲುವು ಮತ್ತು ಸೋಲು ಕಂಡು, ಒಂದರಲ್ಲಿ ಡ್ರಾ ಸಾಧಿಸಿದೆ. ಹಿಂದಿನ ಪಂದ್ಯದಲ್ಲಿ ಜೆಮ್‌ಷೆಡ್‌ಪುರ ಎಫ್‌ಸಿ ವಿರುದ್ಧ ಆರಂಭಿಕ ಮೇಲುಗೈ ಸಾಧಿಸಿದ್ದ ಚೆಟ್ರಿ ಬಳಗ, ಕೊನೆಯ ಹಂತದಲ್ಲಿ 1–2ರಿಂದ ಮುಗ್ಗರಿಸಿತ್ತು.

ದಿನದ ಮತ್ತೊಂದು ಪಂದ್ಯದಲ್ಲಿ ಮೋಹನ್ ಬಾಗನ್ ತಂಡವು ಸಾಂಪ್ರದಾಯಿಕ ಎದುರಾಳಿ ಈಸ್ಟ್ ಬೆಂಗಾಲ್ ತಂಡವನ್ನು ಎದುರಿಸಲಿದೆ. ಕೋಲ್ಕತ್ತದಲ್ಲಿ ನಡೆಯಬೇಕಿದ್ದ ಈ ಪಂದ್ಯವನ್ನು ಭದ್ರತಾ ಕಾರಣದಿಂದ ಗುವಾಹಟಿಗೆ ಸ್ಥಳಾಂತರಿಸಲಾಗಿದೆ.

ಸೌತ್ ಯುನೈಟೆಡ್ ತಂಡಕ್ಕೆ ಜಯ

ಬೆಂಗಳೂರು: ಸೌತ್ ಯುನೈಟೆಡ್ ಎಫ್‌ಸಿ ತಂಡವು ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 3-0 ಗೋಲುಗಳಿಂದ ಬಿಯುಎಫ್‌ಸಿ ತಂಡವನ್ನು ಮಣಿಸಿತು.

ಅಶೋಕನಗರದ ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಯುನೈಟೆಡ್ ಎಫ್‌ಸಿ ಪರ ಇಶಾನ್ ಸಾಯಿ (21ನೇ ನಿಮಿಷ), ಅಲ್ತಾಬ್ ಹುಸೇನ್ (64ನೇ ನಿ.), ಎ.ಮೊಹಮ್ಮದ್ ಮೊಯಿದ್ದೀನ್ (73ನೇ ನಿ) ಗೋಲುಗಳನ್ನು ಹೊಡೆದರು.

ಮತ್ತೊಂದು ಪಂದ್ಯದಲ್ಲಿ ಎಎಸ್‌ಸಿ ಅಂಡ್ ಸೆಂಟರ್ ಎಫ್‌ಸಿ 4–2 ಗೋಲುಗಳಿಂದ ರೂಟ್ಸ್ ಎಫ್‌ಸಿ ತಂಡವನ್ನು ಮಣಿಸಿತು. ‘ಬಿ’ ಡಿವಿಷನ್ ಲೀಗ್‌ನ ಪಂದ್ಯದಲ್ಲಿ ಜೂನೊ ಎಫ್‌ಸಿ 5–0 ಗೋಲುಗಳಿಂದ ವೆಟೆರಿಯನ್ಸ್ ಎಫ್‌ಸಿ ತಂಡವನ್ನು ಸೋಲಿಸಿತು. ಸೌತ್ ಇಂಡಿಯಾ ಎಫ್‌ಸಿ 2–0 ಗೋಲುಗಳಿಂದ ಬೆಂಗಳೂರು ವಾರಿಯರ್ಸ್ ಎಫ್‌ಸಿ ವಿರುದ್ಧ 2–0 ಗೋಲುಗಳಿಂದ ಗೆದ್ದುಕೊಂಡಿತು.ಎರಡನೇ ಪಂದ್ಯದಲ್ಲಿ ಟೆಕ್ನಿಕೊ ಎಫ್‌ಎಫ್ 3–0 ಗೋಲುಗಳಿಂದ ಅಂಚೆ ಇಲಾಖೆ ಎಫ್‌ಸಿ ತಂಡವನ್ನು ಮಣಿಸಿತು.

ಮಯಂಕ್ ಬಳಗಕ್ಕೆ ಕೃಣಾಲ್ ಪಡೆ ಸವಾಲು

ವಿಜಯ್ ಹಜಾರೆ ಟ್ರೋಫಿ: ಕ್ವಾರ್ಟರ್‌ಫೈನಲ್ ಇಂದು

ವಡೋದರಾ: ಭಾರತ ತಂಡಕ್ಕೆ ಮರಳುವ ಕನಸು ಕಾಣುತ್ತಿರುವ ಮಯಂಕ್ ಅಗರವಾಲ್ ನಾಯಕತ್ವದ ಕರ್ನಾಟಕ ಮತ್ತು ಕೃಣಾಲ್ ಪಾಂಡ್ಯ ನೇತೃತ್ವದ ಬರೋಡಾ ತಂಡಗಳು ಶನಿವಾರ ನಡೆಯಲಿರುವ ವಿಜಯ್ ಹಜಾರೆ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯ ಕ್ವಾರ್ಟರ್‌ಫೈನಲ್‌ನಲ್ಲಿ ಮುಖಾಮುಖಿಯಾಗಲಿವೆ.

ಎಡಗೈ ಬ್ಯಾಟರ್ ದೇವದತ್ತ ಪಡಿಕ್ಕಲ್ ಮತ್ತು ವೇಗಿ ಪ್ರಸಿದ್ಧ ಕೃಷ್ಣ ಅವರು ಆಸ್ಟ್ರೇಲಿಯಾದಿಂದ ಮರಳಿದ್ದು, ಕರ್ನಾಟಕ ತಂಡ ಸೇರಿಕೊಂಡಿದ್ದಾರೆ. ಇದರಿಂದಾಗಿ ಮಯಂಕ್ ಬಳಗದ ಬಲ ಹೆಚ್ಚಿದೆ.

ಸಿ ಗುಂಪಿನಲ್ಲಿ 24 ಅಂಕ ಗಳಿಸಿದ್ದ ಕರ್ನಾಟಕ ಮತ್ತು ಇ ಗುಂಪಿನಲ್ಲಿ 20 ಅಂಕ ಪಡೆದಿರುವ ಬರೋಡಾ ತಂಡಗಳು ನೇರವಾಗಿ ಎಂಟರ ಘಟ್ಟಕ್ಕೆ ಪ್ರವೇಶಿಸಿವೆ. ಗುಂಪು ಹಂತದಲ್ಲಿ ಕರ್ನಾಟಕ ತಂಡವು ಆಡಿದ್ದ 7 ಪಂದ್ಯಗಳಲ್ಲಿ 6ರಲ್ಲಿ ಜಯಿಸಿ, 1ರಲ್ಲಿ ಸೋತಿತ್ತು. ಬರೋಡಾ 6 ಪಂದ್ಯಗಳಲ್ಲಿ 5ರಲ್ಲಿ ಜಯಿಸಿ, 1ರಲ್ಲಿ ಪರಾಭವಗೊಂಡಿತ್ತು.

ಮಯಂಕ್ ಅಗರವಾಲ್ ಅಮೋಘ ಫಾರ್ಮ್‌ನಲ್ಲಿದ್ದಾರೆ ಅವರು 4 ಶತಕಗಳನ್ನು ಗಳಿಸಿದ್ದಾರೆ. ಒಟ್ಟು 613 ರನ್‌ಗಳಿಸಿ ಬ್ಯಾಟರ್‌ಗಳಪಟ್ಟಿ ಯಲ್ಲಿ ಅಗ್ರಸ್ಥಾನದಲ್ಲಿದ್ದಾರೆ. ಅವರಲ್ಲದೇ ಕೆ.ಎಲ್. ಶ್ರೀಜಿತ್ ಮತ್ತು ಆರ್. ಸ್ಮರಣ್ ಅವರು ಉತ್ತಮ ಬ್ಯಾಟಿಂಗ್ ಲಯದಲ್ಲಿದ್ದಾರೆ. ಲೆಗ್ ಸ್ಪಿನ್ನರ್ ಶ್ರೇಯಸ್ ಗೋಪಾಲ್ 14 ವಿಕೆಟ್‌ಗಳನ್ನು ಗಳಿಸಿದ್ದಾರೆ. ಮಧ್ಯಮ ವೇಗಿ ವಿ. ಕೌಶಿಕ್ ಅವರು ಉತ್ತಮ ಲಯದಲ್ಲಿದ್ದಾರೆ. ವಿದ್ವತ್ ಕಾವೇರಪ್ಪ ಅವರ ಗೈರುಹಾಜರಿಯಲ್ಲಿ ತಂಡದ ಬೌಲಿಂಗ್ ವಿಭಾಗವನ್ನು ಸಮರ್ಥವಾಗಿ ನಿಭಾಯಿಸಿದ್ದಾರೆ.

ಮಯಂಕ್ ಅಗರವಾಲ್

ಕೃಣಾಲ್ ಪಾಂಡ್ಯ

ಪಂದ್ಯ ನಡೆಯಲಿರುವ ಮೋತಿ ಭಾಗ್ ಕ್ರೀಡಾಂಗಣವು ಬರೋಡಾ ತಂಡಕ್ಕೆ ತವರಿನಂಗಳವಾಗಿದೆ. ಆಲ್ ರೌಂಡರ್ ಕೃಣಾಲ್, ವಿಷ್ಣು ಸೋಳಂಕಿ, ನಿನಾದ್ ಅಶ್ವಿನ್‌ಕುಮಾರ್ ರಥ್ವಾ ಅವರು ಉತ್ತಮ ಲಯದಲ್ಲಿದ್ದಾರೆ. ಹಾರ್ದಿಕ್ ಪಾಂಡ್ಯ ತಮ್ಮ ಫಾರ್ಮ್‌ಗೆ ಮರಳಿದರೆ ಕರ್ನಾಟಕಕ್ಕೆ ಕಠಿಣ ಸವಾಲು ಎದುರಾಗಬಹುದು.

ಇಂಗ್ಲೆಂಡ್ ಎದುರಿನ ಸರಣಿ ಮತ್ತು ಚಾಂಪಿಯನ್ಸ್ ಟ್ರೋಫಿ ಟೂರ್ನಿಗಾಗಿ ತಂಡದ ಆಯ್ಕೆಯು ಶೀಘ್ರದಲ್ಲಿಯೇ ನಡೆಯಲಿದೆ. ಆಯ್ಕೆಗಾರರ ಗಮನ ಸೆಳೆಯಲು ಆಟಗಾರರಿಗೆ ಈ ಕ್ವಾರ್ಟರ್ ಫೈನಲ್ ಪ್ರಮುಖ ವೇದಿಕೆಯಾಗಿದೆ.ಇನ್ನೊಂದು ಕ್ವಾರ್ಟರ್‌ಫೈನಲ್‌ನಲ್ಲಿ ಮಹಾರಾಷ್ಟ್ರ ಮತ್ತು ಪಂಜಾಬ್ ತಂಡಗಳು ಹಣಾಹಣಿ ನಡೆಸಲಿವೆ. ಪಂದ್ಯ ಆರಂಭ: **ಬೆಳಿಗ್ಗೆ 9**

ನೀಲಿ ಚಿತ್ರ ತಾರೆಯೊಬ್ಬರಿಗೆ ಡೊನಾಲ್ಡ್ ಟ್ರಂಪ್ ಹಣ ನೀಡಿದ ಪ್ರಕರಣ

ಬೇಷರತ್ ಬಿಡುಗಡೆಯೇ ಶಿಕ್ಷೆ

ನ್ಯೂಯಾರ್ಕ್ (ಎಪಿ): ಮುಜುಗರ ಉಂಟಾಗುವಂತಹ ವಿಷಯಗಳನ್ನು ಬಹಿರಂಗಪಡಿಸಬಾರದು ಎಂದು ನೀಲಿ ಚಿತ್ರ ತಾರೆಯೊಬ್ಬರಿಗೆ ಹಣ ನೀಡಿದ ಪ್ರಕರಣದಲ್ಲಿ ಅಮೆರಿಕ ನಿಯೋಜಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ‘ಬೇಷರತ್ ಬಿಡುಗಡೆ’ಯ ಶಿಕ್ಷೆ ವಿಧಿಸಿರುವ ನ್ಯಾಯಾಲಯವು, ಟ್ರಂಪ್ ಅವರಿಗೆ ಜೈಲುವಾಸ ಅಥವಾ ದಂಡ ವಿಧಿಸಲು ನಿರಾಕರಿಸಿದೆ.

ಡೊನಾಲ್ಡ್ ಟ್ರಂಪ್

ನ್ಯಾಯಾಲಯದ ಈ ತೀರ್ಮಾನವು ಟ್ರಂಪ್ ಅವರು ದೋಷಿ ಎಂದು ಘೋಷಿಸಿದ್ದನ್ನು ಖಚಿತಪಡಿಸುತ್ತದೆ. ಆದರೆ ಅಮೆರಿಕದ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಳ್ಳುವುದಕ್ಕೂ ಮೊದಲು ಟ್ರಂಪ್ ಅವರು ಜೈಲುವಾಸಕ್ಕೆ ಗುರಿಯಾಗುವ ಅಥವಾ ದಂಡ ಪಾವತಿಸಬೇಕಾದ ಭೀತಿ ಇರುವುದಿಲ್ಲ.

ಮ್ಯಾನ್‌ಹಟನ್ ನ್ಯಾಯಾಧೀಶ ಜುವಾನ್ ಎಂ. ಮರ್ಚನ್ ಅವರಿಗೆ ಟ್ರಂಪ್ ಅವರನ್ನು ಗರಿಷ್ಠ ನಾಲ್ಕು ವರ್ಷಗಳ ಅವಧಿಗೆ ಜೈಲುಶಿಕ್ಷೆಗೆ ಗುರಿಪಡಿಸುವ ಅವಕಾಶ ಇತ್ತು. ಆದರೆ, ಅವರಿಗೆ ಅಂತಹ ಶಿಕ್ಷೆ ವಿಧಿಸದೆ ನ್ಯಾಯಾಧೀಶರು ಪ್ರಕರಣವನ್ನು ಮುಕ್ತಾಯಗೊಳಿಸಿದ್ದಾರೆ. ಹೀಗಿದ್ದರೂ, ದೊಡ್ಡ ತಪ್ಪೊಂದನ್ನು ಮಾಡಿರುವ ಸಾಬೀತಾದ ನಂತರ ಅಮೆರಿಕದ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಳ್ಳುವ ಮೊದಲ ವ್ಯಕ್ತಿ ಟ್ರಂಪ್ ಆಗಲಿದ್ದಾರೆ.

ವರ್ಚುವಲ್ ಆಗಿ ಕೋರ್ಟ್‌ನಲ್ಲಿ ಹಾಜರಿದ್ದ ಟ್ರಂಪ್ ಅವರು ತಾವು ಯಾವುದೇ ಅಪರಾಧ ಎಸಗಿಲ್ಲ ಎಂದು ಹೇಳಿದರು. ವಿಚಾರಣೆ ಎದುರಿಸಿದ್ದು ಮತ್ತು ತಾವು ಅಪರಾಧಿ ಎಂದು ಘೋಷಿತವಾಗಿದ್ದುದು ಬಹಳ ಕೆಟ್ಟ ಅನುಭವ ಆಗಿತ್ತು ಎಂದು ಹೇಳಿದರು.

ಅಮೆರಿಕದ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಳ್ಳಲಿರುವ ಟ್ರಂಪ್ ಅವರಿಗೆ ದಂಡ ವಿಧಿಸುವ ಬದಲು ಅವರ ವಿಚಾರವಾಗಿ ‘ಬೇಷರತ್ ಬಿಡುಗಡೆ’ಯ ಕ್ರಮದ ಮೊರೆಹೋಗುವ ಆಲೋಚನೆ ತಮಗೆ ಇದೆ ಎಂಬುದನ್ನು ನ್ಯಾಯಾಧೀಶರು ಸೂಚ್ಯವಾಗಿ ಹೇಳಿದ್ದರು.

ಮುಖ್ಯಾಂಶಗಳು

- ಅಪರಾಧ ಸಾಬೀತಾದ ಮೇಲೂ ಅಧ್ಯಕ್ಷ ಹುದ್ದೆಗೇರುತ್ತಿರುವ ಮೊದಲಿಗ
- ಟ್ರಂಪ್‌ಗೆ ಅವರಿಗೆ ಜೈಲುಶಿಕ್ಷೆ ಇಲ್ಲ; ದಂಡವೂ ಇಲ್ಲ ಎಂದು ಕೋರ್ಟ್ ಆದೇಶ

‘ಬೇಷರತ್ ಬಿಡುಗಡೆ’ ಅಂದರೆ

ಅಮೆರಿಕದ ನ್ಯೂಯಾರ್ಕ್ ರಾಜ್ಯದ ನ್ಯಾಯಾಲಯಗಳಲ್ಲಿನ ತುಸು ಉದಾರವಾದ ಮುಖ ಇದು. ‘ಬೇಷರತ್ ಬಿಡುಗಡೆ’ಯು ಡೊನಾಲ್ಡ್ ಟ್ರಂಪ್ ಅವರು ತಪ್ಪು ಮಾಡಿದ್ದಾರೆ ಎಂಬುದನ್ನು ಖಚಿತಪಡಿಸುತ್ತದೆ. ಆದರೆ, ಅವರನ್ನು ಜೈಲು ಶಿಕ್ಷೆಗೆ ಅಥವಾ ದಂಡ ಪಾವತಿ ಶಿಕ್ಷೆಗೆ ಗುರಿಪಡಿಸುವುದಿಲ್ಲ ಎಂದು ‘ನ್ಯೂಯಾರ್ಕ್ ಟೈಮ್ಸ್’ ವರದಿಯೊಂದು ವಿವರಿಸಿದೆ.

‘1.5 ಕಿ.ಮೀ. ಅಂತರದಲ್ಲಿ ಸ್ಪೇಡೆಕ್ಸ್ ಉಪಗ್ರಹಗಳು’

ಪ್ರಜಾವಾಣಿ ವಾರ್ತೆ

ಚೆನ್ನೈ: ಬಾಹ್ಯಾಕಾಶದಲ್ಲಿ ಜೋಡಣೆ ಪ್ರಯೋಗ ಉದ್ದೇಶದಿಂದ ‘ಸ್ಪೇಡೆಕ್ಸ್’ ಯೋಜನೆಯಡಿ ಉಡ್ಡಯನ ಮಾಡಿರುವ ಎರಡು ಉಪಗ್ರಹಗಳು ಶುಕ್ರವಾರ ರಾತ್ರಿ 1.5 ಕಿ.ಮೀ. ಅಂತರದಲ್ಲಿದ್ದವು ಎಂದು ಇಸ್ರೊ ಪ್ರಕಟಣೆಯಲ್ಲಿ ತಿಳಿಸಿದೆ.

‘ಶನಿವಾರದ ಬೆಳಿಗ್ಗೆ ವೇಳೆಗೆ, ಉಪಗ್ರಹಗಳ ನಡುವಿನ ಅಂತರ 500 ಮೀ. ಇರುವಂತೆ ಮಾಡಲಾಗುವುದು’ ಎಂದಿದೆ.

ಅವುಗಳ ನಡುವಿನ ಅಂತರವನ್ನು ಮೊದಲು 15 ಮೀಟರ್‌ಗೆ, ನಂತರ 3 ಮೀಟರ್‌ಗೆ ಇಳಿಸಿ, ಜೋಡಣೆ ಮಾಡುವ (ಡಾಕಿಂಗ್) ಯೋಜನೆ ರೂಪಿಸಲಾಗಿದೆ. ಆದರೆ, ‘ಡಾಕಿಂಗ್’ ಯಾವಾಗ ಕಾರ್ಯಗತವಾಗಲಿದೆ ಎಂಬ ಬಗ್ಗೆ ಸ್ಪಷ್ಟತೆ ಇಲ್ಲ.

ಎರಡೂ ಉಪಗ್ರಹಗಳನ್ನು ಜ.7ರಂದು ಜೋಡಿಸಲು (ಡಾಕಿಂಗ್) ಇಸ್ರೊ ಯೋಜಿಸಿತ್ತು. ಅವುಗಳ ನಡುವಿನ ಅಂತರ ನಿರೀಕ್ಷೆ ಮಾಡಿದ್ದಕ್ಕಿಂತ ಹೆಚ್ಚು ಇದ್ದ ಕಾರಣ, ಈ ಕಾರ್ಯವನ್ನು ಜ.9ಕ್ಕೆ ಮುಂದೂಡಿತ್ತು.

‘ಹೈಕಮಾಂಡ್ ದುರ್ಬಲವೇ’

ಒಂದನೇ ಪುಟದಿಂದ...

ಇದಕ್ಕೆ ಪ್ರತಿಕ್ರಿಯಿಸಿದ ಬಿ.ವೈ. ವಿಜಯೇಂದ್ರ ಅವರು, ‘ಪಕ್ಷದ ವರಿಷ್ಠರು ನನ್ನನ್ನು ಅಧ್ಯಕ್ಷನನ್ನಾಗಿ ಮಾಡಿದ್ದಾರೆ. ಅವರ ಅಪೇಕ್ಷೆಗೆ ತಕ್ಕಂತೆ ಪಕ್ಷವನ್ನು ಕಟ್ಟಿ ಬೆಳೆಸುತ್ತೇನೆ. ಅಧ್ಯಕ್ಷನಾಗಿಯೇ ಮುಂದುವರಿಯುತ್ತೇನೆ. ಪಕ್ಷವನ್ನು ಮತ್ತೆ ಅಧಿಕಾರಕ್ಕೆ ತರುವ ಹೊಣೆಗಾರಿಕೆ ಇದೆ’ ಎಂದು ಹೇಳಿದರು.

ವಿಧಾನಸಭೆ ವಿರೋಧಪಕ್ಷದ ನಾಯಕ ಆರ್.ಅಶೋಕ ಅವರು ಮಾತನಾಡುವಾಗ, ಎರಡೂ ಕೈಸೇರದೆ ಚಪ್ಪಾಳೆ ಆಗದು. ನಾವು ಪರಸ್ಪರ ಒಗ್ಗೂಡಿ ಮುನ್ನಡೆಯಬೇಕು ಎಂದು ಹೇಳಿದರು. ಇವರ ಮಾತಿಗೆ ಕೆಲ ಮಾಜಿ ಶಾಸಕರು ಆಕ್ಷೇಪ ವ್ಯಕ್ತಪಡಿಸಿದರು ಎಂದು ಮೂಲಗಳು ತಿಳಿಸಿವೆ.

ಯತ್ನಾಳ ಬಣದೊಂದಿಗೆ ಗುರುತಿಸಿಕೊಂಡಿರುವ ಕುಮಾರ್ ಬಂಗಾರಪ್ಪ ಹಾಜರಾಗಿರಲಿಲ್ಲ. ಆಹ್ವಾನ ಪಡೆದವರ ಪೈಕಿ ಶೇ 99ರಷ್ಟು ಮಾಜಿ ಶಾಸಕರು ಮತ್ತು ಸೋತ ಅಭ್ಯರ್ಥಿಗಳು ಬಂದಿದ್ದರು. ಕೆಲವರು ಅನುಮತಿ ಪಡೆದು ಗೈರಾಗಿದ್ದರು ಎಂದು ಮೂಲಗಳು ತಿಳಿಸಿವೆ.

‘ಬಲ ಪ್ರದರ್ಶನದ ಸಭೆಯಲ್ಲ’

ಒಂದನೇ ಪುಟದಿಂದ...

ಎಲ್ಲ ಸಮಾಜದ ಮತ್ತು ವರ್ಗಗಳ ಜನರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಹೋಗಬೇಕು. ರಾಜಕೀಯ ಪಕ್ಷ ಎಂದ ಮೇಲೆ ಸಣ್ಣಪುಟ್ಟ ವ್ಯತ್ಯಾಸ, ಗೊಂದಲ ಇರುತ್ತದೆ. ಅವೆಲ್ಲವನ್ನೂ ವರಿಷ್ಠರು ಗಮನಿಸುತ್ತಿದ್ದಾರೆ. ನಮ್ಮ ಕರ್ತವ್ಯ ಪಕ್ಷವನ್ನು ಬಲಪಡಿಸಿ, ಒಟ್ಟಿಗೆ ಕರೆದೊಯ್ಯುವುದು. ಆ ಕೆಲಸದ ಬಗ್ಗೆ ಗಮನಹರಿಸಿದ್ದೇವೆ ಎಂದರು.

‘ನಾನು ಅಧ್ಯಕ್ಷನಾಗಿ ಆಯ್ಕೆ ಆದ ಬಳಿಕ ಈ ಸಭೆ ನಡೆಸಬೇಕು ಎಂದುಕೊಂಡಿದ್ದೆ. ಆದರೆ, ಕೆಲಸದ ಒತ್ತಡದಿಂದ ಸಾಧ್ಯವಾಗಿರಲಿಲ್ಲ. ಆದ್ದರಿಂದ ಈಗ ಮಾಡಿದ್ದೇವೆ. ಇವತ್ತಿನ ಸಭೆಯಲ್ಲಿ ರಾಜ್ಯ ಸರ್ಕಾರ ವೈಫಲ್ಯಗಳ ಬಗ್ಗೆ ಚರ್ಚಿಸಿದೆವು’ ಎಂದರು.

ಗ್ರಾಮ ಪಂಚಾಯಿತಿ, ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಚುನಾವಣೆಗೆ ಅಭ್ಯರ್ಥಿ ಆಕಾಂಕ್ಷಿಗಳ ಪಟ್ಟಿ ಈಗಿನಿಂದಲೇ ಸಿದ್ಧಪಡಿಸಬೇಕು. ಗೆಲ್ಲಬಲ್ಲ ಪ್ರಬಲರನ್ನು ಗುರುತಿಸಬೇಕು. ಕಡೇ ಕ್ಷಣದಲ್ಲಿ ಗಡಿಬಿಡಿಯಲ್ಲಿ ಮಾಡುವುದು ಸರಿಯಲ್ಲ ಎಂದು ಸಭೆಯಲ್ಲಿ ಹೇಳಿದ್ದಾಗಿ ವಿಜಯೇಂದ್ರ ತಿಳಿಸಿದರು.

ಬೇಡಿಕೆ ಈಡೇರಿಕೆಯ ನಂತರ ಆಶಾ ಕಾರ್ಯಕರ್ತೆಯರ ಸಂಭ್ರಮ

₹10,000 ನಿಶ್ಚಿತ ಗೌರವಧನ

ಒಂದನೇ ಪುಟದಿಂದ...

ಬೆಳಿಗ್ಗೆಯ ಸಭೆ ವಿಫಲ: ಮುಖ್ಯಮಂತ್ರಿಯವರ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್. ಕೆ.ಅತೀಕ್, ಆರೋಗ್ಯ ಇಲಾಖೆ ಪ್ರಧಾನ ಕಾರ್ಯದರ್ಶಿ ಹರ್ಷ ಗುಪ್ತಾ ಅವರು ಪ್ರತಿಭಟನೆನಿರತರ ಪ್ರತಿನಿಧಿಗಳ ಜತೆಗೆ ಶುಕ್ರವಾರ ಬೆಳಿಗ್ಗೆಯೇ ಸಭೆ ನಡೆಸಿದ್ದರು. ಆದರೆ ಬೇಡಿಕೆ ಈಡೇರಿಕೆ ಸಂಬಂಧ ಒಮ್ಮತಕ್ಕೆ ಬರಲು ಸಾಧ್ಯವಾಗದ ಕಾರಣ ಮಾತುಕತೆ ವಿಫಲವಾಗಿತ್ತು.

ಸಭೆ ವಿಫಲವಾದ ಮಾಹಿತಿ ದೊರೆತ ನಂತರ ಆಶಾ ಕಾರ್ಯಕರ್ತೆಯರ ಆಕ್ರೋಶ ಹೆಚ್ಚಾಯಿತು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಮಧ್ಯ ಪ್ರವೇಶಿಸಬೇಕು ಎಂದು ಒತ್ತಾಯಿಸಿದರು. ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮಿ ಚೌಧರಿ ಸ್ಥಳಕ್ಕೆ ಭೇಟಿ ನೀಡಿ, ಆಶಾ ಕಾರ್ಯಕರ್ತೆಯರ ಜತೆ ಸಂಜೆ 4.30ರ ವೇಳೆಗೆ ಮಾತುಕತೆ ನಡೆಸಿದರು.

‘ಭತ್ಯೆ ಒಳಗೊಂಡ ನಿಶ್ಚಿತ ಮೊತ್ತ’

ಆಶಾ ಕಾರ್ಯಕರ್ತೆಯರಿಗೆ ಭತ್ಯೆಯನ್ನೂ ಒಳಗೊಂಡು ಮಾಸಿಕ ₹10,000 ನಿಶ್ಚಿತ ಗೌರವಧನ ನೀಡಲು ತೀರ್ಮಾನಿಸಲಾಗಿದೆ. ಈಗ ₹8,000 ದೊರೆಯುತ್ತಿದೆ. ಅವರು ಮಾಡಿದ ಕೆಲಸದ ಅನ್ವಯ ಭತ್ಯೆ ದೊರೆಯುತ್ತಿದೆ. ಭತ್ಯೆ ಸೇರಿ ಒಟ್ಟು ಮೊತ್ತ ₹10,000ದಷ್ಟು ಆಗದೇ ಇದ್ದರೆ, ಬಾಕಿ ಮೊತ್ತವನ್ನು ಸರ್ಕಾರವೇ ಭರಿಸಲಿದೆ. ಸರ್ಕಾರದ ಈ ನಿರ್ಧಾರವನ್ನು ಆಶಾ ಕಾರ್ಯಕರ್ತೆಯರು ಒಪ್ಪಿಕೊಂಡಿದ್ದಾರೆ. ಧರಣಿ ಹಿಂಪಡೆದಿದ್ದಾರೆ.

ಸಿದ್ದರಾಮಯ್ಯ, ಮುಖ್ಯಮಂತ್ರಿ

ಎಸ್‌ಎಸ್‌ಎಲ್‌ಸಿ, ಪಿಯು ಪರೀಕ್ಷೆ ವೇಳಾಪಟ್ಟಿ ಪ್ರಕಟ

ಒಂದನೇ ಪುಟದಿಂದ...

ದ್ವಿತೀಯ ಪಿಯು ಪರೀಕ್ಷಾ ವೇಳಾಪಟ್ಟಿ

ಮಾರ್ಚ್ 1–ಕನ್ನಡ, ಅರೇಬಿಕ್, **3**–ಗಣಿತ, ಶಿಕ್ಷಣಶಾಸ್ತ್ರ, ತರ್ಕಶಾಸ್ತ್ರ, ವ್ಯವಹಾರ ಅಧ್ಯಯನ, **4**–ತೆಲುಗು, ತಮಿಳು, ಮರಾಠಿ, ಉರ್ದು, ಸಂಸ್ಕೃತ, ಫ್ರೆಂಚ್, ಮಲಯಾಳ, **5**–ರಾಜ್ಯಶಾಸ್ತ್ರ, ಸಂಖ್ಯಾಶಾಸ್ತ್ರ, **7**–ಇತಿಹಾಸ, ಭೌತವಿಜ್ಞಾನ, **10**–ಐಚ್ಛಿಕ ಕನ್ನಡ, ಲೆಕ್ಕಶಾಸ್ತ್ರ, ಭೂಗರ್ಭ ಶಾಸ್ತ್ರ, ಗೃಹ ವಿಜ್ಞಾನ, **12**–ಮನಃಶಾಸ್ತ್ರ, ರಸಾಯನವಿಜ್ಞಾನ, ಮೂಲಗಣಿತ, **13**–ಅರ್ಥಶಾಸ್ತ್ರ, **15**–ಇಂಗ್ಲಿಷ್, **17**–ಭೂಗೋಳ ಶಾಸ್ತ್ರ, **18**– ಜೀವವಿಜ್ಞಾನ, ಸಮಾಜಶಾಸ್ತ್ರ, ವಿದ್ಯುನ್ಮಾನ ಶಾಸ್ತ್ರ, ಗಣಕ ವಿಜ್ಞಾನ, **19**–ಹಿಂದೂಸ್ತಾನಿ ಸಂಗೀತ, ಮಾಹಿತಿ ತಂತ್ರಜ್ಞಾನ, ರೀಟೈಲ್, ಆಟೊಮೊಬೈಲ್, ಹೆಲ್ತ್‌ಕೇರ್, ಬ್ಯೂಟಿ ಆ್ಯಂಡ್ ವೆಲ್‌ನೆಸ್, **20**–ಹಿಂದಿ.

ಎಸ್‌ಎಸ್‌ಎಲ್‌ಸಿ ಪರೀಕ್ಷಾ ವೇಳಾಪಟ್ಟಿ

ಮಾರ್ಚ್ 21–ಪ್ರಥಮ ಭಾಷೆಗಳಾದ ಕನ್ನಡ, ತೆಲುಗು, ಹಿಂದಿ, ಮರಾಠಿ, ತಮಿಳು, ಉರ್ದು, ಇಂಗ್ಲಿಷ್ (ಎನ್‌ಸಿಇಆರ್‌ಟಿ), ಸಂಸ್ಕೃತ, **24**–ಗಣಿತ, **26**–ದ್ವಿತೀಯ ಭಾಷೆಗಳಾದ ಇಂಗ್ಲಿಷ್, ಕನ್ನಡ, **29**–ಸಮಾಜ ವಿಜ್ಞಾನ, ಏಪ್ರಿಲ್ **1**–ಅರ್ಥಶಾಸ್ತ್ರ, ಎಂಜಿನಿಯರಿಂಗ್ ವಿಷಯಗಳು, **2**–ವಿಜ್ಞಾನ ಹಾಗೂ ರಾಜ್ಯಶಾಸ್ತ್ರ, ಹಿಂದೂಸ್ತಾನಿ, ಕರ್ನಾಟಕ ಸಂಗೀತ, **4**–ತೃತೀಯ ಭಾಷೆಗಳಾದ ಹಿಂದಿ, ಕನ್ನಡ, ಇಂಗ್ಲಿಷ್, ಅರೇಬಿಕ್, ಪರ್ಷಿಯನ್, ಉರ್ದು, ಸಂಸ್ಕೃತ, ಕೊಂಕಣಿ, ತುಳು ಹಾಗೂ ಎನ್‌ಎಸ್‌ಕ್ಯೂಎಫ್ ವಿಷಯಗಳು.

‘6 ಕ್ಷೇತ್ರಗಳಲ್ಲಿ ಎಡಪಕ್ಷಗಳ ಸ್ಪರ್ಧೆ’

ರಾಂಚಿ (ಪಿಟಿಐ): ದೆಹಲಿ ವಿಧಾನಸಭಾ ಚುನಾವಣೆಯಲ್ಲಿ ಎಡಪಕ್ಷಗಳು 6 ಸ್ಥಾನಗಳಲ್ಲಿ ಸ್ಪರ್ಧಿಸಲು ಮತ್ತು ಉಳಿದಲ್ಲಿ ಬಿಜೆಪಿ ವಿರುದ್ಧ ಕಣಕ್ಕಿಳಿಯುವ ಪ್ರಬಲ ಅಭ್ಯರ್ಥಿಗಳನ್ನು ಬೆಂಬಲಿಸಲು ನಿರ್ಧರಿಸಿವೆ ಎಂದು ಸಿಪಿಎಂ ಹಿರಿಯ ನಾಯಕಿ ಬೃಂದಾ ಕಾರಟ್ ಹೇಳಿದ್ದಾರೆ. ಬಿಜೆಪಿ ಅಧಿಕಾರಕ್ಕೆ ಬರುವುದನ್ನು ತಡೆಯಲು ಎಲ್ಲ ಪ್ರಯತ್ನಗಳನ್ನು ಮಾಡಲಾಗುವುದು ಎಂದರು.

ಪಿವಿ ಬ್ರ್ಯಾಂಡ್ ಸ್ಪಾಟ್

ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ **‘ಪಿವಿ ಬ್ರ್ಯಾಂಡ್ ಸ್ಪಾಟ್’**ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.

ಬಿಆರ್‌ಎಸ್‌ಗೆ ಹೆಚ್ಚಿನ ದೇಣಿಗೆ

2022–23ರ ಅವಧಿಯಲ್ಲಿ ದೇಶದ ಪ್ರಾದೇಶಿಕ ಪಕ್ಷಗಳ ಪೈಕಿ ಬಿಆರ್‌ಎಸ್ ಪಕ್ಷ ಅತಿ ಹೆಚ್ಚು ದೇಣಿಗೆಯನ್ನು ಪಡೆದುಕೊಂಡಿದೆ. ಪ್ರಾದೇಶಿಕ ಪಕ್ಷಗಳು ಚುನಾವಣಾ ಆಯೋಗಕ್ಕೆ ಸಲ್ಲಿಸಿದ 2022–23ರ ಅವಧಿಯ ಮಾಹಿತಿಯನ್ನು ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ವಿಶ್ಲೇಷಿಸಿ ಶುಕ್ರವಾರ ಬಿಡುಗಡೆ ಮಾಡಿರುವ ವರದಿಯಲ್ಲಿ ಈ ಮಾಹಿತಿ ಇದೆ. ಪಟ್ಟಿಯ ಮೊದಲ ನಾಲ್ಕು ಸ್ಥಾನಗಳಲ್ಲಿ ದಕ್ಷಿಣ ಭಾರತದ ಪ್ರಾದೇಶಿಕ ಪಕ್ಷಗಳೇ ಇವೆ. ಆಯೋಗವು ನಿಗದಿ ಮಾಡಿದ್ದ ದಿನಾಂಕದ ಒಳಗೆ ದೇಶದ ಒಟ್ಟು 57 ಪ್ರಾದೇಶಿಕ ಪಕ್ಷಗಳ ಪೈಕಿ 35 ಪಕ್ಷಗಳು ಮಾತ್ರವೇ ಮಾಹಿತಿ ನೀಡಿವೆ. ₹20 ಸಾವಿರಕ್ಕಿಂತ ಹೆಚ್ಚಿನ ಪ್ರಮಾಣದ ದೇಣಿಗೆಯನ್ನು ಯಾವುದೇ ಪಕ್ಷವು ಪಡೆದುಕೊಂಡರೆ, ಈ ಮಾಹಿತಿಯನ್ನು ಆಯೋಗಕ್ಕೆ ನೀಡಬೇಕು ಎಂದು ಜನಪ್ರಾತಿನಿಧ್ಯ ಕಾಯ್ದೆಯಲ್ಲಿ ಹೇಳಲಾಗಿದೆ. ಡಿಎಂಕೆ, ಎಂಎನ್‌ಎಸ್, ಎಐಎಂಐಎಂ ಹಾಗೂ ಎಡಿ (ಸೋನಿಲಾಲ್) ಪಕ್ಷಗಳು ತಮಗೆ ಬಂದ ₹20 ಸಾವಿರಕ್ಕಿಂತ ಕಡಿಮೆ ಪ್ರಮಾಣದ ದೇಣಿಗೆಯ ವಿವರವನ್ನು ಆಯೋಗಕ್ಕೆ ನೀಡಿವೆ.



ಬಿಆರ್‌ಎಸ್ ಪಕ್ಷದ್ದು ಶೇ 71ರಷ್ಟು ಪಾಲು



ಆಧಾರ: ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ವರದಿ

ಬಹಿರಂಗ ಹೇಳಿಕೆಗೆ ‘ಕೈ’ಕಮಾಂಡ್ ತಡೆ

ಒಂದನೇ ಪುಟದಿಂದ...

ಮೂರು ಕ್ಷೇತ್ರಗಳಿಗೆ ನಡೆದ ಉಪ ಚುನಾವಣೆಯ ಗೆಲುವಿನ ನಂತರ ಮುಖ್ಯಮಂತ್ರಿ, ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಹಾಗೂ ಸಂಪುಟ ಪುನರ್‌ರಚನೆಯ ವಿಷಯಗಳು ಮತ್ತೆ ಮುನ್ನೆಲೆಗೆ ಬಂದಿದ್ದವು.

‘2023ರ ವಿಧಾನಸಭಾ ಚುನಾವಣೆಯ ಫಲಿತಾಂಶ ನಂತರ ಅಧಿಕಾರ ಹಂಚಿಕೆ ಕುರಿತು ಮಾತುಕತೆ ನಡೆದಿತ್ತು’ ಎಂದು ಕೆಪಿಸಿಸಿ ಅಧ್ಯಕ್ಷ, ಉಪ ಮುಖ್ಯಮಂತ್ರಿಯೂ ಆಗಿರುವ ಡಿ.ಕೆ. ಶಿವಕುಮಾರ್ ಮಾಧ್ಯಮವೊಂದಕ್ಕೆ ನೀಡಿದ್ದ ಸಂದರ್ಶನದಲ್ಲಿ ಹೇಳಿದ್ದರು. ಈ ಮಾತನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ನಿರಾಕರಿಸಿದ್ದರು. ನಂತರ ಚರ್ಚೆ ನಿಂತಿತ್ತು.

ಹೊಸ ವರ್ಷ ಸಂಭ್ರಮಾಚರಣೆ ಹೊತ್ತಿನಲ್ಲಿ ಡಿ.ಕೆ. ಶಿವಕುಮಾರ್ ಅವರು ವಿದೇಶಕ್ಕೆ ತೆರಳಿದ್ದರು. ಆ ವೇಳೆ, ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಮನೆಯಲ್ಲಿ ಹಮ್ಮಿಕೊಂಡಿದ್ದ ‘ಔತಣ ಕೂಟ’ದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಹಿಂದುಳಿದ–ಪರಿಶಿಷ್ಟ ಸಮುದಾಯವನ್ನು ಪ್ರತಿನಿಧಿಸುವ ಸಚಿವರು ಭಾಗವಹಿಸಿದ್ದರು. ಕೆಪಿಸಿಸಿ ಅಧ್ಯಕ್ಷರು ಊರಿನಲ್ಲಿ ಇಲ್ಲದಾಗ, ನಡೆದ ಔತಣ ಕೂಟವು ಕಾಂಗ್ರೆಸ್‌ನೊಳಗಿನ ‘ಆಂತರಿಕ ಸಂಘರ್ಷ’ವನ್ನು ಬಯಲಿಗೆ ತಂದಿತ್ತು. ಆ ಬೆನ್ನಲ್ಲೇ, ಶಿವಕುಮಾರ್ ವಾಪಸ್ ಬಂದಿದ್ದರು. ದೆಹಲಿಯಲ್ಲೇ ಎರಡು ದಿನ ಮೊಕ್ಕಾಂ ಮಾಡಿದ್ದ ಅವರು, ಪಕ್ಷದಲ್ಲಿನ ಬೆಳವಣಿಗೆಯನ್ನು ವರಿಷ್ಠರ ಗಮನಕ್ಕೆ ತಂದಿದ್ದರು. ಏತನ್ಮಧ್ಯೆ, ಗೃಹ ಸಚಿವ ಜಿ. ಪರಮೇಶ್ವರ ಮನೆಯಲ್ಲಿ ಹಮ್ಮಿಕೊಂಡಿದ್ದ ಔತಣಕೂಟಕ್ಕೆ ವರಿಷ್ಠರು ತಡೆ ಒಡ್ಡಿದ್ದರು. ಇದು, ಹಿಂದುಳಿದ–ಪರಿಶಿಷ್ಟ ಸಮುದಾಯವನ್ನು ಪ್ರತಿನಿಧಿಸುವ ಸಚಿವರನ್ನು ಕೆರಳಿಸಿತ್ತು. ಈ ಭಿನ್ನಮತ, ತಾರಕಕ್ಕೇರುತ್ತಿದ್ದಂತೆ ವರಿಷ್ಠರು ಮಧ್ಯ ಪ್ರವೇಶಿಸಿದ್ದಾರೆ.

ಹಳೇ ಪ್ರಸಂಗದ ನೆನಪು....

ಸಂಪುಟ ಪುನರ್‌ರಚನೆ ತಕ್ಷಣವೇ ಆಗಲಿದೆ ಎನ್ನುವ ಸುದ್ದಿಗಳೂ ಹಬ್ಬಿದ್ದವು. ಬೆಳಗಾವಿ ಕಾಂಗ್ರೆಸ್ ಅಧಿವೇಶನದ ಶತಮಾನೋತ್ಸವಕ್ಕೆ ಪಕ್ಷದ ವರಿಷ್ಠರಿಗೆ ಆಹ್ವಾನ ನೀಡಲು ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ದೆಹಲಿಗೆ ಭೇಟಿದ್ದರು. ಸಂಪುಟದಿಂದ ಕೈಬಿಡುವ, ಸೇರ್ಪಡೆಯಾಗುವ ಸಚಿವರು, ಶಾಸಕರ ಹೆಸರುಗಳು ಆಗ ಹರಿದಾಡಿದ್ದವು. ನಂತರ ಇಬ್ಬರೂ ಈ ಸುದ್ದಿಯನ್ನು ನಿರಾಕರಿಸಿ, ‘ಹೈಕಮಾಂಡ್ ಮುಂದೆ ಈ ವಿಷಯ ಚರ್ಚೆಗೆ ಬಂದಿಲ್ಲ, ಮುಂದೆ ನೋಡೋಣ’ ಎಂದಿದ್ದರು.

ಬೆಳಗಾವಿ ಅಧಿವೇಶನದ ವೇಳೆ, ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರಿಗೆ ಸಂತಾಪ ಸೂಚಿಸುವ ನಿರ್ಣಯದ ಮೇಲೆ ಮಾತನಾಡಿದ್ದ ಡಿ.ಕೆ. ಶಿವಕುಮಾರ್, ಹಳೆಯ ಪ್ರಸಂಗವೊಂದನ್ನು ನೆನಪಿಸಿ ‘ಅಧಿಕಾರವನ್ನು ಒದ್ದು ಕಿತ್ತುಕೊಳ್ಳಬೇಕು’ ಎಂದು ಹೇಳಿದ್ದು ನಾನಾರೀತಿಯ ಚರ್ಚೆಗೆ ಗ್ರಾಸ ಒದಗಿಸಿತ್ತು.

ಸಂಕ್ಷಿಪ್ತ ಸುದ್ದಿ

ಚೋಪ್ರಾಗೆ ಶ್ರೇಷ್ಠ ಅಥ್ಲೀಟ್ ಗೌರವ

ನವದೆಹಲಿ (ಪಿಟಿಐ): ಭಾರತದ ಒಲಿಂಪಿಯನ್ ನೀರಜ್ ಚೋಪ್ರಾ ಅವರನ್ನು ಅಮೆರಿಕದ ಪ್ರತಿಷ್ಠಿತ 'ಟ್ರ್ಯಾಕ್ ಅ್ಯಂಡ್ ಫೀಲ್ಡ್ ನ್ಯೂಸ್' ಮ್ಯಾಗ್‌ಜೀನ್ 2024ರ ಶ್ರೇಷ್ಠ ಅಥ್ಲೀಟ್ ಎಂದು ಗೌರವಿಸಿದೆ.

ಚೋಪ್ರಾ ಅವರು ಹೋದ ವರ್ಷ ಪ್ಯಾರಿಸ್ ಒಲಿಂಪಿಕ್ ಕೂಟದಲ್ಲಿ ಪುರುಷರ ಜಾವೆಲಿನ್ ಥ್ರೋನಲ್ಲಿ ಬೆಳ್ಳಿ ಪದಕ ಜಯಿಸಿದ್ದರು. ಪಾಕಿಸ್ತಾನದ ಅರ್ಷದ್ ನದೀಂ ಚಿನ್ನ ಜಯಿಸಿದ್ದರು.

ಕ್ಯಾಲಿಫೋರ್ನಿಯಾದ ಈ ನಿಯತಕಾಲಿಕೆಯು 1948ರಲ್ಲಿ ಆರಂಭವಾಗಿದೆ. 'ಕ್ರೀಡೆಯ ಬೈಬಲ್' ಎಂದೇ ಪ್ರಸಿದ್ಧಿ ಪಡೆದಿದೆ. ಪ್ರತಿವರ್ಷ ವಿಶ್ವ ಮತ್ತು ಅಮೆರಿಕನ್ ರ್‍ಯಾಂಕಿಂಗ್ ಪ್ರಕಟಿಸುತ್ತದೆ. ವಿಶ್ವದ ಟ್ರ್ಯಾಕ್ ಮತ್ತು ಫೀಲ್ಡ್ ಕ್ಷೇತ್ರದಲ್ಲಿ ಬಹಳ ಪ್ರತಿಷ್ಠಿತ ನಿಯತಕಾಲಿಕೆ ಇದಾಗಿದೆ.

2023ರಲ್ಲಿಯೂ ಪುರುಷರ ರ್‍ಯಾಂಕಿಂಗ್‌ನಲ್ಲಿ ಚೋಪ್ರಾ ಪ್ರಥಮ ಸ್ಥಾನದಲ್ಲಿದ್ದರು. 2024ರಲ್ಲಿ ಪಾವೊ ನುರ್ಮಿ ಗೇಮ್ಸ್‌ನಲ್ಲಿ ಜಯಿಸಿದ್ದರು. ಲಾಸೆನ್ ಮತ್ತು ಬ್ರಸೆಲ್ಸ್‌ನಲ್ಲಿ ನಡೆದ ಡೈಮಂಡ್ ಲೀಗ್ ಟೂರ್ನಿಯಲ್ಲಿ 2ನೇ ಸ್ಥಾನ ಪಡೆದಿದ್ದರು.

ಚಾಂಪಿಯನ್ಸ್ ಟ್ರೋಫಿ: ವದಂತಿ ತಳ್ಳಿಹಾಕಿದ ಪಾಕ್

ಲಾಹೋರ್ (ಪಿಟಿಐ): ಮೂರು ಕ್ರೀಡಾಂಗಣಗಳಲ್ಲಿ ನವೀಕರಣ ಕಾಮಗಾರಿ ನಿಧಾನವಾಗಿ ಸಾಗುತ್ತಿರುವ ಕಾರಣ ಐಸಿಸಿ ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿಯನ್ನು ಪಾಕಿಸ್ತಾನದಿಂದ ಬೇರೆ ದೇಶಕ್ಕೆ ವಹಿಸಲಾಗುವುದು ಎಂಬ ವರದಿಗಳನ್ನು ಪಾಕಿಸ್ತಾನ ಕ್ರಿಕೆಟ್ ಮಂಡಳಿ ಶುಕ್ರವಾರ ತಳ್ಳಿಹಾಕಿದೆ.

ರಾವಲ್ಪಿಂಡಿಯ ಪಿಂಡಿ ಕ್ರೀಡಾಂಗಣ, ಲಾಹೋರ್‌ನ ಗಡಾಫಿ ಕ್ರೀಡಾಂಗಣ ಮತ್ತು ಕರಾಚಿಯ ನ್ಯಾಷನಲ್ ಕ್ರೀಡಾಂ ಗಣದ ನವೀಕರಣ ಕಾಮಗಾರಿ ಪ್ರಗತಿಯಲ್ಲಿದೆ. ಚಾಂಪಿಯನ್ಸ್ ಟ್ರೋಫಿ ಫೆಬ್ರುವರಿ 19ರಂದು ಆರಂಭವಾಗಬೇಕಿದೆ.

ಟೆನಿಸ್: ಮಾಯಾ ಫೈನಲ್ ಪ್ರವೇಶ

ನವದೆಹಲಿ: ಭಾರತದ ಉದಯೋನ್ಮುಖ ಆಟಗಾರ್ತಿ ಮಾಯಾ ರಾಜೇಶ್ವರನ್ ರೇವತಿ ಇಲ್ಲಿ ನಡೆಯುತ್ತಿರುವ ಐಟಿಎಫ್ ಜೂನಿಯರ್ 300 ಟೆನಿಸ್ ಟೂರ್ನಿಯ ಮಹಿಳೆಯರ ಸಿಂಗಲ್ಸ್‌ನಲ್ಲಿ ಪ್ರಶಸ್ತಿ ಸುತ್ತು ಪ್ರವೇಶಿಸಿದರು.

ಮಾಯಾ ರಾಜೇಶ್ವರನ್

ಇಲ್ಲಿನ ದೆಹಲಿ ಲಾನ್ ಟೆನಿಸ್ ಸಂಸ್ಥೆಯ ಸಂಕೀರ್ಣದಲ್ಲಿ ಶುಕ್ರವಾರ ನಡೆದ ನಾಲ್ಕರ ಘಟ್ಟದ ಹಣಾಹಣಿಯಲ್ಲಿ 15 ವರ್ಷ ವಯಸ್ಸಿನ ಮಾಯಾ 6-4, 6-7(4), 6-2ರಿಂದ ಎರಡನೇ ಶ್ರೇಯಾಂಕದ ಎಲೀಜಾ ಇನಿಸನ್ (ಫ್ರಾನ್ಸ್) ಅವರಿಗೆ ಆಘಾತ ನೀಡಿದರು.

ಮಾಯಾ ಅವರು ಫೈನಲ್‌ನಲ್ಲಿ ರಷ್ಯಾದ ಎಕಟೆರಿನಾ ತುಪಿಟ್ಸಿನಾ ಅವರನ್ನು ಎದುರಿಸಲಿದ್ದಾರೆ.

ಮಲೇಷ್ಯಾ ಓಪನ್ ಬ್ಯಾಡ್ಮಿಂಟನ್ ಟೂರ್ನಿ

ಸೆಮಿಗೆ ಸಾತ್ವಿಕ್–ಚಿರಾಗ್

ಕ್ವಾಲಾಲಂಪುರ (ಪಿಟಿಐ): ಗೆಲುವಿನ ಓಟವನ್ನು ಮುಂದುವರಿಸಿರುವ ಭಾರತದ ಅಗ್ರಮಾನ್ಯ ಡಬಲ್ಸ್ ಜೋಡಿ ಸಾತ್ವಿಕ್ ಸಾಯಿರಾಜ್ ರಣಕಿ ರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ಶುಕ್ರವಾರ ಮಲೇಷ್ಯಾ ಸೂಪರ್ 1000 ಬ್ಯಾಡ್ಮಿಂಟನ್ ಟೂರ್ನಿ ಯಲ್ಲಿ ಸೆಮಿಫೈನಲ್‌ಗೆ ಲಗ್ಗೆ ಹಾಕಿದರು.

ಏಳನೇ ಶ್ರೇಯಾಂಕದ ಭಾರತದ ಜೋಡಿ ಶುಕ್ರವಾರ ನಡೆದ ಕ್ವಾರ್ಟರ್ ಫೈನಲ್‌ನ ರೋಚಕ ಹಣಾಹಣಿಯಲ್ಲಿ 26-24, 21-15ರಿಂದ ಆತಿಥೇಯ ಮಲೇಷ್ಯಾದ ಯು ಸಿನ್ ಒಂಗ್–ಯೆ ಇ ಟಿಯೊ ಅವರನ್ನು ಹಿಮ್ಮೆಟ್ಟಿಸಿತು. 49 ನಿಮಿಷಗಳಲ್ಲಿ ಪಂದ್ಯವನ್ನು ಗೆದ್ದ ಸಾತ್ವಿಕ್- ಚಿರಾಗ್, ಇಲ್ಲಿ ಸತತ ಮೂರನೇ ಬಾರಿ ನಾಲ್ಕರ ಘಟ್ಟ ಪ್ರವೇಶಿಸಿದರು.

ಚಿರಾಗ್ ಶೆಟ್ಟಿ ಮತ್ತು ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ –ಎಪಿ/ಪಿಟಿಐ ಸಂಗ್ರಹ ಚಿತ್ರ

ಕಳೆದ ಬಾರಿಯ ರನ್ನರ್ಸ್ ಅಪ್ ಸಾತ್ವಿಕ್- ಚಿರಾಗ್ ಅವರು ಸೆಮಿಫೈನಲ್‌ನಲ್ಲಿ ದಕ್ಷಿಣ ಕೊರಿಯಾದ ವೊನ್ ಹೊ ಕಿಮ್ ಮತ್ತು ಸೆಯುಂಗ್ ಜೆ ಸಿಯೊ ಅವರ ಸವಾಲನ್ನು ಎದುರಿಸಲಿದ್ದಾರೆ.

ಮೊದಲ ಗೇಮ್‌ನಲ್ಲಿ ಉಭಯ ತಂಡಗಳ ಆಟಗಾರರಿಂದ ಸಮಬಲದ ಹೋರಾಟ ಕಂಡುಬಂತು. ಮಧ್ಯಂತರದಲ್ಲಿ 11–9 ರಿಂದ ಕೊಂಚ ಮುನ್ನಡೆ ಪಡೆದ ಭಾರತದ ಆಟಗಾರರು ಅದನ್ನು 18–16ರವರೆಗೆ ವಿಸ್ತರಿಸಿದರು. ಈ ಹಂತದಲ್ಲಿ ಸತತ ಮೂರು ಅಂಕ ಗಳಿಸಿದ ಕೊರಿಯಾ ಜೋಡಿಯು ಭಾರತದ ಮುನ್ನಡೆಯನ್ನು ಕಸಿದುಕೊಂಡಿತು.

ಒತ್ತಡವನ್ನು ಸಮರ್ಥವಾಗಿ ನಿಭಾಯಿಸಿಕೊಂಡ ಸಾತ್ವಿಕ್ ಮತ್ತು ಚಿರಾಗ್ ಜೋಡಿಯು ಮೊದಲ ಗೇಮ್ ಅನ್ನು 26-24ರಲ್ಲಿ ಮುಕ್ತಾಯಗೊಳಿಸುವ ಮೊದಲು ಸತತ ನಾಲ್ಕು ಗೇಮ್ ಪಾಯಿಂಟ್‌ಗಳನ್ನು ಉಳಿಸಿ, ಅಮೋಘ ಆಟ ಪ್ರದರ್ಶಿಸಿತು.

ಎರಡನೇ ಗೇಮ್‌ನ ಮಧ್ಯಂತರದ ವೇಳೆ ಆತಿಥೇಯರು 11–8 ಮುನ್ನಡೆ ಗಳಿಸಿ, ಪ್ರತಿರೋಧದ ಹಾದಿಯಲ್ಲಿದ್ದರು. ಈ ಹಂತದಲ್ಲಿ ಅಮೋಘವಾಗಿ ಚೇತರಿಸಿಕೊಂಡ ಭಾರತದ ಜೋಡಿಯು ಮುಂದಿನ 17 ಅಂಕಗಳಲ್ಲಿ 13 ಅನ್ನು ಗೆದ್ದು ಮುಂದಿನ ಸುತ್ತು ಪ್ರವೇಶಿಸಿತು.

ಸಾತ್ವಿಕ್- ಚಿರಾಗ್ ಹೊರತುಪಡಿಸಿ ಭಾರತದ ಉಳಿದ ಎಲ್ಲ ಆಟಗಾರರು ಮೊದಲೆರಡು ಸುತ್ತಿನಲ್ಲೇ ಹೊರಬಿದ್ದಿದ್ದಾರೆ.

ಕ್ರಿಕೆಟ್‌ಗೆ ವಿದಾಯ ಹೇಳಿದ ವರುಣ್



ನವದೆಹಲಿ (ಪಿಟಿಐ): ಒಂದು ಕಾಲದಲ್ಲಿ ದೇಶದ ಅತಿ ವೇಗದ ಬೌಲರ್ ಎನಿಸಿದ್ದ ವರುಣ್ ಆ್ಯರನ್ ಅವರು ಎಲ್ಲ ಮಾದರಿಯ ಕ್ರಿಕೆಟ್‌ಗೆ ಶುಕ್ರವಾರ ವಿದಾಯ ಹೇಳಿದ್ದಾರೆ. ವಿಜಯ್ ಹಜಾರೆ ಟ್ರೋಫಿ ಏಕದಿನ ಟೂರ್ನಿಯಲ್ಲಿ ಜಾರ್ಖಂಡ್ ತಂಡ ಗುಂಪು ಹಂತದಲ್ಲೇ ಹೊರಬಿದ್ದ ನಂತರ ಈ ನಿರ್ಧಾರಕ್ಕೆ ಬಂದಿದ್ದಾರೆ.

35 ವರ್ಷ ವಯಸ್ಸಿನ ಆ್ಯರನ್ ಸಾಮಾಜಿಕ ಜಾಲತಾಣದಲ್ಲಿ ನಿವೃತ್ತಿ ನಿರ್ಧಾರ ಪ್ರಕಟಿಸಿದ್ದಾರೆ. ಅಮೋಘ ರೀತಿಯಲ್ಲಿ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದ ಆ್ಯರನ್ ನಂತರ ಲಯ ಕಳೆದು ಕೊಂಡಿದ್ದರು. ಸಾಲದ್ದಕ್ಕೆ ಗಾಯದ ಸಮಸ್ಯೆಷಗಳು ಅವರ ಕ್ರಿಕೆಟ್ ಜೀವನದ ಬೆಳವಣಿಗೆಗೆ ಅಡ್ಡಿಯಾದವು. 2015ರ ನಂತರ ಅವರು ಭಾರತ ತಂಡಕ್ಕೆ ಆಡಿರಲಿಲ್ಲ.

'20 ವರ್ಷಗಳಿಂದ ನನ್ನ ಜೀವನ, ಉಸಿರು ಕ್ರಿಕೆಟ್ ಆಗಿತ್ತು. ಇಂದು ನಾನು ಕ್ರಿಕೆಟ್‌ಗೆ ಅಧಿಕೃತವಾಗಿ ವಿದಾಯ ಹೇಳುತ್ತಿದ್ದೇನೆ' ಎಂದು ಇನ್‌ಸ್ಟಾಗ್ರಾಂ ಪೋಸ್ಟ್‌ನಲ್ಲಿ ಬರೆದಿದ್ದಾರೆ.

21ನೇ ವಯಸ್ಸಿನಲ್ಲಿ ವೇಗದಬೌಲರ್ ಆಗಿ 2010–11ರ ವಿಜಯ್ ಹಜಾರೆ ಟ್ರೋಫಿಯಲ್ಲಿ ಅವರು ದೇಶದ ಗಮನ ಸೆಳೆದಿದ್ದರು. ಗುಜ ರಾತ್ ವಿರುದ್ಧ ಫೈನಲ್‌ನಲ್ಲಿ ಪ್ರತಿ ಗಂಟೆಗೆ 153 ಕಿ.ಮೀ. ವೇಗದಲ್ಲಿ ಬೌಲಿಂಗ್ ಮಾಡಿದ್ದರು.2011ರಲ್ಲೇ ಮುಂಬೈನಲ್ಲಿ ಇಂಗ್ಲೆಂಡ್ ವಿರುದ್ಧ ಏಕದಿನ ಪಂದ್ಯದಲ್ಲಿ ಭಾರತ ತಂಡಕ್ಕೆ ಆಡಿದ್ದರು. ಅದೇ ವರ್ಷ ಮುಂಬೈನಲ್ಲೇ ವೆಸ್ಟ್ ಇಂಡೀಸ್ ವಿರುದ್ಧ ಟೆಸ್ಟ್‌ಗೂ ಪದಾರ್ಪಣೆ ಮಾಡಿದ್ದರು.

ಆದರೆ ಬಿಡುವಿಲ್ಲದ ಕ್ರಿಕೆಟ್‌ನಿಂದ ಅವರು ಗಾಯದ ಸಮಸ್ಯೆ ಎದುರಿಸಿದರು. 9 ಏಕದಿನ ಮತ್ತು 9 ಟೆಸ್ಟ್ ಪಂದ್ಯಗಳಿಂದ 29 ವಿಕೆಟ್ ಪಡೆದಿದ್ದರು.88 ಲಿಸ್ಟ್ ಎ ಪಂದ್ಯಗಳಲ್ಲಿ ಅವರು 24.67 ಸರಾಸರಿಯಲ್ಲಿ141 ವಿಕೆಟ್ ಗಳನ್ನು ಪಡೆದಿದ್ದರು. 2011 ರಿಂದ 2022ರ ಅವಧಿಯಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಸೇರಿ ಐಪಿಎಲ್‌ನ ಐದು ತಂಡಗಳನ್ನು ಪ್ರತಿ ನಿಧಿಸಿ 52 ಪಂದ್ಯ ಗಳಿಂದ 44 ವಿಕೆಟ್ ಗಳಿಸಿದ್ದರು. 2022ರಲ್ಲಿ ಗುಜರಾತ್ ಟೈಟನ್ಸ್ ಐಪಿಎಲ್ ಟೂರ್ನಿ ಗೆದ್ದಾಗ ಅವರು ಆ ತಂಡದಲ್ಲಿದ್ದರು.

ಯೂಕಿ– ಅಲ್ಬಾನೊ ಜೋಡಿಗೆ ಸೋಲು

ನವದೆಹಲಿ (ಪಿಟಿಐ): ಭಾರತದ ಯೂಕಿ ಭಾಂಬ್ರಿ ಮತ್ತು ಫ್ರಾನ್ಸ್‌ನ ಅಲ್ಬಾನೊ ಒಲಿವೆಟ್ಟಿ ಜೋಡಿ ಆಕ್ಲೆಂಡ್‌ನಲ್ಲಿ ನಡೆಯುತ್ತಿರುವ ಎಎಸ್‌ಬಿ ಕ್ಲಾಸಿಕ್ ಎಟಿಪಿ ಟೆನಿಸ್ ಟೂರ್ನಿಯ ಸೆಮಿಫೈನಲ್‌ನಲ್ಲಿ ನಿರಾಸೆ ಅನುಭವಿಸಿತು.

ಯೂಕಿ ಭಾಂಬ್ರಿ

ಶುಕ್ರವಾರ ನಡೆದ ಪುರುಷರ ಡಬಲ್ಸ್‌ನ ನಾಲ್ಕರ ಘಟ್ಟದ ಹಣಾಹಣಿಯಲ್ಲಿ ಶ್ರೇಯಾಂಕರಹಿತ ಯೂಕಿ–ಅಲ್ಬಾನೊ ಜೋಡಿ 3-6, 6-1, 5-10ರಿಂದ ಅಗ್ರ ಶ್ರೇಯಾಂಕದ ನಿಕೋಲಾ ಮೆಕ್ಟಿಕ್ ಮತ್ತು ಮೈಕೆಲ್ ವೀನಸ್ ಅವರಿಗೆ ಶರಣಾಯಿತು.

ಇಂಡೊ–ಫ್ರೆಂಚ್ ಜೋಡಿಯು ಕ್ವಾರ್ಟರ್ ಫೈನಲ್‌ನಲ್ಲಿ ಮೂರನೇ ಶ್ರೇಯಾಂಕದ ಜೂಲಿಯನ್ ಕ್ಯಾಷ್- ಲಾಯ್ಡ್ ಗ್ಲಾಸ್ಪೂಲ್ ಜೋಡಿಗೆ ಆಘಾತ ನೀಡಿತ್ತು. ಈ ಮೂಲಕ ಆಸ್ಟ್ರೇಲಿಯನ್ ಓಪನ್‌ಗೆ ಉತ್ತಮ ಸಿದ್ಧತೆ ನಡೆಸಿದೆ.

'ಯುವಿ ವೃತ್ತಿಜೀವನ ಮೊಟಕು: ಕೊಹ್ಲಿ ಪರೋಕ್ಷ ಹೊಣೆ'

ನವದೆಹಲಿ (ಪಿಟಿಐ): ಕ್ಯಾನ್ಸರ್ ಗೆದ್ದು ಕ್ರಿಕೆಟ್‌ಗೆ ಮರಳಿದ ಆಲ್‌ರೌಂಡರ್ ಯುವರಾಜ್ ಸಿಂಗ್ ಅವರ ಕ್ರಿಕೆಟ್ ಜೀವನ ಮೊಟಕುಗೊಳ್ಳಲು ಪರೋಕ್ಷವಾಗಿ ವಿರಾಟ್ ಕೊಹ್ಲಿ ಹೊಣೆಗಾರರು ಎಂದು ಭಾರತ ತಂಡದ ಮಾಜಿ ಬ್ಯಾಟರ್ ರಾಬಿನ್ ಉತ್ತಪ್ಪ ಹೇಳಿದ್ದಾರೆ.

ತಂಡಕ್ಕೆ ಮರಳಿ ಬಂದಾಗ ತಮಗೆ ಫಿಟ್‌ನೆಸ್‌ನಲ್ಲಿ ಕೆಲವು ರಿಯಾಯಿತಿ ನೀಡುವಂತೆ ಯುವಿ ಮನವಿ ಮಾಡಿದ್ದರು. ಇದಕ್ಕೆ ತಂಡದ ಆಗಿನ ನಾಯಕ ಕೊಹ್ಲಿ ಒಪ್ಪಿರಲಿಲ್ಲ ಎಂದು ಉತ್ತಪ್ಪ ಹೇಳಿದ್ದಾರೆ.

ಸೀಮಿತ ಓವರುಗಳ ಕ್ರಿಕೆಟ್‌ನಲ್ಲಿ ದೇಶ ಕಂಡ ಶ್ರೇಷ್ಠ ಆಟಗಾರರಲ್ಲಿ ಒಬ್ಬರೆನಿಸಿದ ಯುವರಾಜ್ ಸಿಂಗ್, 2011ರಲ್ಲಿ ಎಂ.ಎಸ್. ಧೋನಿ ನಾಯಕತ್ವದಲ್ಲಿ ಭಾರತ ತಂಡ ಏಕದಿನ ಕಪ್ ಗೆಲ್ಲುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ನಂತರ ಅವರಿಗೆ ಕ್ಯಾನ್ಸರ್ ಇರುವುದು ಪತ್ತೆಯಾಗಿತ್ತು. ಅವರು ಅಮೆರಿಕದಲ್ಲಿ ಚಿಕಿತ್ಸೆ ಪಡೆದು ಗುಣಮುಖರಾಗಿದ್ದರು.

ಯುವರಾಜ್

ತಂಡದಲ್ಲಿ ಮರಳಿ ಸ್ಥಾನ ಸಂಪಾದಿಸಿದ್ದ ಯುವರಾಜ್ ಏಕದಿನ ಪಂದ್ಯದಲ್ಲಿ ಇಂಗ್ಲೆಂಡ್ ವಿರುದ್ಧ ಶತಕವನ್ನೂ ಬಾರಿಸಿದ್ದರು. ಆದರೆ 2017ರ ಚಾಂಪಿಯನ್ಸ್ ಟ್ರೋಫಿಯಲ್ಲಿ ಸಪ್ಪೆ ಪ್ರದರ್ಶನದ ನಂತರ ಅವರನ್ನು ತಂಡದಿಂದ ಕೈಬಿಡಲಾಯಿತು. 2019ರಲ್ಲಿ ಅವರು ಎಲ್ಲ ಮಾದರಿಯ ಕ್ರಿಕೆಟ್‌ನಿಂದ ನಿವೃತ್ತರಾಗಿದ್ದರು.

ಲಲ್ಲನ್‌ಟಾಪ್ ಯು ಟ್ಯೂಬ್ ಚಾನೆಲ್‌ನಲ್ಲಿ 'ಟೇಕ್ ಯುವಿ ಪಾ'ಸ್ ಇನ್‌ಸ್ಟೆನ್ಸ್' ಶೀರ್ಷಿಕೆಯ ಸಂದರ್ಶನದಲ್ಲಿ ಉತ್ತಪ್ಪ ಈ ಮಾತುಗಳನ್ನಾಡಿದ್ದಾರೆ.

ಕ್ಯಾನ್ಸರ್ ಗೆದ್ದ ವ್ಯಕ್ತಿ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಮರಳಲು ಯತ್ನಿಸಿದರು. ಇತರ ಆಟಗಾರರೊಂದಿಗೆ ನಮಗೆ ವಿಶ್ವಕಪ್ ಗೆಲ್ಲಿಸಿಕೊಟ್ಟವರು. ಹಾಗೆ ನೋಡಿದರೆ ಎರಡು ವಿಶ್ವಕಪ್ ಅವರಿದ್ದಾಗ ಭಾರತ ಗೆದ್ದಿತ್ತು ಎಂದಿದ್ದಾರೆ.